ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ನಡೆದ 'ಆಂಖ್ ಮಿಚೋಲಿ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಮೃಣಾಲ್ ಠಾಕೂರ್ ಪಾಲ್ಗೊಂಡಿದ್ದರು

ಮತ್ತೆ ತೆರೆಯಿತು ಕರುನಾಡಿನ ಸ್ವರ ಸಂಸ್ಥಾನ

ಸರಿಗಮಪ ಸೀಸನ್–20

ವಿಶ್ವ ಕನ್ನಡಿಗರಿಗೆ ವೇದಿಕೆ ನೀಡಲಿದೆ ಈ ಬಾರಿಯ ಸರಿಗಮಪ

ಕನ್ನಡ ಚಿತ್ರರಂಗ ಸೇರಿದಂತೆ ಗಾಯನ ಲೋಕಕ್ಕೆ ಹೊಸ ಪ್ರತಿಭೆಗಳನ್ನ ಕೊಡುಗೆಯಾಗಿ ಕೊಟ್ಟಿರುವ ಸರಿಗಮಪ ಪ್ರತಿ ಬಾರಿಯು ಹೊಸತನದ ಮೂಲಕ ಕರುನಾಡನ್ನ ರಂಜಿಸುತ್ತ ಬರುತ್ತಿದೆ, ಅದರಂತೆ ಈ ಬಾರಿ ಕನ್ನಡಿಗರನ್ನ ದಶಕಗಳಿಂದ ರಂಜಿಸಿದ್ದ ಸರಿಗಮಪದಲ್ಲಿ ವಿಶ್ವ ಕನ್ನಡಿಗರ ಆಡಿಷನ್ ನಡೆಸುವ ಮುಖಾಂತರ, ವಿಶ್ವದ ನಾನಾ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಪ್ರತಿಭಾನ್ವೇಷಣೆ ಮಾಡುವ ಮುಖಾಂತರ ದೇಶ ಬದಲಾದ್ರು ಭಾವನಗೆಳು ಬದಲಾಗಲ್ಲ, ದೇಶ ಬಿಟ್ಟೋದ್ರು ಭಾಷೆ ಮರೆಯಲ್ಲ..ಅನ್ನೋ ಕನ್ನಡದ ಗಾಯಕ ಗಾಯಕಿಯರಿಗೆ ವೇದಿಕೆ ನೀಡುತ್ತಿರುವುದು, ಈ ಸೀಸನ್ನಿನ ವಿಶೇಷತೆಗಳಲ್ಲಿ ಪ್ರಮುಖವಾದದ್ದು.

ಸರಿಗಮಪ ಕಾರ್ಯಕ್ರಮ ಈ ಬಾರಿ ಸಾಗರದಾಚೆಯ ಪ್ರತಿಭೆಗಳನ್ನ ಹುಡುಕುವ ಕೆಲಸ ಶುರುಮಾಡಿದ ಕೂಡಲೆ ಅಮೇರಿಕಾ, ಯುಕೆ, ಆಸ್ಟೇಲಿಯಾ, ಅರಬ್, ಜರ್ಮನಿ, ಓಮನ್, ಮಸ್ಕಟ್, ಐರ್ಲ್ಯಾಂಡ್, ಕಝುಕೀಸ್ತಾನ್, ಅಬುದಾಬಿ, ಸಿಂಗಾಪುರ ಸೇರಿದಂತೆ ವಿಶ್ವದ ಮೂಲೆ ಮೂಲೆಯಿಂದ 2000 ಕ್ಕು ಹೆಚ್ಚು ಅಪ್ಲೀಕೇಶನ್ ಝೀ ಕನ್ನಡವನ್ನ ತಲುಪ್ಪಿತ್ತು .

ಈ ಹಂತದಲ್ಲಿ ವಿಶ್ವದೆಲ್ಲೆಡೆ ಇರುವ ಕನ್ನಡಿಗರನ್ನ ಆಡಿಷನ್ ಮಾಡುವ ಪ್ರಕ್ರಿಯೇ ಶುರುವಾಯಿತು, ಅವರುಗಳು ಕಳುಹಿಸಿದ್ದ ಹಾಡಿನ ವೀಡಿಯೋ ತುಣುಕುಗಳ ಆಧಾರ ಮೇಲೆ 400 ಪ್ರತಿಭೆಗಳನ್ನ ಶಾರ್ಟ ಲೀಸ್ಟ್ ಮಾಡಿ ಅವರಿಗಾಗಿ ಪ್ರತ್ಯೇಕ ಆನ್ಲೈನ್ ಆಡಿಷನ್ ಪ್ರಕ್ರಿಯೆ ನಡೆಸಲಾಗಿದ್ದು ಅದರಲ್ಲಿ ಅತ್ಯುತ್ತಮ ಗಾಯಕ ಗಾಯಕಿಯರನ್ನ ಮೆಗಾ ಆಡಿಷನ್ ಪ್ರಕ್ರಿಯೆಗೆ ಆಯ್ಕೆ ಮಾಡಲಾಗಿದ್ದು. ಬಹುದಿನಗಳಿಂದ ಸರಿಗಮಪ ಕಾರ್ಯಕ್ರಮಕ್ಕಾಗಿ ಕಾಯುತ್ತಿದ್ದ ಸಂಗೀತ ಪ್ರೇಮಿಗಳ ಸಂಗೀತದ ದಾಹವನ್ನ ನೀಗಿಸುವ ನಿಟ್ಟಿನಲ್ಲಿ ಇದೇ ಶನಿವಾರ ರಾತ್ರಿ 7.30ರಿಂದ ಸತತ 3 ಗಂಟೆಗಳ ಸಂಗೀತದ ಮಹಾಹಬ್ಬದ ಮೂಲಕ ಸರಿಗಮಪ ಸೀಸನ್ 20 ವಿದ್ಯುಕ್ತವಾಗಿ ಆರಂಭವಾಗಲ್ಲಿದ್ದು, ಇನ್ನು ಮುಂದೆ ಪ್ರತಿ ವೀಕೆಂಡ್ ಕರುನಾಡನ್ನ ಸ್ವರಸಾಗರದಲ್ಲಿ ತೇಲಿಸಲು ಸರಿಗಮಪ ತಂಡ ಸಜ್ಜಾಗಿದೆ.

ಹೊಸ ಇತಿಹಾಸ ಬರೆಯಲು ಹೊರಟ ಝೀ ಕನ್ನಡ.

ವಿಶ್ವ ಕನ್ನಡಿಗರು ಮತ್ತು ವಿಶಾಲ ಹೃದಯದ ಕನ್ನಡಿಗರ ನಡುವೆ ಈ ಬಾರಿಯ ಸರಿಗಮಪ ಸೀಸನ್–20 ಮತ್ತಷ್ಟು ಕಳೆಕಟ್ಟಲಿದೆ.ಪ್ರತಿಬಾರಿ ಕರುನಾಡಿನಾದ್ಯಂತ ಆಯ್ದು ತಂದ ಗಾಯಕಯಾಯಕಿಯರಿಗೆ ವೇದಿಕೆ ಒದಗಿಸುತ್ತಿದ್ದ ಸ–ರಿಗಮಪ ಈ ಬಾರಿ ಸಾಗರದಾಚೆಯ ಪ್ರತಿಭೆಗಳನ್ನ ಹುಡುಕ ಹೊರಟಿದೆ.ಈ ಪ್ರಯತ್ನ ಮಾಡುವ ಮುಖಾಂತರ ಭಾರತದ ಟೆಲಿವಿಷನ್ ಇತಿಹಾಸದಲ್ಲೆ ಮೊದಲ ಬಾರಿಗೆ ಇಂತಹ ಪ್ರಯತ್ನ ಮಾಡಿ ಯಶಸ್ಸುಗಳಿಸಿದ ಮೊದಲ ವಾಹಿನಿಯಾಗಿದೆ.

ಪ್ರತಿಬಾರಿ ಸರಿಗಮಪ ಕಾರ್ಯಕ್ರಮವನ್ನ ತೆರೆಗೆ ತರಲು ತಯಾರಿ ನಡೆಸಿದಾಗಲೆಲ್ಲ ಅದರಲ್ಲಿ ಹೊಸತನವನ್ನ ತುಂಬುವ ಪ್ರಯತ್ನವನ್ನ ಮಾಡಲಾಗುತ್ತಿತ್ತು.ಅದರಂತೆ ಈ ಬಾರಿ ಸರಿಗಮಪ ವೇದಿಕೆಯಲ್ಲಿ ಹಾಡುವ ಹಂಬಲ ಹೊಂದಿರುವ ವಿಶ್ವಕನ್ನಡಿಗರಿಗೆ ವೇದಿಕೆಯನ್ನ ಒದಗಿಸುವ ಕೆಲಸವನ್ನ ಕನ್ನಡದ ವಾಹಿನಿಯೊಂದು ಭಾರತದ ಟಿಲಿವಿಷನ್ ಇತಿಹಾಸದಲ್ಲೆ ಇದೇ ಮೊದಲ ಭಾರಿಗೆ ಮಾಡಿದ್ದು,ಇಂತಹ ಹೊಸತೊಂದು ಅಧ್ಯಾಯಯಕ್ಕೆ ನಾಂದಿ ಹಾಡುವ ಪ್ರಯತ್ನವನ್ನ ಈ ಬಾರಿಯ ಸರಿಗಮಪ ಮಾಡಲಿದೆ.

• ರಾಘವೇಂದ್ರ ಹುಣಸೂರು
ಚೀಫ್ ಕಂಟೆಂಟ್ ಆಫೀಸರ್ ಝೀ ಕನ್ನಡ ಮತ್ತು ಝೀ ಮರಾಠಿ

ದೇಶಿ ಹಾಗು ವಿದೇಶಿ ಕನ್ನಡಿಗರ ಸ್ವರ ಸಮ್ಮಿಲನ

ನಮ್ಮ ನೆಲದಲ್ಲಿ ನಿಂತು ವಿಶ್ವವನ್ನ ಮನೋರಂಜಿಸಿದ್ದ ಕನ್ನಡಿಗರು ಈ ಬಾರಿ ವಿಶ್ವಕನ್ನಡಿಗರ ಎದುರು ಹಾಡಿ ಸೈ ಎನಿಸಿಕೊಳ್ಳಲು ಸಿದ್ದರಾಗಿದ್ದಾರೆ.ಅದರಂತೆ ಜೀವನ ಕಟ್ಟಿಕೊಳ್ಳಲು ವಿದೇಶಗಳಲ್ಲಿ ನಲೆಸಿರುವ ವಿಶ್ವಕನ್ನಡಿಗರು ತಮ್ಮ ತಾಯಿ ನೆಲಕ್ಕೆ ಬಂದು ತಮ್ಮ ಪ್ರತಿಭೆಯನ್ನ ತೋರಿಸಲು ಹಾತೊರೆಯುತ್ತಿರವ ಈ ಹಂತದಲ್ಲಿ ಈ ಬಾರಿಯ ಸರಿಗಮಪ ವೇದಿಯಲ್ಲಿ ಸಂಗೀತದ ಮಹಾಯುದ್ದ ನಡೆಯೋದಂತು ಗ್ಯಾರಂಟಿ.

ಜನಮನ್ನಣೆ ಗಳಿಸಿದ ಸರಿಗಮಪ ಪ್ರೋಮೋ

ಈಗಾಗಲೇ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿರುವ ಸರಿಗಮಪ ಸೀಸನ್–20ರ ಪ್ರೋಮೋ ಲಕ್ಷಾಂತರ ವೀಕ್ಷಕರನ್ನ ತಲುಪುವುದರ ಜೊತೆಗೆ ಜನಮನ್ನಣೆಯನ್ನ ಗಳಿಸಿದೆ. ಹಲವು ದಿನಗಳಿಂದ ಸರಿಗಮಪ ಕಾರ್ಯಕ್ರಮಕ್ಕಾಗಿ ಕಾಯುತ್ತಿದ್ದ ಅಭಿಮಾನಿಗಳನ್ನ ತಣಿಸುವ ನಿಟ್ಟಿನಲ್ಲ ಹೊಸ ಪ್ರಯತ್ನವೆಂಬಂತೆ ವಿಶ್ವಕನ್ನಡಿಗರಿಗೆ ವೇದಿಕೆ ನೀಡಿದ ಝೀ ಕನ್ನಡ ಕಾರ್ಯ ಎಲ್ಲೆಡೆ ಶ್ಲಾಘನೆಗೆ ಒಳಗಾಗಿದೆ.

ಇಂದಿನಿಂದ

ಶನಿ-ಭಾನು | ರಾತ್ರಿ 7.30ಕ್ಕೆ

ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲೂ ನಡೆದಿದೆ ಆಡಿಷನ್ಸ್

ಕರುನಾಡಿನ ಗಾನ ಕೋಗಿಲೆಗಳು ಉತ್ಸುಕರಾಗಿ ಕಾಯುತ್ತಿದ್ದ ಸರಿಗಮಪ ಸೀಸನ್–20 ಮತ್ತೆ ಶುರುವಾಗಿದೆ. ಕಳೆದು ಕೆಲವು ವಾರಗಳಿಂದ ಕರುನಾಡಿನ ಮೂಲೆ ಮೂಲೆಗಳಲ್ಲಿ ಲಕ್ಷಾಂತರ ಗಾಯಕ ಗಾಯಕಿಯರ ಆಡಿಷನ್ ನಡೆಸುವ ಮೂಲಕ ಝೀ ಕನ್ನಡ ತನ್ನ ವಾಹಿನಿಯ ಹೆಮ್ಮೆಯ ಕಾರ್ಯಕ್ರಮ ಸರಿಗಮಪ ಸೀಸನ್–20ರ ಸ್ವರ ಸಾಮ್ರಾಜ್ಯವನ್ನ ಮತ್ತೆ ತೆರೆಯಲು ತಯಾರಾಗಿದೆ.

ಕಾಂಫಿಟೇಶನ್ ಹೆಚ್ಚು ಮಾಡಿದಂತೆಲ್ಲ ಕ್ವಾಲಿಟಿ ಸಿಂಗರ್ಸ್ ಕರುನಾಡಿಗೆ ಸಿಗಲಿದ್ದಾರೆ ಎಂಬ ಆಶಯದೊಂದಿಗೆ ಶುರುವಾದ ಈ ಹೊಸ ಸೀಸನ್ನಿನ ಆಡಿಷನ್ ಪ್ರಕ್ರಿಯೇ ಈಗಾಗಲೆ ಸಂಪೂರ್ಣವಾಗಿ ಮುಗಿದ್ದಿದ್ದು ಕರುನಾಡಿನ 31 ಜಿಲ್ಲೆಗಳಿಂದ ಆಯ್ದು ತಂದ ಗಾಯಕ ಗಾಯಕಿಯರ ಜೊತೆ ವಿಶ್ವ ಕನ್ನಡಿಗರು ಸೇರಿಕೊಂಡಿರುವ ಈ ಬಾರಿಯ ಸರಿಗಮಪ ಸೀಸನ್ 20 ಮತ್ತಷ್ಟು ಕಳೆಕಟ್ಟುವುದಂತು ಗ್ಯಾರಂಟಿ.

ಕರುನಾಡಿನ ಅತಿ ದೊಡ್ಡ ಸ್ವರಸಂಸ್ಥಾನದಲ್ಲಿ ಮಹಾಗುರುಗಳಾದ ಹಂಸಲೇಖರ ಸಾಹಿತ್ಯದ ಹಬ್ಬ, ವಿಜಯ್ ಪ್ರಕಾಶ್ ರವರ ಲಯಬದ್ದ ಮಾತು, ಅರ್ಜುನ್ ಜನ್ಯರ ಪಂಚಿಂಗ್ ಡೈಲಾಗ್ನೊಂದಿಗೆ ಮನೋರಂಜನೆಯನ್ನ ಭರಪೂರವಾಗಿ ಕರುನಾಡಿಗೆ ನೀಡುವುದಲ್ಲದೆ, ಸ್ಪರ್ಧಿಗಳನ್ನ ತಿದ್ದು ಮುಖಾಂತರ ಅವರನ್ನ ಕರುನಾಡಿನ ಉತ್ತಮ ಗಾಯಕರ ಸಾಲಿಗೆ ಸೇರಿಸುವ ಕೆಲಸವನ್ನ ಮಾಡಲು ತ್ರಿವಳಿ ರತ್ನಗಳು ತಯಾರಾಗಿದ್ದಾರೆ.
ನಿರೂಪಣೆ ಮಾಡಲಿದ್ದಾರೆ ಅನುಶ್ರೀ ಸ್ಪರ್ಧಿಗಳ ಜೊತೆ ಸದಾ ನಗುಮುಖದಲ್ಲೆ ವ್ಯವಹರಿಸುವ ಮುಖಾಂತರ ಇಡಿ ಕಾರ್ಯಕ್ರಮವನ್ನ ತಮ್ಮ ವಾಕ್ ಚಾತುರ್ಯದ ಮುಖಾಂತರ ಹಿಡಿದಿಟ್ಟುಕೊಳ್ಳುವ ಕೆಲಸ ಮಾಡುತ್ತಾ ಬಂದಿರುವ ಅನುಶ್ರೀ ಈ ಬಾರಿ ವಿಶ್ವಕನ್ನಡಿಗರನ್ನ ವೇದಿಕೆ ಕರೆತರುತ್ತಿರುವ ಈ ಸೀಸನ್ನಿನ ನಿರೂಪಣಾ ಜವಾಬ್ದಾರಿಯನ್ನ ನಿರ್ವಹಿಸಲಿದ್ದಾರೆ.

ತೀರ್ಪುಗಾರರಾಗಿ ತ್ರಿವಳಿ ರತ್ನಗಳು



ನಾಡು ನುಡಿ ಸಾಹಿತ್ಯವನ್ನ ಬೆಸೆದ್ದಿದ್ದ ಸರಿಗಮಪ, ಈಗ ನಾಡ ಕುಡಿಗಳನ್ನ ಹುಡುಕಿಕೊಂಡು ವಿದೇಶಕ್ಕೆ ಹೋಗಿ ಅಲ್ಲಿ ನೆಲೆಸಿರುವ ನಮ್ಮ ತಳಿಗಳನ್ನ ಹುಡುಕಿ ತಂದಿರೋದು ನಮಗೆ ಬಹಳ ಖುಷಿಯಿದೆ. ಸಂಗೀತ ಎಲ್ಲರನ್ನ ಸದಾ ಕೈ ಬೀಸಿ ಕರೆಯುತ್ತದೆ ಇಂತಹ ಸಂಗೀತದ ತವರಿಗೆ ಬರುತ್ತಿರುವ ವಿಶ್ವಕನ್ನಡಿಗರು ಹಾಗು ನಮ್ಮ ನೆಲದ ವಿಶ್ವಾಸದ ಕನ್ನಡಿಗರ ನಡುವಿನ ಸ್ಪರ್ಧೆಯನ್ನ ನೋಡುವ ಕುತೂಹಲ ನಮಗಿದೆ.

• ಹಂಸಲೇಖ

ವಿದೇಶಗಳಲ್ಲಿ ಕಾರ್ಯಕ್ರಮ ನೀಡಲು ಹೋದಾಗಲೆಲ್ಲ ಅಲ್ಲಿ ನೆಲೆಸಿದ್ದ ನಮ್ಮೂ–ರಿನ ಪ್ರತಿಭೆಗಳನ್ನ ನೋಡಿ ಬೆರಗಾಗಿದ್ದ ನನಗೆ, ಈ ಬಾರಿ ನಮ್ಮ ಸರಿಗಮಪ ಅವರನ್ನ ಕರೆದು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿರುವುದು ನಮಗೆ ತೃಪ್ತಿತಂದಿದೆ. ಸಾಗರದಾಚೆಗಿನ ಕನ್ನಡಿಗರ ಪ್ರತಿಭೆಯನ್ನ ಅವರ ತವರು ನೆಲದಲ್ಲಿ ತೋರಿಸುವ ತವಕ ಅವರಿಗೆ ಇರುವಂತೆ ಅವರ ಪ್ರತಿಭೆಯನ್ನ ನೋಡುವ ತವಕ ನಮಗೂ ಇದೆ.

• ವಿಜಯ್ ಪ್ರಕಾಶ್



ಕಲೆಗೆ ಗಡಿಯ ಮಿತಿ ಇಲ್ಲ, ಕಲಾವಿದ ಎಲ್ಲೇ ಇದ್ದರು ಅವನನ್ನ ಹುಡುಕಿ ವೇದಿಕೆ ಕೊಡುವ ಕೆಲಸವನ್ನ ಮಾಡುತ್ತಿರೋ ಸರಿಗಮಪ ಈ ಬಾರಿ ಸಾಗರದಾಚೆಗಿನ ಪ್ರತಿಭೆಗಳ ಅನ್ವೇಷಣೆ ಮಾಡಿ ತಂದಿರೋದು ನಮಗೆ ಹೆಮ್ಮೆ ಪಡುವ ವಿಷಯ.ವಿಶ್ವದ ಮೂಲೆ ಮೂಲೆಯಿಂದ ಬರುವ ಕನ್ನಡಿಗ–ರಿಂದ ಹೊಸತೇನನ್ನೋ ಕಲಿಯುವ ಹಾಗೆ ಅವರಿಗೆ ಕಲಿಸುವ ಕೆಲಸ ಮಾಡುವ ಈ ಸೀಸನ್ನಿನಲ್ಲಿ ದೇಸಿ ವರ್ಸ್ ವಿದೇಶಿ ಫೈಟ್ ನೋಡಲು ಕನ್ನಡಿಗರು ಕಾಯುತ್ತಿರುವಂತೆ ನಾನು ಕಾಯುತ್ತಿದ್ದೇನೆ.

• ಅರ್ಜುನ್ ಜನ್ಯ

ನಿರೂಪಣೆ ಮಾಡಲಿದ್ದಾರೆ ಅನುಶ್ರೀ

ಸ್ಪರ್ಧಿಗಳ ಜೊತೆ ಸದಾ ನಗುಮುಖದಲ್ಲೆ ವ್ಯವಹರಿಸುವ ಮುಖಾಂತರ ಇಡಿ ಕಾರ್ಯಕ್ರಮವನ್ನ ತಮ್ಮ ವಾಕ್ ಚಾತುರ್ಯದ ಮುಖಾಂತರ ಹಿಡಿದಿಟ್ಟುಕೊಳ್ಳುವ ಕೆಲಸ ಮಾಡುತ್ತಾ ಬಂದಿರುವ ಅನುಶ್ರೀ ಈ ಬಾರಿ ವಿಶ್ವಕನ್ನಡಿಗರನ್ನ ವೇದಿಕೆ ಕರೆತರುತ್ತಿರುವ ಈ ಸೀಸನ್ನಿನ ನಿರೂಪಣಾ ಜವಾಬ್ದಾರಿಯನ್ನ ನಿರ್ವಹಿಸಲಿದ್ದಾರೆ.

ಸರಿಗಮಪ ಒಂದು ಸಂಗೀತದ ಹಬ್ಬ,ಆ ಹಬ್ಬವನ್ನ ಕಣ್ತುಂಬಿಕೊಳ್ಳೋಕೆ ಕಾಯೋ ಕೋಟ್ಯಾಂತರ ಜನರಲ್ಲಿ ನಾನು ಒಬ್ಬಳು,ಈ ಬಾರಿ ವಿಶ್ವದ ಮೂಲೆ ಮೂಲೆಯಿಂದ ಬರುವ ಹೊಸ ಪ್ರತಿಭೆ ಪ್ರತಿಭೆಯನ್ನ ಕಣ್ತುಂಬಿಕೊಳ್ಳುವುದರ ಜೊತೆಗೆ ಅವರ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನ ತಿಳಿದುಕೊಳ್ಳುವ ಕುತೂಹಲ ನನಗೂ ಇದೆ.

• ಅನುಶ್ರೀ

ಸರಿಗಮಪ Season - 20 ರ ಇನ್ನೂ ಹೆಚ್ಚಿನ ಅಪ್‌ಡೇಟ್‌ಗಳಿಗಾಗಿ ಇಲ್ಲಿ ಭೇಟಿ ನೀಡಿ
/zeekannadatv /zeekannada /zeekannada /zeekannada zee5.com

ಡಿಕೆಡಿ ಸೀಸನ್-7 ಗ್ರ್ಯಾಂಡ್ ಫಿನಾಲೆಯಲ್ಲಿ
ಈ ಬಾರಿಯ ಪವರ್ ಸ್ಟಾರ್ ಟ್ರೋಫಿ ಯಾರ ಮಡಿಲಿಗೆ?

ಸತತ 22 ವಾರಗಳಿಂದ ಕರುನಾಡನ್ನ ಕುಣಿಸಿದ್ದ ಡ್ಯಾನ್ಸ್ ಹಬ್ಬ, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸೀಸನ್ 7, ಫಿನಾಲೆ ಹಂತವನ್ನ ತಲುಪಿದೆ.ಪ್ರತಿವಾರ ಹೊಸ ಪ್ರಯೋಗಕ್ಕೆ ಮುನ್ನುಡಿ ಬರೆದು, ಡ್ಯಾನ್ಸ್ ವೇದಿಕೆಯಲ್ಲಿ ಸಂಚಲ ಮೂಡಿಸುತ್ತ, ದಕ್ಷಿಣ ಭಾರತದಾದ್ಯಂತ ಹೆಸರು ಮಾಡಿದ್ದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸೀಸನ್-7 ಕುಣಿಯುವ ಕಾಲುಗಳಿಗೊಂದು ಅದ್ಭುತ ವೇದಿಕೆ ನೀಡಿದ್ದಂತು ಸುಳ್ಳಲ್ಲ.

ಕರುನಾಡಿನ ಡ್ಯಾನ್ಸ್ ಚಕ್ರವರ್ತಿ ಡಾ.ಶಿವರಾಜ್ ಕುಮಾರ್,ಸ್ಟಾರ್ ಕೊರಿಯೋಗ್ರಾಫರ್ ಚಿನ್ನಿಮಾಸ್ಟರ್, ಕ್ರೇಜಿ ಕ್ವೀನ್ ರಕ್ಷಿತಾ, ವಿಜಯ್ ರಾಘವೇಂದ್ರ ಮತ್ತು ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯರಂತಹ ಸ್ಟಾರ್ ತೀರ್ಪುಗಾರರು 22 ವಾರಗಳ ಕಾಲ, 22 ಥೀಮ್ನೊಂದಿಗೆ, 13 ಜೋಡಿಗಳ ಜೊತೆ ಶುರುವಾದ ಈ ಡ್ಯಾನ್ಸ್ ಸಂಗ್ರಾಮ ಈಗ 7 ಅತ್ಯುತ್ತಮ ಜೋಡಿಗಳೊಂದಿಗೆ ಫಿನಾಲೆ ಹಂತವನ್ನ ಬಂದು ತಲುಪಿದೆ.

ಪ್ರಭು ದೇವ ಮೆಚ್ಚಿದ್ದ ದಕ್ಷಿಣ ಭಾರತದ ಅತಿ ದೊಡ್ಡ ಡ್ಯಾನ್ಸ್ ಶೋ.

ಇಂತಹ ಅತಿ ದೊಡ್ಡ ಡ್ಯಾನ್ಸ್ ಶೋಗೆ ಚಿತ್ರರಂಗದ ಹಲವು ಗಣ್ಯರು ಬಂದು ಕಾರ್ಯಕ್ರಮವನ್ನ ವೀಕ್ಷಿಸಿ ಕಲಾವಿದರನ್ನ ಹರಸಿ ಹೋಗುತ್ತಿದ್ದ ವೇದಿಕೆಗೆ, ಭಾರತದ ಶ್ರೇಷ್ಠ ಡ್ಯಾನ್ಸರ್, ಭಾರತದ ಮೈಕಲ್ ಜಾಕ್ಸನ್ ಎಂದೆ ಖ್ಯಾತ ರಾದ ನೃತ್ಯ ಸಂಯೋಜಕ, ನಟ, ನಿರ್ದೇಶಕ ಪ್ರಭುದೇವ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ವೇದಿಕೆಯನ್ನ ಅಲಂಕರಿಸಿದ್ದ ವಿಶೇಷ ಅತಿಥಿಗಳಲ್ಲಿ ಒಬ್ಬರು, ಕರುನಾಡಿನ ಶ್ರೇಷ್ಠ ಡ್ಯಾನ್ಸ್‌ಗಳಲ್ಲಿ ಸಾಲಿನಲ್ಲಿ ನಿಲ್ಲುವ ಕರುನಾಡ ಚಕ್ರವರ್ತಿ ಡಾ.ಶಿವರಾಜ್ ಕುಮಾರ್ ಜೊತೆ ವೇದಿಕೆ ಹಂಚಿಕೊಂಡ ಸಂಚಿಕೆ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮದ ಮಹತ್ತರ ಘಟ್ಟಗಳಲ್ಲಿ ಒಂದಾಗಿತ್ತು.

ನಾಟು ನಾಟು ಹಾಡಿಗೆ ಹೆಜ್ಜೆ ಹಾಕಿದ ಪ್ರಭುದೇವ

ಡಿಕೆಡಿ ವೇದಿಕೆ ವಿಶೇಷ ಅತಿಥಿಯಾಗಿ ಬಂದು ಕಂಟೆಸ್ಟೆಂಟ್ಗಳ ಕೊಟ್ಟ ಪರ್ಫಾರ್ಮೆನ್ಸ್ ನೋಡಿ ಫಿದಾ ಆಗಿದ್ದ ಪ್ರಭುದೇವ, ಫಿನಾಲೆ ವೇದಿಕೆಯನ್ನ ಅಲಂಕರಿಸುವ ಮುಖಾಂತರ ಶೋನ ಕಳೆಯನ್ನ ಮತ್ತಷ್ಟು ಹೆಚ್ಚಿಸಿದರು. ಒಂದೇ ವೇದಿಕೆಯಲ್ಲಿ ಭಾರತದ ಶ್ರೇಷ್ಠ ಡ್ಯಾನ್ಸರ್ಗಳು ಒಂದಾದ ಮೇಲೆ ಅಲ್ಲಿ ಮನೋರಂಜನೆಗೆ ಬರಿ ಇರೋಕೆ ಛಾನ್ಸೆ ಇಲ್ಲ.ಪೈನಲಿಸ್ಟ್ ಒಬ್ಬರ ಪರ್ಫಾರ್ಮೆನ್ಸ ನೋಡಿ ಮನಸೋತ ಪ್ರಭುದೇವ ಕರುನಾಡಿನ ಚಕ್ರವರ್ತಿ ಡಾ ಶಿವರಾಜ್ ಕುಮಾರ್ ಮತ್ತು ವಿಜಯ ರಾಘವೇಂದ್ರ ಜೊತೆ ನಾಟನಾಟು ಹಾಡಿಗೆ ಹೆಜ್ಜೆ ಹಾಕಿಯೇ ಬಿಟ್ಟರು, ಅಷ್ಟೆ ಅಲ್ಲದೆ ತಾವು ಕಾರ್ಯಕ್ರಮದಲ್ಲಿ ಇದ್ದ ಅಷ್ಟು ಹೊತ್ತು ಪೈನಲಿಸ್ಟಳನ್ನ ಹುರಿದುಂಬಿಸುವ ಕೆಲಸವನ್ನ ಪ್ರಭುದೇವ ಮಾಡುತ್ತಲೆ ಇದ್ದರು.

ಗ್ರಾಂಡ್ ಫಿನಾಲೆ ಫೈನಲಿಸ್ಟಳು (ಎಡದಿಂದ) ಸಾತ್ವಿಕ್-ಸೌಮ್ಯ, ಪ್ರಜ್ವಲ್-ಚೈತನ್ಯ, ನಿತಿನ್-ಡಿಂಪಲ್, ಪ್ರೀತಿಶಿವ-ದರ್ಶನ್, ಚಂದನ್, ಅನೀಶ್-ಲಿಪಿಕಾ, ಅಕ್ಷದಾ-ಇಸುಬ್.

ವಿಜಯ್ ರಾಘವೇಂದ್ರ

ಡ್ಯಾನ್ಸ ಎಂಜಾಯ್ ಮಾಡೋ ಪ್ರತೀ ಒಬ್ಬರು ನೋಡಬೇಕಾದ ಶೋ ಡಿಕೆಡಿ, ಅದರಲ್ಲ ನಮ್ಮ ಯುವನ್ ಲೇಖನ ಮಾತುಗಳನ್ನ ಕೇಳೋಕೆ ನಾನು ಸದಾ ಹಾತೊರೆಯುತ್ತಿದ್ದೆ,ಟ್ಯಾಲೆಂಟಿಗೆ ಯಾವುದೇ ಬೌಂಡರಿ ಇಲ್ಲ ಅಂತ ತೋರಿಸಿದ ಶೋನಾ ಫಿನಾಲೆಗೆ ನಾನು ಕಾಯುತ್ತ ಇದ್ದೇನೆ.

ವಾರದಿಂದ ವಾರಕ್ಕೆ ಡಾನ್ಸ್ ವಾರ್ ಮಾಡಿಕೊಂಡು ಬಂದ ಸ್ಪರ್ಧಿಗಳು ಫೈನಲ್ ಹಂತ ತಲುಪುವ ಮೊದಲೇ ಕನ್ನಡಿಗರ ಮನಸನ್ನು ಗೆದ್ದ ಫೈನಲಿಸ್ಟಳು, ಫಿನಾಲೆಗಾಗಿ ಭರ್ಜರಿ ತಯಾರಿ ಮಾಡಿಕೊಂಡಿದ್ದು ಒಂದಕ್ಕಿಂತ ಒಂದು ಅದ್ಭುತ ಪ್ರದರ್ಶನ ನೀಡಲು ಸ್ಪರ್ಧಿಗಳು ತುದಿಗಾಲಲ್ಲಿ ನಿಂತಿದ್ದಾರೆ.

ಚಿನ್ನಿ ಮಾಸ್ಟರ್

ಡ್ಯಾನ್ಸ್ ಅಂದ್ರೆ ಬರಿ ನಾವು ಕುಣಿಯೋದಲ್ಲ ನಮ್ಮ ಎದುರು ಇದ್ದೋರನ್ನ ಕುಣಿಸೋದಾ ಅಂತ ತೋರಿಸಿಕೊಟ್ಟಿರೋ ಡಿಕೆಡಿ ವೇದಿಕೆಯಲ್ಲಿ ನಾನು ಕೂಡ ಇದ್ದೇನೆ ಅನ್ನೋದು ನನಗೆ ಖುಷಿಯ ವಿಷಯ,ಯಾವಾಗ್ಲು ಶೂಟಿಂಗ್ ಬರೋವಾಗ ಇವತ್ತು ಮತ್ತೇನೋ ಹೊಸದನ್ನ ಕಲಿತೀನಿ ಅನ್ನೋ ಕುತೂಹಲದಲ್ಲೆ ಇಲ್ಲಿಗೆ ಬರ್ತಿದ್ದೆ,ಈಗ ಈ ಶೋ ಫಿನಾಲೆಯಲ್ಲಿ ಮತ್ತೇನೋ ಕಲಿಯೋಕೆ ನಮ್ಮಂತ ಡ್ಯಾನ್ಸ್ ಲವರ್ಸ್ಗೆ ಖಂಡಿತ ಸಿಗುತ್ತೆ.

ನಿಮ್ಮ ನೆಚ್ಚಿನ ಝೀ ಕನ್ನಡ ವಾಟ್ಸಪ್ ಚಾನೆಲ್ ಜಾಯಿನ್ ಆಗಲು ಸ್ಕ್ಯಾನ್ ಮಾಡಿ

ZEE ಕನ್ನಡ

ಫಿನಾಲೆ ವೇದಿಕೆಯಲ್ಲಿ ಭಾರತದ ಮೈಕಲ್ ಜಾಕ್ಸನ್ ಪ್ರಭುದೇವ.

ಕರುನಾಡಿನ ಹೆಮ್ಮೆಯ ಪವರ್ ಸ್ಟಾರ್ ಟ್ರೋಪಿಯನ್ನ ಕರುನಾಡಿನ ಜನತೆಯ ಮುಂದೆ ಕೊಂಡೊಯ್ದು ಅವರ ಆರ್ಶಿವಾದ ಪಡೆಯುವ ಮಹತ್ತರ ಕೆಲಸಕ್ಕೆ ಹಸಿರು ನಿಶಾನೆ ತೋರುವ ಮುಖಾಂತರ, ಕಾರ್ಯಕ್ರಮದ ರಂಗು ಹೆಚ್ಚಿಸಿದ್ದ ಪ್ರಭುದೇವ, ಕರ್ನಾಟಕ ನನ್ನ ತವರು, ಪ್ರತಿಬಾರಿ ಇಲ್ಲಿ ಬಂದಾಗಲೆಲ್ಲ ನನಗೆ ಹೆಚ್ಚು ಖುಷಿ ಸಿಗುತ್ತದೆ, ಒಬ್ಬ ಸಾರ್ವಕಾಲಿಕ ಶ್ರೇಷ್ಠ ಡ್ಯಾನ್ಸರ್‌ನ್ನ ಸ್ಮರಿಸುತ್ತ, ಅವರಿಗಾಗೆ ಒಂದು ಕಾರ್ಯಕ್ರಮವನ್ನ ಸರ್ಮಿಸುವ ಕೆಲಸ ಮಾಡುವ ಮನೋಭಾವ ನಮ್ಮ ಕರುನಾಡಿನಲ್ಲಿ ಮಾತ್ರ ಸಾಧ್ಯ ಅನ್ನುವುದರ ಜೊತೆಗೆ, ಡಿಕೆಡಿ ಕಾರ್ಯಕ್ರಮವನ್ನ ಮೆಚ್ಚಿ ಗ್ರಾಂಡ್ ಫಿನಾಲೆಗೆ ತಾವು ಸ್ವಯಂ ಪ್ರೇರಿತರಾಗಿ ಮತ್ತೆ ಬರುವುದಾಗಿ ವೇದಿಕೆಯಲ್ಲಿ ಘೋಷಿಸಿದರು.

ಶಿವರಾಜ್ ಕುಮಾರ್

ಡಿಕೆಡಿ ವೇದಿಕೆ ನಮ್ಮ ಕನ್ನಡ ಚಿತ್ರರಂಗಕ್ಕೆ ಹೊಸ ಹೊಸ ಡ್ಯಾನ್ಸರ್ಗಳನ್ನ ಕೊಡೋಕೆ ರೆಡಿಯಾಗಿರೋದಂತ ಸುಳ್ಳಲ್ಲ,ಹೊಸ ಸ್ಟೆಪ್,ಹೊಸ ಸ್ಟೈಲನ್ನ ಹುಟ್ಟು ಹಾಕಿರೋ ಈ ವೇದಿಕೆಯಲ್ಲಿ ನಾನು ತುಂಬಾ ಕಲಿತ್ತಿದ್ದೀನಿ,ಕರುನಾಡಿನ ಭವಿಷ್ಯದ ಡ್ಯಾನ್ಸರ್‌ಗಳ ತವರು ಇದು.

31 ಜಿಲ್ಲೆಗಳಿಗೆ ಪವರ್ ಸ್ಟಾರ್ ಟ್ರೋಫಿ

ಪವಸ್ಟಾರ್ ಪುನೀತ್ ರಾಜ್ಕುಮಾರ್ ಬರಿ ದೊಡ್ಡ ಮನೆಯ ಮಗನಲ್ಲ, ಅವರು ಕರುನಾಡಿನ ಪ್ರತಿ ಮನೆಯ ಮುದ್ದಿನ ಮಗ.ಸದಾ ನಗುಮುಖದ ಪವರ್ ಸ್ಟಾರ್ ದಕ್ಷಿಣ ಭಾರತ ಕಂಡ ಶ್ರೇಷ್ಟ ಡ್ಯಾನ್ಸರ್ ಗಳಲ್ಲಿ ಒಬ್ಬರು ಇಂತಹ ಧೀಮಂತನ ನೆನಪಿಗಾಗಿ ಮುಡಿಪಿಟ್ಟ ಪವರ್ ಸ್ಟಾರ್ ಟ್ರೋಫಿಯನ್ನ ಕರುನಾಡಿನ ಮನೆಮನೆಗೆ ತಲುಪಿಸುವಲ್ಲಿ ಡಿಕೆಡಿ ಕಾರ್ಯಕ್ರಮಕ್ಕೆ ಡ್ಯಾನ್ಸಿಗ್ ಲೆಜೆಂಡ್ ಪ್ರಭುದೇವ ಸೇರಿದಂತೆ ಡಾ.ಶಿವ ರಾಜ್ಕುಮಾರ್,ಚಿನ್ನೀ ಮಾಸ್ಟರ್,ರಕ್ಷಿತಾ,ಅರ್ಜುನ್ ಜನ್ಯ ಮತ್ತು ವಿಜಯ್ ರಾಘವೇಂದ್ರ ಹಸಿರು ನಿಶಾನೆ ತೋರಿಸುವ ಮುಖಾಂತರ ರಾಜ್ಯದ 31 ಜಿಲ್ಲೆಗಳಲ್ಲಿ ಸುತ್ತಾಡಿ ಕನ್ನಡಿಗರ ಆರ್ಶಿವಾದ ಪಡೆದುಕೊಂಡು ಬಂದಿರುವ ಪವರ್ ಸ್ಟಾರ್ ಟ್ರೋಫಿಗಾಗಿ ಈ ಬಾರಿ 7 ಜೋಡಿಗಳು ಕಾದಾಡಲಿದ್ದಾರೆ.

ರಕ್ಷಿತಾ

ಡಿಕೆಡಿ ವೇದಿಕೆ ಎಂದರೆ ನನಗೊಂದು ಮನೆ ಇದ್ದ ಹಾಗೆ ,ಪ್ರತಿ ಪರ್ಫಾಮೆನ್ಸ ಎಂಜಾಯ್ ಮಾಡೋದರ ಜೊತೆಗೆ ಹೊಸ ವಿಷಯಗಳನ್ನ ಕಳಿಯೋಕೆ ಸಿಕ್ತು ಹಾಗೆ ಕೆಲ ಸಂಬಂಧಗಳು ಎಷ್ಟು ಶ್ರೇಷ್ಟ ಅನ್ನೋದನ್ನ ಈ ವೇದಿಕೆ ಸದಾ ಹೇಳುತ್ತ ಬಂದಿದೆ,ಯಾವಾಗಲು ಹೊಸತನ ಕೊಡೋ ಈ ಶೋನ ಫಿನಾಲೆ ಇನ್ನು ಸ್ಪೇಷಲ್ ಆಗಿ ಇರೋದಂತು ಗ್ಯಾರಂಟಿ.

ಅರ್ಜುನ್ ಜನ್ಯ

ಹಾಡು ಮತ್ತು ನೃತ್ಯ ಒಂದು ನಾಣ್ಯದ ಎರಡು ಮುಖ ಇದ್ದ ಹಾಗೆ, ಹಾಡನ್ನ ಎಂಜಾಯ್ ಮಾಡೋರ ಕಾಲು ಕೂಡ ಕುಣತಾ ಇರುತ್ತೆ ಇಂತಹ ಕುಣಿಯೋ ಕಾಲುಗಳಿಗೆ ವೇದಿಕೆ ಕೊಟ್ಟ ಡಿಕೆಡಿಯಲ್ಲಿ ನಾನು ಕೂಡ ಇದ್ದೆ ಅನ್ನೋ ಖುಷಿ ನನಗಿದೆ.

Colgate WHITE GOLD

DANCE ಕರ್ನಾಟಕ DANCE SEASON 7

GRAND FINALE

CO-POWERED BY AMRITH NONI DENVER

COSMETICS PARTNER Dazller ETERNA · PURITY PARTNER · DEVOTIONAL PARTNER ULLAS · FASHION PARTNER Prisma · DIGITAL PARTNER ZEE5

ನಾಳೆ ಸಂಜೆ 6ಕ್ಕೆ

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸುರ್ಧೀರ್ಘ 22 ವಾರಗಳ ಪಯಣದಲ್ಲಿ ಬಹಳಷ್ಟು ಹೊಸತನಗಳಿಗೆ ನಾಂದಿಹಾಡಿದೆ, ಸತತ 2ವರ್ಷಗಳಿಂದ ಕರುನಾಡಿನ ಸಾರ್ವಕಾಲಿ ಶ್ರೇಷ್ಟ ಡ್ಯಾನ್ಸರ್ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರಿಗೆ ಈ ಕಾರ್ಯಕ್ರಮವನ್ನ ಅರ್ಪಿಸುತ್ತ ಬಂದಿರೋದು ಕಾರ್ಯಕ್ರಮದ ಘನತೆಯನ್ನ ಹೆಚ್ಚುಮಾಡಿದೆ, ಅದರಂತೆ ಡಾ.ಶಿವರಾಜ್ ಕುಮಾರ್ ಶೇರಿದಂತೆ ಪ್ರತಿಯೊಬ್ಬ ಜಡ್ಜಸ್ಗಳ ಕೊಡುಗೆ ಈ ಕಾರ್ಯಕ್ರಮದ ಯಶಸ್ಸಿನಲ್ಲಿ ಸಿಂಹಪಾಲು ಪಡೆದ್ದಿದ್ದು,ಫಿನಾಲೆಗೆ ಪ್ರಭುದೇವ ಅವರ ಆಗಮನ ಮತ್ತಷ್ಟು ಕಳೆಕಟ್ಟಲಿದೆ.

• ರಾಘವೇಂದ್ರ ಹುಣಸೂರು
ಚೀಫ್ ಕಂಟೆಂಟ್ ಆಫೀಸರ್, ಝೀ ಕನ್ನಡ ಮತ್ತು ಝೀ ಮರಾಠಿ

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಸೀಸನ್-7ರ ಗ್ರಾಂಡ್ ಫಿನಾಲೆ ಇನ್ನೂ ಹೆಚ್ಚಿನ ಅಪ್‌ಡೇಟ್‌ಗಳಾಗಾಗಿ ಇಲ್ಲಿ ಭೇಟಿ ನೀಡಿ /zeekannadatv /zeekannada /zeekannada /zeekannada zee5.com

ಶನಿವಾರ, ಅಕ್ಟೋಬರ್ 7, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ಶುಕ್ರವಾರ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟ ದಿವ್ಯಾ ದತ್ತಾ

BLDE (DEEMED TO BE UNIVERSITY) INSPIRING GENERATIONS

BLDE
(DEEMED TO BE UNIVERSITY)
Accredited with 'A' Grade by NAAC (Cycle-2)
Vijayapura, Karnataka, India
www.bldedu.ac.in

Visionary Founders

Dr. P. G. Halakatti | Shri Banthanal Swamiji | Dr. B. M. Patil

The Constituent College
SHRI B M PATIL MEDICAL COLLEGE HOSPITAL AND RESEARCH CENTRE
Now Accredited by
NABH (Constituent Board of QCI)

FIRST MEDICAL COLLEGE IN NORTH KARNATAKA Accredited by NABH

wishes a very

Happy Birthday to
HONOURABLE CHANCELLOR AND VISIONARY LEADER
Shri M. B. Patil
Minister for Large & Medium Industries & Infrastructure Development- GoK

Your vision has transformed many lives!

Your profound commitment and unwavering belief towards education has propelled BLDE to unparalleled & unprecedented heights. You have created compassionate and proficient healthcare practitioners.

Through your visionary leadership, our University consistently leads in medical advancement and researches, upholding the highest standards of ETHICAL PRACTICE and ensuring accessible & AFFORDABLE HEALTHCARE FOR ALL, including the unreached.

Super Speciality Hospital

Teaching Hospital
The Core Strength of BLDE

Advanced Trauma Centre

Accreditations

NAAC 3.09 CGPA | DSIR Recognized SIRO | NABH |
nirf Rank Band: 101-150 | | | INDIA TODAY 12th Rank
ARIIA Performer | EducationWorld 7th Rank | THE WEEK 11th Rank | CAREERS 360 42nd Rank

Thank you for inspiring generations!

BLDE FAMILY

ನಿರ್ಲಕ್ಷ್ಯದಿಂದ ಪ್ರಾಣಹಾನಿ ಹೆಚ್ಚಿತೇ?

ಸಿಕ್ಕಿಂನ ದಕ್ಷಿಣ ಲೋನಕ್ ಸರೋವರದಲ್ಲಿ ಸಂಭವಿಸಿದ ಹಿಮನದಿ ಸ್ಫೋಟ ಮತ್ತು ಮೇಘಸ್ಫೋಟಗಳನ್ನು ತಪ್ಪಿಸಲು ಅವಕಾಶವಿರಲಿಲ್ಲ. ಆದರೆ, ಅದರಿಂದಾಗುವ ಪ್ರಾಣಹಾನಿ ಮತ್ತು ಹಾನಿಯನ್ನು ತಗ್ಗಿಸಲು ಅವಕಾಶವಿತ್ತು. ಎಚ್ಚರಿಕೆಯನ್ನು ನಿರ್ಲಕ್ಷಿಸಿದ್ದಕ್ಕೇ ಅಂತಹ ಅವಕಾಶ ಕೈತಪ್ಪಿಹೋಯಿತು ಎಂದು ತಜ್ಞರು ವಿಶ್ಲೇಷಿಸಿದ್ದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಲೋನಕ್ ಸರೋವರದಲ್ಲಿ ಹಿಮನದಿ ಸ್ಫೋಟದ ಅಪಾಯದ ಬಗ್ಗೆ 10 ವರ್ಷಗಳಲ್ಲಿ ಹಲವು ಬಾರಿ ಎಚ್ಚರಿಕೆ ನೀಡಲಾಗಿತ್ತು. ಆದರೆ ಆ ಎಚ್ಚರಿಕೆಗಳನ್ನು ಕಡೆಗಣಿಸಿದ ಕಾರಣಕ್ಕೇ ಹೆಚ್ಚಿನ ಪ್ರಾಣಹಾನಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಲೋನಕ್ ಸಮುದ್ರಮಟ್ಟದಿಂದ 17,100 ಅಡಿ ಎತ್ತರದಲ್ಲಿ ಇರುವ ಒಂದು ಸರೋವರ. ಲೋನಕ್ ಹಿಮನದಿಯು ಕರಗಿ, ಪರ್ವತಗಳ ಕಣಿವೆ ಪ್ರದೇಶದಲ್ಲಿ ಸೃಷ್ಟಿಯಾಗಿರುವ ಈ ಸರೋವರ 50 ವರ್ಷಗಳ ಹಿಂದೆ ಇರಲೇ ಇಲ್ಲ. ಕಣಿವೆ ಪ್ರದೇಶದಲ್ಲಿ ಇದ್ದ ಸಣ್ಣ ಏರಿಯಂತಹ ರಚನೆಯ ಹಿಂಭಾಗದಲ್ಲಿ ನೀರು ನಿಂತು ಈ ಸರೋವರ ಸೃಷ್ಟಿಯಾಗಿದೆ. ಇಲ್ಲಿಂದ ಮುಂದಕ್ಕೆ ಹರಿವ ನೀರು ಲೋನಕ್ ನದಿಯಾಗುತ್ತದೆ. ಹಲವು ವರ್ಷಗಳ ಅವಧಿಯಲ್ಲಿ ಈ ಏರಿಯ ಹಿಂಭಾಗದಲ್ಲಿ ಕಲ್ಲು–ಮಣ್ಣು ತುಂಬಿ, ಅದೊಂದು ದೊಡ್ಡ ಅಣೆಕಟ್ಟೆಯಂತಾಗಿದೆ. ಈ ಸರೋವರದ ಬಗ್ಗೆ 1977ರಲ್ಲಿ ಅಧ್ಯಯನ ನಡೆಸಿದಾಗ ಅದರ ವಿಸ್ತೀರ್ಣ 17.5 ಹೆಕ್ಟೇರ್‌ಗಳಷ್ಟಿತ್ತು. ಆದರೆ 2008ರಲ್ಲಿ ಅದರ ವಿಸ್ತೀರ್ಣ 98 ಹೆಕ್ಟೇರ್‌ಗಳಿಗೆ ವ್ಯಾಪಿಸಿತ್ತು. ಜಾಗತಿಕ ತಾಪಮಾನದ ಕಾರಣ ಹಿಮನದಿ ಕರಗುವ ವೇಗ ಹೆಚ್ಚಾಗಿ, ಕೆರೆಯ ವಿಸ್ತೀರ್ಣ ಹೆಚ್ಚುತ್ತಾ ಹೋಗಿತ್ತು.

ಈ ಸರೋವರದ ಧಾರಣಾ ಸಾಮರ್ಥ್ಯದ ಬಗ್ಗೆ 2011ರಲ್ಲಿ ಅಧ್ಯಯನ ನಡೆಸಿದ್ದ ಕೇಂದ್ರ ಜಲ ಆಯೋಗವು, ‘ಈ ಅಣೆಕಟ್ಟೆ ದುರ್ಬಲವಾಗಿರುವ ಕಾರಣ ಅದು ಯಾವಾಗ ಬೇಕಾದರೂ ಒಡೆಯಬಹುದು’ ಎಂದು ಎಚ್ಚರಿಕೆ ನೀಡಿತ್ತು. 2013ರಲ್ಲಿ ಈ ಸಂಬಂಧ ವರದಿಯನ್ನು ನೀಡಿತ್ತು. ಜತೆಗೆ ಅಗತ್ಯ ಕ್ರಮಗಳನ್ನೂ ಸೂಚಿಸಿತ್ತು. ಆದರೆ ಅದನ್ನು ಕಡೆಗಣಿಸಲಾಗಿತ್ತು. 2015ರಲ್ಲಿ ಜಲ ಆಯೋಗವು ಮತ್ತೆ ಇಂತಹ ಎಚ್ಚರಿಕೆಯನ್ನು ನೀಡಿತ್ತು. ಆಗಲೂ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಪಿಟಿಐ ಹೇಳಿದೆ.

ದಕ್ಷಿಣ ಲೋನಕ್ ಸರೋವರವೂ ಸೇರಿದಂತೆ 15ಕ್ಕೂ ಹೆಚ್ಚು ಸರೋವರಗಳಲ್ಲಿ ಇಂತಹ ಸ್ಥಿತಿ ಇದೆ ಎಂದು 2022ರಲ್ಲಿ ಮತ್ತೊಮ್ಮೆ ಇಂತಹ ಎಚ್ಚರಿಕೆಯನ್ನು ನೀಡಲಾಗಿತ್ತು. ಲೋನಕ್ ಸರೋವರದ ದಂಡೆ ಯಾವಾಗ ಬೇಕಾದರೂ ಒಡೆಯಬಹುದು ಎಂದು ಎಚ್ಚರಿಕೆ ನೀಡಲಾಗಿತ್ತು. ಆನಂತರ ‘ದಂಡೆ ತುರ್ತು ಎಚ್ಚರಿಕೆ ವ್ಯವಸ್ಥೆ’ ಅಳವಡಿಕೆಗೆ ಕೇಂದ್ರ ಸರ್ಕಾರವು ಆದೇಶಿಸಿತ್ತು. ಇದರ ಭಾಗವಾಗಿ ಮೊದಲ ಹಂತದಲ್ಲಿ ಸರೋವರ ದಂಡೆಯಲ್ಲಿ ಸಂವೇದಕಗಳನ್ನು ಅಳವಡಿಸಲಾಗಿತ್ತು. ಎರಡನೇ ಹಂತದಲ್ಲಿ ಸೈರನ್ ಮತ್ತು ಎಚ್ಚರಿಕೆ ರವಾನೆ ವ್ಯವಸ್ಥೆಯನ್ನು ಅಳವಡಿಸಬೇಕಿತ್ತು. ಸರ್ಕಾರವು ಹಣ ಬಿಡುಗಡೆ ಮಾಡದೇ ಇರುವ ಕಾರಣಕ್ಕೆ ಎರಡನೇ ಹಂತದ ವ್ಯವಸ್ಥೆ ಕಾಮಗಾರಿ ಸ್ಥಗಿತವಾಗಿತ್ತು ಎಂದು ರಾಯಿಟರ್ಸ್ ವರದಿ ಮಾಡಿದೆ.

ಈ ವ್ಯವಸ್ಥೆ ಅಳವಡಿಸಿದ್ದಿದ್ದರೆ, ಸರೋವರದ ದಂಡೆ ಒಡೆದ ಕೂಡಲೇ ಸೈರನ್ ಕೂಗುತ್ತಿತ್ತು ಮತ್ತು ಎಚ್ಚರಿಕೆ ಸಂದೇಶ ರವಾನೆಯಾಗುತ್ತಿತ್ತು. ದಂಡೆ ಒಡೆದು ನೀರು ನುಗ್ಗಿದರೂ, ಹತ್ತಿರದ ಜನವಸತಿ ಪ್ರದೇಶಕ್ಕೆ ನೀರು ನುಗ್ಗಲು 90 ನಿಮಿಷ ಬೇಕಾಗಿತ್ತು. ತೀಸ್ತಾ ನದಿಗೆ ಅಡ್ಡವಾಗಿ ಕಟ್ಟಿರುವ ಚುಂಗ್‌ತಾಂಗ್ ಅಣೆಕಟ್ಟೆಗೆ ಈ ನೀರು ತಲುಪಲು ಎರಡು ತಾಸಿನ ಕಾಲಾವಕಾಶ ಇರುತ್ತಿತ್ತು. ಎಚ್ಚರಿಕೆ ರವಾನೆ ವ್ಯವಸ್ಥೆ ಇಲ್ಲದೇ ಇರುವ ಕಾರಣಕ್ಕೆ ಜನರನ್ನು ತೆರವು ಮಾಡಲು ಸಾಧ್ಯವಾಗಿಲ್ಲ. ಹೀಗಾಗಿಯೇ ಹೆಚ್ಚು ಪ್ರಾಣಹಾನಿ ಸಂಭವಿಸಿದೆ ಎಂದು ಸಿಕ್ಕಿಂ ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ. ಸೆಪ್ಟೆಂಬರ್ ಎರಡನೇ ವಾರದಲ್ಲಷ್ಟೇ ಲೋನಕ್ ಸರೋವರದ ಅಧ್ಯಯನ ನಡೆಸಿದ್ದ ಜ್ಯೂರಿಕ್ ವಿಶ್ವವಿದ್ಯಾಲಯದ ವಿಜ್ಞಾನಿಗಳ ತಂಡವು ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ ಎಂದು ರಾಯಿಟರ್ಸ್ ವಿವರಿಸಿದೆ.

ಚುಂಗ್‌ತಾಂಗ್ ಅಣೆಕಟ್ಟೆಯ ಗೇಟುಗಳನ್ನು ತೆರೆಯಲೂ ಅವಕಾಶವಿತ್ತು. ಆಗ ಅಣೆಕಟ್ಟೆ ಒಡೆದು ದಿಢೀರ್ ಪ್ರವಾಹ ಉಂಟಾಗುವ ಅಪಾಯ ಇರುತ್ತಿರಲಿಲ್ಲ. ಅಣೆಕಟ್ಟೆಯ ಗೇಟುಗಳನ್ನು ತೆಗೆಯಲು ಅವಕಾಶವಿದ್ದರೂ, ಏಕೆ ತೆಗೆಯಲಿಲ್ಲ ಎಂಬುದು ಗೊತ್ತಾಗುತ್ತಿಲ್ಲ ಎಂದು ಸಿಕ್ಕಿಂ ಸರ್ಕಾರದ ಅಧಿಕಾರಿಗಳು ಆಘಾತ ವ್ಯಕ್ತಪಡಿಸಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಸಿಕ್ಕಿಂನಲ್ಲಿ ಆಗಿದ್ದೇನು...

ಮೇಘಸ್ಫೋಟ

ಒಂದು ಪ್ರದೇಶದಲ್ಲಿ ಒಂದು ಗಂಟೆ ಅವಧಿಗೆ 10 ಸೆಂ.ಮೀನಷ್ಟು ಮಳೆ ಸುರಿದರೆ, ಅದನ್ನು ಮೇಘಸ್ಫೋಟ ಎಂದು ಕರೆಯುತ್ತಾರೆ. ಇದು ಸಮತಟ್ಟಾದ ಪ್ರದೇಶದಲ್ಲಿಯೇ ಹೆಚ್ಚಾಗಿ ಸಂಭವಿಸುತ್ತದೆ, ಬೆಟ್ಟ ಪ್ರದೇಶದಲ್ಲಿಯೂ ಇದು ಸಂಭವಿಸುತ್ತದೆ ಎಂದು ಪರ್ವತ ವಿಜ್ಞಾನಿಗಳು ಹೇಳುತ್ತಾರೆ. ವಾಯವ್ಯ ಸಿಕ್ಕಿಂನಲ್ಲಿ ಮೇಘಸ್ಫೋಟ ಸಂಭವಿಸಿದೆ ಎನ್ನಲಾಗಿದೆ.

ಹಿಮನದಿ ಸ್ಫೋಟ

ಹಿಮನದಿಯ ಪಾತ್ರದಲ್ಲಿ ಸರೋವರಗಳು ನಿರ್ಮಾಣವಾಗಿರುತ್ತವೆ. ಹಿಮನದಿ ಒಡೆಯುವ ಕಾರಣದಿಂದ ಅಂತಹ ಸರೋವರಗಳು ಧ್ವಂಸವಾಗುತ್ತವೆ. ಆಗ ಉಂಟಾಗುವ ದಿಢೀರ್ ಪ್ರವಾಹವನ್ನು ಹಿಮನದಿ ಸ್ಫೋಟ ಎನ್ನುತ್ತಾರೆ. ತೀಸ್ತಾ ನದಿಯ ಉಪನದಿಯಾದ ಲೋನಕ್ ಹಿಮನದಿಯಿಂದ ದಕ್ಷಿಣಕ್ಕಿದ್ದ, ದಕ್ಷಿಣ ಲೋನಕ್ ಸರೋವರದಲ್ಲಿ ಹಿಮನದಿ ಸ್ಫೋಟ ಉಂಟಾಗಿದೆ.

ಹಿಗ್ಗುತ್ತಲೇ ಇತ್ತು ಸರೋವರ

ದಕ್ಷಿಣ ಲೋನಕ್ ಸರೋವರದ ದಂಡೆ ಒಡೆಯುವ ಮುನ್ನ ಹಾಗೂ ದಂಡೆ ಒಡೆದ ನಂತರದ ಉಪಗ್ರಹ ಚಿತ್ರಗಳನ್ನು ಇಸ್ರೊ ಬಿಡುಗಡೆ ಮಾಡಿದೆ

ಸೆ.17ರಂದು ಈ ಸರೋವರವು 162.7 ಹೆಕ್ಟೇರ್ ಪ್ರದೇಶದಷ್ಟಿತ್ತು | ಸೆ.28ರಂದು ಈ ಸರೋವರದ ವಿಸ್ತೀರ್ಣವು 167.4 ಹೆಕ್ಟೇರ್‌ನಷ್ಟಾಯಿತು | ಅವಘಡದ ನಂತರ ಅ.4ರಂದು ಸರೋವರವು 60.3 ಹೆಕ್ಟೇರ್‌ಗೆ ಕುಸಿದಿತ್ತು



ಆಧಾರ: ರಾಯಿಟರ್ಸ್, ಪಿಟಿಐ, ಇಸ್ರೊ ಮತ್ತು ಕೇಂದ್ರ ಜಲ ಆಯೋಗದ ವರದಿಗಳು

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

ಪ್ರವಾಹ ಪೀಡಿತ ಪ್ರದೇಶದಲ್ಲಿ ಮಣ್ಣಿನಲ್ಲಿ ಸಿಲುಕಿಕೊಂಡಿರುವ ಟ್ರಕ್ . ಪಿಟಿಐ ಚಿತ್ರ

ಸಿಕ್ಕಿಂ ಪ್ರವಾಹ: ಜನರ ರಕ್ಷಣೆ, ಪರಿಹಾರ ಮೊದಲ ಆದ್ಯತೆ

‘ಸಾವಿರಾರು ಕೋಟಿ ನಷ್ಟ’

ಗ್ಯಾಂಗ್ಟಕ್ (ಪಿಟಿಐ/ಎಎಫ್‌ಪಿ): ಸಿಕ್ಕಿಂ ರಾಜ್ಯದಲ್ಲಿ ತೀಸ್ತಾ ನದಿ ಪ್ರವಾಹ ಪರಿಸ್ಥಿತಿಯಿಂದ ಪ್ರಾಣ ಹಾನಿಯ ಜತೆಗೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಗೆ ನಷ್ಟ ಉಂಟಾಗಿದೆ ಎಂದು ಮುಖ್ಯಮಂತ್ರಿ ಪ್ರೇಮ್‌ಸಿಂಗ್ ತಮಂಗ್ ಹೇಳಿದರು.

‘ಹಾನಿಯ ಬಗ್ಗೆ ನಿಖರವಾದ ವಿವರ ನೀಡಲು ಸಾಧ್ಯವಿಲ್ಲ. ಜನರ ರಕ್ಷಣೆ ಮತ್ತು ಅವರಿಗೆ ತಕ್ಷಣದ ಪರಿಹಾರ ಒದಗಿಸುವುದು ಆದ್ಯತೆ. ಜಿಲ್ಲೆಗಳ ನಡುವಿನ ರಸ್ತೆ ಸಂಪರ್ಕ ಕಡಿತಗೊಂಡಿದೆ, ಸೇತುವೆಗಳು ಕೊಚ್ಚಿ ಹೋಗಿವೆ. ಸುಮಾರು 25 ಸಾವಿರ ಜನರು ಸಂಕಷ್ಟದಲ್ಲಿದ್ದಾರೆ’ ಎಂದು ಸುದ್ದಿಸಂಸ್ಥೆಗೆ ತಿಳಿಸಿದರು.

ಈ ನಡುವೆ ಪ್ರವಾಹ ಪೀಡಿತ ಜನರಿಗೆ ಪರಿಹಾರ ಒದಗಿಸಲು ಸಿಕ್ಕಿಂಗೆ ರಾಜ್ಯ ವಿಪತ್ತು ಸ್ಪಂದನಾ ನಿಧಿಯ (ಎಸ್‌ಡಿಆರ್‌ಎಫ್) ಕೇಂದ್ರದ ಪಾಲಿನಿಂದ ₹ 44.8 ಕೋಟಿಯನ್ನು ಮುಂಗಡವಾಗಿ ಬಿಡುಗಡೆ ಮಾಡಲು ಗೃಹ ಸಚಿವ ಅಮಿತ್ ಶಾ ಅನುಮೋದನೆ ನೀಡಿದ್ದಾರೆ.

ಅಮಿತ್ ಶಾ ಅವರ ನಿರ್ದೇಶನದ ನಂತರ, ಗೃಹ ಸಚಿವಾಲಯ) ಅಂತರ ಸಚಿವಾಲಯದ ಕೇಂದ್ರ ತಂಡವನ್ನು) ರಚಿಸಿದೆ. ಈ ತಂಡ ಶೀಘ್ರದಲ್ಲೇ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ಹಾನಿಯ ಮೌಲ್ಯಮಾಪನ ಮಾಡಲಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಪ್ರವಾಹದಿಂದ ಸುಮಾರು 2,413 ಜನರನ್ನು ರಕ್ಷಿಸಲಾಗಿದ್ದರೂ 143 ಜನರು ಇನ್ನೂ ಪತ್ತೆಯಾಗಿಲ್ಲ ಎಂದು ಹೇಳಿದರು.

ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗುತ್ತಿದೆ. ಸಾವಿರಾರು ಜನರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ. ಸೇನಾ ಸಿಬ್ಬಂದಿ ಮತ್ತು ನಾಗರಿಕರಿಗಾಗಿ ಸೇನೆ ಮತ್ತು ಎನ್‌ಡಿಆರ್‌ಎಫ್ ತಂಡಗಳು ಶೋಧ ಕಾರ್ಯ ಮುಂದುವರೆಸಿವೆ ಎಂದರು.

ಪ್ರವಾಹದಿಂದಾಗಿ 13 ಸೇತುವೆಗಳು ನಾಶವಾಗಿವೆ. ಮಂಗನ್ ಜಿಲ್ಲೆಯೊಂದರಲ್ಲೇ ಎಂಟು ಸೇತುವೆಗಳು ಕೊಚ್ಚಿಹೋಗಿವೆ. ಶೋಧ ಕಾರ್ಯಾಚರಣೆಗೆ ಶ್ವಾನಗಳು ಮತ್ತು ವಿಶೇಷ ರೇಡಾರ್‌ಗಳನ್ನು ನಿಯೋಜಿಸಲಾಗಿದೆ ಎಂದು ರಕ್ಷಣಾ ಸಚಿವಾಲಯದ ಹೇಳಿಕೆ ತಿಳಿಸಿದೆ.

ಪ್ರವಾಹ ಪೀಡಿತ ಸಿಕ್ಕಿಂನಲ್ಲಿ ಸಿಲುಕಿರುವ ರಾಜ್ಯದ 160 ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲು ಇಬ್ಬರು ಹಿರಿಯ ಅಧಿಕಾರಿಗಳನ್ನು ಕಳುಹಿಸಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಅಸ್ಸಾಂ ಬಿಸ್ವಾ ಶರ್ಮಾ ಹೇಳಿದ್ದಾರೆ.

‘ಕಳಪೆ ಕಾಮಗಾರಿ: ಒಡೆದ ಅಣೆಕಟ್ಟೆ’

‘ಚುಂಗ್‌ತಾಂಗ್ ಅಣೆಕಟ್ಟು ಕೊಚ್ಚಿಕೊಂಡು ಹೋಗಿದೆ. ಈ ಕಾರಣ ಕೆಳ ಪ್ರದೇಶಗಳಲ್ಲಿ ಅನಾಹುತ ಸಂಭವಿಸಿದೆ. ಮೇಘ ಸ್ಫೋಟವೂ ಆಗಿದೆ. ಲೋನಕ್ ಸರೋವರವೂ ಉಕ್ಕೇರಿದೆ. ಹಿಂದಿನ ಸರ್ಕಾರ ನಿರ್ಮಿಸಿದ ಕಳಪೆ ಗುಣಮಟ್ಟದ ಕಾಮಗಾರಿಯಿಂದಾಗಿ ಅಣೆಕಟ್ಟೆ ಒಡೆದಿದೆ ಮತ್ತು ಕೆಳಭಾಗದ ಪ್ರದೇಶಗಳಲ್ಲಿ ಪ್ರವಾಹದಿಂದ ಭಾರಿ ತೊಂದರೆ ಆಗಿದೆ’ ಎಂದು ಮುಖ್ಯಮಂತ್ರಿ ತಮಂಗ್ ಎನ್‌ಡಿಟಿವಿಗೆ ತಿಳಿಸಿದ್ದಾರೆ.

ಮತ್ತೊಂದು ನೀರ್ಗಲ್ಲು ಸರೋವರದಲ್ಲಿ ಪ್ರವಾಹ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಪ್ರವಾಸಿಗರು ಸಿಕ್ಕಿಂಗೆ ಭೇಟಿ ನೀಡುವುದನ್ನು ಮುಂದೂಡಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

₹4 ಲಕ್ಷ ಪರಿಹಾರ

ಪ್ರವಾಹದಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 4 ಲಕ್ಷ ಹಾಗೂ ಕಾಳಜಿ ಕೇಂದ್ರಗಳಲ್ಲಿನ ಸಂತ್ರಸ್ತರಿಗೆ ₹ 2 ಸಾವಿರ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ತಮಂಗ್ ಹೇಳಿದ್ದಾರೆ. ಕಾಳಜಿ ಕೇಂದ್ರದಲ್ಲಿ ಸಂತ್ರಸ್ತ ಕುಟುಂಬಗಳನ್ನು ಅವರು ಭೇಟಿ ಮಾಡಿದರು. ಸ್ಥಳಾಂತರಗೊಂಡ ಕುಟುಂಬಗಳ ಪುನರ್ವಸತಿಗೆ ಎಲ್ಲಾ ನೆರವು ನೀಡುವಂತೆ ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ನಿರ್ದೇಶನ ನೀಡಿದರು.

ಖರ್ಗೆ, ರಾಹುಲ್ ಭೇಟಿಯಾದ ಪವಾರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಶುಕ್ರವಾರ ಇಲ್ಲಿ ಭೇಟಿ ಮಾಡಿ ದೇಶದ ರಾಜಕೀಯ ಪರಿಸ್ಥಿತಿ ಬಗ್ಗೆ ಚರ್ಚಿಸಿದರು.

ಮುಂಬೈನಲ್ಲಿ ಮೈತ್ರಿಕೂಟದ ಸಭೆ ನಡೆದ ಬಳಿಕ ಪ್ರತಿಪಕ್ಷಗಳ ಕೂಟದಲ್ಲಿ ಯಾವುದೇ ಚಟುವಟಿಕೆ ನಡೆದಿಲ್ಲ. ಭೋಪಾಲ್‌ನಲ್ಲಿ ಜಂಟಿ ರ‍್ಯಾಲಿ ನಡೆಸಬೇಕೆಂಬ ಸಮನ್ವಯ ಸಮಿತಿಯ ನಿರ್ಧಾರವನ್ನೂ ಕಾರ್ಯರೂಪಕ್ಕೆ ತರಲು ಮೈತ್ರಿಕೂಟಕ್ಕೆ ಸಾಧ್ಯವಾಗಲಿಲ್ಲ. ರ‍್ಯಾಲಿಯನ್ನು ಕಮಲ್‌ನಾಥ್ ವಿರೋಧಿಸಿದ್ದರು. ಈ ಕಾರಣ ಈಗ ಪವಾರ್ ಅವರ ಭೇಟಿಗೆ ಮಹತ್ವ ಬಂದಿದೆ.

ಸುಮಾರು 40 ನಿಮಿಷಗಳವರೆಗೆ ಸಭೆ ನಡೆದಿದೆ. ಮೈತ್ರಿಕೂಟದಲ್ಲಿ ಮತ್ತೆ ಹುರುಪು ತುಂಬುವ ಬಗ್ಗೆ ಮೂವರೂ ನಾಯಕರು ಚರ್ಚಿಸಿದರು ಎಂದು ಮೂಲಗಳು ಹೇಳಿವೆ.

ಖರ್ಗೆ ಅವರು ‘ಎಕ್ಸ್’ನಲ್ಲಿ ಫೋಟೊ ಪೋಸ್ಟ್ ಮಾಡಿದ್ದು ‘ದೇಶದ ಜನರ ದನಿ ಮತ್ತೆ ಕೇಳುವಂತೆ ಮಾಡಲು ರಾಹುಲ್ ಅವರೊಂದಿಗೆ ಎನ್‌ಸಿಪಿ ನಾಯಕ ಶರದ್ ಪವಾರ್ ಅವರನ್ನು ಭೇಟಿ ಮಾಡಿದೆ. ಎಲ್ಲಾ ಸವಾಲು ಎದುರಿಸಲು ನಾವು ಸಿದ್ಧರಾಗಿದ್ದೇವೆ’ ಎಂದು ಹೇಳಿದ್ದಾರೆ. ‘ಇಂಡಿಯಾ’ ಕೂಟದ ಅಡಿಬರಹ ‘ಭಾರತವು ಒಗ್ಗೂಡುತ್ತದೆ, ಭಾರತವು ಗೆಲ್ಲುತ್ತದೆ’ ಎಂಬುದನ್ನೂ ಬಳಸಿದ್ದಾರೆ. ಪವಾರ್ ಕೂಡ ಭೇಟಿ ಬಗ್ಗೆ ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ಶರದ್ ಪವಾರ್ ಅವರು ನವದೆಹಲಿಯಲ್ಲಿ ಶುಕ್ರವಾರ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದರು ಪಿಟಿಐ ಚಿತ್ರ

ಛತ್ತೀಸಗಢದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಜಾತಿಗಣತಿ: ಪ್ರಿಯಾಂಕಾ

ಕಾಂಕೆರ್ (ಪಿಟಿಐ): ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸುವುದಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಶುಕ್ರವಾರ ಆಶ್ವಾಸನೆ ನೀಡಿದ್ದಾರೆ.

ನಗರಿಯಾ ನಿಕಾಯ್ ಈವಂ ಪಂಚಾಯಿತಿ ರಾಜ್ ಮಹಾಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ‘ವರ್ಷಾಂತ್ಯದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡವರಿಗೆ 10 ಲಕ್ಷ ಮನೆಗಳನ್ನು ನಿರ್ಮಿಸಿ ಕೊಡುತ್ತೇವೆ’ ಎಂದು ಹೇಳಿದರು.

‘ಬಿಹಾರದ ಜಾತಿ ಗಣತಿ ಪ್ರಕಾರ, ಆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 84ರಷ್ಟು ಮಂದಿ ಹಿಂದುಳಿದ ವರ್ಗ (ಒಬಿಸಿ), ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪಂಗಡಕ್ಕೆ (ಎಸ್‌ಟಿ) ಸೇರಿದವರು. ಆದರೆ ಅತ್ಯುನ್ನತ ಹುದ್ದೆಗಳಲ್ಲಿ ಶೇ 84ರಷ್ಟು ಒಬಿಸಿ, ಎಸ್‌ಸಿ ಅಥವಾ ಎಸ್‌ಟಿಯವರು ಇದ್ದಾರೆಯೇ? ಅವರಿಗೆ ಆ ಹಕ್ಕು ಇಲ್ಲವೇ? ಜಾತಿ ಗಣತಿ ಏಕೆ ಸಾಧ್ಯವಿಲ್ಲ? ಜಾತಿ ಗಣತಿ ನಡೆಸಲೇಬೇಕು’ ಎಂದು ಹೇಳಿದರು.

ಪ್ರಿಯಾಂಕಾ ಗಾಂಧಿ

> ಕೇಂದ್ರ ಸರ್ಕಾರ ಶ್ರೀಮಂತರ ಪರವಾಗಿದೆ. ಅದಕ್ಕೆ ಬಡ ಮತ್ತು ಮಧ್ಯಮ ವರ್ಗದವರ ಬಗ್ಗೆ ಕಾಳಜಿ ಇಲ್ಲ
> **ಪ್ರಿಯಾಂಕಾ ಗಾಂಧಿ**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

ಕೇಂದ್ರದ ವಿರುದ್ಧ ವಾಗ್ದಾಳಿ: ‘ಪ್ರಧಾನಿ ಮೋದಿ ಅವರದ್ದು ಕೇವಲ ಪೊಳ್ಳು ಭರವಸೆ. ಪ್ರತಿಯೊಬ್ಬ ನಾಗರಿಕರ ಬ್ಯಾಂಕ್ ಖಾತೆಗೆ 15 ಲಕ್ಷ ಜಮೆ ಮಾಡುತ್ತೇವೆ ಮತ್ತು ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂಬ ಅವರ ಗ್ಯಾರಂಟಿ ಏನಾಯಿತು? ಈ ಪ್ರಶ್ನೆ ಕೇಳಿದಾಗಲೆಲ್ಲಾ ಅವರು ಇನ್ನೊಂದು ಗ್ಯಾರಂಟಿ ಘೋಷಣೆ ಮಾಡುತ್ತಾರೆ’ ಎಂದು ಟೀಕಿಸಿದರು.

ಆಸ್ಪತ್ರೆಗಳಲ್ಲಿ ಸಾವು: ಮಹಾರಾಷ್ಟ್ರ ಸರ್ಕಾರಕ್ಕೆ ಚಾಟಿ ಬೀಸಿದ ಬಾಂಬೆ ಹೈಕೋರ್ಟ್

‘ಹೊಣೆಯಿಂದ ನುಣುಚಿಕೊಳ್ಳುವಂತಿಲ್ಲ’

ಮುಂಬೈ(ಪಿಟಿಐ): ‘ಸರ್ಕಾರವಾಗಿ ನೀವು ಸಮಸ್ಯೆಗಳತ್ತ ಬೊಟ್ಟು ಮಾಡಿ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವಂತಿಲ್ಲ. ನಿಮ್ಮ ಜವಾಬ್ದಾರಿಯನ್ನು ಖಾಸಗಿಯವರ ಮೇಲೆ ಹಾಕಬಾರದು’ ಎಂದು ಮಹಾರಾಷ್ಟ್ರ ಸರ್ಕಾರವನ್ನು ಉದ್ದೇಶಿಸಿ ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ.

ರಾಜ್ಯದ ಮೂರು ಪ್ರತ್ಯೇಕ ಆಸ್ಪತ್ರೆಗಳಲ್ಲಿ ಇತ್ತೀಚೆಗೆ ಸಂಭವಿಸಿದ ಸಾವುಗಳ ಹಿನ್ನೆಲೆಯಲ್ಲಿ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಪ್ರಕರಣದ ವಿಚಾರಣೆ ವೇಳೆ, ಮುಖ್ಯನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಆರೀಫ್ ಡಾಕ್ಟರ್ ಅವರಿದ್ದ ವಿಭಾಗೀಯ ನ್ಯಾಯಪೀಠವು ರಾಜ್ಯ ಸರ್ಕಾರದತ್ತ ಚಾಟಿ ಬೀಸಿತು.

ನಾಂದೇಡ್, ನಾಗ್ಪುರ ಹಾಗೂ ಛತ್ರಪತಿ ಸಂಭಾಜಿನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸೋಮವಾರದಿಂದ ಬುಧವಾರದ ವರೆಗೆ 80ಕ್ಕೂ ಹೆಚ್ಚು ರೋಗಿಗಳು ಮೃತಪಟ್ಟಿದ್ದರು.

ವಿಚಾರಣೆ ಆರಂಭಗೊಂಡಾಗ, ಅಡ್ವೊಕೇಟ್ ಜನರಲ್ ಬೀರೇಂದ್ರ ಸರಾಫ್, ‘ಸಾವುಗಳು ವರದಿಯಾಗಿರುವ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಗಳು, ಉಪಕರಣಗಳು ಇವೆ. ಬಹಳ ಗಂಭೀರ ಸ್ಥಿತಿಯಲ್ಲಿದ್ದ ರೋಗಿಗಳನ್ನು ಬೇರೆ ಆಸ್ಪತ್ರೆಗಳಿಂದ ಕರೆತಂದು ಈ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿತ್ತು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ರೋಗಿಗಳೇ ಮೃತಪಟ್ಟಿದ್ದಾರೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ಕೆಲ ಸಮಸ್ಯೆಗಳಿರುವುದನ್ನು ನಿರಾಕರಿಸುವಂತಿಲ್ಲ. ಆದರೆ, ಈ ವಿಷಯದಲ್ಲಿ ಸಂಬಂಧಪಟ್ಟ ಆಸ್ಪತ್ರೆಗಳು ನಿರ್ಲಕ್ಷ್ಯ ತೋರಿದಂತೆ ಕಾಣುತ್ತಿಲ್ಲ. ಅಷ್ಟೊಂದು ಸಂಖ್ಯೆಯ ರೋಗಿಗಳು ಮೃತಪಟ್ಟಿರುವುದು ದುರದೃಷ್ಟಕರ’ ಎಂದು ಸರಾಫ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಆರೋಗ್ಯ ಸೇವೆಯನ್ನು ಬಲಪಡಿಸುವುದು ಹೇಗೆ? ಎಲ್ಲ ಸೌಲಭ್ಯಗಳು ಕಾಗದದ ಮೇಲೆ ಮಾತ್ರ ಇವೆ. ಇವು ಜನರಿಗೆ ತಲುಪದಿದ್ದರೆ ಏನೂ ಪ್ರಯೋಜನವಿಲ್ಲ. ಕೇವಲ ಔಷಧಗಳು, ಉಪಕರಣಗಳಿಗೆ ಸಂಬಂಧಿಸಿ ಈ ಮಾತು ಹೇಳುತ್ತಿಲ್ಲ. ರಾಜ್ಯದ ಆರೋಗ್ಯ ವ್ಯವಸ್ಥೆಯ ಸ್ಥಿತಿಯೇ ಹೀಗಿದೆ’ ಎಂದಿತು.

‘ರಾಜ್ಯ ಸರ್ಕಾರ ಉತ್ತಮ ನೀತಿಗಳನ್ನು ರೂಪಿಸಿದೆ; ಅವುಗಳನ್ನು ಅನುಷ್ಠಾನಗೊಳಿಸಿಲ್ಲ. ಇಷ್ಟೊಂದು ಪ್ರಮಾಣದಲ್ಲಿ ಸಾವುಗಳು ಸಂಭವಿಸುವಂತಹ ಪರಿಸ್ಥಿತಿ ಹೇಗೆ ನಿರ್ಮಾಣವಾಯಿತು? ಏನಾಯಿತು’ ಎಂದು ನ್ಯಾಯಮೂರ್ತಿ ಆರೀಫ್ ಕೇಳಿದರು.

‘ಸಣ್ಣ ಹಾಗೂ ಖಾಸಗಿ ಆಸ್ಪತ್ರೆಗಳು ತಮ್ಮಲ್ಲಿ ದಾಖಲಾದ ರೋಗಿಗಳ ಸ್ಥಿತಿ ಗಂಭೀರವಾದ ಕೂಡಲೇ ಅವರನ್ನು ಸಾರ್ವಜನಿಕ ಆಸ್ಪತ್ರೆಗೆ ಕಳಿಸುತ್ತಾರೆ. ನಾಂದೇಡ್ ಮತ್ತು ಛತ್ರಪತಿ ಸಂಭಾಜಿನಗರ ಆಸ್ಪತ್ರೆಗಳಲ್ಲಿ ಮೃತಪಟ್ಟ ಬಹುತೇಕ ರೋಗಿಗಳನ್ನು ಗಂಭೀರ ಸ್ಥಿತಿಯಲ್ಲಿ ಈ ಆಸ್ಪತ್ರೆಗಳಿಗೆ ಕರೆ ತರಲಾಗಿತ್ತು. ಬಹಳಷ್ಟು ಸಂಖ್ಯೆಯ ರೋಗಿಗಳು ಈ ಆಸ್ಪತ್ರೆಗಳಿಗೆ ದಾಖಲಾದ ಒಂದು ದಿನದೊಳಗೇ ಮೃತಪಟ್ಟಿದ್ದಾರೆ’ ಎಂದು ಸರಾಫ್ ವಿವರಿಸಿದರು.

ನ್ಯಾಯಪೀಠವು ಅಡ್ವೊಕೇಟ್ ಜನರಲ್ ಸರಾಫ್ ಅವರ ವಿವರಣೆಯನ್ನು ಒಪ್ಪಿದರೂ, ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಕಡಿಮೆಯಾಗಿರುವುದು, ಹುದ್ದೆಗಳು ಭರ್ತಿಯಾಗದೇ ಉಳಿದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿತು.

ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳು, ಔಷಧಗಳ ಬೇಡಿಕೆ–ದಾಸ್ತಾನುಗಳ ವಿವರ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಕಳೆದ ಆರು ತಿಂಗಳಲ್ಲಿ ಕೈಗೊಂಡ ಕ್ರಮಗಳ ಕುರಿತ ವಿವರಗಳನ್ನು ಒಳಗೊಂಡ ಪ್ರಮಾಣಪತ್ರವನ್ನು ಮುಂದಿನ ವಿಚಾರಣೆ ನಡೆಯುವ ಅಕ್ಟೋಬರ್ 30 ಒಳಗಾಗಿ ಸಲ್ಲಿಸುವಂತೆ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಔಷಧ ಇಲಾಖೆಗಳ ಪ್ರಧಾನ ಆಯುಕ್ತರಿಗೆ ಸೂಚಿಸಿತು.

ಬಿಲ್ಕಿಸ್ ಬಾನು ಪ್ರಕರಣ: 9ರಿಂದ ಅರ್ಜಿ ವಿಚಾರಣೆ

ನವದೆಹಲಿ: ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ 11 ಅಪರಾಧಿಗಳನ್ನು ಅವಧಿ ಪೂರ್ವ ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ಮೇಲಿನ ವಾದಗಳನ್ನು ಈ ತಿಂಗಳ 9ರಂದು ಆಲಿಸುವುದಾಗಿ ಸುಪ್ರೀಂಕೋರ್ಟ್ ಶುಕ್ರವಾರ ತಿಳಿಸಿತು.

ಲಿಖಿತ ರೂಪದಲ್ಲಿ ಸಂಕ್ಷಿಪ್ತವಾಗಿ ತಮ್ಮ ವಾದಗಳನ್ನು ಸಲ್ಲಿಸುವಂತೆ ಅರ್ಜಿದಾರರ ಪರ ವಕೀಲರಿಗೆ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠ ಹೇಳಿತು. ‘ನಿಮ್ಮ ಕೋರಿಕೆ ಮೇರೆಗೆ ಇಡೀ ಪ್ರಕರಣವನ್ನು ಮತ್ತೆ ಪುನರಾರಂಭಿಸುವ ಅಗತ್ಯವಿಲ್ಲ. ಅರ್ಜಿದಾರರ ಪರ ವಕೀಲರು ಲಿಖಿತವಾಗಿ ವಾದ ಮಂಡಿಸಿದರೆ ಸಾಕು’ ಎಂದು ವಕೀಲರಿಗೆ ಪೀಠ ತಿಳಿಸಿತು.

ಜಾತಿಗಣತಿ: ಮತ್ತಷ್ಟು ದತ್ತಾಂಶ ಪ್ರಕಟಣೆ ನಿರ್ಬಂಧಕ್ಕೆ ನಕಾರ

ನವದೆಹಲಿ: ಜಾತಿ ಗಣತಿಯ ಮತ್ತಷ್ಟು ದತ್ತಾಂಶವನ್ನು ಪ್ರಕಟಿಸದಂತೆ ಬಿಹಾರ ಸರ್ಕಾರವನ್ನು ನಿರ್ಬಂಧಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ನೀತಿ ನಿರ್ಧಾರ ಕೈಗೊಳ್ಳದಂತೆ ಯಾವುದೇ ರಾಜ್ಯವನ್ನು ತಡೆಯಲು ಸಾಧ್ಯವಿಲ್ಲ. ಎಲ್ಲ ನೀತಿಗಳು ಅಂಕಿ–ಅಂಶಗಳನ್ನು ಆಧರಿಸಿರುತ್ತವೆ ಎಂದು ಹೇಳಿದೆ.

ಬಿಹಾರದಲ್ಲಿ ಜಾತಿ ಗಣತಿ ನಡೆಸಲು ಅನುಮತಿ ನೀಡಿದ ಪಟ್ನಾ ಹೈಕೋರ್ಟ್‌ನ ಆ. 1ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ಕುರಿತಂತೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರನ್ನೊಳಗೊಂಡ ಪೀಠವು ನೋಟಿಸ್ ನೀಡಿತು. 2024 ಜನವರಿಯಲ್ಲಿ ಇದರ ವಿಚಾರಣೆ ನಡೆಸಲು ಪಟ್ಟಿ ಮಾಡಿತು.

‘ಈ ಕ್ಷಣದಲ್ಲಿ ನಾವು ಯಾವುದಕ್ಕೂ ತಡೆ ನೀಡುವುದಿಲ್ಲ. ಜಾತಿ ಗಣತಿ ನಡೆಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆಯೇ ಎಂಬುದಕ್ಕೆ ಸಂಬಂಧಿಸಿದ ವಿಷಯವನ್ನು ಪರಿಶೀಲಿಸಲಾಗುವುದು‘ ಎಂದು ಕೋರ್ಟ್ ಹೇಳಿತು.

ಸಂಜ್ಞೆ ಭಾಷೆ ಸಂವಹನಕಾರರ ನೇಮಿಸಿದ ಸುಪ್ರೀಂ ಕೋರ್ಟ್

ನವದೆಹಲಿ: ಶ್ರವಣ ದೋಷವುಳ್ಳ ವಕೀಲರು ಮತ್ತು ಕಕ್ಷಿದಾರರು ನ್ಯಾಯಾಲಯದ ಕಲಾಪಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಸುಪ್ರೀಂ ಕೋರ್ಟ್ ಸಂಕೇತ ಭಾಷೆಯ (ಸಂಜ್ಞೆ ಭಾಷೆ) ಸಂವಹನಕಾರರನ್ನು ಶುಕ್ರವಾರ ನೇಮಿಸಿದೆ ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಹೇಳಿದರು.

ಸಾಂವಿಧಾನಿಕ ಪೀಠದ ವಿಚಾರಣೆಗೆ ಸಂಜ್ಞೆ ಭಾಷೆಯ ಸಂವಹನಕಾರರನ್ನು ಹೊಂದಲು ಬಯಸುವುದಾಗಿ ಸಿಜೆಐ ಹೇಳಿದರು. ‘ಇದು ಐತಿಹಾಸಿಕ ಕ್ಷಣ’ ಎಂದು ವಕೀಲರು ತಿಳಿಸಿದರು.

ಪಶ್ಚಿಮ ಬಂಗಾಳದ ಹಂಗಾಮಿ ಕುಲಪತಿಗಳ ಸವಲತ್ತುಗಳಿಗೆ ತಡೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ನಡೆಸುವ ವಿಶ್ವವಿದ್ಯಾಲಯಗಳಿಗೆ ಹೊಸದಾಗಿ ನೇಮಕ ಆಗಿರುವ ಹಂಗಾಮಿ ಕುಲಪತಿಗಳಿಗೆ ನಿಗದಿ ಮಾಡಿರುವ ಸವಲತ್ತುಗಳಿಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ಕುಲಪತಿಗಳ ನೇಮಕದ ವಿಚಾರದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಜೊತೆ ‘ಕಾಫಿ ಕುಡಿಯುವ ನೆವದಲ್ಲಿ ಮಾತುಕತೆ ನಡೆಸಿ ಬಗೆಹರಿಸಿಕೊಳ್ಳಿ’ ಎಂದು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರಿಗೆ ಕೋರ್ಟ್ ಹೇಳಿದೆ.

ವಿದ್ಯಾರ್ಥಿಗಳ ವೃತ್ತಿ ಹಾಗೂ ಶಿಕ್ಷಣ ಸಂಸ್ಥೆಗಳ ಹಿತದ ದೃಷ್ಟಿಯಿಂದ ಮುಖ್ಯಮಂತ್ರಿ ಮತ್ತು ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರು ಹೊಂದಾಣಿಕೆಯಿಂದ ಸಾಗಬೇಕಿರುವುದು ಅಗತ್ಯ ಎಂದು ಕೋರ್ಟ್ ಹೇಳಿದೆ. ಹಂಗಾಮಿ ಕುಲಪತಿಗಳ ನೇಮಕವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳ್ಳುವವರೆಗೆ ತಡೆಯಾಜ್ಞೆಯು ಜಾರಿಯಲ್ಲಿ ಇರುತ್ತದೆ.

‘ಇದನ್ನು ರಾಜ್ಯಪಾಲರಿಗೆ ತಿಳಿಸಿ. ಮುಖ್ಯಮಂತ್ರಿಗೆ ಅನುಕೂಲ ಆಗುವ ದಿನಾಂಕ ಹಾಗೂ ಸಮಯವನ್ನು ನಿಗದಿ ಮಾಡಿ, ಅವರನ್ನು ಕಾಫಿ ಕುಡಿಯಲು ಆಹ್ವಾನಿಸಿ. ಆಗ ಎಲ್ಲ ಸಂಗತಿಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದು’ ಎಂದು ನ್ಯಾಯಪೀಠ ಹೇಳಿದೆ. ರಾಜ್ಯದ ವಿಶ್ವವಿದ್ಯಾಲಯಗಳನ್ನು ನಡೆಸಬೇಕಿರುವುದು ಹೇಗೆ ಎಂಬ ವಿಚಾರವಾಗಿ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ತಿಕ್ಕಾಟ ನಡೆದಿದೆ.

ಉಚಿತ ಕೊಡುಗೆ ಹಂಚಿಕೆ: ಮಧ್ಯಪ್ರದೇಶ ರಾಜಸ್ಥಾನದ ಪ್ರತಿಕ್ರಿಯೆ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ಮತದಾರರಿಗೆ ಉಚಿತ ಉಡುಗೊರೆಗಳನ್ನು ಹಂಚಲಾಗುತ್ತಿದೆ ಎಂಬ ಆರೋಪದ ಬಗ್ಗೆ ಎರಡೂ ರಾಜ್ಯಗಳ ಸರ್ಕಾರಗಳು ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ಪೀಠವು ಪಿಐಎಲ್ ವಿಚಾರಣೆ ವೇಳೆ ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ನೋಟಿಸ್ ನೀಡಿತು.

ಮತದಾರರನ್ನು ಸೆಳೆಯಲು ಮಧ್ಯಪ್ರದೇಶ ಮತ್ತು ರಾಜಸ್ಥಾನ ಸರ್ಕಾರಗಳು ತೆರಿಗೆದಾರರ ಹಣವನ್ನು ದು ರು ಪ ಯೋ ಗ ಪ ಡಿ ಸಿ ಕೊ ಳ್ಳು ತ್ತಿವೆ ಎಂದು ಕೂಡ ಪಿಐಎಲ್‌ನಲ್ಲಿ ಆರೋಪಿಸಲಾಗಿದೆ. ಭಟ್ಟುಲಾಲ್ ಜೈನ್ ಎಂಬುವರು ಈ ಪಿಐಎಲ್ ಸಲ್ಲಿಸಿದ್ದಾರೆ.

ಸ್ನಾಯು ಕ್ಷಯ: ರಾಜ್ಯಗಳಿಗೆ ನೋಟಿಸ್

ಸ್ನಾಯು ಕ್ಷಯ ಎಂಬ ಅಪರೂಪದ ಕಾಯಿಲೆ ಕುರಿತು ಅರಿವು ಮೂಡಿಸುವುದಕ್ಕಾಗಿ ಮತ್ತು ಚಿಕಿತ್ಸೆಗಾಗಿ ರಾಷ್ಟ್ರೀಯ ಕಾರ್ಯಕ್ರಮ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ, ಏಮ್ಸ್ ಮತ್ತು ಎಲ್ಲಾ ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ಸ್ನಾಯು ಕ್ಷಯದಿಂದ ಬಳಲುತ್ತಿರುವ 251 ಮಕ್ಕಳು ಈ ಕುರಿತು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಸ್ನಾಯುಗಳನ್ನು ದುರ್ಬಲಗೊಳಿಸುವ ಈ ಕಾಯಿಲೆಯಿಂದಾಗಿ ಹಲವರು ನಡೆದಾಡುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಾರೆ.

ಸಂಕ್ಷಿಪ್ತ ಸುದ್ದಿ

ತೆಲಂಗಾಣ: ಭದ್ರತಾ ಸಿಬ್ಬಂದಿ ಕಪಾಳಕ್ಕೆ ಹೊಡೆದ ಸಚಿವ ಅಲಿ?

ಹೈದರಾಬಾದ್(ಪಿಟಿಐ): ಸಮಯಕ್ಕೆ ಸರಿಯಾಗಿ ಹೂಗುಚ್ಛ ತಂದು ಕೊಡದ ಕಾರಣಕ್ಕಾಗಿ ತೆಲಂಗಾಣ ಗೃಹ ಸಚಿವ ಮೊಹ್ಮದ್ ಮಹಮೂದ್ ಅಲಿ ಅವರು ತಮ್ಮ ಭದ್ರತಾ ಸಿಬ್ಬಂದಿ ಕಪಾಳಕ್ಕೆ ಹೊಡೆದರು ಎನ್ನಲಾದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಶುಕ್ರವಾರ ಹರಿದಾಡಿದೆ.

ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಸಚಿವ ಅಲಿ, ತಮ್ಮ ಸಂಪುಟ ಸಹೋದ್ಯೋಗಿ ಟಿ.ಶ್ರೀನಿವಾಸ್ ಯಾದವ ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿ, ಆಲಂಗಿಸುತ್ತಾರೆ. ನಂತರ, ತಮ್ಮ ಭದ್ರತಾ ಸಿಬ್ಬಂದಿಯತ್ತ ತಿರುಗುತ್ತಾರೆ. ಆಗ, ತಮ್ಮ ಕೈಗೆ ಹೂಗುಚ್ಛ ನೀಡದ್ದಕ್ಕಾಗಿ ಅಸಮಾಧಾನಗೊಳ್ಳುವ ಅಲಿ, ಭದ್ರತಾ ಸಿಬ್ಬಂದಿ ಕಪಾಳಕ್ಕೆ ಹೊಡೆಯುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಸಚಿವ ಅಲಿ ಅವರ ಈ ನಡೆಯನ್ನು ಬಿಜೆಪಿ ಖಂಡಿಸಿದೆ.

ಬೆಂಕಿ ಅವಘಡ: ಏಳು ಸಾವು

ಮುಂಬೈ (ಪಿಟಿಐ): ಮುಂಬೈನ ಗೊರೆಗಾಂವ್ ಪ್ರದೇಶದಲ್ಲಿ ವಸತಿ ಸಮುಚ್ಚಯದಲ್ಲಿ ಶುಕ್ರವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ ಅಪ್ರಾಪ್ತ ವಯಸ್ಸಿನ ಇಬ್ಬರು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಳು ಅಂತಸ್ತಿನ ‘ಜಯ ಸಂದೇಶ್’ ಕಟ್ಟಡದಲ್ಲಿ ನಸುಕಿನ ಜಾವ 3 ಗಂಟೆಗೆ ಬೆಂಕಿ ಕಾಣಿಸಿಕೊಂಡಿತ್ತು.

ಶನಿವಾರ, ಅಕ್ಟೋಬರ್ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 278 | ಪುಟ 26

www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅವಳಿಗೂ ಬೇಕು 'ಮಿ' ಟೈಮ್



ಪ್ರಜಾವಾಣಿ @75
ಕನ್ನಡ ನಾಡಿನ ಪರಿಸರವಾಣಿಯಾಗಿ ಪ್ರಜಾವಾಣಿ

ಬಿಸಿಯೂಟ: 4 ತಿಂಗಳಿನಿಂದ ಶಾಲೆಗಳಿಗೆ ಅನುದಾನ ಇಲ್ಲ 4A

ಹಣದುಬ್ಬರದ ಆತಂಕ: ಬಡ್ಡಿದರ ಬದಲಿಲ್ಲ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,995 ▲	19,653 ▲	₹58,320 (ಬೆಂಗಳೂರು) ▲	₹69,000 (ಬೆಂಗಳೂರು) ▼	83.27 ▼

'ಪದಕ ಶತಕ'ದತ್ತ ಭಾರತ

ಹಾಕಿ ಫೈನಲ್
ಭಾರತ: 5
ಜಪಾನ್: 1

ಖಚಿತವಾಗಿರುವ ಪದಕಗಳು: ಆರ್ಚರಿ: 3 | ಕಬಡ್ಡಿ : 2 | ಬ್ಯಾಡ್ಮಿಂಟನ್: 1 | ಕ್ರಿಕೆಟ್: 1 | ಚೆಸ್: 2

95 ಇಲ್ಲಿಯವರೆಗೆ ಭಾರತ ಗಳಿಸಿದ ಪದಕಗಳು

ಹಾಂಗ್‌ಝೌ: ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿಯೇ ಭಾರತ ತಂಡವು ಇದೇ ಮೊದಲ ಬಾರಿಗೆ 'ಪದಕಗಳ ಶತಕ' ಗಳಿಸಲು ಸಿದ್ಧವಾಗಿದೆ. ಕೂಟದ ಹದಿಮೂರನೇ ದಿನವಾದ ಶುಕ್ರವಾರದ ಅಂತ್ಯಕ್ಕೆ ಭಾರತ ತಂಡವು ಒಟ್ಟು 95 ಪದಕಗಳನ್ನು ಗಳಿಸಿದೆ. ಶನಿವಾರ ನಡೆಯುವ ಕೆಲವು ಸ್ಪರ್ಧೆಗಳಲ್ಲಿ ಭಾರತಕ್ಕೆ ಎಂಟರಿಂದ ಹತ್ತು ಪದಕಗಳು ಒಲಿಯುವ ನಿರೀಕ್ಷೆ ಇದೆ. 2018ರಲ್ಲಿ 70 ಪದಕಗಳನ್ನು ಜಯಿಸಿದ್ದು ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು. 9

ಪ್ಯಾರಿಸ್ ಒಲಿಂಪಿಕ್ಸ್‌ಗೆ ಹರ್ಮನ್ ಪಡೆ

ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡವು ಚಿನ್ನದ ಪದಕ ಗೆದ್ದು, ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೆ ರಹದಾರಿ ಪಡೆಯಿತು.

ಬೆಳ್ಳಿ
- ಬ್ರಿಜ್: ಪುರುಷರ ತಂಡ ವಿಭಾಗ
- ಆರ್ಚರಿ: ರಿಕರ್ವ್ ಪುರುಷರ ವಿಭಾಗ

ಕಂಚು
- **ಆರ್ಚರಿ:** ರಿಕರ್ವ್ ಮಹಿಳೆಯರ ವಿಭಾಗ
- **ಕುಸ್ತಿ:** **ಅಮನ್ ಸೆಹ್ರಾವತ್** (ಪುರುಷರ 57ಕೆಜಿ) **ಸೋನಂ ಮಲಿಕ್** (ಮಹಿಳೆಯರ ಫ್ರೀಸ್ಟೈಲ್ 62 ಕೆ.ಜಿ) **ಕಿರಣ್ ಬಿಷ್ಣೋಯಿ** (ಮಹಿಳೆಯರ ಫ್ರೀಸ್ಟೈಲ್ 76 ಕೆ.ಜಿ)
- **ಬ್ಯಾಡ್ಮಿಂಟನ್:** **ಎಚ್.ಎಸ್. ಪ್ರಣಯ್** (ಪುರುಷರ ಸಿಂಗಲ್ಸ್)
- **ಸೆಪೆಕ್ ಟಕ್ರಾ:** ಮಹಿಳೆಯರ ರೆಗು ತಂಡ

ಸಿಕ್ಕಿಂ: ಮೃತರ ಸಂಖ್ಯೆ 40ಕ್ಕೆ

ಗ್ಯಾಂಗ್ಟಕ್ (ಎಎಫ್‌ಪಿ): ಸಿಕ್ಕಿಂ ರಾಜ್ಯದ ತೀಸ್ತಾ ನದಿ ಪ್ರವಾಹದಲ್ಲಿ ಏಳು ಯೋಧರು ಸೇರಿದಂತೆ ಕನಿಷ್ಠ 40 ಜನರು ಮೃತಪಟ್ಟಿದ್ದಾರೆ. 20 ಮೃತದೇಹಗಳು ಇದುವರೆಗೆ ಪತ್ತೆಯಾಗಿವೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಲಾಚೆನ್ ಮತ್ತು ಲಾಚುಂಗ್‌ನಲ್ಲಿ ಸಾವಿರಾರು ಜನ ಸಿಲುಕಿದ್ದಾರೆ. ದ್ವಿಚಕ್ರ ವಾಹನಗಳಲ್ಲಿ ತೆರಳಿರುವ 3,150 ಜನ ಸಹ ಅಲ್ಲಿಯೇ ಸಿಲುಕಿದ್ದಾರೆ. ಅವರನ್ನು ಹೆಲಿಕಾಪ್ಟರ್ ಮೂಲಕ ಸ್ಥಳಾಂತರಿಸಲು ಸೇನೆ ವ್ಯವಸ್ಥೆ ಮಾಡಿದೆ ಎಂದು ಸಿಕ್ಕಿಂ ಮುಖ್ಯ ಕಾರ್ಯದರ್ಶಿ ವಿಜಯ್ ಭೂಷಣ್ ಪಾಠಕ್ ಅವರು ಹೇಳಿದ್ದಾರೆ.

ಈ ಮಧ್ಯೆ, ಮುಂದಿನ 24 ಗಂಟೆಗಳಲ್ಲಿ ಈಶಾನ್ಯ ರಾಜ್ಯಗಳಲ್ಲಿ ಭಾರಿ ಮಳೆಯಾಗುವ ಬಗ್ಗೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಎಚ್ಚರಿಕೆ ನೀಡಿದೆ.

'ಹೊಸ ಮದ್ಯದಂಗಡಿ ತೆರೆಯಲ್ಲ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ರಾಜ್ಯದಲ್ಲಿ ಹೊಸ ಮದ್ಯದಂಗಡಿ ತೆರೆಯುವ ಪ್ರಸ್ತಾವ ಸರ್ಕಾರದ ಎದುರು ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೊಸ ಮದ್ಯದಂಗಡಿ ತೆರೆಯುವ ಚಿಂತನೆ ಇದೆ ಎಂದು ಅಬಕಾರಿ ಸಚಿವರು ಹೇಳಿದ್ದರು. ಆದರೆ, ಸರ್ಕಾರ ಯಾವುದೇ ಕಾರಣಕ್ಕೂ ಹೊಸ ಮದ್ಯದ ಅಂಗಡಿ ತೆರೆಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ರಾಜ್ಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಇಲ್ಲ. ಐದು ಗ್ಯಾರಂಟಿ ಯೋಜನೆಗಳಿಗೂ ಹಣಕಾಸಿನ ಸಮಸ್ಯೆ ಇಲ್ಲ. ಕ್ಷೇತ್ರಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಅನುದಾನ ಬೇಕು ಎಂಬುದು ನಮ್ಮ ಶಾಸಕರ ಕೋರಿಕೆ. ಹೆಚ್ಚುವರಿ ಅನುದಾನ ಕೊಡುವ ವ್ಯವಸ್ಥೆ ಮಾಡಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

> **ಮೂವತ್ತು ವರ್ಷಗಳಿಂದ ಮದ್ಯದಂಗಡಿ ತೆರೆಯಲು ಅಬಕಾರಿ ಲೈಸೆನ್ಸ್ ನೀಡಿಲ್ಲ. ಹಾಗಾಗಿ ಎಲ್ಲರೊಂದಿಗೂ ಚರ್ಚಿಸಿ ಸೂಕ್ತ ಸ್ಥಳಗಳಲ್ಲಿ ಹೊಸದಾಗಿ ಮದ್ಯದಂಗಡಿ ತೆರೆಯಲು ಪರವಾನಗಿ ನೀಡುತ್ತೇವೆ**
> **ಡಿ.ಕೆ. ಶಿವಕುಮಾರ್,** ಉಪಮುಖ್ಯಮಂತ್ರಿ

4B ಪುಟ ನೋಡಿ

ಮಹಾದೇವ್ ಬೆಟ್ಟಿಂಗ್ ಆ್ಯಪ್: ಹಣದ ಅಕ್ರಮ ವರ್ಗಾವಣೆ

ಸೆಲೆಬ್ರಿಟಿ ಆಕರ್ಷಣೆ: ಕಾಂಚಾಣ ಕುಣಿತ!

ಪ್ರಜಾವಾಣಿ ವಾರ್ತೆ

ನವದೆಹಲಿ: 'ದುಬೈನಲ್ಲಿ ನಡೆದ ವೈಭವೋಪೇತ ಮದುವೆಗೆ ಖಾಸಗಿ ವಿಮಾನದಲ್ಲಿ ತೆರಳಿದ್ದ ರಣಬೀರ್ ಕಪೂರ್, ಶ್ರದ್ಧಾ ಕಪೂರ್, ಕಪಿಲ್ ಶರ್ಮಾ ಹಾಗೂ ಹೀನಾ ಖಾನ್ ಸೇರಿದಂತೆ ಬಾಲಿವುಡ್‌ನ 17 ಸೆಲೆಬ್ರಿಟಿಗಳು ಸಮಾರಂಭದಲ್ಲಿ ಹಾಡಿ-ಕುಣಿದಿದ್ದರು. ಈ ಸೆಲೆಬ್ರಿಟಿಗಳಿಗೆ ಅಕ್ರಮವಾಗಿ ನಗದು ರೂಪದಲ್ಲಿ ಭಾರಿ ಮೊತ್ತದ ಹಣ ಸಂದಾಯ ಮಾಡಲಾಗಿತ್ತು'

– ಮಹಾದೇವ್ ಬೆಟ್ಟಿಂಗ್ ಆ್ಯಪ್‌ಗೆ ನಂಟಿರುವ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ) ತನ್ನ ದೂರಿನಲ್ಲಿ ಉಲ್ಲೇಖಿಸಿರುವ ಮಾಹಿತಿ ಇದು.

ಪತ್ತೇದಾರಿ ಕಥಾಹಂದರದ ರೋಚಕ ಸಿನಿಮಾ ರೀತಿಯಲ್ಲಿ ತೋರುವ ಈ ಪ್ರಕರಣವನ್ನು ಇ.ಡಿ ಭೇದಿಸಿ, ತನಿಖೆ ನಡೆಸುತ್ತಿದೆ. ಮಹಾದೇವ್ ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದ 39 ಸ್ಥಳಗಳಲ್ಲಿ ಅದು ಶೋಧ ಕಾರ್ಯವನ್ನು ಕೈಗೊಂಡಿತ್ತು.

5ನೇ ಪುಟ ನೋಡಿ

ಇರಾನಿನ ನಾರ್ಗಿಸ್‌ಗೆ ನೊಬೆಲ್ ಶಾಂತಿ ಪುರಸ್ಕಾರ

ಓಸ್ಲೊ/ಜಿನೀವಾ (ಎಪಿ): ಮಹಿಳೆಯರ ಹಕ್ಕುಗಳು, ಪ್ರಜಾತಂತ್ರದ ಪರವಾಗಿ ಹಾಗೂ ಮರಣ ದಂಡನೆಯ ವಿರುದ್ಧ ಇರಾನ್‌ನಲ್ಲಿ ವರ್ಷಗಳಿಂದ ಹೋರಾಟ ನಡೆಸುತ್ತಿರುವ ಸಾಮಾಜಿಕ ಕಾರ್ಯಕರ್ತೆ ನಾರ್ಗಿಸ್ ಮೊಹಮ್ಮದಿ ಅವರಿಗೆ 2023ನೆಯ ಸಾಲಿನ ನೊಬೆಲ್ ಶಾಂತಿ ಪುರಸ್ಕಾರ ಘೋಷಿಸಲಾಗಿದೆ. ನಾರ್ಗಿಸ್ ಅವರು ಈಗ ಜೈಲಿನಲ್ಲಿದ್ದಾರೆ. 5

ಒಳ ಪುಟ

'ಧರ್ಮ ರಕ್ಷಣೆಗೆ 'ಭವಾನಿ' ಜಾಗೃತವಾಗಿರಲಿ' 4B

ಚಿನಕುರಳಿ

ಪ್ರಕಾಶ್ ಶೆಟ್ಟಿ



'ನಾನು ಯಾಕೆ ಹಿಂದೂ?' ಕೃತಿ ಬಿಡುಗಡೆ ಸಮಾರಂಭದಲ್ಲಿ ಸಂಸದ ಶಶಿ ತರೂರ್ ಪ್ರತಿಪಾದನೆ

'ಬಹುತ್ವ ಆಶಯದ ಭಾರತ ಈಗಿನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ್ದ ಹಿಂದೂ ಧರ್ಮಕ್ಕೂ ಈಗ ರಾಜಕೀಯ ಉದ್ದೇಶಕ್ಕೆ ಪ್ರತಿಪಾದಿಸುತ್ತಿರುವ ಹಿಂದುತ್ವಕ್ಕೂ ವೈರುಧ್ಯವಿದೆ. ವಿವೇಕಾನಂದರು ಹೇಳಿದ ಧರ್ಮದ ಆಶಯವನ್ನೇ ತಿರುಚಿದ್ದಾರೆ' ಎಂದು ಸಂಸದ, ಬರಹಗಾರ ಶಶಿ ತರೂರ್ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ, ಪ್ರೊ. ಕೆ.ಈ. ರಾಧಾಕೃಷ್ಣ ಅವರು ಅನುವಾದಿಸಿದ 'ನಾನು ಯಾಕೆ ಹಿಂದೂ?' (ಶಶಿ ತರೂರ್ ಅವರ ಇಂಗ್ಲಿಷ್ ಕೃತಿ 'ವೈ ಐ ಯಾಮ್ ಎ ಹಿಂದೂ?') ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಒಳ್ಳೆಯ ಹಾಗೂ ಕೆಟ್ಟ ಹಿಂದೂ ಎಂದು ಹೇಳುವ ಅಧಿಕಾರ ಯಾರಿಗೂ ಇಲ್ಲ. ಇದು ವಿಶಾಲ ಆಚಾರ- ವಿಚಾರ ಹೊಂದಿರುವ ಧರ್ಮ. ಯಾರ ಮೇಲೂ ತಮ್ಮ ವಿಚಾರ, ಕಟ್ಟುಪಾಡು ಹೇರಲು ಸಾಧ್ಯವಿಲ್ಲ. ಹಾಗೆ ಹೇಳಿದರೆ ಅದನ್ನೂ ತಿರಸ್ಕರಿಸಿಯೂ ಹಿಂದೂವಾಗಿ ಉಳಿಯಲು ಸಾಧ್ಯ. ಬೇಕಿರುವುದು ಬಹುತ್ವದ ಆಶಯವುಳ್ಳ ಭಾರತ' ಎಂದು ಪ್ರತಿಪಾದಿಸಿದರು.

'ಹಿಂದುತ್ವಕ್ಕೆ ಸಂಬಂಧಿಸಿದಂತೆ ಇದು ಸರಿ, ತಪ್ಪು ಎಂದು ಹೇಳುವ ಗೂಂಡಾಗಿರಿಗೆ ಅವಕಾಶ ಇಲ್ಲ. ಕೆಲವರು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಇಂತಹ ಪ್ರಯತ್ನ ಮಾಡುತ್ತಿದ್ದಾರೆ' ಎಂದರು.

'ನೈಜ ಹಿಂದೂ ಧರ್ಮವನ್ನು ದೇಶದ ಹೊರಗೂ ವಿಸ್ತರಿಸಲು ಸಾಧ್ಯವಿದೆ. ಈ ಕೃತಿ ಬರೆಯುವ ವೇಳೆಯಲ್ಲಿ ದೇಶದ ರಾಜಕೀಯ ಸನ್ನಿವೇಶ ಬದಲಾವಣೆ ಕಂಡಿತ್ತು. ಕೆಲವರು ಪ್ರತಿಪಾದಿಸುತ್ತಿದ್ದ ವಿಚಾರಕ್ಕೆ ನನ್ನನ್ನು ತೆರೆದುಕೊಳ್ಳಲು ಸಾಧ್ಯವಾಗದೇ ನೈಜತೆ ತಿಳಿಸಲು ಈ ಕೃತಿ ಬರೆದೆ' ಎಂದರು.

ಸಚಿವ ಎಚ್.ಕೆ.ಪಾಟೀಲ ಮಾತನಾಡಿ, 'ದೇಶದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ದ್ವೇಷ ಬಿತ್ತುವ ಕೆಲಸ ನಡೆಯುತ್ತಿದೆ. ಈಗ ಬೇಕಿರುವುದು ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ ಅವರು ಪ್ರತಿಪಾದಿಸಿದ ಧರ್ಮ ಕಲ್ಪನೆಯ ಭಾರತ. ಆದರೆ, ಅದು ಸಾಧ್ಯವಾಗುತ್ತಿಲ್ಲ' ಎಂದು ವಿಷಾದಿಸಿದರು.

ಸಾಹಿತಿ ಕಮಲಾ ಹಂಪನಾ ಮಾತನಾಡಿ, 'ಈಗ ಹಿಂದೂ, ಭಾರತೀಯ ಎಂಬುದರ ಜಿಜ್ಞಾಸೆ ಹಾಗೂ ಆತಂಕ ಕಾಡುತ್ತಿದೆ' ಎಂದು ಹೇಳಿದರು.

ಅನುವಾದಕ ಕೆ.ಈ.ರಾಧಾಕೃಷ್ಣ, ಸಾಹಿತಿ ಹಂಪ ನಾಗರಾಜಯ್ಯ, ನೇತಾಜಿ ಸುಭಾಶ್ಚಂದ್ರ ಬೋಸ್ ಸಂಶೋಧನಾ ಟ್ರಸ್ಟ್‌ನ ಎಂ.ರಾಜಕುಮಾರ್ ಹಾಜರಿದ್ದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ 'ನಾನು ಯಾಕೆ ಹಿಂದೂ?' ಕೃತಿ ಬಿಡುಗಡೆ ಸಮಾರಂಭದಲ್ಲಿ (ಎಡದಿಂದ) ಅನುವಾದಕ ಕೆ.ಈ.ರಾಧಾಕೃಷ್ಣ ಹಾಗೂ ಸಂಸದ ಶಶಿ ತರೂರ್ ಸಮಾಲೋಚನೆ ನಡೆಸಿದರು. ಎನ್.ಸಂತೋಷ್ ಹೆಗ್ಡೆ, ಸಾಹಿತಿ ಚಂದ್ರಶೇಖರ ಕಂಬಾರ ಇದ್ದರು – ಪ್ರಜಾವಾಣಿ ಚಿತ್ರ

'ಕೃತಿ ಓದಿದರೆ ನ್ಯೂನತೆ ಸರಿಪಡಿಸಲು ಸಾಧ್ಯ'

'ಶಶಿ ತರೂರ್ ಅವರು ಸಾಕಷ್ಟು ಸಂಶೋಧಿಸಿಯೇ ಹಿಂದೂ ಧರ್ಮದಲ್ಲಿರುವ ನ್ಯೂನತೆಗಳ ಬಗ್ಗೆಯೂ ಕೃತಿಯಲ್ಲಿ ತಿಳಿಸಿದ್ದಾರೆ. ಕೃತಿಯಲ್ಲಿ ದಾಖಲಿಸಿರುವ ಅವರ ಅನಿಸಿಕೆ ಸರಿ ಎನಿಸುತ್ತಿದೆ. ಈ ಕೃತಿ ಓದಿದರೆ ನ್ಯೂನತೆ ಸರಿಪಡಿಸುವುದು ಹೇಗೆಂಬುದು ತಿಳಿಯಲಿದೆ' ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆ ಹೇಳಿದರು.

ಕೃತಿ ಪರಿಚಯ

ಕೃತಿ: 'ನಾನು ಯಾಕೆ ಹಿಂದೂ?'
ಅನುವಾದಕ: ಕೆ.ಈ.ರಾಧಾಕೃಷ್ಣ
ಪ್ರಕಾಶನ: ಮನೋಹರ ಗ್ರಂಥ ಮಾಲಾ
ಬೆಲೆ: ₹550
ಪುಟಗಳು: 404

ಹಿಂದೂ, ಇಂಡಿಯಾ ಎಂಬುದು ಒಂದೇ ಮೂಲದಿಂದ ಬಳಕೆಗೆ ಬಂದಿರುವ ಪದಗಳು. ಕೆಲವು ಸರ್ಕಾರಗಳಿಗೆ ಹಿಂದೂ ಬೇಕಿದೆ. ಇಂಡಿಯಾ ಬೇಡ ಎಂಬುದು ಎಷ್ಟು ಸರಿ?
ಶಶಿ ತರೂರ್, ಸಂಸದ

ಶಶಿ ತರೂರ್ ಅವರು ಆಳಕ್ಕೆ ಇಳಿದು ಚಿಂತನೆ ನಡೆಸುತ್ತಾರೆ. ದೇಶದ ಜೊತೆಗಿರುವ ಸಂಬಂಧಗಳನ್ನು ಅದ್ಭುತವಾಗಿ ಹೇಳಿದ್ದಾರೆ
ಚಂದ್ರಶೇಖರ್ ಕಂಬಾರ್, ಸಾಹಿತಿ

ಒಗ್ಗಟ್ಟು ಮೂಡಿದರೆ ದೇಶವು ಇನ್ನಷ್ಟು ಪ್ರಜ್ವಲಿಸಲು ಸಾಧ್ಯವಿದೆ. ಶಶಿ ತರೂರ್ ಅವರ ದೇಶಭಕ್ತಿ, ಬದ್ಧತೆ ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ
ಕೆ.ಈ.ರಾಧಾಕೃಷ್ಣ
ಅನುವಾದಕ

ಸುದ್ದಿ 2 ನಿಮಿಷ

ದರ್ಶನ್ ಜೊತೆ ಮನಸ್ತಾಪ ಇರುವುದು ನಿಜ: ಧ್ರುವ ಸರ್ಜಾ

ಬೆಂಗಳೂರು: 'ದರ್ಶನ್ ಜೊತೆ ನನಗೆ ಮನಸ್ತಾಪವಿರುವುದು ನಿಜ. ಆದರೆ, ಅದನ್ನು ಬೆಳೆಸಿಕೊಂಡು ಹೋಗುವ ಅಗತ್ಯವಿಲ್ಲ' ಎಂದು ನಟ ಧ್ರುವ ಸರ್ಜಾ ಹೇಳಿದರು.

ಶುಕ್ರವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, 'ದರ್ಶನ್ ಅವರಿಗೆ ನನ್ನ ಬಳಿ ಎರಡು ಪ್ರಶ್ನೆಗಳಿವೆ. ವೈಯಕ್ತಿಕವಾಗಿ ಅವರನ್ನು ಭೇಟಿಯಾದಾಗ ಇದನ್ನು ಅವರ ಬಳಿಯೇ ಕೇಳಿ ಸ್ಪಷ್ಟೀಕರಣ ಪಡೆಯುತ್ತೇನೆ. ಅವರು ನನ್ನ ಪಾಲಿನ ಹಿರಿಯ ನಟ. ನಮ್ಮ ಚಿತ್ರಗಳನ್ನು ಬೆಂಬಲಿಸಿದ್ದಾರೆ. ಆ ಬಗ್ಗೆ ಗೌರವವಿದೆ' ಎಂದರು.

ಇತ್ತೀಚೆಗೆ ಚಲನಚಿತ್ರ ವಾಣಿಜ್ಯ ಮಂಡಳಿ ಕಾವೇರಿ ನೀರು ಕುರಿತ ಅನ್ಯಾಯದ ವಿರುದ್ಧ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ದರ್ಶನ್ ಹಾಗೂ ಧ್ರುವ ಒಂದೇ ವೇದಿಕೆಯಲ್ಲಿದ್ದರೂ ಪರಸ್ಪರ ಮಾತನಾಡಿರಲಿಲ್ಲ. ಆ ಬಗ್ಗೆ ಪ್ರತಿಕ್ರಿಯಿಸಿರುವ ಧ್ರುವ, ತಮ್ಮೊಳಗಿನ ಅಸಮಾಧಾನವನ್ನು ಹೊರಹಾಕಿದರು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆ ಮಾಡಿಕೊಂಡು ಈ ಮನಸ್ತಾಪವನ್ನು ಬೆಳೆಸುವ ಅಗತ್ಯವಿಲ್ಲ ಎಂದೂ ಅವರು ಮನವಿ ಮಾಡಿದರು.

ಕಳೆದ ಮೂರು ವರ್ಷಗಳಿಂದ ಅಭಿಮಾನಿಗಳೊಂದಿಗೆ ಧ್ರುವ ಜನ್ಮದಿನ ಆಚರಿಸಿಕೊಂಡಿರಲಿಲ್ಲ. ಗುರುವಾರ ಮಧ್ಯರಾತ್ರಿಯಿಂದಲೇ ಅವರ ಜನ್ಮ ದಿನದ ಪ್ರಯುಕ್ತ ಮನೆ ಎದುರು ಅಭಿಮಾನಿಗಳು ಜಮಾಯಿಸಿದ್ದರು.

ಮೃತದೇಹ ಕೊಂಡೊಯ್ಯಲು ಜಮೀರ್ ಆರ್ಥಿಕ ನೆರವು

ಬೆಂಗಳೂರು: ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮೃತಪಟ್ಟ ಗರ್ಭಿಣಿಯೊಬ್ಬರ ವೈದ್ಯಕೀಯ ವೆಚ್ಚ ಭರಿಸಲು ಕಷ್ಟಪಡುತ್ತಿದ್ದ ಕುಟುಂಬದವರಿಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್, ₹3 ಲಕ್ಷ ಪಾವತಿಸಲು ನೆರವು ನೀಡಿದ್ದಾರೆ.

ಮಹಿಳೆಯ ಸ್ವಗ್ರಾಮವಾದ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನ ಹುಳಿಯಾರು ಪಾಳ್ಯಕ್ಕೆ ತೆಗೆದುಕೊಂಡು ಹೋಗಲು ಬೆಂಗಳೂರಿನಿಂದ ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ದಾರೆ. ಹುಳಿಯಾರು ಪಾಳ್ಯದ ಹಣ್ಣಿನ ವ್ಯಾಪಾರಿ ಜಬಿವುಲ್ಲಾ ಅವರ ಪತ್ನಿ ಫಾತಿಮಾಬಿ ಹೆರಿಗೆಗಾಗಿ ತಿಪಟೂರು ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿಂದ, ಬೆಂಗಳೂರಿನ ಜೆ.ಪಿ. ನಗರದ ಕ್ಷೇಮ ಆಸ್ಪತ್ರೆಗೆ ಅವರನ್ನು ಸ್ಥಳಾಂತರಿಸಲಾಗಿತ್ತು. 20 ದಿನಗಳ ಹಿಂದೆ ಅವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಬಳಿಕ, ಅನಾರೋಗ್ಯ ಕಾಣಿಸಿಕೊಂಡಿತ್ತು. ಚಿಕಿತ್ಸೆ ಫಲನೀಡದೇ ಫಾತಿಮಾಬಿ ಗುರುವಾರ ಮೃತಪಟ್ಟಿದ್ದರು.

ಆಸ್ಪತ್ರೆ ಚಿಕಿತ್ಸೆ ವೆಚ್ಚ ₹3.80 ಲಕ್ಷ ಆಗಿತ್ತು. ಮೃತದೇಹ ತೆಗೆದುಕೊಂಡು ಹೋಗಲು ಬಾಕಿ ಮೊತ್ತ ಪಾವತಿಸಬೇಕಿತ್ತು. ಕುಟುಂಬದವರ ಬಳಿ ₹50 ಸಾವಿರವಷ್ಟೇ ಇತ್ತು. ಹಣ ಪಾವತಿ ಮಾಡಲು ಆಗದೆ ಸಂಕಷ್ಟ ಎದುರಿಸುತ್ತಿರುವ ಬಗ್ಗೆ ಮಾಹಿತಿ ಪಡೆದ ಸಚಿವರು, ತಕ್ಷಣ ಅಧಿಕಾರಿಗಳ ಮೂಲಕ ಆಸ್ಪತ್ರೆ ಆಡಳಿತ ಮಂಡಳಿ ಜತೆ ಚರ್ಚಿಸಿ ₹80 ಸಾವಿರ ಕಡಿಮೆ ಮಾಡಿಸಿದ್ದಾರೆ. ಸಚಿವರೇ ಅಧ್ಯಕ್ಷರಾಗಿರುವ ವಕ್ಫ್ ಕೌನ್ಸಿಲ್ ಫಾರ್ ವುಮೆನ್ಸ್ ಮೂಲಕ ₹2 ಲಕ್ಷ ಹಾಗೂ ವೈಯಕ್ತಿಕವಾಗಿ ₹50 ಸಾವಿರ ಪಾವತಿಸಿ, ಮೃತದೇಹ ಬಿಡುಗಡೆಯ ವ್ಯವಸ್ಥೆ ಮಾಡಿಸಿದ್ದಾರೆ ಎಂದು ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

PUBLIC NOTICE

The General Public is hereby informed that our Client M/s. Radiance Realty Developers India Ltd., is intending to enter into Joint Development Agreement (JDA) with the Mrs. Leega Kanunga (Owner) for the below mentioned Schedule Property.

If anybody is having any objections, claims, interest, dispute whatsoever for the above intended transactions, he/she/they may contact the below mentioned person with the documentary proof substantiating his/her/their objections/claims/details of dispute/s within fifteen (15) days from the date of this publication, failing which, our Client will proceed to complete the transaction with the above owner as if there are no third party claims/objections/disputes in respect of the Schedule Property and thereafter no claims/objectives/disputes will be entertained.

SCHEDULE PROPERTY

All that piece and parcel of residentially converted land bearing Sy.No.57/2 measuring 01 Acre 33.25 Guntas situated at Chikkagubbi Village, Bidarahalli Hobli, Bangalore East Taluk, Bengaluru which is bounded on:

East by : Remaining portion of the same Sy.No.57/2 belonging to Mr. Jitender Kanuga; West by : Road; North by : Property bearing Sy.Nos.56 and 57/1; and South by : Road;

M. S. Koushik, Partner,
M/s. ATV Legal, Advocates,
"Trade Center" No. 29/4, 1st Floor,
Race Course Road, Bengaluru-560001.
PH : 080-47855555
realestate@atvlegal.com
www.atvlegal.com

ಹುಸ್ಕೂರು ಗ್ರಾ.ಪಂಗೆ ಗಾಂಧಿ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರು, ವಿದ್ಯುತ್ ದೀಪಗಳ ಅಳವಡಿಕೆ ಸೇರಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಪರಿಗಣಿಸಿ, ಬೆಂಗಳೂರು ಉತ್ತರ ತಾಲೂಕಿನ ಹುಸ್ಕೂರು ಗ್ರಾಮ ಪಂಚಾಯಿತಿಗೆ 2022-23ನೇ ಸಾಲಿನ 'ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ' ಪ್ರದಾನ ಮಾಡಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಹಮ್ಮಿಕೊಂಡ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ರಾಜೇಶ್ ಎಚ್.ಆರ್, ಅಧ್ಯಕ್ಷ ಬಿ.ರಮೇಶ್ ಹಾಗೂ ಉಪಾಧ್ಯಕ್ಷೆ ಕೆಂಪಮ್ಮ ಈ ಪ್ರಶಸ್ತಿ ಸ್ವೀಕರಿಸಿದರು. ಈ ಪ್ರಶಸ್ತಿಯು ಗಾಂಧಿ ಚರಕ, ₹5 ಲಕ್ಷ ನಗದು ಒಳಗೊಂಡಿದೆ.

'ಮೂರು ವರ್ಷಗಳ ಸತತ ಪರಿಶ್ರಮಕ್ಕೆ ಸಂದ ಪ್ರತಿಫಲವಿದು' ಎಂದು ರಾಜೇಶ್ ಎಚ್.ಆರ್. ತಿಳಿಸಿದರು.

ಬಿನ್ನಮಂಗಲ: ಹಿತಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಭಿನ್ನ ಸಮಾಜ ಸೇವೆ

ಹಿತಚಿಂತನದ 'ಕರುಣೆಯ ಗೋಡೆ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ಹಿತಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಿನ್ನಮಂಗಲ ಬಸ್ ತಂಗುದಾಣದ ಪಕ್ಕ 'ಅಗತ್ಯವಿಲ್ಲದಿದ್ದರೆ ಇಲ್ಲಿ ಇಡಿ, ಅಗತ್ಯವಿದ್ದರೆ ತೆಗೆದುಕೊಳ್ಳಿ' ಎಂಬ ಧ್ಯೇಯವಾಕ್ಯದೊಂದಿಗೆ 'ಕರುಣೆಯ ಗೋಡೆ' ಎಂಬ ಕಪಾಟನ್ನು ಸ್ಥಾಪಿಸಲಾಗಿದೆ.

ವಿ.ರಾಮಸ್ವಾಮಿ

ಸಾರ್ವಜನಿಕರು ತಮ್ಮ ಮನೆಯಲ್ಲಿ ಅಗತ್ಯವಿಲ್ಲದ ಯಾವುದೇ ವಸ್ತುಗಳಿದ್ದರೂ ಈ ಕಪಾಟಿನಲ್ಲಿ ತಂದು ಇಡಬಹುದು. ಅಗತ್ಯವಿರುವವರು ಅವುಗಳನ್ನು ಬಳಸಿಕೊಳ್ಳುತ್ತಾರೆ. ಈ ಧ್ಯೇಯದೊಂದಿಗೆ 'ಕರುಣೆಯ ಗೋಡೆ'ಯನ್ನು ಸ್ಥಾಪಿಸಲಾಗಿದೆ.

ಹಿತಚಿಂತನ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ವಿ.ರಾಮಸ್ವಾಮಿ ಅವರು ಮಾತನಾಡಿ 'ರಾಜಾಜಿನಗರದಲ್ಲಿ ಸ್ವಯಂಸೇವಾ ಸಂಸ್ಥೆಯೊಂದು ನಡೆಸುತ್ತಿರುವ 'ವಾಲ್ ಆಫ್ ಕೈಂಡ್(Wall of Kind)' ನಿಂದ ಪ್ರೇರಿತನಾಗಿ ಇದನ್ನು ತೆರೆದಿದ್ದೇನೆ. ದಾನಿಗಳು ಹಳೆಯ/ಬಳಸಿದ ಅಥವಾ ಹೊಸತಾದ ಶೂ, ಪುಸ್ತಕ, ಬ್ಯಾಗ್.. ಹೀಗೆ ಯಾವುದೇ ವಸ್ತುಗಳನ್ನು ಸ್ವಚ್ಛಗೊಳಿಸಿ ಇಲ್ಲಿ ತಂದು ಇಡಬಹುದು. ಅಗತ್ಯವಿರುವವರು ಅವುಗಳನ್ನು ಬಳಸುತ್ತಾರೆ' ಎಂದು ಹೇಳಿದರು.

'ಈಗಾಗಲೇ ನಾನು ಹಲವು ಸಗಟು ವ್ಯಾಪಾರಿಗಳು ಹಾಗು ಉದ್ದಿಮೆಗಳನ್ನು ಸಂಪರ್ಕಿಸಿ, ಅವರಲ್ಲಿ ಮಾರಾಟವಾಗದ ವಸ್ತುಗಳನ್ನು ಇಲ್ಲಿ ತಂದಿಡಲು ಕೋರಿದ್ದೇನೆ. ಇದಕ್ಕೆ ಉತ್ತಮ ಸ್ಪಂದನೆ ದೊರೆತಿದೆ' ಎಂದರು.

'ನಮ್ಮ ಬಟ್ಟೆ ಮಳಿಗೆಯಲ್ಲಿದ್ದ ಕೆಲವು ಬಟ್ಟೆಗಳನ್ನು ಇಲ್ಲಿ ತಂದು ಇಡಲಾಗಿತ್ತು. ಅವುಗಳೆಲ್ಲ ಖಾಲಿಯಾಗಿವೆ. ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬಡವರು, ನಿರ್ಗತಿಕರಿಗೆ ಅನುಕೂಲವಾಗಿದೆ' ಎಂದು ಹೇಳಿದರು.

'ಇಲ್ಲಿನ ವಸ್ತುಗಳನ್ನು ಯಾರೂ ಕದ್ದು ಮಾರಬಾರದು ಎನ್ನುವ ಉದ್ದೇಶದಿಂದ ಕರುಣೆಯ ಗೋಡೆಯನ್ನು ಬೆಳಿಗ್ಗೆ 7.30 ರಿಂದ ರಾತ್ರಿ 8 ಗಂಟೆವರೆಗೆ ತೆರೆದಿರುತ್ತೇವೆ. ಸುರಕ್ಷತೆ ದೃಷ್ಟಿಯಿಂದ ಸಿ.ಸಿ.ಟಿ.ವಿ. ಕಣ್ಗಾವಲು ಹಾಗೂ ಭದ್ರತಾ ಸಿಬ್ಬಂದಿಯೂ ಇದ್ದಾರೆ' ಎಂದರು.

ನೆಲಮಂಗಲದ ಬಿನ್ನಮಂಗಲ ಬಸ್ ತಂಗುದಾಣದ ಪಕ್ಕ ಹಿತಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಕರುಣೆಯ ಗೋಡೆಯಲ್ಲಿನ ಬಟ್ಟೆಗಳನ್ನು ಅಧ್ಯಕ್ಷ ವಿ.ರಾಮಸ್ವಾಮಿ ಅವರು ಅಗತ್ಯವಿರುವವರಿಗೆ ನೀಡಿದರು. ಚಿತ್ರದಲ್ಲಿ ಟ್ರಸ್ಟ್‌ನ ಮಂಜುನಾಥ್ ಹಾಗೂ ಮಲ್ಲಿಕಾರ್ಜುನ್ ಇದ್ದಾರೆ

ಕೊಡತಿ ಬಸ್ ನಿಲ್ದಾಣ

ಕೊಡತಿ ಬಸ್ ನಿಲ್ದಾಣ ಅವ್ಯವಸ್ಥೆಯ ಆಗರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಕೊಡತಿ ಗ್ರಾಮದಲ್ಲಿ ನಿರ್ಮಿಸಿರುವ ಬಸ್ ನಿಲ್ದಾಣ ಅವ್ಯವಸ್ಥೆಯ ಆಗರವಾಗಿದೆ.

ಈ ಹಿಂದೆ ಶಾಸಕರಾಗಿದ್ದ ಅರವಿಂದ ಲಿಂಬಾವಳಿ ಅವರು ತಮ್ಮ ಅನುದಾನದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲಾಗಿತ್ತು. ನಂತರದ ದಿನಗಳಲ್ಲಿ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೆ ಇರುವುದರಿಂದ ಕೋಳಿ ಗೂಡಾಗಿ ಸ್ವಚ್ಛ ಕಾಣದಾಗಿದೆ. ಪೌರ ಕಾರ್ಮಿಕರು ಬಸ್ ನಿಲ್ದಾಣವನ್ನು ಸ್ವಚ್ಛ ಮಾಡದೆ ಇರುವುದು ಕಾರಣವಾಗಿದೆ ಎಂದು ಕೊಡತಿ ಗ್ರಾಮಸ್ಥರು ದೂರಿದರು.

ಬಸ್ ನಿಲ್ದಾಣದಿಂದ ಕೇವಲ 50 ಮೀಟರ್ ಅಡಿಗಳ ಅಂತರದಲ್ಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಬಸ್ ನಿಲ್ದಾಣ ಬಗ್ಗೆ ನಿರ್ಲಕ್ಷ್ಯ ತೋರಿದ್ದಾರೆ. ಇದರ ಕುರಿತು ಕ್ರಮ ವಹಿಸುತ್ತಿಲ್ಲ ಎಂದು ಪ್ರಯಾಣಿಕ ಶ್ರೀನಾಥ್ ದೂರಿದರು.

ಕೊಡತಿ ಗ್ರಾಮದಿಂದ ನಿತ್ಯ ನೂರಾರು ಪ್ರಯಾಣಿಕರು ಇದೇ ನಿಲ್ದಾಣದಿಂದ ತೆರಳಬೇಕಿದೆ. ಮಳೆ ಗಾಳಿಗೆ ನಿಲ್ದಾಣದಲ್ಲಿ ನಿಲ್ಲಲು ಆಗುವುದಿಲ್ಲ. ಸ್ವಚ್ಛತೆ ಎನ್ನುವುದು ಮರೀಚಿಕೆಯಾಗಿದೆ. ಸರಿಯಾದ ನಿರ್ವಹಣೆ ಮಾಡುವ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಬೇಕು ಎಂದರು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ — A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಿಗೆ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಸಹಕಾರ ನಗರ	ಬೆಂಗಳೂರು	ಮಹಾನಗರ	2500
ಕಾಡುಗೋಡಿ	ಬೆಂಗಳೂರು	ಮಹಾನಗರ	2500
ಶಿವಕೋಟೆ	ಬೆಂಗಳೂರು ಉತ್ತರ	ಗ್ರಾಮೀಣ	1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **27–10–2023 ರಂದು ಸಂಜೆ 3.00 ಗಂಟೆಯವರೆಗೆ**. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 06–10–2023
ಸಹಿ/–
ಸಹಾಯಕ ಮಹಾ ಪ್ರಬಂಧಕರು

ಸಸಿ ನೆಡುವ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಜಯ ಕರ್ನಾಟಕ ಜನಪರ ವೇದಿಕೆಯು ತನ್ನ ಮೂರನೇ ವಾರ್ಷಿಕೋತ್ಸವ ಹಾಗೂ ಗಾಂಧಿ ಜಯಂತಿ ಪ್ರಯುಕ್ತ ರಾಜ್ಯದಾದ್ಯಂತ ಪೊಲೀಸ್ ಠಾಣೆಗಳ ಆವರಣದಲ್ಲಿ ಶ್ರೀಗಂಧದ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದೆ.

ಐಕೇರ್ ಫೌಂಡೇಶನ್ ಹಾಗೂ ಐಕೇರ್ ಬ್ರಿಗೇಡ್ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಜೆ.ಶ್ರೀನಿವಾಸ ಅವರು ಸಂಪಿಗೇಹಳ್ಳಿ ಪೊಲೀಸ್ ಠಾಣೆಯ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಾಕ್ ಶ್ರವಣ ಸಂಸ್ಥೆ: 46ನೇ ಸಂಸ್ಥಾಪಕರ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಎಸ್.ಆರ್. ಚಂದ್ರಶೇಖರ್ ವಾಕ್ ಶ್ರವಣ ಸಂಸ್ಥೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 46ನೇ ಸಂಸ್ಥಾಪಕರ ದಿನಾಚರಣೆ ಸಮಾರಂಭದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಸಮಾರಂಭ ಉದ್ಘಾಟಿಸಿದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, 'ಈ ಸಂಸ್ಥೆಯನ್ನು ವಿಶೇಷ ಎಂದು ಪರಿಗಣಿಸಿ, ಅನುದಾನ ಒದಗಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಬಿ.ಎಸ್.ಪ್ರೇಮಲತಾ ಅವರಿಗೆ 'ಡಾ.ಎಸ್.ಆರ್.ಸಿ ದತ್ತಿ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು.

ಸಂಸ್ಥೆಗೆ ದೇಣಿಗೆ ನೀಡಿದ ದಾನಿಗಳು, ಇಎನ್‌ಟಿ ತಜ್ಞರಾದ ಡಾ. ರಮೇಶ್ ಕೌಲಗುಡ್, ಡಾ.ವಾಸಂತಿ ಆನಂದ್ ಅವರನ್ನು ಸನ್ಮಾನಿಸಲಾಯಿತು.

ಬಿ.ಎ.ಎಸ್.ಎಲ್.ಪಿ.ಯ 43, ಎಂ.ಸಿ.ಎಸ್.ಎಲ್.ಪಿಯ 11 ಹಾಗೂ ಎಂ.ಎಸ್ಸಿ. ಆಡಿಯಾಲಾಜಿಯ 10 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಕಾಲೇಜು ವಿದ್ಯಾರ್ಥಿಗಳು, ಸುನಾದ್ ಕಿವುಡು ಮಕ್ಕಳ ಶಾಲೆ ಹಾಗೂ ತಾಯಂದಿರ ತರಬೇತಿ ಕೇಂದ್ರದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು.

ಸಮಾರಂಭವನ್ನು ಎಂ.ಸಿ. ಸುಧಾಕರ್ ಉದ್ಘಾಟಿಸಿದರು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ, ಎಸ್. ಚಂದ್ರಶೇಖರ ಶೆಟ್ಟಿ, ಬೆಂಗಳೂರು ಸ್ಪೀಚ್ ಆ್ಯಂಡ್ ಹಿಯರಿಂಗ್ ಟ್ರಸ್ಟ್ ಅಧ್ಯಕ್ಷ ವಿ.ವಿ. ಕೃಷ್ಣ ರೆಡ್ಡಿ, ಸಂಸ್ಥೆಯ ಖಜಾಂಚಿ ಲಯನ್ ವಿ. ಶಾಂತವದನ್ ಇದ್ದಾರೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು 560 020.

ತಿದ್ದುಪಡಿ

ಈ ದಿನಪತ್ರಿಕೆಯಲ್ಲಿ ದಿನಾಂಕ 01.10.2023ರಂದು ಪ್ರಕಟಗೊಂಡಿದ್ದ ಇ–ಹರಾಜು ಪ್ರಕಟಣೆಯಲ್ಲಿ ಮುಂದುವರೆದ ಬನಶಂಕರಿ 6ನೇ ಹಂತ, 4ನೇ 'ಹೆಚ್' ಬ್ಲಾಕ್‌ನಲ್ಲಿನ ಕ್ರಮ ಸಂಖ್ಯೆ 05ರ ನಿವೇಶನ ಸಂಖ್ಯೆ 430, ಮುಂದುವರೆದ ಬನಶಂಕರಿ 6ನೇ ಹಂತ 4ನೇ 'ಟಿ' ಬ್ಲಾಕ್‌ನಲ್ಲಿನ ಕ್ರಮ ಸಂಖ್ಯೆ 43ರ ನಿವೇಶನ ಸಂಖ್ಯೆ 1914, ಜೆ.ಪಿ.ನಗರ 1ನೇ ಹಂತದಲ್ಲಿನ ಕ್ರಮ ಸಂಖ್ಯೆ 125ರ ನಿವೇಶನ ಸಂಖ್ಯೆ 1176 ಹಾಗೂ ಕ್ರಮ ಸಂಖ್ಯೆ 126ರ ನಿವೇಶನ ಸಂಖ್ಯೆ 1202 ಗಳನ್ನು ಇ–ಹರಾಜು ಅಧಿಸೂಚನೆಯಿಂದ ಹಿಂಪಡೆಯಲಾಗಿದೆ. ಇನ್ನುಳಿದಂತೆ ಇತರೆ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಅನಾನುಕೂಲತೆಗಾಗಿ ಬಿಡಿಎ ವಿಷಾದ ವ್ಯಕ್ತಪಡಿಸುತ್ತದೆ.

ಸಹಿ/– ಅಭಿಯಂತರ ಸದಸ್ಯರು

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/10/2023–24 ದಿನಾಂಕ: 05.10.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಟಿ. ಮುನಿತಾಯಮ್ಮ ಕೋಂ. ಜಿ. ನಾರಾಯಣ	ಆನೇಕಲ್	ಸರ್ಜಾಪುರ	ಜಂತಗೊಂಡನ ಹಳ್ಳಿ	73/5	1–38	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನುಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/1605/2023–24

ಕದಳಿ ಮಹಿಳಾ ಸಮಾವೇಶದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಹೇಳಿಕೆ

ಸದುದ್ದೇಶದ ಇಚ್ಛಾಜೀವನವೇ ಸ್ವಾವಲಂಬನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆ ಸದುದ್ದೇಶಕ್ಕಾಗಿ, ಸದುದ್ದೇಶದಿಂದ ತನಗಿಷ್ಟ ಬಂದ ಹಾಗೆ ತಾನು ನಡೆದುಕೊಳ್ಳುವುದಕ್ಕೆ, ಇಷ್ಟಬಂದಂತೆ ತಾನು ಖರ್ಚು ಮಾಡುವುದಕ್ಕೆ ಸಾಧ್ಯವಾದರೆ ಅದೇ ಸ್ವಾವಲಂಬನೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆ ವತಿಯಿಂದ ಆಯೋಜಿಸಿದ್ದ ಕದಳಿ ಮಹಿಳಾ ಸಮಾವೇಶ ಹಾಗೂ ಕದಳಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಹಿಳಾ ಸ್ವಾವಲಂಬನೆ ಇಂದಿನ ಅತ್ಯಂತ ಪ್ರಮುಖ ಅಗತ್ಯ. ಮಹಿಳೆಗೆ ಹೋರಾಟವೇ ಮನೋಬಲ. ತಮಗೆ ಬೇಕಾದದ್ದನ್ನು ಹೋರಾಟದಿಂದಲೇ ಪಡೆಯಬೇಕು. ನಾನು ಇಂದು ಈ ಮಟ್ಟಿಗೆ ಬೆಳೆಯಬೇಕಾದರೆ ನನ್ನ ಹೋರಾಟವೇ ಮೂಲ ಕಾರಣ' ಎಂದರು.

'ಸಾಕಷ್ಟು ಅವಮಾನ, ಟೀಕೆಗಳನ್ನು ಎದುರಿಸಿದ್ದೇನೆ. ಯಾವುದಕ್ಕೂ ಹಿಂಜರಿಯಲಿಲ್ಲ, ಅವುಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಬೆಳೆದಿದ್ದೇನೆ. ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು. ಆಗ ಮಾತ್ರ ಸಮಾಜದಲ್ಲಿ ಸಮಾನತೆ ಬರಲು ಸಾಧ್ಯ' ಎಂದರು.

'ಕದಳಿ ಮಹಿಳಾ ವೇದಿಕೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದಲೇ ಅನುದಾನ ನೀಡಲು ಅವಕಾಶವಿದ್ದರೆ ನೀಡಲಾಗುವುದು. ಇದರ ಜೊತೆಗೆ ಮುಖ್ಯಮಂತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರೊಂದಿಗೆ ಚರ್ಚಿಸಿ ಅನುದಾನ ಒದಗಿಸಲು ಪ್ರಯತ್ನಿಸುತ್ತೇನೆ' ಎಂದು ಲಕ್ಷ್ಮೀ ಹೆಬ್ಬಾಳ್ಕರ ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರ ಗೊ.ರು.ಚನ್ನಬಸಪ್ಪ, ನೃತ್ಯಗಾರ್ತಿ ವೈಜಯಂತಿ ಕಾಶಿ, ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಪ್ಪಾರಾವ ಅಕ್ಕೋಣೆ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ ಇದ್ದರು.

'ಸಂವೇದನೆ- ಸಮಾನತೆ, ಸ್ವಾವಲಂಬನೆ' ವಿಚಾರಗೋಷ್ಠಿ, ಆಧುನಿಕ ವಚನ ಗೋಷ್ಠಿಗಳು ನಡೆದವು. ವಚನ ಸಂಭ್ರಮ, ವಚನ ನೃತ್ಯ ವೈಭವದಲ್ಲಿ ಗಾಯನ, ನೃತ್ಯ, ರಂಗರೂಪಕಗಳನ್ನು ಪ್ರಸ್ತುತಪಡಿಸಲಾಯಿತು. ವಚನಗಳ ನೃತ್ಯ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಕದಳಿ ಮಹಿಳಾ ಸಮಾವೇಶದಲ್ಲಿ ನೃತ್ಯಗಾರ್ತಿ ವೈಜಯಂತಿ ಕಾಶಿ ಅವರಿಗೆ 'ಕದಳಿ' ಹಾಗೂ ಗಾಯಕಿ ಸಂಗೀತಾ ಕಟ್ಟಿಗೆ 'ಬೆಳ್ಳಿಹಬ್ಬ ಗೌರವ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಲಹೆಗಾರ ಗೊ.ರು.ಚನ್ನಬಸಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಇದ್ದಾರೆ

ಪದವೀಧರ, ಶಿಕ್ಷಕರ ಕ್ಷೇತ್ರ: ಕರಡು ಪಟ್ಟಿ ನ.23ರಂದು ಪ್ರಕಟ

ಬೆಂಗಳೂರು: ಬೆಂಗಳೂರು ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಮತದಾರರ ಕರಡು ಪಟ್ಟಿಯನ್ನು ನ.23ರಂದು ಪ್ರಕಟಿಸಲಾಗುತ್ತದೆ.

ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯ ವಿಧಾನ ಪರಿಷತ್ತಿನ, ಬೆಂಗಳೂರು ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರಗಳಿಗೆ 2023ರ ನ.1ರ ಅನ್ವಯ ನೂತನವಾಗಿ ಮತದಾರ ಪಟ್ಟಿ ಸಿದ್ಧಪಡಿಸಲಾಗುತ್ತದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ಅಜಯ್ ತಿಳಿಸಿದ್ದಾರೆ.

ನಿಯಮದಂತೆ ವೇಳಾಪಟ್ಟಿ ಪ್ರಕಟಿಸಲಾಗಿದ್ದು, ಅ.16 ಹಾಗೂ ಅ.25ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗುತ್ತದೆ. ನ.6ರಂದು ಅರ್ಜಿ ನಮೂನೆ-18 ಅಥವಾ ನಮೂನೆ-19ನ್ನು ಸ್ವೀಕರಿಸಲು ಕೊನೆ ದಿನ. ಹಸ್ತಪ್ರತಿಗಳು ತಯಾರಿಸಿ, ಕರಡು ಮತದಾರರ ಪಟ್ಟಿಯನ್ನು ನ.20ರಂದು ಮುದ್ರಿಸಲಾಗುತ್ತದೆ.

ನ.23ರಂದು ಮತದಾರರ ಕರಡು ಪಟ್ಟಿ ಪ್ರಕಟಿಸಿ, ಡಿ.9ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಆಕ್ಷೇಪಣೆ ವಿಲೇವಾರಿ ಮಾಡಿ, ಪೂರಕ ಮತದಾರರ ಪಟ್ಟಿಯನ್ನು ಡಿ.25ರಂದು ಮುದ್ರಿಸಲಾಗುತ್ತದೆ. ಡಿ.30ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಅಮೆರಿಕ ನ್ಯಾಯಮೂರ್ತಿಗಳ ಜೊತೆಗೆ ಸಂವಾದದಲ್ಲಿ ನ್ಯಾ. ಕೃಷ್ಣ ಎಸ್‌. ದೀಕ್ಷಿತ್ ಹೇಳಿಕೆ

ಭಾರತ ಸಂವಿಧಾನದ ಗರಿಮೆ ಅನನ್ಯ

ಪ್ರಜಾವಾಣಿ ವಾರ್ತೆ

ಹವಾಯಿಯ ಸುಪ್ರೀಂ ಕೋರ್ಟ್‌ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ವಿಲ್ಸನ್, ಹವಾಯಿಯ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸಬ್ರಿನಾ ಎಸ್‌. ಮೆಕೆನ್ನಾ, ಟಾಡ್ ಡಬ್ಲ್ಯು ಎಡ್ಡಿನ್ಸ್, ಒರೆಗಾನ್ ಜಿಲ್ಲಾ ಮುಖ್ಯ ನ್ಯಾಯಾಧೀಶೆ ಆ್ಯನ್ ಎಲ್‌. ಐಕೆನ್, ನ್ಯೂಯಾರ್ಕ್ ಮೇಲ್ಮನವಿ ನ್ಯಾಯಾಲಯದ ಸಹ ನ್ಯಾಯಮೂರ್ತಿ ಜೆನ್ನಿ ರಿವೆರಾ, ಇಲಿನಾಯ್ ಉತ್ತರ ಜಿಲ್ಲೆ ನ್ಯಾಯಾಧೀಶೆ ಸಾರಾ ಎಲ್‌. ಎಲಿಸ್, ಕ್ಯಾಲಿಫೋರ್ನಿಯಾ ಕೇಂದ್ರೀಯ ಜಿಲ್ಲಾ ನ್ಯಾಯಾಧೀಶೆ ಜೋಸೆಫಿನ್ ಎಲ್‌. ಸ್ಟೇಟನ್, ಒರೆಗಾನ್ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶ ಡಗ್ಲಾಸ್ ಎಲ್‌. ಟೂಕಿ, ಕ್ಯಾಲಿಫೋರ್ನಿಯಾ ಕೇಂದ್ರೀಯ ಜಿಲ್ಲಾ ನ್ಯಾಯಾಧೀಶ ಆ್ಯಂಡ್ರೆ ಬಿರೊಟ್ಟೆ ಜ್ಯೂನಿಯರ್, ಹವಾಯಿಯ ಕಾನೂನು ವಿಶ್ವವಿದ್ಯಾಲಯದ ಡೀನ್ ಕೆಮಿಲೆ ನೆಲ್ಸನ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಪದಾಧಿಕಾರಿಗಳು ಇದ್ದರು.

ಮುಖ್ಯಾಂಶಗಳು

- ಬೆಂಗಳೂರು ವಕೀಲರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮ
- ಅಂಚೆ ಕಾರ್ಡ್‌ನಲ್ಲಿ ಬರೆದ ಅಹವಾಲನ್ನು ಪಿಐಎಲ್ ಆಗಿ ಪರಿಗಣಿಸಬಹುದು
- ಶ್ರೀಸಾಮಾನ್ಯರ ದುಃಖಕ್ಕೆ ನೆರವಾಗಲು ಅವಕಾಶ

ಬೆಂಗಳೂರು: 'ಅಮೆರಿಕದ ಸಂವಿಧಾನ ಮತ್ತು ನ್ಯಾಯಾಂಗವು ಮನುಷ್ಯ ಕೇಂದ್ರಿತವಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ಭಾರತದ ಸಂವಿಧಾನ ಮತ್ತು ನ್ಯಾಯಾಂಗವು ಈ ನೆಲದ ಮೇಲಿನ ಪ್ರತಿಯೊಂದು ಚರಾಚರ ಜೀವಿಗಳ ಬಗ್ಗೆ ಅಂತಃಕರುಣೆ ಹೊಂದಿದೆ. ದಯಾಪರ ಮತ್ತು ಪ್ರೇಮ ಭಾವದಿಂದ ಅವುಗಳ ಅಸ್ತಿತ್ವದ ಹಕ್ಕುಗಳ ರಕ್ಷಣೆ ಮಾಡುತ್ತಾ ಮುನ್ನಡೆಯುತ್ತಿದೆ' ಎಂದು ಹೈಕೋರ್ಟ್‌ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅಭಿಪ್ರಾಯಪಟ್ಟರು.

'ಬೆಂಗಳೂರು ವಕೀಲರ ಸಂಘ'ದ ವತಿಯಿಂದ ಹೈಕೋರ್ಟ್‌ನಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಅಮೆರಿಕದ 10 ಜನ ಸುಪ್ರೀಂ ಕೋರ್ಟ್ ಮತ್ತು ಫೆಡರಲ್ ಕೋರ್ಟ್ ನ್ಯಾಯಮೂರ್ತಿಗಳ ಜೊತೆಗೆ ನಡೆದ, 'ಭಾರತ ಮತ್ತು ಅಮೆರಿಕ ಸಂವಿಧಾನಗಳಲ್ಲಿನ ನ್ಯಾಯಾಂಗ ಸ್ವಾತಂತ್ರ್ಯದ ಬಗ್ಗೆ ಒಂದು ಇಣುಕು ನೋಟ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹದಿನೈದು ಪೈಸೆಯ ಅಂಚೆ ಕಾರ್ಡ್‌ನಲ್ಲಿ ಬರೆದ ಅಹವಾಲು ಮತ್ತು ಪತ್ರಿಕೆಯಲ್ಲಿ ಪ್ರಕಟವಾದ ಪುಟ್ಟ ಲೇಖನವನ್ನೇ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿಗಣಿಸಿ ಶ್ರೀಸಾಮಾನ್ಯರ ದುಃಖಕ್ಕೆ ನೆರವಾಗುವ ಅವಕಾಶವನ್ನು ಭಾರತೀಯ ಸಂವಿಧಾನ ಕಲ್ಪಿಸಿದೆ. ಆದರೆ, ಅಮೆರಿಕ ನ್ಯಾಯಾಂಗವು ದಾವೆಯ ಶಿಷ್ಟಾಚಾರಕ್ಕೆ ಒಗ್ಗಿ ಕೆಲಸ ಮಾಡುವ ಪ್ರವೃತ್ತಿ ಹೊಂದಿದೆ' ಎಂದು ಹೇಳಿದರು.

'ಅಂಬೇಡ್ಕರ್ ಅವರು ನಮ್ಮ ಸಂವಿಧಾನ ರೂಪಿಸುವ ಮುನ್ನ ಅದರಲ್ಲಿ ಅಡಕಗೊಳಿಸಬಹುದಾದ ಬಹಳಷ್ಟು ಅಂಶಗಳನ್ನು ಅಮೆರಿಕದ ನೆಲದಲ್ಲೇ ಕುಳಿತು ರೂಪಿಸಿದ್ದರು. ಇದು ಅಮೆರಿಕ ಮತ್ತು ಭಾರತದ ಮಧ್ಯೆ ಇರುವ ಆರೋಗ್ಯಕರ, ಸೌಹಾರ್ದ ಸಂಬಂಧಕ್ಕೆ ಸಾಕ್ಷಿ' ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಾಜೇಂದ್ರ ಪ್ರಸಾದ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ನಿಕಟಪೂರ್ವ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾಲಯದ ಕುಲಪತಿ ರಾಜ್‌ಕುಮಾರ್ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು.

ಹೊಸಪೇಟೆ: 12, 13ರಂದು ಸಿ.ಎಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಪೇಟೆಯಲ್ಲಿ ಅ.12, 13ರಂದು ದಕ್ಷಿಣ ಭಾರತಮಟ್ಟದ ಚಾರ್ಟರ್ಡ್ ಅಕೌಂಟೆಂಟ್‌ಗಳ 55ನೇ ಸಮಾವೇಶ ನಡೆಯಲಿದೆ.

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ (ಐಸಿಎಐ) ದಕ್ಷಿಣ ಭಾರತ ಪ್ರಾಂತೀಯ ಪರಿಷತ್‌ನ ಬಳ್ಳಾರಿ ಶಾಖೆಯ ಸಹಯೋಗದಲ್ಲಿ ನಡೆಯುವ ಈ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಶರಣಬಸಪ್ಪ ದರ್ಶನಾಪುರ, ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ, ಕಾರ್ಮಿಕ ಸಚಿವ ಸಂತೋಷ್ ಲಾಡ್ ಉಪಸ್ಥಿತರಿರುವರು ಎಂದು ಎಸ್‌ಐಆರ್‌ಸಿ ಅಧ್ಯಕ್ಷ ಎಸ್‌. ಪನ್ನಾರಾಜ್ ಹೇಳಿದ್ದಾರೆ.

ಹೊಸಪೇಟೆ ಶಾಸಕರಾದ ಎಚ್‌. ಆರ್‌. ಗವಿಯಪ್ಪ ಅಧ್ಯಕ್ಷತೆ ವಹಿಸುವರು. ಐಸಿಎಐ ಅಧ್ಯಕ್ಷರಾದ ಅನಿಕೇತ್ ಎಸ್‌. ತಲಾಟಿ, ಉಪಾಧ್ಯಕ್ಷ ರಂಜಿತ್ ಅಗರವಾಲ್ ಭಾಗವಹಿಸುವರು. ಸುಮಾರು 3,000 ಚಾರ್ಟರ್ಡ್ ಅಕೌಂಟೆಂಟ್‌ಗಳು ಭಾಗವಹಿಸುವರು ಎಂದಿದ್ದಾರೆ.

ಕಾವೇರಿ ವಿವಾದ: ನ್ಯಾಯಾಲಯವೇ ಬಗೆಹರಿಸಲಿ– ಜೈರಾಜ್ ಅಭಿಮತ

ಪ್ರಜಾವಾಣಿ ವಾರ್ತೆ

ಚರ್ಚಾಗೋಷ್ಠಿಯಲ್ಲಿ ಸಿ.ಚಂದ್ರಶೇಖರ್ ಮಾತನಾಡಿದರು. ಕೆ. ಜೈರಾಜ್, ಹರೀಶ್ ಎನ್‌. ಇದ್ದಾರೆ.

ಬೆಂಗಳೂರು: 'ಕಾವೇರಿ ನೀರು ಹಂಚಿಕೆ ವಿವಾದವನ್ನು ನ್ಯಾಯಾಲಯವೇ ತುರ್ತಾಗಿ ಬಗೆಹರಿಸಬೇಕು. ಬಂದ್‌ಗಳಿಂದ ಆರ್ಥಿಕ ನಷ್ಟವಾಗುತ್ತದೆಯೇ ಹೊರತು, ವಿವಾದಕ್ಕೆ ಪರಿಹಾರ ದೊರೆಯುವುದಿಲ್ಲ' ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ. ಜೈರಾಜ್ ತಿಳಿಸಿದರು.

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ.ಪ್ಯಾಕ್) ನಗರದಲ್ಲಿ ಶುಕ್ರವಾರ ಆಯೋಜಿಸಿದ 'ಕಾವೇರಿ ಅಂದು, ಇಂದು, ಮುಂದು' ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿ, ಮಾತನಾಡಿದರು.

'ಬೆಂಗಳೂರಿಗೆ ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ನೀರಾವರಿ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಶತಮಾನಗಳ ಇತಿಹಾಸವನ್ನು ಹೊಂದಿರುವ ಕಾವೇರಿ ವಿವಾದಕ್ಕೆ ನ್ಯಾಯಾಲಯವೇ ಶಾಶ್ವತ ಪರಿಹಾರ ಸೂತ್ರವನ್ನು ನೀಡಬೇಕು. ಆಗ ಮಾತ್ರ ವಿವಾದ ಸುಖಾಂತ್ಯ ಕಾಣಲಿದೆ' ಎಂದು ಹೇಳಿದರು.

'ಕಾವೇರಿ ನದಿ ನೀರು ಹಂಚಿಕೆ ಒಪ್ಪಂದಗಳ ಐತಿಹಾಸಿಕ ಮತ್ತು ಕಾನೂನು ಅಂಶಗಳ ಸಮಗ್ರ ಪರಿಶೀಲನೆ ನಡೆಯಬೇಕು. ಕಾವೇರಿ ನೀರು ಹೋರಾಟವು ಅಂತರರಾಜ್ಯ ಉದ್ವಿಗ್ನತೆಗೆ ಕಾರಣವಾಗುತ್ತಿದೆ. ಆದ್ದರಿಂದ ಆದಷ್ಟು ಬೇಗ ವಿವಾದವನ್ನು ಪರಿಹರಿಸಬೇಕು' ಎಂದರು.

ನಿವೃತ್ತ ಐಪಿಎಸ್ ಅಧಿಕಾರಿ ಸಿ. ಚಂದ್ರಶೇಖರ್, 'ಕಾವೇರಿ ಜಲ ವಿವಾದವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಕಾವೇರಿ ಇತಿಹಾಸವನ್ನು ತಿಳಿದುಕೊಳ್ಳಬೇಕು. ಈ ಅಂತರರಾಜ್ಯ ಜಲವಿವಾದ ಕುರಿತು ಸುಪ್ರೀಂ ಕೋರ್ಟ್ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಸೂತ್ರದ ಕುರಿತು ಕೋರ್ಟ್ ತೀರ್ಪಿನಲ್ಲಿ ಯಾವುದೇ ಉಲ್ಲೇಖ ಇರದಿರುವುದು ಸಮಸ್ಯೆಗೆ ಕಾರಣವಾಗಿದೆ' ಎಂದು ತಿಳಿಸಿದರು. ವಕೀಲ ಹರೀಶ್ ಎನ್‌. ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು.

9ರಿಂದ 'ಭವಿಷ್ಯದ ಸಾಕ್ಷರತೆ' ಸಮ್ಮೇಳನ

ಬೆಂಗಳೂರು: ಹವಾಮಾನ ಬಿಕ್ಕಟ್ಟು, ಕೃತಕ ಬುದ್ಧಿಮತ್ತೆಯಿಂದ ಶಿಕ್ಷಣ ಹಾಗೂ ಕೌಶಲಗಳ ಭವಿಷ್ಯದ ಮೇಲಾಗುವ ಪರಿಣಾಮಗಳ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ 'ಭವಿಷ್ಯದ ಸಾಕ್ಷರತೆ' ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಕ್ವೆಸ್ಟ್ ಅಲಯನ್ಸ್ ಅ.9 ಮತ್ತು 10ರಂದು ಹಮ್ಮಿಕೊಂಡಿರುವ ಸಮ್ಮೇಳನದಲ್ಲಿ ಶಿಕ್ಷಣ ಮತ್ತು ಉದ್ಯೋಗ, ಉದ್ಯಮ ಕ್ಷೇತ್ರದ ಮೇಲೆ ಕೃತಕ ಬುದ್ಧಿಮತ್ತೆಯ ಪ್ರಭಾವ, ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಹವಾಮಾನ ಬದಲಾವಣೆಯ ಪರಿಣಾಮ, ಹಸಿರು ಉದ್ಯೋಗಾವಕಾಶ ಕುರಿತು ಚರ್ಚೆಗಳು ನಡೆಯಲಿವೆ. ಹಿಂದಿನ ಶಾಲೆಗಳು ಹಾಗೂ ಭವಿಷ್ಯದ ಶಾಲೆಗಳ ಬೆಳವಣಿಗೆ, 2045ರಲ್ಲಿ ಯುವಜನರ ಜೀವನ ಹೇಗಿರುತ್ತದೆ ಎನ್ನುವ ಮುನ್ನೋಟವನ್ನು ಅಂದು ಆಯೋಜಿಸುವ ಪ್ರದರ್ಶನ ಒದಗಿಸಲಿದೆ. ಅಸೋಸಿಯೇಷನ್ ಆಫ್ ಪ್ರೊಫೆಷನಲ್ ಫ್ಯೂಚರಿಸ್ಟ್ ಮುಖ್ಯಸ್ಥ ಶೆರ್ಮನ್ ಕ್ರೂಜ್, ನೀತಿ ಆಯೋಗದ ಹಿರಿಯ ತಜ್ಞೆ ಸಾಕ್ಷಿ ಖುರಾನಾ ಭಾಗವಹಿಸುವರು ಎಂದು ಕ್ವೆಸ್ಟ್ ಅಲಯನ್ಸ್‌ನ ಸಿಇಒ ಆಕಾಶ್ ಸೇಥಿ ಮಾಹಿತಿ ನೀಡಿದ್ದಾರೆ.

Doctors Housing Co-operative Society Ltd.,
Doctors Layout, Alanahally, T. Narasipura Road,
Mysuru - 570 028
(Reg. No. AR41/MKT/RGN/9901/83-84)
DHCS
FOR DOCTORS ONLY
Applications are invited for the membership of our Society from the Doctors to get a Residential Site in our Proposed III Stage Layout (MUDA Approved)
For Details Contact :
Mob: 96111 72148, 98451 29002
Office: 94495 61722. www.dhcsmys.org
Office Hours: 10 am to 6 pm on all days
Sd/- Shashikumar, Secretary
Sd/- Dr. N. P. Shivakumar, President

ಕಾಣೆಯಾಗಿದ್ದಾರೆ

ಪುಟ್ಟಸ್ವಾಮಿ .ಎನ್
ವಯಸ್ಸು: 64 ವರ್ಷ, ಎತ್ತರ 5.5 ಅಡಿ
ತಾ॥ 03-10-2023 ರಂದು ಬೆಂಗಳೂರು ಹೆಗ್ಗಡದೇವನಪುರ, ಮಾಕಳಿಯಿಂದ ಕಾಣೆಯಾಗಿರುತ್ತಾರೆ.
ಯಾರಿಗಾದರೂ ಸುಳಿವು ಸಿಕ್ಕಿದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಈ ದೂರವಾಣಿ ಸಂಖ್ಯೆಗೆ ಕರೆಮಾಡಿ
9900000087, 9986091591

ಜನ್ಮದಿನದ ಶುಭಾಶಯಗಳು

ಶರಣ ಎಂ.ಬಿ. ಪಾಟೀಲ
ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಅಧ್ಯಕ್ಷರು, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ
ಅಧ್ಯಕ್ಷರು, ಬಿ.ಎಲ್.ಡಿ.ಇ. ಸಂಸ್ಥೆ ಹಾಗೂ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯ
ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು.
ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯಿಸಿ
ಕುರುಹ ಪೂಜಿಸುವ ಗೊರವರ ಮೆಚ್ಚ ಕೂಡಲಸಂಗಮದೇವ.
ಬಂಧುಗಳು... ಮಿತ್ರರು... ಅಭಿಮಾನಿಗಳು...

ಸಂಕ್ಷಿಪ್ತ ಸುದ್ದಿ

ಪೊಲೀಸರ ಮನವಿ ಆಲಿಸಲು ಕ್ಯೂ–ಆರ್ ಕೋಡ್

ಬೆಂಗಳೂರು: ಪೊಲೀಸ್ ಸಿಬ್ಬಂದಿಯ ವೇತನ, ರಜೆ, ಆರೋಗ್ಯ ಸಮಸ್ಯೆ ಸೇರಿದಂತೆ ಎಲ್ಲ ಬಗೆಯ ದೂರುಗಳನ್ನು ಆಲಿಸಲು ಆಗ್ನೇಯ ವಿಭಾಗದ ಡಿಸಿಪಿ, ಕ್ಯೂ–ಆರ್ ಕೋಡ್ ವ್ಯವಸ್ಥೆ ಜಾರಿಗೆ ತಂದಿದ್ದಾರೆ.

ನಗರದಲ್ಲಿ ಮೊದಲ ಬಾರಿಗೆ ಈ ವ್ಯವಸ್ಥೆ ಜಾರಿಗೊಳಿಸಲಾಗಿದ್ದು, ಇದಕ್ಕೆ ಕಮಿಷನರ್ ಬಿ. ದಯಾನಂದ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯ ಸ್ಪಂದನೆ ಆಧರಿಸಿ ಇತರೆ ವಿಭಾಗಗಳಿಗೆ ವಿಸ್ತರಿಸುವುದಾಗಿ ತಿಳಿಸಿದ್ದಾರೆ.

ಆಗ್ನೇಯ ವಿಭಾಗದಲ್ಲಿ ಮೂರು ಎಸಿಪಿ ಕಚೇರಿ ಹಾಗೂ 14 ಠಾಣೆಗಳಿವೆ. ಇಲ್ಲಿ ಕೆಲಸ ಮಾಡುವ ಸಿಬ್ಬಂದಿ, ತಮ್ಮ ಮನವಿಗಳನ್ನು ಸಲ್ಲಿಸಲು ಪದೇ ಪದೇ ಡಿಸಿಪಿ ಕಚೇರಿಗೆ ಬಂದು ಹೋಗುತ್ತಾರೆ. ಇದರಿಂದ ಸಮಯ ವ್ಯರ್ಥವಾಗುತ್ತಿತ್ತು. ಸಿಬ್ಬಂದಿಗೂ ತೊಂದರೆ ಉಂಟಾಗುತ್ತಿತ್ತು. ಇದನ್ನು ಮನಗಂಡ ಡಿಸಿಪಿ, ಕ್ಯೂಆರ್ ಕೋಡ್ ವ್ಯವಸ್ಥೆ ರೂಪಿಸಿದ್ದಾರೆ.

'ಸಿಬ್ಬಂದಿಯ ಮನವಿ ಪ್ರತಿಗಳು ಇನ್‌ಸ್ಪೆಕ್ಟರ್, ಎಸಿಪಿ ಹಾಗೂ ಡಿಸಿಪಿಗಳಿಗೆ ಹೋಗುತ್ತದೆ. ಅಂಥ ಮನವಿಗಳನ್ನು ಡಿಸಿಪಿ ಅವರು ಪರಿಶೀಲಿಸಿ, ಮುಂದಿನ ಕ್ರಮ ಜರುಗಿಸಲಿದ್ದಾರೆ. ಮನವಿ ಪ್ರಗತಿ ಬಗ್ಗೆ ಸಿಬ್ಬಂದಿ ಮೊಬೈಲ್‌ಗೆ ಸಂದೇಶ ಹೋಗಲಿದೆ' ಎಂದರು.

ಮೈಸೂರು ರಸ್ತೆ ಚಿತಾಗಾರ ಸ್ಥಗಿತ

ಬೆಂಗಳೂರು: ಬಿಬಿಎಂಪಿ ಪಶ್ಚಿಮ ವಲಯದ ಮೈಸೂರು ರಸ್ತೆ ವಿದ್ಯುತ್ ಚಿತಾಗಾರದಲ್ಲಿ ಟ್ರಾನ್ಸ್‌ಫಾರ್ಮರ್‌ನ ತುರ್ತು ದುರಸ್ತಿ ಕೆಲಸ ನಡೆಯುತ್ತಿರುವುದರಿಂದ ಅ.21ರವರೆಗೆ ದಹನ ಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಅ.17ಕ್ಕೆ ಬೆಂಗಳೂರು ವಿ.ವಿ ಘಟಿಕೋತ್ಸವ

ಬೆಂಗಳೂರು: ನಗರದ ಸೆಂಟ್ರಲ್ ಕಾಲೇಜು ಸಭಾಂಗಣದಲ್ಲಿ 17ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಆಯೋಜಿಸಲಾಗಿದೆ.

ಸೆ.29ರಂದು ನಿಗದಿಯಾಗಿದ್ದ 58ನೇ ಘಟಿಕೋತ್ಸವವನ್ನು ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು.

ದಸರಾ ಹಬ್ಬದ ಹಾರ್ದಿಕ ಶುಭಾಷಯಗಳು
ಪ್ರಪಂಚದಾದ್ಯಂತದ ರೋಮಾಂಚಕ ಜಾನಪದ ಕಲೆಗೆ ಗೌರವ, ಲ್ಯಾಕ್, ಇಂಡಿಗೊ ಮತ್ತು ಮೈರೋಬಾಲನ್ ಬಳಸಿ ನೈಸರ್ಗಿಕವಾಗಿ ಬಣ್ಣಬಣ್ಣದ ರೇಷ್ಮೆ ಸೀರೆಗಳ ಈ ಡ್ಯುಯಲ್ ಸಂಯೋಜನೆಯನ್ನು RmKV ಡಿಸೈನ್ ಸ್ಟುಡಿಯೊದಿಂದ ಪರಿಕಲ್ಪನೆ ಮತ್ತು ವಿನ್ಯಾಸಗೊಳಿಸಲಾಗಿದೆ ಮತ್ತು RmKV ನೇಕಾರರು ಕೈಯಿಂದ ನೇಯ್ದಿದ್ದಾರೆ, ಕಡುಗೆಂಪು ಗುಲಾಬಿ ಬಣ್ಣದ ಸೀರೆಯನ್ನು ಒಳಗೊಂಡಿದೆ. ಮೈಸೂರು ಅರಮನೆಯ ಭವ್ಯತೆ ಮತ್ತು ದೈವತ್ವಕ್ಕೆ, ಶ್ರೀಕೃಷ್ಣನನ್ನು ಮೈಸೂರಿನ ದೈವಿಕ ರಕ್ಷಕನಾಗಿ ಚಿತ್ರಿಸಲು ರಾಯಲ್ ನೀಲಿ ಮತ್ತು ಚಿನ್ನದಲ್ಲಿ ನೇಯ್ದ ಮೊಸಾಯಿಕ್ ತರಹದ ಎಳೆಗಳನ್ನು ಹೊಂದಿದೆ. ಖುಷಿ ಹಸಿರು ಸೀರೆಯು ವ್ಯತಿರಿಕ್ತವಾದ ಗುಲಾಬಿ ಬಣ್ಣದ ಅಂಚುಗಳೊಂದಿಗೆ ಹಿತವಾದ ವರ್ಣವನ್ನು ತೋರಿಸುತ್ತದೆ – ದೇಹವನ್ನು ಆಕರ್ಷಕವಾಗಿ ಹೆಚ್ಚಿಸಲು ಮೋಡಿಮಾಡುವ ಪಟ್ಟೆಗಳನ್ನು ರೂಪಿಸಲು ಝರಿ ಎಳೆಗಳನ್ನು ನಿಖರವಾಗಿ ನೇಯಲಾಗುತ್ತದೆ.
Folk Art collection
Scan Here For An AR Experience
traditions made trendy RmKV Unique Silks
naturals Silk sarees coloured by nature, Handcrafted by RmKV.
ಬೆಂಗಳೂರು : ಒರಾಯನ್ ಮಾಲ್, ಡಾ॥ ರಾಜ್‌ಕುಮಾರ್ ರೋಡ್, ರಾಜಾಜಿ ನಗರ, ಫೋನ್ : 080 22682005
Toll Free No. : 1800 425 3105 | WhatsApp : 93429 54326 | Shop Online : www.rmkv.com

ಹೊರವರ್ತುಲ ರಸ್ತೆಯಲ್ಲಿ ವಾರಕ್ಕೆ ನಾಲ್ಕು ದಿನ ಸಮಸ್ಯೆ • ಮರೀಚಿಕೆಯಾದ ಪರಿಹಾರ

ವಾಹನಗಳ ದಟ್ಟಣೆ, ಜನರ ಬವಣೆ

• ಬಾಲಕೃಷ್ಣ ಪಿ.ಎಚ್.

ಸಿಲ್ಕ್ ಬೋರ್ಡ್–ಸರ್ಜಾಪುರ ರಸ್ತೆಯಲ್ಲಿ ಮೆಟ್ರೊ ಕಾಮಗಾರಿ ನಡೆಯುತ್ತಿರುವುದರಿಂದ ಉಂಟಾಗಿರುವ ವಾಹನ ದಟ್ಟಣೆ

ಮಾರತ್ತಹಳ್ಳಿ ಜಂಕ್ಷನ್ ಬಳಿಯ ಹಳೆ ಎಚ್‌ಎಎಲ್ ರಸ್ತೆಯ ಚಿತ್ರಣ

ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್.ಜಿ

ಬೆಂಗಳೂರು: ಆಮೆಗತಿಯಲ್ಲಿ ಸಾಗುವ ವಾಹನಗಳ ಸಾಲು. ರಸ್ತೆ ದಾಟಲು ಪರದಾಡುವ ಜನ. ಕಳೆದ ಒಂದು ವರ್ಷದಿಂದ ನಗರದ ಹೊರವರ್ತುಲ ರಸ್ತೆಗಳಲ್ಲಿ ಇದು ನಿತ್ಯದ ಗೋಳು.

ನೂರಾರು ಐಟಿ–ಬಿಟಿ ಕಂಪನಿಗಳು ಇಲ್ಲಿಯೇ ನೆಲೆ ಕಂಡಿರುವುದು ಒಂದು ಕಾರಣವಾದರೆ, ಮೆಟ್ರೊ ಕಾಮಗಾರಿ ನಡೆಯುತ್ತಿರುವುದು ಎರಡನೇ ಕಾರಣ. ಜೊತೆಗೆ ಜನರಿಗೆ, ಚಾಲಕರಿಗೆ ಅರಿವಿನ ಕೊರತೆಯೂ ದಟ್ಟಣೆ ಹೆಚ್ಚಿಸಿದೆ.

‘ಸೋಮವಾರ ಬೆಳಿಗ್ಗೆ 8ರ ಹೊತ್ತಿಗೆ ವಾಹನದಟ್ಟಣೆ ಶುರುವಾದರೆ ಮಧ್ಯಾಹ್ನದವರೆಗೆ ಇರುತ್ತದೆ. ಮಂಗಳವಾರ ಮತ್ತು ಬುಧವಾರ ವಾಹನ ಜಂಗುಳಿ ನಿರ್ವಹಣೆಯೇ ಕಷ್ಟ. ಈ ಎರಡು ದಿನ ವಾಹನಗಳ ದಟ್ಟಣೆ ಹೆಚ್ಚಾಗಿರುತ್ತದೆ. ಸಂಜೆಯವರೆಗೂ ವಾಹನದಟ್ಟಣೆ ಇರುತ್ತದೆ. ಗುರುವಾರ ಸ್ವಲ್ಪ ಕಡಿಮೆಯಾಗುತ್ತದೆ. ಶುಕ್ರವಾರ, ಶನಿವಾರ, ಭಾನುವಾರ ವಾಹನಗಳ ಸಂಖ್ಯೆ ಕಡಿಮೆ ಇರುತ್ತದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

2025ರ ವೇಳೆಗೆ ಮೆಟ್ರೊ ನೀಲಿ ಮಾರ್ಗ ಕಾಮಗಾರಿ ಮುಗಿಸುವ ಗುರಿ ಇರಿಸಿಕೊಳ್ಳಲಾಗಿದೆ. ಮೆಟ್ರೊ ಆರಂಭವಾದರೆ ಶೇ 50ರಷ್ಟು ಸಂಚಾರ ದಟ್ಟಣೆ ಕಡಿಮೆಯಾಗಲಿದೆ ಎಂಬ ನಿರೀಕ್ಷೆ ಇದೆ. ಮಾರತ್‌ಹಳ್ಳಿ ಸೇತುವೆ ಬಳಿ ಉಂಟಾಗುವ ಸಮಸ್ಯೆಯಿಂದಲೇ ಸುತ್ತಲಿನ ರಸ್ತೆಗಳಲ್ಲಿ ವಾಹನಗಳು ಸರತಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಈ ಸೇತುವೆ ಬಳಿ ಒಂದು ಪಾದಚಾರಿ ಮೇಲ್ಸೇತುವೆ (ಸ್ಕೈವಾಕ್) ಇದೆ. ಇನ್ನೊಂದು ಕಡೆಯಿಂದ ಪಾದಚಾರಿ ಮೇಲ್ಸೇತುವೆ ಇಲ್ಲ. ಇದರಿಂದ ಜನರು ರಸ್ತೆ ದಾಟಲು ವಾಹನಗಳ ನಡುವೆಯೇ ನುಗ್ಗುತ್ತಾರೆ. ಒಂದು ವಾಹನ 5 ಸೆಕೆಂಡ್ ನಿಂತರೆ ಅದರ ಹಿಂದಿನ ಎಲ್ಲ ವಾಹನಗಳು ಸಾಲುಗಟ್ಟುತ್ತವೆ.

ಬಿಎಂಟಿಸಿ ಬಸ್‌ಗಳು ಪ್ರಯಾಣಿಕರನ್ನು ಇಳಿಸಲು, ಹತ್ತಿಸಿಕೊಳ್ಳಲು ರಸ್ತೆಯಲ್ಲಿ ನಿಲ್ಲುವುದು ಕೂಡ ಸಮಸ್ಯೆಗಳನ್ನು ತಂದೊಡ್ಡಿದೆ. ಟಿನ್ ಫ್ಯಾಕ್ಟರಿ ಬಳಿ ಬಸ್‌ಗಳು ರಸ್ತೆಯಿಂದ ಸ್ವಲ್ಪ ಒಳಗೆ ಬಂದು ನಿಲ್ಲುವ ರೀತಿಯ ಬಸ್‌ಬೇ ಮಾಡಿದ್ದಾರೆ. ಅದೇ ರೀತಿಯ ವ್ಯವಸ್ಥೆಯನ್ನು ಮಾರತ್ ಹಳ್ಳಿ ಸಹಿತ ಎಲ್ಲ ತಂಗುದಾಣಗಳಿಗೆ ಮಾಡಿದರೆ ಬಸ್‌ಗಳು ರಸ್ತೆಯಲ್ಲಿ ನಿಲ್ಲುವುದು ತಪ್ಪಲಿದೆ ಎಂದು ಸಂಚಾರ ಪೊಲೀಸರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಬೆಂಗಳೂರು ನಗರದ ಒಳಗೆ ಟ್ರ್ಯಾಕ್ಟರ್‌ಗಳನ್ನು ತರಬಾರದು ಎಂಬ ನಿಯಮ ಮಾಡಲಾಗಿದೆ. ಕೆಲವು ಇಲಾಖೆಗಳಲ್ಲಿಯೂ ಟ್ರ್ಯಾಕ್ಟರ್‌ಗಳಿವೆ. ಹೊರಗಿನಿಂದಲೂ ಟ್ರ್ಯಾಕ್ಟರ್‌ಗಳು ಬರುತ್ತಿರುವುದು ವಾಹನಗಳ ಸರಾಗ ಸಂಚಾರಕ್ಕೆ ಅಡ್ಡಿಯಾಗಿದೆ. ಇವುಗಳ ಮಧ್ಯೆ ಅರೆ ಚಾಲನೆ ಕಲಿತವರು ದಟ್ಟಣೆ ಹೆಚ್ಚಿರುವ ರಸ್ತೆಗಳಿಗೆ ವಾಹನ ತಂದು ಸಿಕ್ಕಿಹಾಕಿಕೊಂಡರೆ ಸಾವಿರಾರು ವಾಹನಗಳು ಸಾಲುಗಟ್ಟಿ ನಿಲ್ಲುವಂತಾಗುತ್ತಿದೆ.

ಬೆಳಿಗ್ಗೆ 8ರ ನಂತರ ಭಾರಿ ವಾಹನಗಳಿಗೆ ನಗರಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಆದರೂ ಅಲ್ಲೊಂದು, ಇಲ್ಲೊಂದು ಲಾರಿಗಳು ಬಂದು ಸುಗಮ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿವೆ.

ದಟ್ಟಣೆಗೆ ಕಾರಣ

- ಐಟಿ–ಬಿಟಿ ಕಂಪನಿಗಳಲ್ಲಿ ಇದ್ದ ಮನೆಯಿಂದಲೇ ಕೆಲಸ (ವರ್ಕ್‌ಫ್ರಂ ಹೋಂ) ಪದ್ಧತಿ ಕೊನೆಗೊಂಡಿದೆ. ಎಲ್ಲರೂ ಕಚೇರಿಗೆ ಬರುತ್ತಿದ್ದಾರೆ.
- ಇಕೊ ವರ್ಲ್ಡ್ ಕಂಪನಿಗೆ ಈ ಸೋಮವಾರ 75,000, ಮಂಗಳವಾರ 1 ಲಕ್ಷ, ಬುಧವಾರ 1.20 ಲಕ್ಷ ವಾಹನಗಳು ಬಂದಿದ್ದವು. ಇದೇ ರೀತಿ ವಿಪ್ರೊಗೆ 10 ಸಾವಿರದಿಂದ 15 ಸಾವಿರವರೆಗೆ, ಸಲರ್‌ಪುರಿಯಾ ಸಾಫ್ಟ್‌ಜೋನ್ ಕಂಪನಿಗೆ 3,500ರಿಂದ 5,000 ವಾಹನಗಳು ಬಂದಿವೆ. ಸಾವಿರಕ್ಕೂ ಅಧಿಕ ಕಂಪನಿಗಳು ಮಾರತ್‌ಹಳ್ಳಿ–ಬೆಳಂದೂರು ರಸ್ತೆಯಲ್ಲಿವೆ. ಒಂದೇ ಹೊತ್ತಿಗೆ ಈ ಕಂಪನಿಯ ಉದ್ಯೋಗಿಗಳು ಬರುತ್ತಿರುವುದು ದಟ್ಟಣೆ ಹೆಚ್ಚಿಸಿದೆ.
- ಮೆಟ್ರೊ ಕಾಮಗಾರಿ ನಡೆಯುತ್ತಿರುವುದರಿಂದ ಅದರ ಅಡಿಯ ರಸ್ತೆಯನ್ನು ಸುರಕ್ಷಿತ ಕಾರಣಕ್ಕೆ ಅಲ್ಲಲ್ಲಿ ಅರ್ಧ ಅಥವಾ ಪೂರ್ತಿ ಮುಚ್ಚಲಾಗುತ್ತಿದೆ.
- ಕಾಡುಬೀಸನಹಳ್ಳಿ ಸೇತುವೆ ಬಳಿ ಟ್ರಾಫಿಕ್ ಸಿಗ್ನಲ್ ಇದ್ದರೂ ಸರಿಯಾಗಿ ಬಳಕೆಯಾಗುತ್ತಿಲ್ಲ. ಇಲ್ಲಿ ಅಡ್ಡಾದಿಡ್ಡಿ ವಾಹನಗಳು ನುಗ್ಗಿ ಸಂಚಾರವೇ ನಿಂತು ಬಿಡುತ್ತದೆ. ಇತ್ತ ಮಾರತ್‌ಹಳ್ಳಿ ಕಡೆಗೂ ಬೆಳ್ಳಂದೂರು ಕಡೆಗೂ 4–5 ಕಿಲೋಮೀಟರ್ ದೂರ ವಾಹನಗಳು ನಿಂತು ಬಿಡುತ್ತವೆ.
- ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ ವಾಹನ ನಿಬಿಡ ರಸ್ತೆಯಲ್ಲೇ ಕಾರು ಪಾರ್ಕ್ ಮಾಡಲಾಗುತ್ತದೆ. ಇದರಿಂದ ಸಂಚಾರಕ್ಕೆ ಸಿಗುವ ರಸ್ತೆ ಕಿರಿದಾಗುತ್ತದೆ.

ಜನ ಏನಂತಾರೆ...?

ಕೆ.ಆರ್.ಪುರಂ ರೈಲು ನಿಲ್ದಾಣದಿಂದ ಮಾರತ್ ಹಳ್ಳಿಗೆ ಮಂಗಳವಾರ ಮತ್ತು ಬುಧವಾರ ಬರಲು ಒಂದೂವರೆ ತಾಸು ತೆಗೆದುಕೊಳ್ಳುತ್ತಿದೆ. ಬೇರೆ ದಿನಗಳಲ್ಲಿ ಮುಕ್ಕಾಲು ತಾಸಿನ ಒಳಗೆ ತಲುಪುತ್ತೇವೆ. ಮೆಟ್ರೊ ಶುರುವಾದರೆ 15–20 ನಿಮಿಷದಲ್ಲಿ ತಲುಪಲಿದ್ದೇವೆ.

ಜಯ ಪಾಂಡ್ಯನ್, ಕೆಜಿಎಫ್ ನಿವಾಸಿ, ಖಾಸಗಿ ಕಂಪನಿ ಉದ್ಯೋಗಿ

ವಾಹನದಟ್ಟಣೆ ನಿಯಂತ್ರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಮಾರತ್‌ಹಳ್ಳಿ ಯಲ್ಲಿ ನಾವು ಬಸ್ ತಂಗುದಾಣಗಳಲ್ಲಿ ನಿಂತು ಬಿಎಂಟಿಸಿ ಬಸ್‌ಗಳಿಗೆ ಕಾಯುತ್ತಿದ್ದರೆ, ಪ್ರಯಾಣಿಕರ ದಟ್ಟಣೆ ನೋಡಿ ಬಸ್ ನಿಲ್ಲಿಸದೇ ಮುಂದಕ್ಕೆ ಹೋಗುತ್ತಿದ್ದಾರೆ. ಒಂದು ಕಡೆಯಿಂದ ದಟ್ಟಣೆ ಸಮಸ್ಯೆ, ಇನ್ನೊಂದು ಕಡೆ ಇಂಥ ನಿರ್ಲಕ್ಷ್ಯದ ಸಮಸ್ಯೆ ನಮ್ಮನ್ನು ಕಾಡುತ್ತಿದೆ.

ಸೂರ್ಯ, ಮಾರತ್ ಹಳ್ಳಿಯ ಕಂಪನಿ ಉದ್ಯೋಗಿ

ಬೆಂಗಳೂರು ಪೂರ್ವಯೋಜಿತ ನಗರವಲ್ಲ. ಅಡ್ಡಾದಿಡ್ಡಿ ಬೆಳೆಯುತ್ತಾ ಹೋಗಿದೆ. ಸದ್ಯ ಕಾಣುವ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಹೋಗುತ್ತಾರೆ. 25–50 ವರ್ಷಗಳ ನಂತರ ಎದುರಾಗುವ ಸಮಸ್ಯೆ ಏನು ಎಂದು ಈಗಲೇ ಯೋಚಿಸಿ ಅದಕ್ಕೆ ತಕ್ಕಂತೆ ರಸ್ತೆಗಳನ್ನು ರೂಪಿಸುವ ಕೆಲಸಗಳಾಗುತ್ತಿಲ್ಲ. ಈಗ ಮೆಟ್ರೊ ಕಾಮಗಾರಿ ನಡೆಯುತ್ತಿದೆ. ಮೆಟ್ರೊ ಸಂಪೂರ್ಣಗೊಂಡು ಜನರು ಅದರಲ್ಲಿ ಸಂಚರಿಸಲು ಆರಂಭಿಸಿದಾಗ ವಾಹನದಟ್ಟಣೆ ಕಡಿಮೆಯಾಗಲಿದೆ ಎಂಬುದು ಈಗಿನ ವಾದ. ಆದರೆ, ಮೆಟ್ರೊ ಆರಂಭವಾಗಲು ಇನ್ನೂ ಎರಡು ವರ್ಷ ಬೇಕು. ಅಷ್ಟು ಹೊತ್ತಿಗೆ ವಾಹನಗಳ ಪ್ರಮಾಣ ಮತ್ತಷ್ಟು ಹೆಚ್ಚಿರುತ್ತದೆ. ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕು.

ಮಂಜುನಾಥ್, ಇಸ್ರೊ ಜಂಕ್ಷನ್, ಕಾರ್ತಿಕ್‌ನಗರ

ವಾಹನ ಸಂಚಾರದಲ್ಲಿ ಸಿಲುಕಿಕೊಂಡರೆ ನಮಗೆ ಸಿಗುವ ಬಾಡಿಗೆಯು ಗ್ಯಾಸ್ ತುಂಬಿಸಲೂ ಸಾಕಾಗುವುದಿಲ್ಲ. ಅಲ್ಲದೇ ಗ್ಯಾಸ್ ಬೆಲೆ ಮೂರು ದಿನಗಳಲ್ಲಿ ಕೆ.ಜಿ.ಗೆ ₹ 8 ಜಾಸ್ತಿಯಾಗಿದೆ. ಅದಕ್ಕಾಗಿಯೇ ಮಾರತ್ ಹಳ್ಳಿ, ಬೆಳಂದೂರು ರಸ್ತೆಗೆ ಆಟೊದವರು ಬರಲು ಹಿಂಜರಿಯುತ್ತಿದ್ದಾರೆ.

ಮಂಜು, ಆಟೊ ಚಾಲಕ, ಕಾಡುಬೀಸನಹಳ್ಳಿ

ಬೊಮ್ಮನಹಳ್ಳಿ, ಬಿಟಿಎಂ ಲೇಔಟ್, ಎಚ್‌ಎಸ್‌ಆರ್ ಲೇಔಟ್ ಹೀಗೆ ಎಲ್ಲ ಕಡೆಗಳಿಂದ ವಾಹನಗಳು ನುಗ್ಗುತ್ತಿರುವುದರಿಂದ ಮಡಿವಾಳದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಸಂಚಾರ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ ಸರಿ ಮಾಡಬಹುದು.

ಸುರೇಶ್, ಆಟೊ ಚಾಲಕ, ಮಡಿವಾಳ

ಸುದ್ದಿ 2 ನಿಮಿಷ

2013ರ ಮರಳು ನೀತಿ ಮರು ಜಾರಿಗೆ ಭಂಡಾರಿ ಒತ್ತಾಯ

ಬೆಂಗಳೂರು: 2016ರಲ್ಲಿ ರೂಪಿಸಿದ್ದ ಖನಿಜ ನಿಯಮಗಳು, 2013ರ ಮರಳು ನೀತಿಯನ್ನೇ ಪುನರ್ ಅನುಷ್ಠಾನಗೊಳಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ ನಂತರ ಮಾತನಾಡಿದ ಅವರು, ಬಿಜೆಪಿ ಅವಧಿಯಲ್ಲಿ ರೂಪಿಸಿದ ಅವೈಜ್ಞಾನಿಕ ನಿಯಮಗಳ ಫಲವಾಗಿ ಮರಳಿನ ಸಮಸ್ಯೆ ತೀವ್ರವಾಗಿದೆ. ಮರಳು ತೆಗೆಯುವ ಸಾಂಪ್ರದಾಯಿಕ ಸಮುದಾಯಕ್ಕೆ ಪರವಾನಗಿ ನೀಡಬೇಕು. ಹೊಸದಾಗಿ ಅರ್ಜಿ ಕರೆದು ತಾತ್ಕಾಲಿಕ ಪರವಾನಗಿ ವಿತರಿಸಬೇಕು. ಗಣಿ ಮಂಜೂರಾತಿಗೆ ಪರಿಸರ ನಿರಾಕ್ಷೇಪಣಾ ಪತ್ರ ನೀಡಲು ಜಿಲ್ಲಾ ಮಟ್ಟದಲ್ಲೇ ಸಮಿತಿ ರಚಿಸಬೇಕು. ಆಯಾ ಜಿಲ್ಲೆಗಳ ಹಂತದಲ್ಲೇ ಅನುಮತಿ ನೀಡಬೇಕು. ಕರಾವಳಿ ಜಿಲ್ಲೆಗಳ ನದಿಪಾತ್ರದಲ್ಲಿ ಸಿಆರ್‌ಜೆಡ್ ನಿಯಮದಂತೆ ಮರಳು ತೆಗೆಯಲು ಅವಕಾಶ ಕಲ್ಪಿಸಬೇಕು ಎಂದರು.

ಮರಳು, ಕೆಂಪುಕಲ್ಲು, ಕೆಂಪುಮಣ್ಣು, ಕಟ್ಟಡಕಲ್ಲು ಹಾಗೂ ಜಲ್ಲಿಕಲ್ಲಿಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಏಕರೂಪದ ದರ ನಿಗದಿ ಮಾಡಬೇಕು. ಅವುಗಳ ಗಣಿಗಾರಿಕೆಗೆ ಇರುವ ತೊಡಕುಗಳನ್ನು ನಿವಾರಿಸಲು 2016ರ ತಿದ್ದುಪಡಿ ನಿಯಮಗಳನ್ನೇ ಜಾರಿಗೊಳಿಸುವ ಅಗತ್ಯದ ಕುರಿತು ಸಿಎಂಗೆ ಮನವರಿಕೆ ಮಾಡಲಾಗಿದೆ. ಕರಾವಳಿಯ ಭಾಗದ ನೈಸರ್ಗಿಕ ಉತ್ಪನ್ನಗಳಾದ ಕೆಂಪುಕಲ್ಲು, ಕೆಂಪುಮಣ್ಣು ಹಾಗೂ ಮರಳನ್ನು ಇತರೆ ಜಿಲ್ಲೆಗಳಿಗೆ ಸಾಗಣೆ ಮಾಡಲು ನಿರ್ಬಂಧ ಹಾಕಬೇಕು. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಕಲ್ಲಿನ ಗುತ್ತಿಗೆ ಪಡೆಯಲು ಇರುವ ಎರಡು ಎಕರೆ ಮಿತಿಯನ್ನು ಸಡಿಲಿಸಿ, ಅರ್ಧ ಎಕರೆಗೆ ನಿಗದಿ ಮಾಡಬೇಕು. ಜಲ್ಲಿಕಲ್ಲು, ಎಂ-ಸ್ಯಾಂಡ್ ಘಟಕಗಳಿಗೆ ತುರ್ತು ಪರವಾನಗಿ ನೀಡಲು ಕ್ರಮ ಕೈಗೊಳ್ಳಲು ಮನವಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಉತ್ಪನ್ನಗಳ ಪ್ರದರ್ಶನಕ್ಕೆ ಶಾಶ್ವತ ‘ಯೂನಿಟಿ ಮಾಲ್’

ಬೆಂಗಳೂರು: ಭಾರತದ ಎಲ್ಲ ರಾಜ್ಯಗಳು, ಕರ್ನಾಟಕದ ಎಲ್ಲ ಜಿಲ್ಲೆಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಮೈಸೂರಿನಲ್ಲಿ ಶಾಶ್ವತ ‘ಯೂನಿಟಿ ಮಾಲ್’ ನಿರ್ಮಾಣಕ್ಕೆ ಶೀಘ್ರ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ರಾಜ್ಯದ ಒಂದು ಜಿಲ್ಲೆ ಒಂದು ಉತ್ಪನ್ನ ಹಾಗೂ ಕರಕುಶಲ ಉತ್ಪನ್ನಗಳಿಗೆ ಪ್ರಮುಖ ವಾಣಿಜ್ಯ ಕೇಂದ್ರವಾಗಿ ‘ಯೂನಿಟಿ ಮಾಲ್’ ಕಾರ್ಯನಿರ್ವಹಿಸಲಿದೆ. ದೇಶದ ಪಾರಂಪರಿಕ, ಸಾಂಸ್ಕೃತಿಕ ತಾಣವಾಗಿ ಅಭಿವೃದ್ಧಿಗೊಳ್ಳುವ ಮೂಲಕ ದೇಶ ಹಾಗೂ ವಿದೇಶಗಳ ಪ್ರವಾಸಿಗರನ್ನು ಸೆಳೆಯಲಿದೆ ಎಂದರು.

ಕೇಂದ್ರ ಸರ್ಕಾರ ವಿಶೇಷ ನೆರವು ಯೋಜನೆಯಲ್ಲಿ ₹ 193 ಕೋಟಿ ಸಾಲದ ನೆರವು ನೀಡಿದೆ. ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಈಗಾಗಲೇ 6.5 ಎಕರೆ ಜಾಗ ಗುರುತಿಸಲಾಗಿದೆ. ಪ್ರತಿ ರಾಜ್ಯಗಳಿಗೆ ಒಂದು, ರಾಜ್ಯದ ಪ್ರತಿ ಜಿಲ್ಲೆಗಳಿಗೆ ಒಂದರಂತೆ ಒಟ್ಟು 175 ವಾಣಿಜ್ಯ ವಿಭಾಗಗಳನ್ನು ನಿರ್ಮಾಣ ಮಾಡ ಲಾಗುವುದು. ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಖಾಸಗಿ– ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ವಹಣೆ ಮಾಡಲಾಗುವುದು ಎಂದರು.

43 ಕೇಬಲ್ ಅಳವಡಿಕೆ ಕೆಲಸ ಪೂರ್ಣ • 197 ಕೇಬಲ್ ಅಳವಡಿಕೆ ಬಾಕಿ

ಮೇಲ್ಸೇತುವೆ: ಲಾರಿ, ಬಸ್ ಸಂಚಾರ ಜನವರಿಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಮೇಲ್ಸೇತುವೆಯಲ್ಲಿ ನಡೆಯುತ್ತಿದ್ದ ಕೇಬಲ್ ಬದಲಾವಣೆ ಕೆಲಸ ಚುರುಕುಗೊಂಡಿದ್ದು ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಮುಕ್ತಾಯವಾಗುವ ಸಾಧ್ಯತೆಯಿದೆ.

ಕಾಮಗಾರಿ ಮುಗಿದು ಕೆಲವೇ ದಿನಗಳಲ್ಲಿ ಪೀಣ್ಯ ಮೇಲ್ಸೇತುವೆಯಲ್ಲಿ ಭಾರಿ ವಾಹನ ಸಂಚಾರಕ್ಕೆ ಅವಕಾಶ ಲಭಿಸುವ ಸಾಧ್ಯತೆ ಇದೆ.

‘ಗೊರಗೊಂಟೆಪಾಳ್ಯ ವೃತ್ತದಿಂದ ಕೆನ್ನಮೆಟಲ್ ವಿಡಿಯಾ ಜಂಕ್ಷನ್‌ವರೆಗೆ ಈ ಮೇಲ್ಸೇತುವೆ ಇದೆ. ಒಟ್ಟು 120 ಪಿಲ್ಲರ್‌ಗಳಿವೆ. ಎರಡು ಪಿಲ್ಲರ್‌ಗಳ ನಡುವೆ ಕೇಬಲ್ ಅಳವಡಿಕೆ ಕಾರ್ಯ ನಡೆಯುತ್ತಿದೆ. ಒಟ್ಟು 43 ಕೇಬಲ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 197 ಕೇಬಲ್‌ಗಳ ಅಳವಡಿಕೆ ಬಾಕಿಯಿದೆ. ಎರಡು ಪಿಲ್ಲರ್ ನಡುವೆ ಕೇಬಲ್ ಅಳವಡಿಸಲು ಸ್ಥಳಾವಕಾಶ ಕಲ್ಪಿಸಲಾಗಿತ್ತು. ಕೆಲವು ಕೇಬಲ್‌ಗಳು ತುಕ್ಕು ಹಿಡಿದಿವೆ. ಅವುಗಳನ್ನು ತೆರವುಗೊಳಿಸುವ ಕೆಲಸ ನಡೆಯುತ್ತಿದೆ. ಹೊಸ ಕೇಬಲ್ ಅಳವಡಿಸಿದರೆ ಪಿಲ್ಲರ್ ಸಾಮರ್ಥ್ಯ ಹೆಚ್ಚಲಿದೆ. ಬಹುತೇಕ ಜನವರಿ ವೇಳೆಗೆ ಭಾರಿ ವಾಹನಗಳ ಸಂಚಾರ ಸಾಧ್ಯವಾಗಲಿದೆ’ ಎಂದು ಮೇಲ್ಸೇತುವೆ ಅಧ್ಯಯನ ಸಮಿತಿ ಸದಸ್ಯ ಚಂದ್ರ ಕಿಶನ್ ತಿಳಿಸಿದ್ದಾರೆ.

8ನೇ ಮೈಲಿನ ಜಂಕ್ಷನ್‌ನ ಸಮೀಪದ 102 ಹಾಗೂ 103ನೇ ಪಿಲ್ಲರ್ ನಡುವೆ ಮೂರು ಕೇಬಲ್‌ಗಳು ಬಾಗಿದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ 2021ರ ಡಿಸೆಂಬರ್‌ನಿಂದ ಎಲ್ಲ ಬಗೆಯ ವಾಹನ ಸಂಚಾರವನ್ನು ಮೇಲ್ಸೇತುವೆಯಲ್ಲಿ ನಿರ್ಬಂಧಿಸಲಾಗಿತ್ತು. ಅದಾದ ಮೇಲೆ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು ಪರಿಶೀಲನೆ ನಡೆಸಿ ಲಾರಿ, ಬಸ್ ಹಾಗೂ ಸರಕು ಸಾಗಣೆ ವಾಹನ ಸಂಚಾರ ನಿರ್ಬಂಧಿಸುವಂತೆ ತಜ್ಞರು ವರದಿ ನೀಡಿದ್ದರು.

ತಜ್ಞರ ಸೂಚನೆಯಂತೆ 2022ರ ಫೆಬ್ರುವರಿ 16ರಿಂದ ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು. ಮೇಲ್ಸೇತುವೆಯಲ್ಲಿ ಕಾರು, ಬೈಕ್‌ಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.

ಮೇಲ್ಸೇತುವೆಯಲ್ಲಿ ಭಾರಿ ವಾಹನ ಸಂಚಾರ ಬಂದ್ ಆಗಿದ್ದರ ಪರಿಣಾಮ ತುಮಕೂರು ರಸ್ತೆಯಲ್ಲಿ ನಿತ್ಯವೂ ವಾಹನ ದಟ್ಟಣೆ ಕಂಡುಬರುತ್ತಿದೆ. ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ವಾರಾಂತ್ಯದಲ್ಲೂ ಸವಾರರು ಹೈರಾಣಾಗುತ್ತಿದ್ದಾರೆ.

ಜತೆಗೆ ಗೊರಗುಂಟೆಪಾಳ್ಯದಿಂದ ನಾಗಸಂದ್ರದವರೆಗೂ ಸೇವಾ ರಸ್ತೆಯಲ್ಲಿ(ಸರ್ವೀಸ್ ರೋಡ್) ಸ್ಕೈವಾಕ್ ಇಲ್ಲದೆ ಪಾದಚಾರಿಗಳು ರಸ್ತೆ ದಾಟಲು ಪರದಾಡುತ್ತಿದ್ದಾರೆ. ಇದರಿಂದ ಅಪಘಾತಗಳೂ ಪದೇ ಪದೇ ವರದಿಯಾಗುತ್ತಿವೆ. ಭಾರಿ ವಾಹನಗಳ ಸಂಚಾರಕ್ಕೆ ಮೇಲ್ಸೇತುವೆ ಮುಕ್ತವಾದರೆ ಸೇವಾ ರಸ್ತೆ ಹಾಗೂ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ತಗ್ಗಲಿದೆ.

ಪೀಣ್ಯ ಮೇಲ್ಸೇತುವೆಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಭಾರಿ ವಾಹನಗಳು ಕೆಳ ಭಾಗದಲ್ಲಿ ಸಂಚರಿಸುತ್ತಿವೆ. (ಎಡಚಿತ್ರ) ಮೇಲ್ಸೇತುವೆಯ ಪಿಲ್ಲರ್ ದುರಸ್ತಿ ಕಾರ್ಯ ನಡೆಯುತ್ತಿದೆ

ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

‘ಗ್ಯಾರಂಟಿ ಕಾನೂನು ಬಾಹಿರವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳು ಪ್ರಜಾಪ್ರತಿನಿಧಿ ಕಾಯ್ದೆಯ ಕಲಂ 123ರ ಚುನಾವಣಾ ಅಕ್ರಮ ಅಥವಾ ಭ್ರಷ್ಟಾಚಾರದ ಅರ್ಥವ್ಯಾಪ್ತಿಗೆ ಅನ್ವಯ ಆಗುವುದಿಲ್ಲ’ ಎಂದು ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದ ಶಾಸಕ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಹೈಕೋರ್ಟ್‌ಗೆ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ.

ಜಮೀರ್ ಅಹ್ಮದ್ ಖಾನ್ ಅವರನ್ನು ಅನರ್ಹಗೊಳಿಸುವಂತೆ ಕೋರಿ ಶಶಾಂಕ್ ಜೆ.ಶ್ರೀಧರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಜಮೀರ್ ಅಹ್ಮದ್ ಪರ ವಕೀಲರು ನ್ಯಾಯಪೀಠಕ್ಕೆ 70 ಪುಟಗಳ ಲಿಖಿತ ಹೇಳಿಕೆ ಸಲ್ಲಿಸಿದ್ದು, ‘ಚುನಾವಣಾ ಪ್ರಣಾಳಿಕೆ ವ್ಯಕ್ತಿಗತವಾಗಿರುವುದಿಲ್ಲ. ಅವು ಪಕ್ಷಕ್ಕೆ ಸಂಬಂಧಿಸಿರುತ್ತವೆ. ಈ ಅರ್ಜಿಗೆ ಸೂಕ್ತ ಸಾಕ್ಷಿ, ಪುರಾವೆ ಮತ್ತು ದಾಖಲೆಗಳಿಲ್ಲ. ಹೀಗಾಗಿ, ಅರ್ಜಿದಾರರ ಮನವಿಯನ್ನು ಪರಿಗಣಿಸಬಾರದು’ ಎಂದು ಮನವಿ ಮಾಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಪ್ರತ್ಯುತ್ತರ ನೀಡುವಂತೆ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿತು. ಜಮೀರ್, 2023ರ ವಿಧಾನಸಭೆ ಚುನಾವಣೆಯಲ್ಲಿ ಮತದಾರರಿಗೆ ಗ್ಯಾರಂಟಿಗಳ ಆಮಿಷ ವೊಡ್ಡಿ, ಅಕ್ರಮ ಎಸಗಿ ಆಯ್ಕೆಯಾಗಿದ್ದಾರೆ. ಆದ್ದರಿಂದ, ಅವರನ್ನು ಅನರ್ಹಗೊಳಿಸಬೇಕು’ ಎಂಬುದು ಅರ್ಜಿದಾರರ ಮನವಿಯಾಗಿತ್ತು.

ಕತ್ತರಿಸಿದ್ದ ನಾಲ್ಕು ಬೆರಳು ಮರುಜೋಡಣೆ

ಬೆಂಗಳೂರು: ವಿದ್ಯುತ್ ಚಾಲಿತ ಮೇವು ಕಟಾವು ಯಂತ್ರದಲ್ಲಿ ಕೆಲಸ ಮಾಡುತ್ತಿರುವಾಗ ಕತ್ತರಿಸಿ ಹೋಗಿದ್ದ 44 ವರ್ಷದ ಮಹಿಳೆಯ ನಾಲ್ಕು ಬೆರಳುಗಳನ್ನು ಹಾಸ್ಮಾಟ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಮರುಜೋಡಿಸಿದ್ದಾರೆ.

ಕೋಲಾರದ ಮಂಜುಳಾ ಎಂಬುವವರ ಬೆರಳುಗಳು ಕತ್ತರಿಸಿಹೋಗಿದ್ದವು. ಅ.1ರಂದು ಈ ಘಟನೆ ನಡೆದಿತ್ತು. ಅವರ ಹೆಬ್ಬೆರಳು, ತೋರು ಬೆರಳು, ಮಧ್ಯ ಬೆರಳು ಹಾಗೂ ಉಂಗುರ ಬೆರಳು ಸಂಪೂರ್ಣ ಕತ್ತರಿಸಿ ಹೋಗಿತ್ತು. ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಇಲ್ಲಿನ ಹಾಸ್ಮಾಟ್ ಆಸ್ಪತ್ರೆಗೆ ಕರೆತರಲಾಗಿತ್ತು. ಅವರ ಕತ್ತರಿಸಿದ ಬೆರಳುಗಳನ್ನು ಪೆಟ್ಟಿಗೆಯಲ್ಲಿ ಇರಿಸಿ, ತರಲಾಗಿತ್ತು. ಅವರು ಘಟನೆ ನಡೆದ 4 ಗಂಟೆಯ ಒಳಗಡೆ ಆಸ್ಪತ್ರೆಗೆ ಬಂದಿದ್ದರಿಂದ ಮರುಜೋಡಣೆ ಸಾಧ್ಯವಾಗಿದೆ.

‘ಕತ್ತರಿಸಿದ ಬೆರಳುಗಳನ್ನು ಮೊದಲು ಪರೀಕ್ಷಿಸಲಾಯಿತು. ನಮ್ಮ ವೈದ್ಯರ ತಂಡವು ಹಾನಿಯಾಗಿದ್ದ ರಕ್ತನಾಳಗಳು, ನರಗಳು ಮತ್ತು ಸ್ನಾಯುರಜ್ಜುಗಳನ್ನು ಪುನರ್ ನಿರ್ಮಿಸಿ, 12 ಗಂಟೆಗಳ ಅವಧಿಯಲ್ಲಿ ಶಸ್ತ್ರಚಿಕಿತ್ಸೆ ಪೂರ್ಣಗೊಳಿಸಿತು. ಇದರಿಂದ ಮಹಿಳೆ ಚೇತರಿಸಿಕೊಂಡಿದ್ದು, ಬೆರಳುಗಳಲ್ಲಿ ಈ ಮೊದಲಿನಂತೆ ರಕ್ತ ಸಂಚಲನ ಸಾಧ್ಯವಾಗಿದೆ. ಎರಡರಿಂದ ಮೂರು ತಿಂಗಳ ಅವಧಿಯಲ್ಲಿ ಮಹಿಳೆ ಮೊದಲಿನಂತೆ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು’ ಎಂದು ಆಸ್ಪತ್ರೆಯ ಅಧ್ಯಕ್ಷ ಡಾ. ಥಾಮಸ್ ಚಾಂಡಿ ತಿಳಿಸಿದ್ದಾರೆ.

‘ಕಡಿಮೆ ದರದಲ್ಲಿ ಕಟಾವು ಯಂತ್ರಗಳು ದೊರೆಯುತ್ತಿರುವುದರಿಂದ ಇದನ್ನು ಬಳಸುವವರ ಸಂಖ್ಯೆ ಹೆಚ್ಚಳವಾಗಿದೆ. ಇವು ಬೆರಳು ಹಾಗೂ ಕೈಗಳಿಗೆ ಹಾನಿ ಮಾಡುವ ಸಾಧ್ಯತೆ ಇರುತ್ತದೆ. ರುಬ್ಬುವ ಯಂತ್ರಗಳಲ್ಲಿ ಕೈ ಹಾಕುವುದರಿಂದಲೂ ಬೆರಳುಗಳಿಗೆ ಹಾನಿಯಾಗಲಿದೆ. ಇವುಗಳ ಬಳಕೆ ವೇಳೆ ಎಚ್ಚರವಾಗಿರಬೇಕು’ ಎಂದರು.

‘ತುಂಡಾದ ಅಂಗ ಕೆಲ ಗಂಟೆಗಳವರೆಗೂ ಜೀವಂತವಿರುತ್ತದೆ. ಆ ಅಂಗವನ್ನು ತೇವದ ಬಟ್ಟೆಯಲ್ಲಿ ಸುತ್ತಿ, ಆಸ್ಪತ್ರೆಗೆ ತಂದಲ್ಲಿ ಶಸ್ತ್ರಚಿಕಿತ್ಸೆ ಮಾಡಿ ಮರುಜೋಡಣೆ ಮಾಡಬಹುದು’ ಎಂದು ತಿಳಿಸಿದ್ದಾರೆ.

ಆರೋಗ್ಯ ಯೋಜನೆಯಡಿ ಚಿಕಿತ್ಸೆಗೆ ನಕಾರ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳು ಹಾಗೂ ನೌಕರರಿಗೆ ನಗರದಲ್ಲಿರುವ ಪ್ರಮುಖ ಖಾಸಗಿ ಆಸ್ಪತ್ರೆಯವರು ಆರೋಗ್ಯ ಯೋಜನೆಯಡಿ ಚಿಕಿತ್ಸೆ ನೀಡಲು ನಿರಾಕರಿಸುತ್ತಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ದೂರಿದೆ.

ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಂತೆ (ಸಿಜಿಎಚ್‌ಎಸ್) ಬಿಬಿಎಂಪಿ ಸಿಬ್ಬಂದಿಗೆ ಆರೋಗ್ಯ ಸೇವೆ ಕಲ್ಪಿಸಲಾಗಿದೆ. ಆದರೆ, ಈ ಯೋಜನೆಯಡಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಪ್ರಮುಖ ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ನೀಡುತ್ತಿಲ್ಲ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಅವರಿಗೆ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಪತ್ರ ಬರೆದಿದ್ದಾರೆ.

‘ಬಿಬಿಎಂಪಿ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಗಂಭೀರ ಕಾಯಿಲೆಗೆ ಗುಣಮಟ್ಟದ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ. ಖಾಸಗಿ ಆಸ್ಪತ್ರೆಗಳು ಕೇಂದ್ರ ಸರ್ಕಾರದ ಯೋಜನೆಯನ್ನೇ ನಿರಾಕರಿಸುತ್ತಿವೆ. ಆದರೆ, ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುತ್ತಿದ್ದೇವೆ ಎಂದು ಲಕ್ಷಾಂತರ ತೆರಿಗೆಯನ್ನು ಉಳಿಕೊಳ್ಳುತ್ತಾರೆ. ಇಂತಹ ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಳ್ಳಬೇಕು. ಆರೋಗ್ಯ ಯೋಜನೆಯಡಿ ಚಿಕಿತ್ಸೆ ನೀಡುವಂತೆ ತಾಕೀತು ಮಾಡಬೇಕು’ ಎಂದು ಅಮೃತ್‌ರಾಜ್ ಆಗ್ರಹಿಸಿದ್ದಾರೆ.

ಸದ್ಯಕ್ಕೆ ಕ್ರಮ ಇಲ್ಲ: ‘ಆರೋಗ್ಯ ಯೋಜನೆಯಡಿ ನಗದುರಹಿತ ಚಿಕಿತ್ಸೆ ನೀಡಲು ಸುಮಾರು 70 ಆಸ್ಪತ್ರೆಗಳೊಂದಿಗೆ ನಾವು ಒಪ್ಪಂದ ಮಾಡಿಕೊಂಡಿದ್ದೇವೆ. ಆದರೆ, ಕೆಲವು ಖಾಸಗಿ ಆಸ್ಪತ್ರೆಗಳು ಈ ಒಪ್ಪಂದ ಮಾಡಿಕೊಂಡಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕ್ಸ್) ಡಾ. ನಿರ್ಮಲ ಬುಗ್ಗಿ ತಿಳಿಸಿದರು.

‘ಮಣಿಪಾಲ್, ಅಪೊಲೊ, ಮಾರ್ಥಾಸ್ ಸೇರಿದಂತೆ ಕೆಲವು ಪ್ರಮುಖ ಆಸ್ಪತ್ರೆಗಳು ಈ ಒಪ್ಪಂದ ಮಾಡಿಕೊಂಡಿಲ್ಲ. ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಬೇಕೆಂದು ಸಂಘದವರು ಮನವಿ ಮಾಡಿದ್ದಾರೆ. ಆದರೆ ಸದ್ಯದಲ್ಲಿ ಈ ರೀತಿಯ ಒಪ್ಪಂದ ಮಾಡಿಕೊಳ್ಳುವ ಪ್ರಸ್ತಾವ ಇಲ್ಲ. ಅದು ಮುಖ್ಯ ಆಯುಕ್ತರ ಮಟ್ಟದಲ್ಲಿ ತೀರ್ಮಾನ ಆಗಬೇಕು’ ಎಂದು ಮಾಹಿತಿ ನೀಡಿದರು.

40 ನಾನ್ ಎಸಿ ಸ್ಲೀಪರ್‌ಗಳಿಗೆ ಚಾಲನೆ ನೀಡಲಿರುವ ಮುಖ್ಯಮಂತ್ರಿ

ಕೆಎಸ್‌ಆರ್‌ಟಿಸಿ ‘ಪಲ್ಲಕ್ಕಿ’ ಇಂದಿನಿಂದ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾನಿಯಂತ್ರಿತ ಬಸ್‌ಗಳನ್ನಷ್ಟೇ ಬ್ರ್ಯಾಂಡ್ ಮಾಡುತ್ತಿದ್ದ ಕೆಎಸ್‌ಆರ್‌ಟಿಸಿ ಇದೇ ಮೊದಲ ಬಾರಿಗೆ ಹವಾನಿಯಂತ್ರರಹಿತ ಬಸ್‌ಗಳನ್ನು ‘ಪಲ್ಲಕ್ಕಿ’ ಎಂಬ ಹೊಸ ಬ್ರ್ಯಾಂಡ್ ಮಾಡಿ ರಸ್ತೆಗಿಳಿಸುತ್ತಿದೆ. ಅ.7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ‘ಪಲ್ಲಕ್ಕಿ’ಗೆ ಚಾಲನೆ ನೀಡಲಿದ್ದಾರೆ.

ಪ್ರತಿ ಬಸ್‌ಗೆ ₹ 46 ಲಕ್ಷ ವೆಚ್ಚವಾಗಿದ್ದು, ನಿಗಮವೇ ವೆಚ್ಚವನ್ನು ಭರಿಸಿದೆ. ಮಂಗಳೂರು, ಉಡುಪಿ, ಪುತ್ತೂರು, ಶಿವಮೊಗ್ಗ, ಕಾರವಾರ, ಬೆಳಗಾವಿ, ಹುಬ್ಬಳ್ಳಿ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ ಸಹಿತ ರಾಜ್ಯದ ಬೇರೆ ಬೇರೆ ಊರುಗಳಿಗೆ ಸಂಚರಿಸಲಿವೆ. ಜೊತೆಗೆ ಹೊರ ರಾಜ್ಯದ ಪಾಂಡಿಚೇರಿ, ಚೆನ್ನೈ, ಕೊಯಮತ್ತೂರು, ಮಂತ್ರಾಲಯ, ಕುಂಭಕೋಣಕ್ಕೆ ಪ್ರಯಾಣಿಸುವವರಿಗೂ ‘ಪಲ್ಲಕ್ಕಿ’ ಬಸ್ ಸೌಲಭ್ಯ ಸಿಗಲಿದೆ.

100 ಸಾರಿಗೆ ಬಸ್: ಇದೇ ಕಾರ್ಯಕ್ರಮದಲ್ಲಿ ಉನ್ನತೀಕರಿಸಲಾಗಿರುವ 100 ಸಾರಿಗೆ ಬಸ್‌ಗಳಿಗೂ ಶನಿವಾರ ಚಾಲನೆ ದೊರೆಯಲಿದೆ. ಈ ಬಸ್‌ಗಳಲ್ಲಿ ಸೀಟುಗಳ ಸಂಖ್ಯೆಯನ್ನು 54/56ರಿಂದ 51ಕ್ಕೆ ಇಳಿಸಲಾಗಿದೆ. ಕಿಟಕಿ, ಮುಂಭಾಗದ ಗಾಜುಗಳನ್ನು ದೊಡ್ಡದಾಗಿ ಮಾಡಲಾಗಿದೆ. ಉತ್ತಮ ಸೀಟು ಅಳವಡಿಸಲಾಗಿದೆ. ಎಲ್ಲ ಜಿಲ್ಲೆಗಳಿಗೆ ಈ ಸಾರಿಗೆ ಬಸ್‌ಗಳು ಸಂಚರಿಸಲಿವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉದ್ಘಾಟನೆ ಕಾರ್ಯಕ್ರಮ: ‘ಸಂತೋಷವು ಪ್ರಯಾಣಿಸುತ್ತಿದೆ...’ ಉಪಶೀರ್ಷಿಕೆಯೊಂದಿಗೆ ಸಂಚಾರ ಆರಂಭಿಸುತ್ತಿರುವ ‘ಪಲ್ಲಕ್ಕಿ’ ಬಸ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪೂರ್ವದ್ವಾರದಲ್ಲಿ ಇಂದು ಚಾಲನೆ ನೀಡಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಕೆಎಸ್‌ಆರ್‌ಟಿಸಿಯ ನಾನ್ ಎ.ಸಿ ಪಲ್ಲಕ್ಕಿ ಬಸ್

ಜನರ ಅಭಿರುಚಿಗೆ ತಕ್ಕಂತೆ ಬಸ್‌ಗಳನ್ನು ಒದಗಿಸಲಾಗುತ್ತಿದೆ. ಎಸಿ ಬಸ್‌ಗಳಿಗಿಂತ ನಾನ್ ಎಸಿ ಬಸ್‌ಗಳಿಗೆ ಪ್ರಯಾಣಿಕರಿಂದ ಹೆಚ್ಚು ಬೇಡಿಕೆ ಬರುತ್ತಿದೆ.

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

ಅನುಕಂಪ ಆಧಾರದ ನೌಕರಿ: ಆದೇಶ ಪತ್ರ ವಿತರಣೆ

ಬೆಂಗಳೂರು: ಬಿಎಂಟಿಸಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಅರ್ಹರಿರುವ 200 ಜನರಿಗೆ ಸಚಿವ ರಾಮಲಿಂಗಾ ರೆಡ್ಡಿಯವರು ಶುಕ್ರವಾರ ನೇಮಕಾತಿ ಆದೇಶ ಪತ್ರವನ್ನು ವಿತರಿಸಿದರು.

546 ಅರ್ಹ ಅಭ್ಯರ್ಥಿಗಳಿದ್ದಾರೆ. ಉಳಿದವರಿಗೆ ಮುಂದಿನ ದಿನಗಳಲ್ಲಿ ನೌಕರಿ ನೀಡಲು ಪ್ರಯತ್ನಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಅಸೋಸಿಯೇಷನ್ ಆಫ್ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ (ಎಎಸ್‌ಆರ್‌ಟಿಯು) ವತಿಯಿಂದ ಗುಜರಾತ್‌ನ ಅಹಮದಾಬಾದ್‌ನಲ್ಲಿ ಆಯೋಜಿಸಿದ್ದ ಅಂತರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಕ್ರೀಡಾಕೂಟದಲ್ಲಿ ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನ, ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಬೆಳ್ಳಿ, ಡಬಲ್ಸ್‌ನಲ್ಲಿ ಕಂಚು ಪಡೆದ ಬಿಎಂಟಿಸಿ ತಂಡದ ಸದಸ್ಯರನ್ನು ಗೌರವಿಸಲಾಯಿತು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ., ಮಾಹಿತಿ ತಂತ್ರಜ್ಞಾನದ ನಿರ್ದೇಶಕಿ ಸ್ನೇಹಲ್ ಆರ್. ಇದ್ದರು.

‘ಸನಾತನ ಧರ್ಮ ವಿರೋಧಿಸಲು ಕೈಹಾಕಬೇಡಿ’

ಧಾರವಾಡ: ‘ಸುಖಸಂತೋಷದಿಂದ ಬದುಕಲು ಸಮಾಜದ ಎಲ್ಲರೂ ಅಳವಡಿಸಿಕೊಳ್ಳಬೇಕಾಗಿರುವ ನೀತಿನಿಯಮ ಸನಾತನ ಧರ್ಮ. ಅದನ್ನು ವಿರೋಧಿಸುವುದಕ್ಕೆ ಯಾರೂ ಕೈ ಹಾಕಬಾರದು’ ಎಂದು ಪೇಜಾವರಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ‘ಸಮಾಜದಲ್ಲಿ ಒಮ್ಮೆ ಅಂಥ ಕಿಡಿಗಳನ್ನು ಹಚ್ಚಿದರೆ ಅನರ್ಥಕ್ಕೆ ಎಡೆಯಾಗುತ್ತದೆ. ಮಣಿಪುರ ದಲ್ಲಿ ನಾವು ಅದನ್ನು ಕಾಣುತ್ತಿದ್ದೇವೆ. ಯಾರೂ ಅಂಥ ದುಷ್ಟ ಕಾರ್ಯಗಳಿಗೆ ಕೈಹಾಕಬಾರದು’ ಎಂದರು.

‘ಧರ್ಮ ಎಂದರೆ ಸಮಾಜವನ್ನು ನಿರಂತರವಾಗಿ ಮುನ್ನಡೆಸುವ ಬದುಕಿನ ಸೂತ್ರ. ನಮ್ಮ ಸಂತೋಷಕ್ಕಾಗಿ ಮಾಡುವ ಪ್ರಯತ್ನ ಮತ್ತೊಬ್ಬರ ದುಃಖಕ್ಕೆ ಕಾರಣವಾಗಬಾರದು. ಎಲ್ಲರೂ ಮತ್ತೊಬ್ಬರಿಗೂ ಸುಖವಾಗುವಂತೆ ನಡೆದುಕೊಂಡರೆ ಸಮಾಜದಲ್ಲಿ ಎಲ್ಲರೂ ಸುಖ, ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯ, ಅದೇ ಧರ್ಮ. ಅದು ಸನಾತನವಾದುದು, ನಿತ್ಯನಿರಂತರವಾದುದು ಆಗಿರುವುದರಿಂದ ಸನಾತನ ಧರ್ಮ ಎಂದು ಕರೆಯುತ್ತಾರೆ’ ಎಂದರು.

ತನ್ನದೇ ಬ್ಯಾಂಕ್ ಖಾತೆ ಸಂಖ್ಯೆ ನೀಡಿ ಸಿಕ್ಕಿಬಿದ್ದ ಆರೋಪಿ • ಸ್ನೇಹಿತರ ಜೊತೆ ಸೇರಿ ಕೃತ್ಯ

ಹಣಕ್ಕಾಗಿ ಅಪಹರಣ ನಾಟಕ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಕೊಟ್ಟು ಮಗನಂತೆ ನೋಡಿಕೊಳ್ಳುತ್ತಿದ್ದ ಮಾಲೀಕನಿಂದ ಹಣ ದೋಚಲು ಅಪಹರಣ ನಾಟಕವಾಡಿದ್ದ ಕೆಲಸಗಾರ ಸೇರಿ ಮೂವರು ಆರೋಪಿಗಳನ್ನು ಆರ್.ಟಿ. ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ನೂರುಲ್ಲಾ ಹಸನ್ (26), ಅಬೂಬಕರ್ (26) ಹಾಗೂ ಅಲಿ ರಾಜಾ (26) ಬಂಧಿತರು. ಆರ್.ಟಿ. ನಗರ ನಿವಾಸಿ ಆಸೀಫ್ ಹಬೀಬ್ ಮಾಲೀಕತ್ವದ ಕಾರ್ಖಾನೆಯಲ್ಲಿ ಐದು ವರ್ಷಗಳಿಂದ ನೂರುಲ್ಲಾ ಕೆಲಸ ಮಾಡುತ್ತಿದ್ದ. ಮಾಲೀಕರಿಂದ ಹಣ ದೋಚುವ ಉದ್ದೇಶದಿಂದ ಸ್ನೇಹಿತರ ಜೊತೆ ಸೇರಿ ಕೃತ್ಯ ಎಸಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಸೀಫ್ ಅವರು ನೂರುಲ್ಲಾನನ್ನು ಮಗನಂತೆ ನೋಡಿಕೊಳ್ಳುತ್ತಿದ್ದರು. ಆಸೀಫ್ ಬಳಿ ಹೆಚ್ಚು ಹಣವಿರುವುದನ್ನು ನೋಡಿದ್ದ ನೂರುಲ್ಲಾ, 'ಹಣ ದೋಚಿ, ಊರಿಗೆ ಹೋಗಿ ಐಷಾರಾಮಿ ಜೀವನ ನಡೆಸಬೇಕು' ಎಂದುಕೊಂಡಿದ್ದ. ಇದಕ್ಕಾಗಿ ಸ್ನೇಹಿತರ ಸಹಾಯ ಕೇಳಿದ್ದ' ಎಂದು ತಿಳಿಸಿವೆ.

'ನೂರುಲ್ಲಾ ಹಾಗೂ ಸ್ನೇಹಿತರು, ಕ್ಯಾಬ್‌ನಲ್ಲಿ ಇತ್ತೀಚೆಗೆ ಮಂಡ್ಯಕ್ಕೆ ಹೋಗಿದ್ದರು. ಮಾಲೀಕ ಆಸೀಫ್‌ಗೆ ಕರೆ ಮಾಡಿದ್ದ ನೂರುಲ್ಲಾ, 'ನನ್ನನ್ನು ಯಾರೋ ಅಪಹರಿಸಿದ್ದಾರೆ. ₹ 2 ಲಕ್ಷ ನೀಡಿದರೆ ಬಿಡುಗಡೆ ಮಾಡುವುದಾಗಿ ಹೇಳುತ್ತಿದ್ದಾರೆ. ಇಲ್ಲದಿದ್ದರೆ, ಕೊಲೆ ಮಾಡುವುದಾಗಿ ಬೆದರಿಸುತ್ತಿದ್ದಾರೆ' ಎಂದು ಗೋಗರೆದಿದ್ದ. ನಿಜವೆಂದು ನಂಬಿದ್ದ ಆಸೀಫ್, ಹಣ ವರ್ಗಾಯಿಸಲು ಮುಂದಾಗಿದ್ದರು. ನೂರುಲ್ಲಾ ತನ್ನದೇ ಬ್ಯಾಂಕ್ ಖಾತೆ ಸಂಖ್ಯೆ ನೀಡಿದ್ದ. ಇದರಿಂದ ಅನುಮಾನಗೊಂಡ ಆಸೀಫ್, ಠಾಣೆಗೆ ಮಾಹಿತಿ ನೀಡಿದ್ದರು. ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ, ಆರೋಪಿಗಳು ಮಂಡ್ಯದಲ್ಲಿರುವ ಸುಳಿವು ಸಿಕ್ಕಿತ್ತು. ಸ್ಥಳಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ. ನೂರುಲ್ಲಾ ಹಣ ಗಳಿಸಲು ನಾಟಕವಾಡಿದ್ದನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೆಟ್ರೊ ರೈಲಿನಲ್ಲಿ ಗೋಬಿ ತಿಂದವನಿಗೆ ₹500 ದಂಡ

ಅಪರಾಧ ಸುದ್ದಿ

ಬೆಂಗಳೂರು: 'ನಮ್ಮ ಮೆಟ್ರೊ' ರೈಲಿನಲ್ಲಿ ಗೋಬಿ ತಿಂದು ಅದರ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದ ಪ್ರಯಾಣಿಕನಿಗೆ ₹500 ದಂಡ ವಿಧಿಸಲಾಗಿದೆ.

ಜಯನಗರದಿಂದ ಮಲ್ಲೇಶ್ವರ ಸಂಪಿಗೆ ರಸ್ತೆ ನಿಲ್ದಾಣಕ್ಕೆ ರೈಲಿನಲ್ಲಿ ಹೊರಟಿದ್ದ ಪ್ರಯಾಣಿಕ, ರೈಲಿನಲ್ಲಿ ಕುಳಿತು ಗೋಬಿ ತಿಂದಿದ್ದ. ಅದನ್ನು ನೋಡಿದ್ದ ಸ್ನೇಹಿತರು, 'ಮೆಟ್ರೊದಲ್ಲಿ ತಿನ್ನಲು ಅವಕಾಶವಿಲ್ಲ' ಎಂದಿದ್ದರು. ಅದಕ್ಕೆ ಕ್ಯಾರೆ ಎನ್ನದ ಪ್ರಯಾಣಿಕ, ಗೋಬಿ ತಿಂದು ಮುಗಿಸಿದ್ದ.

ಪ್ರಯಾಣಿಕ ಗೋಬಿ ತಿನ್ನುತ್ತಿದ್ದ ವಿಡಿಯೊವನ್ನು ಸ್ನೇಹಿತರೇ ಚಿತ್ರೀಕರಿಸಿದ್ದರು. ಪ್ರಯಾಣಿಕ ಅದೇ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದ. ವಿಡಿಯೊ ನೋಡಿದ್ದ ಬಿಎಂಆರ್‌ಸಿಎಲ್ ಅಧಿಕಾರಿಗಳು, ಪ್ರಯಾಣಿಕನನ್ನು ಪತ್ತೆ ಮಾಡಿ ₹ 500 ದಂಡ ವಿಧಿಸಿದ್ದಾರೆ. ಕೃತ್ಯ ಮರುಕಳಿಸದಂತೆ ಎಚ್ಚರಿಕೆ ನೀಡಿ ಮುಚ್ಚಳಿಕೆ ಬರೆಸಿಕೊಂಡು ಪ್ರಯಾಣಿಕನನ್ನು ಬಿಟ್ಟು ಕಳುಹಿಸಿದ್ದಾರೆ.

'ರೈಲಿನಲ್ಲಿ ಆಹಾರ ಸೇವಿಸುವಂತಿಲ್ಲ. ಗೋಬಿ ತಿಂದಿದ್ದ ಪ್ರಯಾಣಿಕನಿಗೆ ದಂಡ ವಿಧಿಸಿರುವುದು ಇದೇ ಮೊದಲು. ಪ್ರಯಾಣಿಕರು ನಿಯಮಗಳನ್ನು ಪಾಲಿಸಬೇಕು. ಇತರೆ ಪ್ರಯಾಣಿಕರಿಗೆ ತೊಂದರೆ ಉಂಟು ಮಾಡುವ ಹಾಗೂ ಆಪತ್ತು ತರುವ ಯಾವುದೇ ಕೃತ್ಯಗಳನ್ನು ಎಸಗಬಾರದು' ಎಂದು ಬಿಎಂಆರ್‌ಸಿಎಲ್ ಮೂಲಗಳು ಹೇಳಿವೆ.

ರಾಹುಲ್ ಅವಹೇಳನ: ಸೈಬರ್ ಕ್ರೈಂ ಠಾಣೆಯಲ್ಲಿ ಎನ್‌ಸಿಆರ್ ದಾಖಲು

ಬೆಂಗಳೂರು: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿ ಸುಳ್ಳು ಸುದ್ದಿ ಹರಿಬಿಟ್ಟು ಅಪಪ್ರಚಾರ ಮಾಡುತ್ತಿರುವ ಆರೋಪದಡಿ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ.

'ಅವಹೇಳನಕಾರಿ ಪೋಸ್ಟ್ ಬಗ್ಗೆ ಕೆಪಿಸಿಸಿ ಪ್ರಚಾರ ಸಮಿತಿ ಪ್ರಧಾನ ಕಾರ್ಯದರ್ಶಿ ವೈ. ಪುಟ್ಟರಾಜು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ 'ಬಿಜೆಪಿ@4ಇಂಡಿಯಾ' ಖಾತೆಯಲ್ಲಿ ರಾಹುಲ್ ಗಾಂಧಿ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಲಾಗಿದೆ. ರಾಹುಲ್ ಗಾಂಧಿ ಅವರ ಗೌರವಕ್ಕೆ ಧಕ್ಕೆ ತರುವ ಯತ್ನವಿದು. ಬಿಜೆಪಿಯವರು ಉದ್ದೇಶಪೂರ್ವಕವಾಗಿ ಈ ಕೃತ್ಯ ಎಸಗಿದ್ದಾರೆ' ಎಂದು ಪುಟ್ಟರಾಜು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಬಗ್ಗೆ 'ಜೆಡಿಎಸ್ ಕರುನಾಡು' ಖಾತೆಯಲ್ಲೂ ಸುಳ್ಳು ಮಾಹಿತಿ ಪ್ರಕಟಿಸಿ ಅಪಪ್ರಚಾರ ಮಾಡಲಾಗುತ್ತಿದೆ. ತಪ್ಪಿತಸ್ಥರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಿ' ಎಂದು ಅವರು ಆಗ್ರಹಿಸಿದ್ದಾರೆ.

ಚಾಲಕ– ಪ್ರಯಾಣಿಕನ ಮೇಲೆ ಹಲ್ಲೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಅಡ್ಡಗಟ್ಟಿ ಚಾಲಕ ಹಾಗೂ ಪ್ರಯಾಣಿಕರ ಮೇಲೆ ಹಲ್ಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅನಿಲ್ ಮತ್ತು ರಘು ಬಂಧಿತರು. ಇವರಿಬ್ಬರು ಕ್ಯಾಬ್ ಚಾಲಕರು. ಆಟೊ ಚಾಲಕ ನಂಜುಂಡ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಟೊ ಚಾಲಕ ನಂಜುಂಡ, ಉಬರ್ ಕಂಪನಿ ಆ್ಯಪ್ ಬಳಸುತ್ತಿದ್ದಾರೆ. ಅವರು, ಭಾನುವಾರ ತಡರಾತ್ರಿ ಸ್ಯಾಂಕಿ ರಸ್ತೆಯಲ್ಲಿದ್ದರು. ಯುವತಿ ಸೇರಿ ನಾಲ್ವರು ಪ್ರಯಾಣಿಕರು ಆ್ಯಪ್ ಮೂಲಕ ಆಟೊ ಕಾಯ್ದಿರಿಸಿದ್ದರು. ಅವರನ್ನು ಹತ್ತಿಸಿಕೊಂಡಿದ್ದ ನಂಜುಂಡ, ಹೊರಮಾವು ಕಡೆ ಹೊರಟಿದ್ದರು.'

'ಆಟೊ ಅಡ್ಡಗಟ್ಟಿದ್ದ ಆರೋಪಿಗಳು, ಚಾಲಕ ನಂಜುಂಡ ಅವರನ್ನು ಹೊರಗೆ ಎಳೆದು ಹಲ್ಲೆ ಮಾಡಿದ್ದರು. ರಕ್ಷಣೆಗೆ ಹೋದ ಪ್ರಯಾಣಿಕರಿಗೂ ಹೊಡೆದಿದ್ದರು. ಯುವತಿ ಕಾಲಿಗೆ ಬಿದ್ದು ಗೋಗರೆದರೂ ಆರೋಪಿಗಳು ಸುಮ್ಮನಾಗಿರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಚಾಲಕ, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಲು ಮುಂದಾಗಿದ್ದರು. ಆರೋಪಿಗಳು, ಮೊಬೈಲ್ ಕಸಿದುಕೊಂಡಿದ್ದರು. ನಂತರ, ಸ್ಥಳದಿಂದ ಪರಾರಿಯಾಗಿದ್ದರು. ದೂರು ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ವೃತ್ತಿ ವೈಷಮ್ಯದಿಂದಾಗಿ ಗಲಾಟೆ ನಡೆದಿರುವ ಬಗ್ಗೆ ಆರೋಪಿಗಳು ಹೇಳಿಕೆ ನೀಡಿದ್ದಾರೆ. ಆಟೊದಲ್ಲಿದ್ದ ಪ್ರಯಾಣಿಕರ ಬಗ್ಗೆ ಸದ್ಯಕ್ಕೆ ಮಾಹಿತಿ ನೀಡಿಲ್ಲ. ಅವರನ್ನು ಸಂಪರ್ಕಿಸಿ ಹೇಳಿಕೆ ಪಡೆಯಬೇಕಿದೆ' ಎಂದು ತಿಳಿಸಿವೆ.

'ರಾಜಕೀಯಕ್ಕಾಗಿ ಎಚ್‌ಡಿಕೆ, ಸಿಪಿವೈ ಒಟ್ಟಾಗಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರದಲ್ಲಿ ಕಚ್ಚಾಡಿಕೊಂಡು ಜನರಿಗೆ ಪುಕ್ಕಟೆ ಮನರಂಜನೆ ನೀಡುತ್ತಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಬಿಜೆಪಿ ಮುಖಂಡ ಸಿ.ಪಿ. ಯೋಗೇಶ್ವರ್ ಈಗ ಅವಕಾಶವಾದಿ ರಾಜಕೀಯಕ್ಕಾಗಿ ಕೈಜೋಡಿಸಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ಸಮಿತಿ ಉಪಾಧ್ಯಕ್ಷ ರಮೇಶ್ ಬಾಬು ಟೀಕಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೀರ್ಘ ಕಾಲದಿಂದಲೂ ಕುಮಾರಸ್ವಾಮಿ ಮತ್ತು ಯೋಗೇಶ್ವರ್ ಪರಸ್ಪರ ವಿರುದ್ಧವಾಗಿ ರಾಜಕಾರಣ ಮಾಡುತ್ತಾ ಬಂದಿದ್ದಾರೆ. 2019ರಲ್ಲಿ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನವಾದಾಗ ವಾಚಾಮಗೋಚರವಾಗಿ ನಿಂದಿಸಿಕೊಂಡಿದ್ದರು. ಈಗ ಇಬ್ಬರೂ ಒಟ್ಟಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಸದ ಡಿ.ಕೆ. ಸುರೇಶ್ ಅವರ ವಿರುದ್ಧ ವಾಗ್ದಾಳಿ ನಡೆಸುತ್ತಿರುವುದು ಅವಕಾಶವಾದಿತನಕ್ಕೆ ಸಾಕ್ಷ್ಯ' ಎಂದರು.

'ತಮ್ಮ ಸರ್ಕಾರ ಉರುಳಿಸಲು ಯೋಗೇಶ್ವರ್ ಬೆಟ್ಟಿಂಗ್ ದಂಧೆಯವರ ಜತೆ ಕೈಜೋಡಿಸಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದರು. ಬಿಜೆಪಿ ಸರ್ಕಾರದಲ್ಲಿ ಯೋಗೇಶ್ವರ್ ಅವರಿಗೆ ಸಚಿವ ಸ್ಥಾನ ನೀಡಿ ಕುಮಾರಸ್ವಾಮಿ ಅವರ ಹಿಡಿತ ಕುಗ್ಗಿಸಲು ಪ್ರಯತ್ನಿಸಲಾಗಿತ್ತು. 2022ರಲ್ಲಿ ಕಾಮಗಾರಿಗಳ ಭೂಮಿಪೂಜೆ ವಿವಾದದಲ್ಲಿ ಜೆಡಿಎಸ್ ಕಾರ್ಯಕರ್ತರು ಯೋಗೇಶ್ವರ್ ಕಾರಿನ ಮೇಲೆ ಮೊಟ್ಟೆ ಎಸೆದಿದ್ದರು. ಈಗ ಇಬ್ಬರೂ ಎಲ್ಲವನ್ನೂ ಮರೆತು ಒಂದಾಗಿದ್ದಾರೆ' ಎಂದು ಹೇಳಿದರು.

'ಶಾಮನೂರು ಜಾತಿಗೆ ಸೀಮಿತ ಆಗಬಾರದಿತ್ತು'

ಪ್ರಜಾವಾಣಿ ವಾರ್ತೆ

ಪ್ರಕಾಶ್ ರಾಥೋಡ್

ಬೆಂಗಳೂರು: 'ತಮ್ಮ ಆಯಸ್ಸಿನ ಮುಕ್ಕಾಲು ಭಾಗವನ್ನು ಕಾಂಗ್ರೆಸ್ ಪಕ್ಷದಲ್ಲೇ ಕಳೆದಿರುವ ಶಾಸಕ ಶಾಮ ನೂರು ಶಿವಶಂಕರಪ್ಪ ಲಿಂಗಾಯತ ಜಾತಿಗೆ ಸೀಮಿತವಾಗಿ ಮಾತನಾಡಿರುವುದು ಸರಿಯಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಆಕ್ಷೇಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಸಾಮಾಜಿಕ ನ್ಯಾಯ ಕಾಂಗ್ರೆಸ್ ಪಕ್ಷದ ಜೀವಾಳ ಎಂಬುದನ್ನು ಶಾಮನೂರು ಅವರಿಗೆ ತಿಳಿಹೇಳುವ ಅಗತ್ಯವಿಲ್ಲ. ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಅಲ್ಪಸಂಖ್ಯಾತರು, ದಲಿತರು ಮತ್ತು ಹಿಂದುಳಿದ ವರ್ಗಗಳ ಜನರ ಕೊಡುಗೆಯನ್ನು ಮರೆತು ತಮ್ಮ ಸಮುದಾಯದವರಿಗೆ ಸೀಮಿತವಾಗಿ ಮಾತನಾಡಿರುವುದು ನೋವಿನ ಸಂಗತಿ' ಎಂದರು.

'ಸಂಪುಟದಲ್ಲಿ ಏಳು ಮಂದಿ ಲಿಂಗಾಯತರಿಗೆ ಅವಕಾಶ ಸಿಕ್ಕಿದೆ. ಇಬ್ಬರು ಮುಸ್ಲಿಮರಿಗೆ ಮಾತ್ರ ಸಚಿವ ಸ್ಥಾನ ದೊರಕಿದೆ. ಲಂಬಾಣಿ, ಉಪ್ಪಾರ, ಬಲಿಜಿಗ, ಯಾದವ ಸಮುದಾಯಗಳಿಗೆ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಈ ಎಲ್ಲ ಸಮುದಾಯದವರೂ ಶಿಸ್ತು ಮೀರದೆ ಬೇಡಿಕೆ ಮಂಡಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪಕ್ಷದ ಧೋರಣೆ ಮತ್ತು ಸಿದ್ಧಾಂತಕ್ಕೆ ವಿರುದ್ಧವಾಗಿ ಮಾತನಾಡಬಾರದು' ಎಂದಿದ್ದಾರೆ.

'ನೀವು 7 ಬಾರಿ ಶಾಸಕರಾಗಿ ಆಯ್ಕೆಯಾಗಿರುವುದಕ್ಕೆ ಒಂದೇ ಸಮುದಾಯ ಕಾರಣವಲ್ಲ. ಎಲ್ಲ ಸಮುದಾಯಗಳ ಬೆಂಬಲದಿಂದ ಅದು ಸಾಧ್ಯವಾಗಿದೆ. ಹೀಗಾಗಿ ಎಲ್ಲ ಸಮುದಾಯಗಳ ಪರವಾಗಿ ಮಾತನಾಡಬೇಕಿತ್ತು' ಎಂದು ಹೇಳಿದ್ದಾರೆ.

ಬಿಜೆಪಿ ಸಮಾಜ ಒಡೆಯುತ್ತಿದೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಮೊಗ್ಗದಲ್ಲಿ ನಡೆದ ಕಲ್ಲು ತೂರಾಟದ ಘಟನೆಯನ್ನು ಮುಂದಿಟ್ಟುಕೊಂಡು ಬಿಜೆಪಿಯು ಸತ್ಯಶೋಧನೆ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಸತ್ಯಶೋಧನಾ ಸಮಿತಿ ಹೆಸರಿನಲ್ಲಿ ಬಿಜೆಪಿಯು ತನಗೆ ಏನು ಬೇಕೋ ಅದನ್ನು ಹೇಳಲು ಹೊರಟಿದೆ. ಕಬ್ಬಿಣದಿಂದ ಸೂಜಿ ಮತ್ತು ಕತ್ತರಿ ಎರಡನ್ನೂ ತಯಾರಿಸಬಹುದು. ಬಿಜೆಪಿಯು ಕತ್ತರಿಯಂತೆ ಸಮಾಜ ಕತ್ತರಿಸಲು ಹೊರಟಿದೆ. ಕಾಂಗ್ರೆಸ್ ಸೂಜಿಯಂತೆ ಸಮಾಜವನ್ನು ಜೋಡಿಸುವ ಕೆಲಸ ಮಾಡುತ್ತಿದೆ. ಇದೇ ಎರಡೂ ಪಕ್ಷಗಳಿಗೂ ಇರುವ ವ್ಯತ್ಯಾಸ' ಎಂದರು.

ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು ಹಿಂದೂ ಮತ್ತು ಮುಸ್ಲಿಂ ಎರಡೂ ಧರ್ಮೀಯರ ಮನೆಗಳಿಗೆ ಭೇಟಿನೀಡಿ ಸಮಸ್ಯೆ ಆಲಿಸಿದ್ದಾರೆ. ತಪ್ಪು ಮಾಡಿರುವ ಎಲ್ಲರನ್ನೂ ಖಂಡಿಸಿದ್ದಾರೆ. ಯಾರನ್ನೂ ರಕ್ಷಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ. ಕಾನೂನು ಉಲ್ಲಂಘಿಸಿದವರಿಗೆ ತಕ್ಕ ಶಿಕ್ಷೆ ನೀಡುವ ಕೆಲಸ ಆಗಲಿದೆ. ಆದರೆ, ಬಿಜೆಪಿಯವರು ಪಟ್ಟಿ ಮಾಡಿಕೊಂಡು ಕೆಲವರ ಮನೆಗಳಿಗಷ್ಟೇ ಹೋಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಎಸ್.ಎಂ. ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕುವೆಂಪು ಅವರ 'ಜಯ ಭಾರತ ಜನನಿಯ ತನುಜಾತೆ...' ಗೀತೆಯನ್ನು ನಾಡ ಗೀತೆಯನ್ನಾಗಿ ಘೋಷಿಸಿತು. ಇದು ರಾಜ್ಯವನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಸಲು ಕಾಂಗ್ರೆಸ್ ಮಾಡಿದ ಕೆಲಸ. ನಾವು ಜೋಡಿಸುತ್ತೇವೆ, ಅವರು (ಬಿಜೆಪಿ) ಒಡೆಯುತ್ತಾರೆ' ಎಂದು ಶಿವಕುಮಾರ್ ಹೇಳಿದರು.

'ನಾವು ನಿಜವಾದ ಹಿಂದೂಗಳು, ಬಿಜೆಪಿಯವರು ನಕಲಿ ಹಿಂದೂಗಳು' ಎಂಬ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿಕೆಗೆ ತಮ್ಮ ಸಹಮತವಿದೆ ಎಂದರು.

ಸಮಾಜದ್ರೋಹಿಗಳಿಗೆ ಕ್ಷಮೆ ಸಲ್ಲದು: ಆರಗ ಜ್ಞಾನೇಂದ್ರ

ಬೆಂಗಳೂರು: ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಸಮಾಜ ದ್ರೋಹಿಗಳಿಗೆ ಕ್ಷಮಾಪಣೆ ನೀಡಲು ಹೊರಟಿವೆ ಎಂದು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಆರೋಪಿಸಿದರು.

'ನಾನು ಗೃಹ ಸಚಿವನಾಗಿದ್ದಾಗ ಹಳೇ ಹುಬ್ಬಳ್ಳಿಯ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲು ಒಂದೂವರೆ ಸಾವಿರಕ್ಕಿಂತ ಹೆಚ್ಚು ಜನರು ಬಂದಿದ್ದರು. ದೇವಸ್ಥಾನಕ್ಕೆ ಹಾನಿ ಮಾಡಿದ್ದರು. ಅಂದು ಪೊಲೀಸರು ನಿರ್ಲಕ್ಷ್ಯ ಮಾಡಿದ್ದರೆ ಹುಬ್ಬಳ್ಳಿ ಹೊತ್ತಿ ಉರಿಯುತ್ತಿತ್ತು. ಡಿ.ಕೆ. ಶಿವಕುಮಾರ್ ಅವರು ಅಂಥ ಆರೋಪಿಗಳ ಮೇಲಿನ ಮೊಕದ್ದಮೆ ವಾಪಸ್ ಪಡೆಯುವುದಾಗಿ ಹೇಳುತ್ತಾರೆ. ಮುಂದೆ ಈ ಕುರಿತು ಜನರಿಗೆ ಅವರು ವಿವರಣೆ ಕೊಡಬೇಕಾಗುತ್ತದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

'ಎಲ್ಲ ಮುಸ್ಲಿಮರೂ ಕೆಟ್ಟವರೆಂದು ಹೇಳುತ್ತಿಲ್ಲ. ಎಲ್ಲ ಹಿಂದೂಗಳು ಒಳ್ಳೆಯವರೆಂದು ಹೇಳುವುದಿಲ್ಲ. ಆದರೆ, ಹಿಂದೂ-ಮುಸ್ಲಿಮರ ನಡುವಿನ ಅಂತರ ಹೆಚ್ಚಳಕ್ಕೆ ಕೆಲ ಘಟನೆಗಳು ಕಾರಣವಾಗಬಾರದು. ಸಮಾಜ ದ್ರೋಹಿಗಳನ್ನು ಕ್ಷಮಿಸುವ ಮೂಲಕ ಸರ್ಕಾರ ಯಾವ ಸಂದೇಶ ನೀಡುತ್ತಿದೆ' ಎಂದು ಅವರು ಪ್ರಶ್ನಿಸಿದರು.

ಶಿವಮೊಗ್ಗದ ರಾಗಿಗುಡ್ಡದಲ್ಲಿ ಹಿಂದೂ ಕುಟುಂಬಗಳನ್ನು ಹುಡುಕಿ ಹಲ್ಲೆ ಮಾಡಿದ್ದಾರೆ. ಹೆಣ್ಣು ಮಕ್ಕಳ ಜತೆ ಕೆಟ್ಟದ್ದಾಗಿ ಮಾತನಾಡಿದ್ದಾರೆ. ಪಕ್ಕದಲ್ಲೇ ಇದ್ದ ಮುಸ್ಲಿಮರ ವಾಹನಗಳಿಗೆ ಏನೂ ಮಾಡಿಲ್ಲ. ಇಂಥವರ ವಿರುದ್ಧ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಿತೃಕಾರ್ಯ ನೆರವೇರಿಸಿದ ಮುಸ್ಲಿಂ ಕುಟುಂಬ

ಪ್ರಜಾವಾಣಿ ವಾರ್ತೆ

ಗೋಕರ್ಣ (ಉತ್ತರ ಕನ್ನಡ): ಧಾರವಾಡದ ಮುಸ್ಲಿಂ ಕುಟುಂಬವೊಂದು ಈಚೆಗೆ ಗೋಕರ್ಣದಲ್ಲಿ ಪಿತೃಪಕ್ಷದ ಪರ್ವಕಾಲದಲ್ಲಿ ಪಿತೃಕಾರ್ಯ ನೆರವೇರಿಸಿದೆ.

ಮರದ ಕೆಲಸ ಮಾಡುವ ಧಾರವಾಡದ ದಾನೇಶ್ವರಿ ನಗರದ ಕುಟುಂಬದ ಸದಸ್ಯರು ಜ್ಯೋತಿಷಿಯೊಬ್ಬರ ಸಲಹೆ ಮೇರೆಗೆ ನಾರಾಯಣ ಬಲಿ, ತ್ರಿಪಿಂಡಿ ಶ್ರಾದ್ಧ ಮತ್ತು ತಿಲ ಹವನವನ್ನು ಇಲ್ಲಿಯ ಪಿತೃಶಾಲೆಯಲ್ಲಿ ನೆರವೇರಿಸಿದರು.

'ಮೊದಲಿನಿಂದಲೂ ಹಿಂದೂ ಸಂಪ್ರದಾಯದ ಕೆಲ ಆಚರಣೆಗಳನ್ನು ಪಾಲಿಸುತ್ತಿದ್ದೇವೆ. ನಮ್ಮ ತಂದೆ ಗದಗಿನ ವೀರನಾರಾಯಣ ದೇವಸ್ಥಾನದ ಬಳಿ ಬ್ರಾಹ್ಮಣ ಮತ್ತು ಲಿಂಗಾಯತ ಸಮುದಾಯದವರ ಜತೆ ಬೆಳೆದವರು. ತಮ್ಮನಿಗೆ ಮದುವೆ ಮಾಡಲು ಹೆಣ್ಣು ಸಿಗದಿದ್ದಾಗ, ಜ್ಯೋತಿಷಿಯ ಮೊರೆ ಹೋಗಿದ್ದೆವು. ಅವರ ಸಲಹೆಯಂತೆ ತಮ್ಮನ ಮದುವೆ, ಮಾನಸಿಕ ಶಾಂತಿಗೆ ಈ ಕಾರ್ಯ ಮಾಡಿದ್ದೇವೆ' ಎಂದು ಕುಟುಂಬದ ಶಂಶಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಪುರೋಹಿತರಾದ ನಾಗರಾಜ ಭಟ್ ಗುರ್ಲಿಂಗ್, ಸುಬ್ರಮಣ್ಯ ಚಿತ್ರಿಗೆಮಠ ನೇತೃತ್ವದಲ್ಲಿ ಪೂಜೆ ಕಾರ್ಯ ನೆರವೇರಿತು. 'ಗೋಕರ್ಣದಲ್ಲಿ ಕ್ರೈಸ್ತ ಸಮುದಾಯದವರು ಪಿತೃಕಾರ್ಯ ನೆರವೇರಿಸಿದ ಉದಾಹರಣೆಗಳಿವೆ. ಆದರೆ, ಮುಸ್ಲಿಂ ಕುಟುಂಬ ಪಿತೃಕಾರ್ಯ ಮಾಡಿದ್ದು ಅಪರೂಪ' ಎಂದು ಅರ್ಚಕರೊಬ್ಬರು ತಿಳಿಸಿದರು.

ಗೋಕರ್ಣದಲ್ಲಿ ಪಿತೃಕಾರ್ಯ ನೆರವೇರಿಸಿದ ಮುಸ್ಲಿಂ ಕುಟುಂಬ

ಇಂದಿನಿಂದ ಚಾರಣಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಹಿಂಭಾಗದಲ್ಲಿರುವ ಕುಮಾರಪರ್ವತ ಚಾರಣಕ್ಕೆ ವಿಧಿಸಿದ್ದ ನಿರ್ಬಂಧವನ್ನು ತೆರವು ಮಾಡಲಾಗಿದ್ದು, ಶನಿವಾರದಿಂದ (ಅ.7) ಅವಕಾಶ ಕಲ್ಪಿಸಲಾಗಿದೆ.

ಬಿರು ಬೇಸಿಗೆ ಮತ್ತು ಭಾರಿ ಮಳೆಯ ಕಾರಣಕ್ಕೆ ಮೇ ತಿಂಗಳಿನಿಂದ ಸೆ.29ರವರೆಗೆ ಅರಣ್ಯ ಇಲಾಖೆ ಚಾರಣಿಗರಿಗೆ ನಿರ್ಬಂಧ ವಿಧಿಸಿತ್ತು. ಸೆ.30ರಿಂದ ಚಾರಣ ಆರಂಭಗೊಂಡಿತ್ತು. ಈ ಮಧ್ಯೆ ಭಾರಿ ಮಳೆಯಿಂದ ಅ.3ರಿಂದ ಮತ್ತೆ ನಿರ್ಬಂಧ ವಿಧಿಸಲಾಗಿತ್ತು.

ಚಾರಣ ಆರಂಭಗೊಂಡಿರುವುದರಿಂದ ಪರ್ವತದ ದಾರಿಯಲ್ಲಿ ಮತ್ತು ಪರ್ವತದಲ್ಲಿ ಸ್ವಚ್ಛತೆ ಕಾಪಾಡಲು ಅರಣ್ಯ ಇಲಾಖೆ ವ್ಯವಸ್ಥೆ ಮಾಡಿದೆ. ಕುಮಾರಪರ್ವತ, ಗಿರಿಗದ್ದೆ, ಕಲ್ಲಚಪ್ಪರ ಸೇರಿದಂತೆ ವಿವಿಧೆಡೆ ಸೂಚನಾ ಫಲಕ ಅಳವಡಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ಲಾಸ್ಟಿಕ್ ಬಾಟಲಿ, ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ವಸ್ತುಗಳನ್ನು ಕೊಂಡೊಯ್ಯದಂತೆ ನಿರ್ಬಂಧ ವಿಧಿಸಲಾಗಿದೆ.

ಸುಬ್ರಹ್ಮಣ್ಯದಿಂದ ಸುಮಾರು 13 ಕಿ.ಮೀ. ಕಾಡು, ಬೆಟ್ಟಗಳಲ್ಲಿ ಚಾರಣ ನಡೆಸಿ ಕುಮಾರಪರ್ವತದ ತುದಿ ಏರಬಹುದು. ಸುಮಾರು 5 ಕಿ.ಮೀ. ಕ್ರಮಿಸಿದಾಗ ಗಿರಿಗದ್ದೆ ಎಂಬಲ್ಲಿ ಜೋಯಿಸರ ಮನೆ ಇದ್ದು, ಚಾರಣಿಗರಿಗೆ ಊಟ, ಉಪಾಹಾರ, ನೀರು ಲಭ್ಯ. ಕುಮಾರಪರ್ವತವನ್ನು ಸುಬ್ರಹ್ಮಣ್ಯದಿಂದ ಏರಲು ಹೊರಟರೆ ಲೆಂಕಿರಿಗುಡ್ಡ, ಗಿರಿಗದ್ದೆ, ಅರಣ್ಯ ಇಲಾಖೆ ಚೆಕ್‌ಪೋಸ್ಟ್, ಕಲ್ಲುಚಪ್ಪರ, ಶೇಷಪರ್ವತ, ಭತ್ತದ ರಾಶಿ, ಸಿದ್ಧ ಪರ್ವತ ದಾಟಿ ಹೋಗಬೇಕು ಎಂದು ಮೂಲಗಳು ತಿಳಿಸಿವೆ.

ದಸರಾ: ವಿಭಾಗಮಟ್ಟದ ಫಲಿತಾಂಶ

ಪ್ರಜಾವಾಣಿ ವಾರ್ತೆ

ತುಮಕೂರಿನಲ್ಲಿ ಶುಕ್ರವಾರ ನಡೆದ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಕಬಡ್ಡಿ ಪಂದ್ಯದಲ್ಲಿ ಕ್ರೀಡಾಪಟುಗಳ ಸೆಣಸಾಟ

ತುಮಕೂರು: ಬೆಂಗಳೂರು ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ನಗರದಲ್ಲಿ ಶುಕ್ರವಾರ ತೆರೆ ಬಿತ್ತು.

ಎರಡು ದಿನಗಳ ಕಾಲ ನಡೆದ ಕ್ರೀಡಾಕೂಟದಲ್ಲಿ ತುಮಕೂರು, ದಾವಣಗೆರೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳ ಕ್ರೀಡಾಪಟುಗಳು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

ಕಬಡ್ಡಿ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ಕೋಲಾರ ತಂಡವು 20–17 ಅಂಕಗಳಿಂದ ತುಮಕೂರು ತಂಡವನ್ನು ಸೋಲಿಸಿ ಪ್ರಶಸ್ತಿ ಪಡೆಯಿತು. ಮಹಿಳೆಯರ ವಿಭಾಗದಲ್ಲಿ ರಾಮನಗರ ತಂಡವು 36–24 ಅಂಕಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಂಡವನ್ನು ಮಣಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿತು. 100 ಮತ್ತು 200 ಮೀಟರ್ ಓಟದಲ್ಲಿ ಚಿತ್ರದುರ್ಗದ ಮೋನಿಕಾ ರುಕ್ಮಯ್ಯ ಅತಿವೇಗವಾಗಿ ಗುರಿ ಮುಟ್ಟಿ ಮೊದಲ ಸ್ಥಾನ ಪಡೆದರು.

ಫಲಿತಾಂಶ: ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಪಡೆದವರ ವಿವರ

100 ಮೀಟರ್ ಓಟ: ಚಿತ್ರದುರ್ಗದ ಮೋನಿಕಾ ರುಕ್ಮಯ್ಯ, ಜೆ.ಲಕ್ಷ್ಯ, ಶಿವಮೊಗ್ಗದ ಎಂ.ಪಿ.ಅಂಜಲಿ. 200 ಮೀಟರ್: ಚಿತ್ರದುರ್ಗದ ಮೋನಿಕಾ ರುಕ್ಮಯ್ಯ, ತುಮಕೂರಿನ ಶಿವಾನಿ ಎಸ್. ರೈ, ಚಿತ್ರದುರ್ಗದ ರಿತಿಕಾ.

400 ಮೀಟರ್: ಬೆಂಗಳೂರಿನ ವಿ.ದಿವ್ಯಾ, ತುಮಕೂರಿನ ಆರ್.ವೈ.ಭೂಮಿಕಾ, ಶಿವಮೊಗ್ಗದ ಕೆ.ಆರ್. ದಿವ್ಯಾ. 800 ಮೀಟರ್: ಬೆಂಗಳೂರಿನ ವಿ.ದಿವ್ಯಾ, ದಾವಣಗೆರೆಯ ಕೀರ್ತಿ ವಿ.ಹೊಸಮನೆ, ಶಿವಮೊಗ್ಗದ ಎಂ.ಆರ್.ಭಾಗೀರಥಿ. 1500 ಮೀಟರ್: ಶಿವಮೊಗ್ಗದ ಜಯಲಕ್ಷ್ಮಿ, ದಾವಣಗೆರೆಯ ಕೀರ್ತಿ ವಿ.ಹೊಸಮನೆ, ಕೋಲಾರದ ಎಂ.ಸಾಹಿತ್ಯ.

3 ಸಾವಿರ ಮೀಟರ್: ಶಿವಮೊಗ್ಗದ ಎಸ್.ಸೋನಿಕಾ, ಎನ್.ನವ್ಯಾ, ದಾವಣಗೆರೆಯ ಕೀರ್ತಿ ವಿ.ಹೊಸಮನೆ. 100 ಮೀಟರ್ ಹರ್ಡಲ್ಸ್: ಶಿವಮೊಗ್ಗದ ಎಂ.ಪಿ.ಅಂಜಲಿ, ಬಿಂದು. ಉದ್ದ ಜಿಗಿತ: ಶಿವಮೊಗ್ಗದ ಕೆ.ಎನ್. ಭೂಮಿಕಾ, ಚಿತ್ರದುರ್ಗದ ಎಂ.ಜಿ.ಲಕ್ಷ್ಮಿ, ಕೋಲಾರದ ಎಂ.ಭವ್ಯಾ.

ಎತ್ತರ ಜಿಗಿತ: ಕೋಲಾರದ ವಿ.ಮಾನಸ, ಶಿವಮೊಗ್ಗದ ಅಮೂಲ್ಯ, ಎಂ.ಆರ್. ಅನ್ವಿತಾ. ಟ್ರಿಬಲ್ ಜಂಪ್ : ಶಿವಮೊಗ್ಗದ ಕೆ.ಎನ್.ಭೂಮಿಕಾ, ಅಮೂಲ್ಯ, ಕೋಲಾರದ ಭವ್ಯಾ. ಶಾಟ್ ಪುಟ್: ಬೆಂಗಳೂರಿನ ಎಚ್.ಆರ್.ಶ್ವೇತಾ, ಶಿವಮೊಗ್ಗದ ಎಸ್.ಟಿ.ಮಧುರಾ, ರಾಮನಗರದ ಎಂ.ಸೌಜನ್ಯ. ಜಾವೆಲಿನ್ ಥ್ರೋ: ಚಿಕ್ಕಬಳ್ಳಾಪುರದ ಮಮತಾ, ರಾಮನಗರದ ಎಂ.ಸೌಜನ್ಯಾ, ತುಮಕೂರಿನ ಎನ್.ಡಿ.ಮಮತಾ. ಡಿಸ್ಕಸ್ ಥ್ರೋ: ಕೋಲಾರದ ಡಿ.ಎಸ್. ದರ್ಶಿತಾ, ಬೆಂಗಳೂರಿನ ನಾಗರತ್ನ, ಶಿವಮೊಗ್ಗದ ಎಂ.ಪ್ರಿಯಾಂಕಾ.

4X100 ಮೀಟರ್ ರಿಲೇಯಲ್ಲಿ ತುಮಕೂರು ತಂಡ ಪ್ರಶಸ್ತಿ ಪಡೆಯಿತು. 4X400 ಮೀಟರ್ ರಿಲೇಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಥಮ, ಚಿತ್ರದುರ್ಗ ತಂಡ ಎರಡನೇ ಸ್ಥಾನ ಪಡೆಯಿತು.

ದಸರಾ: ಕೆಲದಿನ ಅರಮನೆ ಪ್ರವೇಶ ನಿರ್ಬಂಧ

ಮೈಸೂರು: ದಸರಾ ಅಂಗವಾಗಿ ಮೈಸೂರು ರಾಜವಂಶಸ್ಥರು ಅರಮನೆಯಲ್ಲಿ ಧಾರ್ಮಿಕ ಪೂಜಾ ಕಾರ್ಯಗಳನ್ನು ನಡೆಸುವ ದಿನಗಳಂದು ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಅ.9ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಸಿಂಹಾಸನ ಜೋಡಣೆ ಪ್ರಯುಕ್ತ ಪ್ರವೇಶವಿರುವುದಿಲ್ಲ. ಅ.15ರಂದು ರಾಜವಂಶಸ್ಥರ ಖಾಸಗಿ ದರ್ಬಾರ್ ಪ್ರಯುಕ್ತ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ, ಅ.23ರಂದು ಆಯುಧಪೂಜೆ ಪ್ರಯುಕ್ತ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಅ.24ರಂದು ವಿಜಯದಶಮಿಯ ಅಂಗವಾಗಿ ಪ್ರವೇಶವಿರುವುದಿಲ್ಲ. ಧಾರ್ಮಿಕ ಕಾರ್ಯ ನಿಮಿತ್ತ ನ.8ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅರಮನೆ ಮಂಡಳಿಯ ಪ್ರಕಟಣೆ ತಿಳಿಸಿದೆ.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಆದೇಶ

ಸರ್ಕಾರಿ ಆಸ್ಪತ್ರೆ ವೈದ್ಯರಿಗೆ ₹11 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಹಾಸನ: ವೈದ್ಯಕೀಯ ನಿರ್ಲಕ್ಷ್ಯತನದಿಂದ ಸೇವಾನ್ಯೂನತೆ ಎಸಗಿದ ಸಕಲೇಶಪುರದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞ ಡಾ.ಪುರುಷೋತ್ತಮ್ ಅವರಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹11 ಲಕ್ಷ ದಂಡ ವಿಧಿಸಿದೆ.

ಸಕಲೇಶಪುರ ತಾಲ್ಲೂಕಿನ ಆನೇಮಹಲ್ ಗ್ರಾಮದ ನಿವಾಸಿ ಮೋಹನ್ ಕುಮಾರ್ ಎಚ್.ಎಂ. ಅವರು ತಮ್ಮ ಪತ್ನಿ ಆಶಾ ವಿ.ಎಂ. ಅವರನ್ನು ಹೆರಿಗೆ ಪೂರ್ವ ತಪಾಸಣೆಗಾಗಿ 2021 ರ ಮಾರ್ಚ್ 26 ರಂದು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಂದು ಸಂಜೆ 4 ಗಂಟೆಗೆ ಆಶಾ ಅವರನ್ನು ಪರೀಕ್ಷಿಸಿದ ಡಾ.ಪುರುಷೋತ್ತಮ್, ಸ್ಕ್ಯಾನ್ ವರದಿಯ ಅನ್ವಯ ಮಗು ಹೊಟ್ಟೆಯಲ್ಲೇ ಮೃತಪಟ್ಟಿದೆ ಎಂದು ತಿಳಿಸಿದ್ದರು. ತಕ್ಷಣವೇ ಮೋಹನ್ ಕುಮಾರ್ ಅವರು ಪತ್ನಿಯ ಆರೋಗ್ಯದ ದೃಷ್ಟಿಯಿಂದ ಗರ್ಭಪಾತ ಶಸ್ತ್ರಚಿಕಿತ್ಸೆ ಮಾಡುವಂತೆ ಕೇಳಿಕೊಂಡರು. ಆದರೆ, ವೈದ್ಯರು ಶಸ್ತ್ರಚಿಕಿತ್ಸೆ ಮಾಡದೇ ಒಂದು ಚುಚ್ಚುಮದ್ದು ಕೊಟ್ಟಿದ್ದರು.

ಅದೇ ದಿನ ರಾತ್ರಿ ಆಶಾ ಅವರು ಹೊಟ್ಟೆ ನೋವಿನಿಂದ ನರಳಾಡಿದ್ದರು. ಮರುದಿನ ಆಶಾ ಅವರನ್ನು ಪರೀಕ್ಷಿಸಿದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆಗೆ ದಾಖಲಿಸುವಂತೆ ತಿಳಿಸಿದ್ದರು. ಅಲ್ಲಿ ಆಶಾ ಅವರಿಗೆ ಗರ್ಭಪಾತವಾಗಿ, 2021 ರ ಮಾರ್ಚ್ 29 ರಂದು ಹೆಚ್ಚಿನ ರಕ್ತಸ್ರಾವದಿಂದ ಮೃತಪಟ್ಟಿದ್ದರು.

ಅದಕ್ಕೆ ವೈದ್ಯರ ನಿರ್ಲಕ್ಷ್ಯ, ಸೇವಾ ನ್ಯೂನತೆ ಕಾರಣ ಎಂದು ಆರೋಪಿಸಿ, ಮೋಹನ್‌ಕುಮಾರ್ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ 2021 ರ ಆಗಸ್ಟ್ 5 ರಂದು ದೂರು ದಾಖಲಿಸಿದ್ದರು.

ಆಯೋಗದ ಅಧ್ಯಕ್ಷೆ ಚಂಚಲ ಸಿ.ಎಂ., ಸದಸ್ಯರಾದ ಎಚ್.ವಿ.ಮಹಾದೇವ, ಅನುಪಮ ಆರ್. ಅವರನ್ನೊಳಗೊಂಡ ಪೀಠವು ಪ್ರಕರಣದ ವಿಚಾರಣೆ ನಡೆಸಿದ್ದು, ವೈದ್ಯರಿಗೆ ₹ 10ಲಕ್ಷ ದಂಡ, ದೂರು ದಾಖಲಾದ ದಿನದಿಂದ ವಾರ್ಷಿಕ ಶೇ 9ರ ಬಡ್ಡಿ ಸೇರಿಸಿ ಆರು ವಾರಗಳೊಳಗಾಗಿ ದೂರುದಾರರಿಗೆ ಪಾವತಿಸುವಂತೆ ಆದೇಶಿಸಿದೆ. ದೂರುದಾರರ ಖರ್ಚು ₹ 1 ಲಕ್ಷ, ವೈದ್ಯಕೀಯ ವರದಿಯಲ್ಲಿ ಕೆಟ್ಟ ಬರವಣಿಗೆಯಲ್ಲಿ ನಮೂದು ಮಾಡಿರುವ ಕಾರಣ ₹ 50ಸಾವಿರ ದಂಡವನ್ನು ಗ್ರಾಹಕ ಸಂರಕ್ಷಣಾ ನಿಧಿಗೆ ಪಾವತಿಸಬೇಕು. ತಪ್ಪಿದಲ್ಲಿ ಒಟ್ಟು ಮೊತ್ತಗಳ ಮೇಲೆ ವಾರ್ಷಿಕ ಶೇ 10 ರ ಬಡ್ಡಿಯೊಂದಿಗೆ ಪಾವತಿಸುವಂತೆ ಸೆ. 15 ರಂದು ಆದೇಶ ನೀಡಲಾಗಿದೆ.

ನಗರದಲ್ಲಿ ಇಂದು

ಮಹಿಳಾ ಇತಿಹಾಸಕಾರರ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ತೇಜಸ್ವಿನಿ ಅನಂತಕುಮಾರ್, ಮುಖ್ಯ ಭಾಷಣ: ವಿ. ನಾಗರಾಜ್, ಪ್ರಧಾನ ಭಾಷಣ: ಸುಷ್ಮಿತಾ ಪಾಂಡೆ, ಗೌರವ ಅತಿಥಿ: ಚೂಡಾಮಣಿ ನಂದಗೋಪಾಲ್, ಅಧ್ಯಕ್ಷತೆ: ದೇವಿಪ್ರಸಾದ್ ಸಿಂಗ್, ಆಯೋಜನೆ: ಅಖಿಲ ಭಾರತೀಯ ಇತಿಹಾಸ ಸಂಕಲನ ಯೋಜನೆ, ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಳಿಗ್ಗೆ 10

'ನಾಸಾ ಸ್ಪೇಸ್ ಆ್ಯಪ್ ಚಾಲೆಂಜ್' ಹ್ಯಾಕಥಾನ್: ಆಯೋಜನೆ ಹಾಗೂ ಸ್ಥಳ: ಸ್ಕೂಲ್ ಆಫ್ ಸೈನ್ಸಸ್, ಜೈನ್ ವಿಶ್ವವಿದ್ಯಾಲಯ, ಜೆ.ಸಿ. ರಸ್ತೆ, ಬೆಳಿಗ್ಗೆ 10

ರಂಗಭೂಮಿ ವಿಷಯಾಧಾರಿತ ವಿಚಾರಸಂಕಿರಣ: ಉದ್ಘಾಟನೆ: ಜೋಸೆಫ್ ಜಾನ್, ಅಧ್ಯಕ್ಷತೆ: ಮಲ್ಲಿಕಾರ್ಜುನಸ್ವಾಮಿ ಮಹಾಮನೆ, 'ಜಾನಪದ ಮತ್ತು ರಂಗಭೂಮಿ– ಅನ್ವಯಿಕ ಸ್ವರೂಪ': ವತ್ಸಲಾ ಮೋಹನ್, 'ಮಕ್ಕಳ ರಂಗಭೂಮಿ ಮತ್ತು ರಂಗ ಶಿಕ್ಷಣ': ಚಂದ್ರಕೀರ್ತಿ ಬಿ., 'ನಿರಂತರ ರಂಗಭ್ಯಾಸದ ಸವಾಲು': ಮಂಗಳಾ ಎನ್., ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಸಮುಚ್ಚಯ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಟಿ.ಜಿ. ಸೀತಾರಾಂ, ಎಂ.ಆರ್. ದೊರೆಸ್ವಾಮಿ, ಅಧ್ಯಕ್ಷತೆ: ಆರ್. ರಾಜಗೋಪಾಲ್ ನಾಯ್ಡು, ಆಯೋಜನೆ ಹಾಗೂ ಸ್ಥಳ: ಕೆ.ಎಸ್. ಸಮೂಹ ಶಿಕ್ಷಣ ಸಂಸ್ಥೆ, ಮಲ್ಲಸಂದ್ರ, ಬೆಳಿಗ್ಗೆ 10.30

ಚಿಲುವೆರು ಮೃತ್ಯುಂಜಯ ಅವರ 'ಟ್ರೀ ಟೂನ್ಸ್' ವ್ಯಂಗ್ಯಚಿತ್ರ ಪ್ರದರ್ಶನ: ಉದ್ಘಾಟನೆ: ಸುರೇಶ್ ಜಯರಾಂ, ಅತಿಥಿಗಳು: ರೇಣುಕಾ ಕುಂಭಂ, ರಾಘವೇಂದ್ರ ಯಾದವ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್, ಸ್ಥಳ: ಭಾರತೀಯ ವ್ಯಂಗಚಿತ್ರ ಗ್ಯಾಲರಿ, ಮಿಡ್ ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ.ರಸ್ತೆ, ಬೆಳಿಗ್ಗೆ 11

ಅಪರಂಜಿ ಹಾಸ್ಯ ಮಾಸ ಪತ್ರಿಕೆಯ 40ರ ಸಂಭ್ರಮ: ಉದ್ಘಾಟನೆ: ಚಿರಂಜೀವಿ ಸಿಂಘ್, ಮುಖ್ಯ ಅತಿಥಿಗಳು: ಎಂ. ಕೃಷ್ಣೇಗೌಡ, ಎಸ್.ಆರ್. ವಿಜಯಶಂಕರ, ಹಾಸ್ಯ: ರಾಘವೇಂದ್ರ ಆಚಾರ್ಯ, ಆಯೋಜನೆ: ಕೊರವಂಜಿ ಅಪರಂಜಿ ಟ್ರಸ್ಟ್, ಸ್ಥಳ: ಜೆಎಸ್‌ಎಸ್ ಸಭಾಂಗಣ, 8ನೇ ಬ್ಲಾಕ್, ಜಯನಗರ, ಬೆಳಿಗ್ಗೆ 10



ಚಿರಂಜೀವಿ ಸಿಂಘ್

'ಮೆಂಟಲ್ ಹೆಲ್ತ್' ಸಂತೆ: ಆಯೋಜನೆ: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಸ್ಥಳ: ನಿಮ್ಹಾನ್ಸ್ ಸಕಲ್ವಾರ ಮೆಂಟಲ್ ಹೆಲ್ತ್ ಸೆಂಟರ್, ಬನ್ನೇರುಘಟ್ಟ ರಸ್ತೆ, ಮಧ್ಯಾಹ್ನ 2

ಪೌರಾಣಿಕ ರಂಗೋತ್ಸವ: ನಾಟಕ ಪ್ರದರ್ಶನ: 'ರಕ್ತರಾತ್ರಿ' ಬೆಳಿಗ್ಗೆ 11.30ಕ್ಕೆ, ನಾಟಕ ಪ್ರದರ್ಶನ: 'ಕುರುಕ್ಷೇತ್ರ', ಸಾನ್ನಿಧ್ಯ: ಚನ್ನಬಸವ ಪಟ್ಟದೇವರು, ಉದ್ಘಾಟನೆ: ಕೆ. ಧರಣೀದೇವಿ, ಅಧ್ಯಕ್ಷತೆ: ಪಟ್ಟದ ಮಹಂತ ಶಿವಾಚಾರ್ಯ ಸ್ವಾಮೀಜಿ, ಆಯೋಜನೆ: ಕಂದಗಲ್ಲು ಹನುಮಂತರಾಯ ಕಲಾ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

ಆನಂದ್ ರಂಗನಾಥ್ ಅವರ '35 ಅಂಡರ್ 35' ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಟಿ.ವಿ. ಮೋಹನ್ ದಾಸ್ ಪೈ, ಆಯೋಜನೆ: ಅಯೋಧ್ಯ ಪಬ್ಲಿಕೇಷನ್, ಸ್ಥಳ: ಅನುಭವ ಮಂಟಪ, ಬಸವ ಸಮಿತಿ, ಬಸವೇಶ್ವರ ವೃತ್ತ, ಸಂಜೆ 4

ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಅಂಗವಾಗಿ ಕಾರ್ಯಕ್ರಮ ಹಾಗೂ ಕೆ. ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ದತ್ತಿನಿಧಿ ಸ್ಪರ್ಧೆಗಳು: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಉದ್ಘಾಟನೆ: ಚನ್ನೇಗೌಡ ಕೆ.ಎನ್., ಮುಖ್ಯ ಅತಿಥಿ: ಎನ್. ಚಂದ್ರಶೇಖರ್, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಸಂಜೆ 4

8ನೇ ವಾರ್ಷಿಕ ಘಟಿಕೋತ್ಸವ: ಮುಖ್ಯ ಅತಿಥಿ: ಶ್ರೀನಿ ರಾಜಮ್, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಗೌರವ ಅತಿಥಿ: ಡಿ. ಜವಹರ್, ಆಯೋಜನೆ ಹಾಗೂ ಸ್ಥಳ: ಡಾ.ಎಂ.ಆರ್.ಡಿ. ರಜತ ಮಹೋತ್ಸವ ಕಟ್ಟಡ, ಪಿಇಎಸ್ ವಿಶ್ವವಿದ್ಯಾಲಯ, 100 ಅಡಿ ರಸ್ತೆ, ಬನಶಂಕರಿ 3ನೇ ಹಂತ, ಸಂಜೆ 4

'ಏಕರೂಪ ನಾಗರಿಕ ಸಂಹಿತೆ' ಬಗ್ಗೆ ಚರ್ಚೆ: ಅಧ್ಯಕ್ಷತೆ: ನ್ಯಾ. ವಿ. ಗೋಪಾಲ ಗೌಡ, ಚರ್ಚೆಯಲ್ಲಿ ಭಾಗವಹಿಸುವವರು: ನ್ಯಾ.ಎಚ್.ಎನ್. ನಾಗಮೋಹನದಾಸ್, ರವಿವರ್ಮ ಕುಮಾರ್, ಬೆಳಗಾಮಿ ಮೊಹಮ್ಮದ್ ಸಾದ್, ಶಿವಸುಂದರ್, ಸಿಂಥಿಯಾ ಸ್ಟೀಫನ್, ಆಯೋಜನೆ: ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯೂನಲ್ ಅಮಿಟಿ ಕರ್ನಾಟಕ ಚಾಪ್ಟರ್, ಸ್ಥಳ: ಐಎಎಸ್ ಆಫೀಸರ್ಸ್ ಅಸೋಸಿಯೇಷನ್ ಹಾಲ್, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 10

ವಿ. ಗೋಪಾಲ ಗೌಡ

ಸಿತಾರ್ ತಯಾರಕ ಹಾಜಿ ಸರ್ ಅಹ್ಮದ್ ಸಾಬ್ ಅಬ್ಬಾಸೊ ಅವರೊಂದಿಗೆ ಸಂವಾದ: ನಡೆಸುವವರು: ಫಯಾಜ್ ಖಾನ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಉತ್ತುಂಗ, ಎಂ.ಐ.ಜಿ. 55, 3ನೇ ಮುಖ್ಯ ರಸ್ತೆ, ಬಸವೇಶ್ವರನಗರ, ಸಂಜೆ 5

ಸಂಗೀತ ಕಛೇರಿ: ಪ್ರತಿಕ್ಷಾ ಜಿ. ರಾವ್, ಆಯೋಜನೆ ಹಾಗೂ ಸ್ಥಳ: ಶ್ರೀ ಹರಕೆ ಹನುಮ ದೇವಸ್ಥಾನ ಟ್ರಸ್ಟ್, 10/27, ಐಟಿಐ ಬಡಾವಣೆ, ಬನಶಂಕರಿ 3ನೇ ಹಂತ, ಸಂಜೆ 6

23ನೇ ವರ್ಷದ ಪ್ರವಚನ ವಾಹಿನಿ: ಕರ್ನಾಟಕ ಆಧ್ಯಾತ್ಮಿಕ ಕಲ್ಯಾಣ ಟ್ರಸ್ಟ್‌ನಿಂದ ಉಪನ್ಯಾಸ: 'ಸನಾತನ ಧರ್ಮ', ಆಯೋಜನೆ ಹಾಗೂ ಸ್ಥಳ: ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಮುಖವಾಡ' ನಾಟಕ ಪ್ರದರ್ಶನ: ನಿರ್ದೇಶನ: ಪ್ರದೀಪ್ ಅಂಚೆ, ಮುಖ್ಯ ಅತಿಥಿ: ಜಿ.ವೈ. ಪದ್ಮ, ಆಯೋಜನೆ: ದಿ ಕಲಾಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 6.45

ಯಕ್ಷಗಾನ ಪ್ರದರ್ಶನ: 'ರಾಜಾ ಮಯೂರಕೇತನ', 'ರಾಜಾ ಮಧುರಾನೀಕೇತನ', 'ರಾಜಾ ಉರಗಕೇತನ', ಆಯೋಜನೆ: ಜಲವಳ್ಳಿ ಮೇಳ ಹಾಗೂ ಅತಿಥಿ ಕಲಾವಿದರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ರಾಮದುರ್ಗದಲ್ಲಿ ನೇಯ್ದ 'ಚದುರಂಗ ಚುಕ್ಕಿ' ಸೀರೆಯನ್ನು ನೇಕಾರ ಏಕನಾಥ ಕೊಣ್ಣೂರ ತೋರಿಸಿದರು

ಪ್ರಜಾವಾಣಿ ಚಿತ್ರ: ಚನ್ನಪ್ಪ ಮಾದರ

ಅವಳಿಗೂ ಬೇಕು 'ಮಿ' ಟೈಮ್ ...

ಮಂಜುಶ್ರೀ ಎಂ. ಕಡಕೋಳ

'ನನ್ನ ಜೀವನವಂತೂ ಬೆಳಗಿನ ಟೀ, ರಾತ್ರಿಯ ಹಾಲಿನ ನಡುವೆ ಸಿಲುಕಿಕೊಂಡಿದೆ. ಹಾಗೆಂದು ಮನಸಿನಲ್ಲಿ ಅಂದುಕೊಂಡ ಮರುಕ್ಷಣವೇ, 'ಸುಖೀ... ನನ್ನ ಅಂಡರ್‌ವೇರ್ ಸಿಕ್ತಾ ಇಲ್ಲ' ಅನ್ನುವ ಗಂಡನ ಕೂಗು ಅವಳನ್ನು ಎಚ್ಚರಿಸುತ್ತದೆ. ಶಾಲಾ ಗೆಳತಿಯರ ರೀ-ಯೂನಿಯನ್ ಮೆಸೇಜ್ ಬಂದದ್ದೇ ತಡ ಮತ್ತೆ ಅವಳೊಳಗೆ ಸಂಚಲನ ಸೃಷ್ಟಿ. ಅಂತೂ ಧೈರ್ಯ ಮಾಡಿ ಗಂಡನ ಬಳಿ, ರೀ-ಯೂನಿಯನ್‌ಗೆ ಹೋಗಲು ಅನುಮತಿ ಕೇಳಿದಾಗ, ಗಂಡನಿಂದ 'ಎಂಥಾ ತಾಯಿ ನೀನು. ಇನ್ನೆರಡು ತಿಂಗಳಲ್ಲಿ ಮಕ್ಕಳ ಬೋರ್ಡ್ ಪರೀಕ್ಷೆ ಇದೆ. ಅಂಥದ್ದರಲ್ಲಿ ಮಜಾ ಮಾಡೋಕೆ ಹೋಗ್ತೀನಿ ಅಂತೀಯಾಲ್ಲ. ಇಷ್ಟೊಂದು ಸ್ವಾರ್ಥಿ ನೀ ಯಾವಾಗ ಆದಿ' ಎಂಬ ನುಡಿಗಳು ಅವಳತ್ತ ನುಗ್ಗಿ ಬರುತ್ತವೆ.

'ನನ್ನ ಜೀವನದಿಂದ ಕೆಲ ಸಮಯವನ್ನಷ್ಟೇ ಬ್ರೇಕ್ ತೆಗೆದುಕೊಳ್ಳೋದು ತಪ್ಪಾ' ಎನ್ನುವ ತನ್ನ ಪ್ರಶ್ನೆಗೆ ಅವಳೇ ಉತ್ತರವನ್ನೂ ಕಂಡುಕೊಳ್ಳುತ್ತಾಳೆ. ನಟಿ ಶಿಲ್ಪಾಶೆಟ್ಟಿ ಅಭಿನಯದ 'ಸುಖೀ' ಚಿತ್ರದ ಟ್ರೈಲರ್ ಬಹುತೇಕ ಮಹಿಳೆಯರ ಜೀವನದ ಪ್ರತಿಬಿಂಬದಂತಿದೆ. ಸಿನಿಮಾದಲ್ಲಿನ ಶಿಲ್ಪಾಳಂತೆ, ನಿಜ ಜೀವನದಲ್ಲಿ ಮಹಿಳೆಯರು ತಮ್ಮ ಗೃಹಕೃತ್ಯಗಳಿಂದ ಆಗಾಗ ಬ್ರೇಕ್ ತೆಗೆದುಕೊಳ್ಳಲು ಸಾಧ್ಯವೋ ಇಲ್ಲವೋ ಗೊತ್ತಿಲ್ಲ. ಆದರೆ, ಖಂಡಿತವಾಗಿ ಅವರಿಗಾಗಿಯೇ 'ಮಿ' ಟೈಮ್ ಅಂತೂ ಬೇಕು.

ಗಂಡ, ಮಕ್ಕಳು, ಮನೆ, ಉದ್ಯೋಗಸ್ಥೆಯಾಗಿದ್ದರೆ ಕಚೇರಿ ಈ ನಾಲ್ಕರ ಚೌಕಟ್ಟಿನೊಳಗೆ ದುಡಿಯುವ ಮಹಿಳೆ ತನಗಾಗಿ ಅಂತ ಸಮಯ ಮಿಗಿಸಿಕೊಳ್ಳುವುದು ಅಪರೂಪವೇ. ಗಾಣದೆತ್ತಿನಂತೆ ದುಡಿಯುವ ಅವಳ ಹವ್ಯಾಸ, ಆಸೆ, ಅಭಿರುಚಿ, ಫ್ಯಾಷನ್-ಪ್ಯಾಷನ್ ಎಲ್ಲವೂ ನೇಪಥ್ಯದ ಪರದೆಯೊಳಗೆ ಅಡಗಿಬಿಡುತ್ತವೆ. ಹೀಗೆ ಅಡಗಿಕುಳಿತ ಅವಳೊಳಗಿನ ಅವಳನ್ನೇ ಪ್ರೀತಿಸಲು, ಸಮಾಧಾನಿಸಲು, ಸಾಂತ್ವನ ಹೇಳಿಕೊಳ್ಳಲೆಂದೇ 'ಮಿ' ಟೈಮ್ ಅಗತ್ಯ.

ತಿಂಗಳ ತನ್ನ ದುಡಿಮೆಯಲ್ಲೋ ಅಥವಾ ಗಂಡನ ದುಡಿಮೆಯಲ್ಲೋ ಸಾಸಿವೆ ಡಬ್ಬಿಯೊಳಗೆ ಕಾಸು ಕೂಡಿಡುವಷ್ಟೇ ಮಹತ್ವ ಈ 'ಮಿ ಟೈಮ್'ನದ್ದು. ಬರೀ ತನಗಾಗಿ, ತನ್ನ ದೈಹಿಕ-ಮಾನಸಿಕ ಆರೋಗ್ಯ, ಮನಸ್ಸಂತೋಷಕ್ಕಾಗಿ, ಕೆಲವೊಮ್ಮ ಏಕಾಂತದ ಸಾಂಗತ್ಯಕ್ಕಾಗಿ ಮತ್ತೆ ಕೆಲವೊಮ್ಮೆ ತನ್ನಿಷ್ಟದ ಹೋಟೆಲ್ಲೋ, ಸಿನಿಮಾವೋ, ಪಾರ್ಕೋ, ಮಾಲ್ ಹೀಗೆ ಏನೇ ಆಗಿರಲಿ ಅಲ್ಲಿಗೆ ಗೆಳತಿಯರ ಜೊತೆಗೋ ಅಥವಾ ಒಬ್ಬಳೇ ತುಸು ಸಮಯ ಕಳೆದು ರಿಲ್ಯಾಕ್ಸ್ ಆಗಲಿಕ್ಕಾದರೂ ಅವಳಿಗೆ ಅವಳದ್ದೇ ಆದ ಸಮಯ ಬೇಕು. ಅಲ್ಲಿ ನಿತ್ಯದ ಅಡುಗೆ ಜಂಜಾಟ, ಕಸಗುಡಿಸು, ನೆಲ ಒರೆಸು, ಪಾತ್ರೆ, ಬಟ್ಟೆ, ಹಿರಿಯರ- ಮಕ್ಕಳ ಆರೈಕೆ... ಹೀಗೆ ಎಲ್ಲಂದರಿಂದಲೂ ತುಸು ದೂರ ಸಾಗಿ ಅವಳು ತನಗಾಗಿ ಕಾಪಿಟ್ಟುಕೊಳ್ಳುವಂಥ 'ಮಿ' ಟೈಮ್ ಅವಳಲ್ಲಿ ನವ ಚೈತನ್ಯ ಮೂಡಿಸದೇ ಇರದು.

ಗೃಹಿಣಿಯಾಗಿರಲಿ, ಉದ್ಯೋಗಸ್ಥೆಯಾಗಿರಲಿ ಮಹಿಳೆ ತನಗಾಗಿ 'ಮಿ' ಟೈಮ್' ಕಂಡುಕೊಳ್ಳುವುದು ಅವಳ ದೈಹಿಕ-ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು ಅನ್ನುತ್ತಾರೆ ಮನೋವೈದ್ಯರು.

'ಮಗಳು, ಹೆಂಡತಿ, ತಾಯಿ, ಉದ್ಯೋಗಸ್ಥೆ... ಹೀಗೆ ಹಲವು ಪಾತ್ರಗಳನ್ನು ನಿಭಾಯಿಸುವ ಮಹಿಳೆ, ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಒತ್ತಡಕ್ಕೀಡಾಗುತ್ತಿದ್ದಾಳೆ. 'ಮಿ' ಟೈಮ್ ಅವಳೊಳಗಿನ ಶಕ್ತಿಯ ನವೀಕರಣಕ್ಕೆ ಪೂರಕವಾಗಬಲ್ಲದು' ಎನ್ನುತ್ತಾರೆ ಮಹಿಳೆಯರ ಕುರಿತಂತೆ ಅಧ್ಯಯನ ನಡೆಸಿರುವ ವೇಲ್ಯಾಂಡ್‌ನ ಮನೋತಜ್ಞ ರಾಂಡಿ ಕಾಮೆನ್ ಗ್ರೆಡಿಂಗರ್.

ಗಂಡ ಉದ್ಯೋಗಕ್ಕೆ, ಮಕ್ಕಳು ಶಾಲೆಗೆ ಹೋದ ಮೇಲೆ ಮನೆಯಲ್ಲಿ ಹೆಂಗಸರಿಗೇನು ಕೆಲಸ? ಆರಾಮವಾಗಿ ಟಿ.ವಿನೋ, ಮೊಬೈಲೋ ನೋಡಿಕೊಂಡು ಇರ್ತಾರೆ... ಆದರೆ, ಗೃಹಕೃತ್ಯಗಳದ್ದು ಎಷ್ಟು ಮುಗಿಸಿದರೂ ಮುಗಿಯದ ಕೆಲಸ ಎನ್ನುವುದನ್ನು ಹೀಗೆ ಹೇಳುವವರು ಮರೆತುಬಿಡುತ್ತಾರೆ. ಒಂದು ಕೆಲಸ ಮುಗಿಯುತ್ತಿದ್ದಂತೆಯೇ ಮತ್ತಷ್ಟು ಕೆಲಸಗಳು ಗೃಹಿಣಿಗೆ ಸಾಲಾಗಿ ಮೆರವಣಿಗೆಯಂತೆ ಕಾದಿರುತ್ತವೆ. ಅದರಲ್ಲೂ ಉದ್ಯೋಗಸ್ಥೆ ಮಹಿಳೆಯರದ್ದು ಡಬಲ್ ರೋಲ್. ಕಚೇರಿಯ ನಿತ್ಯದ ಕೆಲಸಗಳಲ್ಲಿ ಅಪ್‌ಡೇಟ್ ಆಗುತ್ತಲೇ ಇತ್ತ ಮನೆವಾರ್ತೆಗಳನ್ನೂ ನಿಭಾಯಿಸಬೇಕು. ಎರಡೂ ಕೆಲಸಗಳಲ್ಲೂ ಗುಣಮಟ್ಟಕ್ಕೆ ರಾಜಿಯಾಗದ ಅವಳ ಮೇಲೆ ಒತ್ತಡದ ತೂಗುಕತ್ತಿ ತೂಗುತ್ತಲೇ ಇರುತ್ತದೆ. ಅವಳು ದಿನದಲ್ಲಿ 30 ನಿಮಿಷವೋ, ವಾರಾಂತ್ಯದಲ್ಲಿ ಒಂದು ದಿನವೋ, ತಿಂಗಳಲ್ಲಿ ಒಂದೆರಡು ದಿನವಾದರೂ ತನ್ನೆಡೆಗೆ ಗಮನ ಹರಿಸಿಕೊಳ್ಳಬೇಕಾಗಿರುವುದು ಅಗತ್ಯ. ನಿಮಗಾಗಿ ನೀವು ಕೊಟ್ಟುಕೊಳ್ಳುವ 'ಮಿ' ಟೈಮ್' ನಿಮ್ಮ ಜೀವನಪ್ರೀತಿ, ಮನೋಬಲವನ್ನು ಹೆಚ್ಚಿಸಬಲ್ಲದು. ಹಾಗಾದರೆ ಇನ್ನೇಕೆ ತಡ? ನಿಮಗಾಗಿ ನೀವು ಸಮಯ ಹೊಂದಿಸಿಕೊಳ್ಳಲು ರೆಡಿನಾ?

'ಮಿ' ಟೈಮ್‌ನಲ್ಲಿ ಏನೇನು ಮಾಡಬಹುದು?

ಒಬ್ಬರ 'ಮಿ' ಟೈಮ್ ಮತ್ತೊಬ್ಬರಿಗಿಂತ ಭಿನ್ನವಾಗಿರಬಹುದು. ಇಷ್ಟವಾದ ಪುಸ್ತಕ ಓದುವುದು, ಸಂಗೀತ ಕೇಳು ಇಲ್ಲವೇ ಹಾಡುವುದು, ಸಿನಿಮಾ ನೋಡುವುದು, ವಾಕಿಂಗ್ ಹೋಗುವುದು, ದೀರ್ಘ ಸ್ನಾನ, ಬ್ಯೂಟಿಪಾರ್ಲರ್‌ಗೆ ಹೋಗುವುದು, ಮನೆಯಲ್ಲೇ ಫೇಸ್ ಪ್ಯಾಕ್ ಹಾಕಿಕೊಳ್ಳುವುದು, ಇಷ್ಟದ ನೇಲ್ ಪಾಲಿಷ್ ಹಚ್ಚಿಕೊಳ್ಳುವುದು, ಸ್ನೇಹಿತರೊಂದಿಗೆ ಸಮಯ ಕಳೆಯುವುದು, ಪೇಂಟಿಂಗ್ ಮಾಡುವುದು, ನಿಮ್ಮ ಪುಟ್ಟ ಉದ್ಯಾನದಲ್ಲಿ ನಿರಾಳವಾಗಿ ಕುಳಿತು ಒಂದು ಕಪ್ ಚಹಾನೋ, ಕಾಫಿಯನ್ನೋ ಕುಡಿಯುವುದು, ಇದ್ಯಾವುದು ಅಲ್ಲದಿದ್ದರೂ ಒಳ್ಳೆಯ ನಿದ್ದೆ ಮಾಡುವುದು ಕೂಡಾ ದೇಹ-ಮನಸಿನ ಉತ್ಸಾಹ ಹೆಚ್ಚಿಸಬಹುದು.

ಕೆಲವರು ಯೋಗ, ಧ್ಯಾನ ಇಲ್ಲವೇ ದೈವದ ಮೊರೆ ಹೋಗಬಹುದು. ಧ್ಯಾನಸ್ಥ ಸ್ಥಿತಿಯು ನಿಮ್ಮ ಮೈ-ಮನಸಿನ ಅವಲೋಕನಕ್ಕೆ ರಹದಾರಿಯಾಗಬಲ್ಲದು. ಇಷ್ಟು ವರ್ಷಗಳಲ್ಲಿ ಮಾಡಿದ್ದೇನು? ಮುಂದೆ ಏನೇನು ಮಾಡಬಹುದು ಎನ್ನುವುದನ್ನು ಕಂಡುಕೊಳ್ಳಲು 'ಮಿ ಟೈಮ್' ಅನುವು ಮಾಡಿಕೊಡುತ್ತದೆ.

ಯಾಕೆ ಬೇಕು ನಿಮಗಾಗಿ ಈ ಸಮಯ?

ನಿಮ್ಮನ್ನು ನೀವು ದೈಹಿಕ-ಮಾನಸಿಕವಾಗಿ ಅವಲೋಕನ ಮಾಡಿಕೊಳ್ಳಲು 'ಮಿ' ಟೈಮ್ ಅತ್ಯಗತ್ಯ. ಇಷ್ಟು ದಿನ ದಣಿವರಿಯದೇ ದುಡಿದ ನಿಮ್ಮ ಮೈ-ಮನಕ್ಕೆ ತುಸು ವಿಶ್ರಾಂತಿ ದೊರೆತರೆ ದೇಹ ತನ್ನಿಂತಾನೆ ಚೈತನ್ಯಭರಿತವಾಗುತ್ತದೆ. ಕುಟುಂಬ ಸದಸ್ಯರು, ಮನೆಕೆಲಸ, ಕಚೇರಿಯ ಕೆಲಸದಲ್ಲಿ ಕಳೆದುಹೋಗಿರುವ ನಿಮ್ಮೊಳಗಿನ ನಿಮ್ಮನ್ನು ಕಂಡುಕೊಳ್ಳಲು ಇಂಥ ಸಮಯ ಸಹಕಾರಿಯಾಗಬಲ್ಲದು. 'ಮಿ' ಟೈಮ್ ಅನ್ನುವಂಥದ್ದು ನಿಮಗಾಗಿ ನೀವೇ ಕೊಟ್ಟುಕೊಳ್ಳುವ ಕ್ವಾಲಿಟಿ ಟೈಮ್.

ಮನಸಿನಲ್ಲಿ ಉತ್ಸಾಹವಿದ್ದರೂ ದೇಹ ದಣಿದಿದ್ದರೆ ನೀವು ಮಾಡಬೇಕಾದ ಕೆಲಸಗಳು ಬಾಕಿ ಉಳಿಯುತ್ತವೆ. ಜತೆಗೆ ಒತ್ತಡವೂ ಸೇರಿಕೊಂಡು ನಿಮ್ಮ ಉತ್ಸಾಹಕ್ಕೆ ತಣ್ಣೀರೆರಚಹುದು. ಹಾಗಾಗಿ, ಮೈ-ಮನಸು ಎರಡೂ ಪರಸ್ಪರ ಬೆರೆಯಲು 'ಮಿ' ಟೈಮ್ ಸಹಕಾರಿಯಾಗಬಲ್ಲದು. ಮನೆ/ಕಚೇರಿಗಳಲ್ಲಿ ನಿಮ್ಮ ಉತ್ಪಾದಕತೆಯ ಗುಣಮಟ್ಟ ಹೆಚ್ಚಳಕ್ಕೂ ಇದು ಅಗತ್ಯ.

ಚಂದಕ್ಕಿಂತ ಚಂದ 'ಚದುರಂಗ ಚುಕ್ಕಿ'

ಇಮಾಮ್‌ಹುಸೇನ್ ಗೂಡುನವರ

ಉಡುಗೆ ತೊಡುಗೆ

ಚದರುಂಗ ಚುಕ್ಕಿ ಸೀರಿಯುಟ್ಟು ಬಂದಾಳ ನೀರಿಗೆ ಬಾಲೆ ಅಂತ ಜನಪದರು ಹಾಡ್ತಾರ. ಕರಿಸೀರಿ ಉಟ್ಟರ ಕರಿಸಿರಿ ಬರ್ತದ ಅಂತ ನಂಬಿಕೆಯೂ ಇದೆ. ಆನೆಯಷ್ಟು ಸಿರಿ ತರುವ ಈ ಕರಿಸೀರೆ ಮಹಾಲಯ ಅಮವಾಸೆಗೆ ಉಡುವುದು ಪ್ರತೀತಿ. ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ನೇಯುವ ಈ ಸೀರೆಗಳಿಗೆ ಸದಾ ಬೇಡಿಕೆ ಇರುತ್ತದೆ.

ಇದರ ಹೆಸರು 'ಚದುರಂಗ ಚುಕ್ಕಿ ಸೀರೆ'. ಸೀರೆಯ ಮೇಲೆ ಚದುರಂಗದಾಟದ ರೀತಿಯ ಕೋಣೆಗಳ ಚಿತ್ತಾರದಿಂದಲೇ ಈ ಹೆಸರು ಬಂದಿದೆ. ಪಕ್ಕಾ ದೇಸಿ ದಡಿಯ ಈ ಸೀರೆಯಲ್ಲಿ ಕಪ್ಪು, ನೀಲಿ, ನೇರಳೆ, ಹಸಿರು, ಕಪ್ಪು ಹಸಿರು, ಮೆಜೆಂತಾ, ಕೆಂಪು ಸೇರಿ 20ಕ್ಕೂ ಅಧಿಕ ಬಣ್ಣ ಬಳಸಲಾಗುತ್ತಿದೆ.

ರಾಮದುರ್ಗದಲ್ಲಿ ಹಲವು ಕುಟುಂಬಗಳು ನೇಕಾರಿಕೆಯನ್ನೇ ನೆಚ್ಚಿಕೊಂಡು ಬದುಕಿನ ಬಂಡಿ ದೂಡುತ್ತಿವೆ. ನೂಲು, ರೇಷ್ಮೆ ಮತ್ತು ಮಸ್ರಾಯಿ ಬಳಸಿ ಸೀರೆ ನೇಯುತ್ತಿವೆ. ಇವು ಮಳೆಗಾಲ ಹೊರತುಪಡಿಸಿ, ಉಳಿದೆಲ್ಲ ಕಾಲಕ್ಕೂ ಒಗ್ಗುತ್ತವೆ. ಈ ಸೀರೆಗಳೆಂದರೆ ಮಧ್ಯಮ ವರ್ಗದ ಮಹಿಳೆಯರಿಗೆ ಬಲುಇಷ್ಟ.

'ಚುಕ್ಕಿಗಳಿಂದ ತುಂಬಿರುವ ಈ ಸೀರೆ ಚೌಕಾಕಾರದ ಗೆರೆಗಳ ವಿನ್ಯಾಸ ಹೊಂದಿದೆ. ವಿವಿಧ ವಿನ್ಯಾಸಗಳ ಜರಿಗಳು, ಆಕರ್ಷಕ ಸೆರಗು ಮತ್ತು ಚುಕ್ಕಿ ಪರಾಸ್ ಬಾರ್ಡರ್ ಆಕರ್ಷಿಸುವಂತಿದೆ. ಇದಕ್ಕೆ 'ಕರಿ ಚಂದ್ರಿಕಾ' ಸೀರೆ ಎಂತಲೂ ಕರೆಯಲಾಗುತ್ತದೆ. ಮದುವೆ, ವಿವಿಧ ಸಮಾರಂಭಗಳಲ್ಲೂ ಇದನ್ನು ತೊಡಬಹುದು' ಎನ್ನುತ್ತಾರೆ ನೇಕಾರ ಏಕನಾಥ ಕೊಣ್ಣೂರ.

'ಚದುರಂಗ ಚುಕ್ಕಿ' ಸೀರೆಗೆ ಕರ್ನಾಟಕ ಮಾತ್ರವಲ್ಲದೆ; ಮಹಾರಾಷ್ಟ್ರ ಮಾರುಕಟ್ಟೆಯಲ್ಲೂ ಬೇಡಿಕೆಯಿದೆ. ಈಗ ಆನ್‌ಲೈನ್‌ನಲ್ಲಿಯೂ ಈ ಸೀರೆಗಳ ಮಾರಾಟವಾಗುತ್ತಿದೆ. ₹1,000ದಿಂದ ₹10 ಸಾವಿರದವರೆಗೆ ದರವಿದೆ.

'ನಾವು ಮಾರುಕಟ್ಟೆಯಲ್ಲಿ ಹಿಂದಿರಬಹುದು. ಆದರೆ, ಹೊಸ ಹೊಸ ವಿನ್ಯಾಸಗಳ ಸೀರೆ ಸಿದ್ಧಪಡಿಸುತ್ತ ಬಂದಿದ್ದೇವೆ. ಪ್ರತಿವರ್ಷವೂ ಬಗೆಬಗೆಯ ವಿನ್ಯಾಸಗಳ ಸೀರೆ ಇಲ್ಲಿ ಸಿದ್ಧವಾಗುತ್ತಿವೆ' ಎಂದು ಮತ್ತೊಬ್ಬ ನೇಕಾರ ರಾಜೇಂದ್ರ ಕೊಳದೂರ ಹೇಳುತ್ತಾರೆ.

'ಬೆಳದಿಂಗಳ ರಾತ್ರಿಗೆ,
ಕರಿಸೀರಿಯುಟ್ಟು ಕೆರಿದಂಡಿಗೆ
ಬಂದಾಳ
ನೀರಾಗಿನ ಚಂದ್ರ ನೋಡುವ
ಬಾಲೆಗ, ಚಂದ್ರನೂ ನೋಡಿ
ನಸುನಕ್ಕಾನ'

ಬೆಳದಿಂಗಳ ರಾತ್ರಿಯಲ್ಲಿ ತನ್ನ ಕಾಣಲು ಬರುವ ಹುಡುಗಿಯ ಕುರಿತು ಪ್ರಿಯಕರ ಹೇಳುವ ಹಾಡಿದು.

ಕರಿಚದುರಂಗ ಸೀರೆಯ ಜನಪ್ರಿಯತೆ ಹೀಗೆ ಜನಪದರಲ್ಲಿ ಹಾಸುಹೊಕ್ಕಿದೆ.

ಮೊದಲೆಲ್ಲ ಅಪ್ಪಟ ರೇಷ್ಮೆಸೀರೆಯಲ್ಲಿ ನೇಯ್ದು, ಮೊದಲ ದೀವಳಿಗೆಗೆ ಬರುವ ಮಗಳಿಗೆ ಉಡಿಸುತ್ತಿದ್ದರು. ಆ ಸೀರೆ ಮಗಳಿಂದ ಮಗಳಿಗೆ ಹೋಗಿ, ಅವಳುಟ್ಟು, ನೇವರಿಸಿ, ಅದು ಸವೆದು ಹೋದಾಗ, ಹರಿದು ಮಕ್ಕಳಿಗೆ ಕುಂಚಗಿ, ಕುಲಾವಿ ಹೊಲಿಸುತ್ತಿದ್ದರು. ಮೆತ್ತನೆಯ ಈ ಕುಲಾವಿಗಳು ಕಣ್ಮರೆಯಾದ ಮುತ್ತಜ್ಜ, ಮುತ್ತಜ್ಜಿಯ ಆಶೀರ್ವಾದ ಮೊಮ್ಮಕ್ಕಳಿಗೆ ದಕ್ಕಲಿ ಎಂಬಂತೆಯೂ ಆಗುತ್ತಿತ್ತು.

ಈಗ ಕಾಟನ್ ಸೀರೆಗೆ ರೇಷ್ಮೆ ಸೆರಗು, ಒಂದೆಳೆ ಕಾಟನ್ ಮತ್ತೆ ರೇಷ್ಮೆ ಮಿಶ್ರಣ ಮಾಡಿಯೂ ನೇಯುತ್ತಾರೆ. ಸಂಪ್ರದಾಯವೂ ಉಳಿಯಬೇಕು. ಜೇಬಿಗೂ ಭಾರವಾಗಬಾರದು ಎಂಬ ಕಾಳಜಿಯೂ ಎದ್ದು ಕಾಣುತ್ತದೆ. ಮಹಾರಾಷ್ಟ್ರದ ಗಡಿಯಲ್ಲಿರುವ ನೇಕಾರರಿಗೆ ಮಹಾರಾಷ್ಟ್ರ ಮೂಲದ ಹಲವಾರು ಆಚರಣೆಗಳು ಕೈ ಹಿಡಿದಿವೆ. ಅಲ್ಲಿಯ ಧಾರಾವಾಹಿಗಳಲ್ಲಿಯೂ ಚದುರಂಗ ಚುಕ್ಕಿ ಸೀರೆಗಳು ಕಾಣಿಸಿಕೊಳ್ಳುತ್ತವೆ.

ಕನ್ನಡತನವನ್ನು ಎತ್ತಿಹಿಡಿಯಬೇಕಾದಲ್ಲಿ ಕನ್ನಡದ ಮನೋರಂಜನಾ ಪ್ರಪಂಚದಲ್ಲಿಯೂ ನಮ್ಮ ವಸ್ತ್ರವೈಭವವನ್ನು ಎತ್ತಿ ಹಿಡಿಯುವಂತಾಗಬೇಕು. ಆದರೆ ಈ ಸಣ್ಣೆಳೆಯು, ಪುಟ್ಟ ಚೌಕಿಮನೆಯ ಸೀರೆಗಳು ದುಡಿಯುವ ವರ್ಗಕ್ಕೆ ಮಾತ್ರ ಸೀಮಿತವಾಗಿವೆ.

ಹಳೆ ತಲೆಮಾರಿನವರು ಈಗಲೂ ದೀವಳಿಗೆಗೆ ಮುನ್ನ, ಮಹಾನವಮಿಯಲ್ಲಿ ಒಂದಾದರೂ ಕರಿ ಚದುರಂಗ ಚುಕ್ಕಿ ಸೀರೆ ಖರೀದಿಸುತ್ತಾರೆ. ಕರಿಯಾಕಾಶದಲ್ಲಿಯ ಚುಕ್ಕಿ ಹರಡಿದಂಥ ಸೀರೆಯುಟ್ಟು, ಚಂದ್ರಮನಂತೆ ಮನೆಮಗಳು ಕಂಗೊಳಿಸಲಿ ಎಂಬ ಆಶಯ ಎಲ್ಲ ಹೆತ್ತವರದ್ದೂ ಆಗಿರುತ್ತದೆ.

ಪೂರಕ ಮಾಹಿತಿ: ಚನ್ನಪ್ಪ ಮಾದರ

'ಚದುರಂಗ ಚುಕ್ಕಿ' ಸೀರೆ

ಲೈಂಗಿಕತೃಪ್ತಿ ಸಿಗುತ್ತಿಲ್ಲ; ಪರಿಹಾರವೇನು?

ಸ್ಪಂದನ

ಡಾ. ವೀಣಾ ಎಸ್. ಭಟ್

- **ನನ್ನ ಗಂಡನ ವಯಸ್ಸು 41, ನನ್ನದು 25. ಆದರೆ, ನನ್ನ ಗಂಡನಿಂದ ಲೈಂಗಿಕ ಸುಖ ಸಿಗುತ್ತಿಲ್ಲ. ಲೈಂಗಿಕತೆಯಲ್ಲಿ ಅವರಿಗೆ ಆಸಕ್ತಿಯೇ ಇಲ್ಲ. ಹೇಗೆ ಸರಿಪಡಿಸಬಹುದು?**

ಉತ್ತರ: ನಿಮ್ಮಿಬ್ಬರಲ್ಲಿ 10 ವರ್ಷಕ್ಕೂ ಹೆಚ್ಚು ಅಂತರವಿದೆ. ಲೈಂಗಿಕ ಕ್ರಿಯೆ ಹಾಗೂ ತೃಪ್ತಿಗೆ ಇದೇನೂ ತೊಂದರೆ ಆಗಲಾರದು. ಆರೋಗ್ಯವಂತ ಪುರುಷರಲ್ಲಿ ಲೈಂಗಿಕಕ್ರಿಯೆ ನಡೆಸುವ ಸಾಮರ್ಥ್ಯ 55ರಿಂದ 60 ವರ್ಷದವರೆಗೂ ಚೆನ್ನಾಗಿರುತ್ತದೆ. ಲೈಂಗಿಕ ಆಸಕ್ತಿ ಲೈಂಗಿಕ ಅಭಿವ್ಯಕ್ತಿಯ ಮೊದಲ ಘಟ್ಟ. ಈ ಬಗ್ಗೆ ವೈದ್ಯಕೀಯ ಅರಿವಿನ ಅಗತ್ಯವಿದೆ.ಯಾವುದೇ ವ್ಯಕ್ತಿಯ ಲೈಂಗಿಕ ಚೋದಕ ಶಕ್ತಿ ಮೆದುಳಿನ ಲಿಂಬಿಕ್‌ವ್ಯವಸ್ಥೆ, ನರಮಂಡಲ ವ್ಯವಸ್ಥೆಯ ಹೊಂದಾಣಿಕೆಯನ್ನು ಅವಲಂಬಿಸಿದೆ, ಮತ್ತು ಟೆಸ್ಟೋಸ್ಟಿರಾನ್ ಹಾರ್ಮೋನ್ ಮಟ್ಟವನ್ನು ಅವಲಂಬಿಸಿದೆ. ನಿಮ್ಮ ಹೇಳಿಕೆಗೆ ವ್ಯತಿರಿಕ್ತ ಎನಿಸಿದರೂ ಪುರುಷರಲ್ಲಿಯೇ ಸಾಮಾನ್ಯವಾಗಿ ಲೈಂಗಿಕ ಚೋದಕ ಶಕ್ತಿ ಸ್ತ್ರೀಯರಿಂದ 3ರಿಂದ 5ಪಟ್ಟು ಹೆಚ್ಚಿರುತ್ತದೆ. ಗಂಡಸರೇ ಮೊದಲು ಲೈಂಗಿಕ ಬಯಕೆ ವ್ಯಕ್ತಪಡಿಸುತ್ತಾರೆ. ಹೆಂಗಸರಲ್ಲಿಯೂ ಲೈಂಗಿಕಾಸಕ್ತಿ ಟೆಸ್ಟೋಸ್ಟಿರಾನ್ ಮಟ್ಟವನ್ನು ಅವಲಂಬಿಸಿದೆ. ಮಹಿಳೆಯರಲ್ಲಿ ಋತುಚಕ್ರಕ್ಕೆ ಅನುಗುಣವಾಗಿ ಲೈಂಗಿಕ ಆಸಕ್ತಿಯಲ್ಲಿ ಬದಲಾವಣೆಗಳಾಗುತ್ತವೆ.

ಅಂಡಾಶಯದಿಂದ ಪ್ರತಿತಿಂಗಳು ಅಂಡಾಣು ಬಿಡುಗಡೆಯಾಗುವ ಸಂದರ್ಭದಲ್ಲಿ ಲೈಂಗಿಕ ಭಾವನೆಗಳು ಉತ್ಕಟಗೊಳ್ಳಬಹುದು. ಇದು ಜೀವ ವಿಕಾಸ ಸೂತ್ರಕ್ಕೆ ಪೂರಕವಾದದ್ದು. ಮುಟ್ಟಿನ ಮುನ್ನಾ ದಿನಗಳಲ್ಲೂ ಲೈಂಗಿಕ ಆಸಕ್ತಿ ಹೆಚ್ಚಬಹುದು.

ಹೆಚ್ಚಿನ ಮಹಿಳೆಯರು ತಮ್ಮಲ್ಲಿರುವ ಲೈಂಗಿಕ ಆಸಕ್ತಿಯನ್ನ ಅದುಮಿಡುತ್ತಾರೆ. ನೀವು ಈ ಬಗ್ಗೆ ಮುಕ್ತ ಮನಸ್ಸಿನಿಂದ ಹೇಳಿಕೊಂಡಿರುವುದು ಶ್ಲಾಘನೀಯ.

ನಿಮ್ಮ ಪತಿಯಲ್ಲಿ ಲೈಂಗಿಕ ಚೇತನ, ಚೋದಕ ಶಕ್ತಿ ಕಡಿಮೆಯಾಗಿದ್ದರೆ ಅದು ಕಾಯಿಲೆಯ ಲಕ್ಷಣವೂ ಇರಬಹುದು. ಅತಿಯಾದ ತೂಕ, ಅತಿ ಕಡಿಮೆತೂಕ, ಮಧುಮೇಹ, ಅತಿಯಾದರಕ್ತದೊತ್ತಡ, ನಿಶ್ಯಕ್ತಿ ಇದ್ದಾಗಲೂ ಈ ಸಮಸ್ಯೆ ಇರುತ್ತದೆ. ಇದಲ್ಲದೆ ಮಾನಸಿಕ, ಸಾಮಾಜಿಕ, ಕಾರಣಗಳಿಂದಲೂ ಲೈಂಗಿಕ ನಿಶ್ಯಕ್ತಿ ಉಂಟಾಗಬಹುದು. ಉದಾಹರಣೆಗಾಗಿ ಖಿನ್ನತೆ, ಆತಂಕ, ನಿಶ್ಚಿತವಿಕಲತೆ ಇತ್ಯಾದಿಗಳಿಂದಲೂ ಲೈಂಗಿಕ ನಿಶ್ಯಕ್ತಿ ಆಗಬಹುದು. ಅತಿಯಾದ ಧೂಮಪಾನ, ಮದ್ಯಪಾನ ಚಟ ಕೂಡ ಲೈಂಗಿಕ ಶಕ್ತಿ ಕಡಿಮೆ ಮಾಡಬಲ್ಲವು. ನಿದ್ರೆಮಾತ್ರೆಸೇವನೆ, ಕೆಲವು ರಕ್ತದೊತ್ತಡದ ಔಷಧಗಳು ಲೈಂಗಿಕ ಚೋದಕ ಶಕ್ತಿ ಕಡಿಮೆ ಮಾಡಬಲ್ಲವು. ಇವೆಲ್ಲವುಗಳ ಬಗ್ಗೆ ನೀವು ಗಮನವಹಿಸಿ. ಇಷ್ಟೇ ಅಲ್ಲದೇ ಬೆಳವಣಿಗೆ, ವಾತಾವರಣ, ವಂಶಪಾರಂಪರಿಕತೆ ಎಲ್ಲವೂ ಲೈಂಗಿಕಶಕ್ತಿ ನಿರ್ಧರಿಸುತ್ತದೆ. ಹೆಚ್ಚು ಲೈಂಗಿಕಶಕ್ತಿ ಇರುವವರಲ್ಲಿ ಲೈಂಗಿಕ ಕಾಮನೆ, ಕನಸುಗಳು ಅಧಿಕವಾಗಿರುತ್ತದೆ.

ಹಾಗೆಯೇ ಲೈಂಗಿಕ ಕ್ರಿಯೆಯಿಂದ ವಿಮುಖರಾಗಿ ದೂರ ಉಳಿದಂತೆಲ್ಲ ಲೈಂಗಿಕ ಆಸಕ್ತಿ, ಶಕ್ತಿಯೂ ಕಡಿಮೆಯಾಗುತ್ತಾ ಹೋಗುತ್ತದೆ. ಇವೆಲ್ಲದರ ಜೊತೆಗೆ ನಿಮ್ಮಿಬ್ಬರಲ್ಲಿ ಪರಸ್ಪರ ಅನ್ಯೋನ್ಯತೆ, ಒಬ್ಬರನ್ನೊಬ್ಬರು ಅರಿತು ಸ್ಪಂದಿಸುವುದು, ಹೊಂದಾಣಿಕೆ ತೋರುವುದು ಇವೆಲ್ಲಾ ಲೈಂಗಿಕ ಅನ್ಯೋನ್ಯತೆಗೆ ಅತಿ ಅವಶ್ಯಕಸಂಗತಿಗಳು. ನೀವಿಬ್ಬರೂ ಸ್ನೇಹಪೂರ್ಣ ಭಾವನೆಯಿಂದ ಇದ್ದೀರಲ್ಲವೇ? ಲೈಂಗಿಕಕ್ರಿಯೆಯ ಬಗ್ಗೆ ನಿಮಗೆ ಏನಾದರೂ ತಪ್ಪು ಕಲ್ಪನೆಗಳು ಇವೆಯೇ? ನಿಮಗೆ ವಿವಾಹವಾಗಿ ಎಷ್ಟು ಸಮಯ ಆಯಿತು? ಯಾವುದನ್ನು ನೀವು ತಿಳಿಸಿಲ್ಲ. ನಿಮ್ಮಿಬ್ಬರಲ್ಲಿ ಪರಸ್ಪರ ನಂಬಿಕೆ, ಸಾಂಗತ್ಯ, ಪರಸ್ಪರ ಗುಣನಡವಳಿಕೆ ಅರಿಯುವುದು, ಸೂಕ್ತವಾಗಿ ಸ್ಪಂದಿಸುವುದು ಇತ್ಯಾದಿ ಈ ವಿಷಯದಲ್ಲಿ ಸಹಾಯವಾಗಬಹುದು. ಜೊತೆಗೆ ಹಾರ್ಮೋನುಗಳ ಇನ್ನಿತರ ದೈಹಿಕ ಸಮಸ್ಯೆಗಳಿವೆಯೇ ಎಂದು ತಜ್ಞವೈದ್ಯರ ಸಲಹೆ ಪಡೆಯಿರಿ. ನಿಮ್ಮ ಮುಂದಿನ ಜೀವನ ಸುಗಮವಾಗಲಿ.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಅಂಟಿನ ನಂಟು ಗೋಕಾಕ ಕರದಂಟು

ಸುಷ್ಮಾ ಸವಸುದ್ದಿ

ನಳಪಾಕ

ಗೋಕಾಕ ಹೆಸರು ಕೇಳಿದ ತಕ್ಷಣ ಅದರ ಮುಂದೆ 'ಫಾಲ್ಸ್', 'ಕರದಂಟು' ಪದಗಳು ಅಪ್ರಯತ್ನಾಪೂರ್ವಕವಾಗಿ ಸೇರಿಕೊಂಡು ಬಿಡುತ್ತವೆ. ಗೋಕಾಕ ಜತೆಗೆ ಹೀಗೆ ಬಿಡಸಲಾರದಂತೆ ತಳಕು ಹಾಕಿಕೊಂಡ ಕರದಂಟಿಗೆ ಶತಮಾನಗಳ ಇತಿಹಾಸವಿದೆ. ಗೋಕಾಕಿನ ಅಜ್ಜ ಒಬ್ಬರು ಬೆಲ್ಲ, ತುಪ್ಪ, ಅಂಟು, ಒಣಹಣ್ಣು ಸೇರಿಸಿ ಚಕ್ಕ ರೀತಿಯ ಸಿಹಿ ಖಾದ್ಯ ತಯಾರಿಸಿ, ಸುತ್ತ ಊರಿನ ಜಾತ್ರೆಗಳಲ್ಲಿ ಮಾರಾಟ ಮಾಡ್ತಾ ಇದ್ದರಂತೆ. ಅವರ ಕೈ ರುಚಿಯ ಸ್ವಾದಕ್ಕೆ ಮರುಳಾದ ಜನ ಗೋಕಾಕ ಅಜ್ಜಾನ ಕರದಂಟಿಗೆ ಬೇಡಿಕೆಯನ್ನೂ ಹೆಚ್ಚಿಸಿದರು. ಹೀಗೆ ಗೋಕಾಕಿನ ಅಜ್ಜ ಆರಂಭಿಸಿದ ಕರದಂಟು ಇಂದು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಪಡೆದಿದೆ.

ನಿಸರ್ಗದತ್ತವಾಗಿ ಸಿಗುವ ಅಂಟನ್ನು ಬಳಸಿಕೊಂಡು ಈ ಖಾದ್ಯವನ್ನು ತಯಾರಿಸುವುದು ಇದರ ವಿಶೇಷ. ಅಂಟನ್ನು ಕರೆದು ಮಾಡುವುದರಿಂದ ಇದಕ್ಕೆ 'ಕರದಂಟು' ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಬೆಲ್ಲ, ತುಪ್ಪ, ಒಣಹಣ್ಣುಗಳಂತಹ ಪೌಷ್ಟಿಕಾಂಶವಿರುವ ಪದಾರ್ಥಗಳನ್ನು ಬಳಸಿ ತಯಾರು ಮಾಡುವ ಈ ಖಾದ್ಯ ಬಾಣಂತಿಯರಿಗೆ, ಕ್ರೀಡಾಪಟುಗಳಿಗೆ, ಬೆಳೆಯುವ ಮಕ್ಕಳಿಗೆ ಉತ್ತಮ ಎಂದು ತಜ್ಞರಿಂದ ದೃಢಪಟ್ಟಿದೆ.

ಬೇಕಾಗುವ ಸಾಮಗ್ರಿಗಳು: ಅರ್ಧ ಕಪ್ ತುಪ್ಪ, ಅರ್ಧ ಕಪ್ ಒಣ ಕೊಬ್ಬರಿ, ಅರ್ಧ ಕಪ್ ಅಂಟು, ಮುಕ್ಕಾಲು ಕಪ್ ಗೋಡಂಬಿ, ಬಾದಾಮಿ, ಪಿಸ್ತಾ, ಒಣ ದ್ರಾಕ್ಷಿ, ಅಂಜೂರ, ಒಣ ಖರ್ಜೂರ, 1 ಕಪ್ ಬೆಲ್ಲ, ಅರ್ಧ ಕಪ್ ಅಂಜುರು ಹಣ್ಣು, ಸ್ವಲ್ಪ ಏಲಕ್ಕಿ, ಆಳ್ವಿ, ಗಸಗಸೆ

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ತುರಿದ ಒಣ ಕೊಬ್ಬರಿಯನ್ನು ಹುರಿದುಕೊಳ್ಳಬೇಕು. ತುಪ್ಪವನ್ನು ಕುದಿಸಿ ಅದರಲ್ಲಿ ಅಂಟನ್ನು ಹುರಿದುಕೊಂಡು, ಅದನ್ನು ಹುರಿದಿಡಲಾದ ಒಣ ಕೊಬ್ಬರಿಗೆ ಸೇರಿಸಬೇಕು. ನಂತರ ಅದೇ ತುಪ್ಪದಲ್ಲಿ ಒಣ ಹಣ್ಣುಗಳಾದ ಗೋಡಂಬಿ, ಬಾದಾಮಿ, ಪಿಸ್ತಾ, ಒಣದ್ರಾಕ್ಷಿ, ಅಂಜೂರು, ಒಣ ಖರ್ಜೂರಗಳನ್ನು ಹುರಿದು, ಈ ಒಣ ಕೊಬ್ಬರಿ ತುರಿಗೆ ಸೇರಿಸಬೇಕು. ಏಲಕ್ಕಿ, ಆಳ್ವಿ, ಗಸಗಸೆಯನ್ನು ಪ್ರತ್ಯೇಕವಾಗಿ ಹುರಿದು, ಅವುಗಳನ್ನು ಕೊಬ್ಬರಿ, ಒಣ ಹಣ್ಣುಗಳೊಂದಿಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು.

ಒಂದು ಕಪ್ ಬೆಲ್ಲಕ್ಕೆ ಅರ್ಧ ಕಪ್ ನೀರು ಹಾಕಿ ಕಾಯಿಸಿ, ಬೆಲ್ಲವನ್ನು ಕರಗಿಸಬೇಕು. ಹುರಿದಿಟ್ಟುಕೊಂಡ ಪದಾರ್ಥಗಳ ಮಿಶ್ರಣಕ್ಕೆ ಕರಗಿರುವ ಬಿಸಿ ಬೆಲ್ಲವನ್ನು ಸೇರಿಸಿ, ಚೆನ್ನಾಗಿ ಮಿಶ್ರಣ ಮಾಡಿ, ಅದನ್ನು ತುಪ್ಪ ಸವರಿದ ಒಂದು ತಟ್ಟೆ ಅಥವಾ ಪಾತ್ರೆಗೆ ಹಾಕಬೇಕು. ಅರ್ಧ ಗಂಟೆಯ ನಂತರ ತೆಗೆದರೆ ಪಾತ್ರೆಯ ಆಕೃತಿಯ ಕರದಂಟು ತಯಾರಾಗುತ್ತದೆ.

ಸೆಮಿಕಂಡಕ್ಟರ್, ಬಾಹ್ಯಾಕಾಶ ಕಂಪನಿಗಳಿಗೆ ರಾಜ್ಯದ ಆಹ್ವಾನ

ಅಮೆರಿಕದ ವಿವಿಧ ಸಂಸ್ಥೆಗಳಿಗೆ ಎಂ.ಬಿ ಪಾಟೀಲ, ಪ್ರಿಯಾಂಕ್ ಖರ್ಗೆ ಭೇಟಿ

ಪ್ರಜಾವಾಣಿ ವಾರ್ತೆ

ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ವಿವಿಧ ಕಂಪನಿಗಳ ಪ್ರಮುಖರೊಂದಿಗೆ ಸಚಿವರಾದ ಪ್ರಿಯಾಂಕ್ ಖರ್ಗೆ ಮತ್ತು ಎಂ.ಬಿ. ಪಾಟೀಲ ಸಭೆ ನಡೆಸಿದರು

ಬೆಂಗಳೂರು: ಅಮೆರಿಕ ಪ್ರವಾಸದಲ್ಲಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಸೆಮಿಕಂಡಕ್ಟರ್, ಬಾಹ್ಯಾಕಾಶ ವಿಜ್ಞಾನ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕಂಪನಿಗಳ ಕಚೇರಿಗಳಿಗೆ ಶುಕ್ರವಾರ ಭೇಟಿನೀಡಿ, ಕರ್ನಾಟಕದಲ್ಲಿ ಹೂಡಿಕೆಗೆ ಆಹ್ವಾನ ನೀಡಿದ್ದಾರೆ.

ಸಚಿವರ ನೇತೃತ್ವದ ನಿಯೋಗವು ಸೆಮಿಕಂಡಕ್ಟರ್ ಕ್ಷೇತ್ರದ ಎಲ್ಎಎಂ ರಿಸರ್ಚ್ ಕಂಪನಿ, ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದ ಲಿಯೋ ಲ್ಯಾಬ್ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದ ಟೆಕಾಂಡ್ ಕಂಪನಿಗಳ ಕಚೇರಿಗಳಿಗೆ ಭೇಟಿನೀಡಿದ್ದು, ರಾಜ್ಯದಲ್ಲಿ ಹೂಡಿಕೆಗೆ ಇರುವ ಅವಕಾಶಗಳ ಕುರಿತು ಮಾಹಿತಿ ವಿನಿಮಯ ಮಾಡಿಕೊಂಡಿತು.

'ಎಲ್ಎಎಂ ರಿಸರ್ಚ್ ಕಂಪನಿ 23 ವರ್ಷಗಳಿಂದಲೂ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸೆಮಿಕಂಡಕ್ಟರ್‌ಕ್ಷೇತ್ರಕ್ಕೆಸಂಬಂಧಿಸಿದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಆರಂಭಿಸುವ ಕುರಿತು ಪರಿಶೀಲಿಸುವ ಭರವಸೆಯನ್ನು ಕಂಪನಿಯ ಪ್ರಮುಖರು ನೀಡಿದ್ದಾರೆ' ಎಂದು ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

'ರಾಜ್ಯದಲ್ಲಿ ಬಾಹ್ಯಾಕಾಶ ವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಆರಂಭಿಸಲು ಲಿಯೋ ಲ್ಯಾಬ್ ಒಲವು ತೋರಿದೆ. 'ಸ್ಪೇಸ್ ಟೆಕ್ ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪನೆಯಲ್ಲಿ ಕೈಜೋಡಿಸುವುದಕ್ಕೂ ಆಸಕ್ತಿ ವ್ಯಕ್ತಪಡಿಸಿದೆ. ರೇಡಾರ್‌ಗಳನ್ನು ಸ್ಥಾಪಿಸುವ ಯೋಜನೆಗಳಿಗೆ ರಾಜ್ಯ ಸರ್ಕಾರ ಅನುಮೋದನೆಗಳನ್ನು ನೀಡುವುದನ್ನು ಅಧ್ಯಯನ ನಡೆಸಿ, ಆ ಬಗ್ಗೆಯೂ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದೆ ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ತೆರೆಯುವ ಕುರಿತು ಟೆಕಾಂಡ್ ಕಂಪನಿ ಅಧಿಕಾರಿಗಳು ಚರ್ಚಿಸಿದ್ದಾರೆ. 'ಇದು ಸಾಧ್ಯವಾದರೆ 'ಆನ್‌ಶೋರಿಂಗ್' ಮತ್ತು ಹಾರ್ಡ್‌ವೇರ್ ಉತ್ಪಾದನಾ ಚಟುವಟಿಕೆಗಳನ್ನು ರಾಜ್ಯದಲ್ಲೇ ಪ್ರಾರಂಭಿಸಲು ಅವಕಾಶವಾಗಲಿದೆ. ಇ-ಆಡಳಿತ ಕ್ಷೇತ್ರದಲ್ಲೂ ಸರ್ಕಾರದ ಜತೆ ಕೈಜೋಡಿಸಲು ಕಂಪನಿ ಒಲವು ತೋರಿದೆ ಎಂದು ತಿಳಿಸಿದ್ದಾರೆ.

ಎಲ್ಎಎಂ ರಿಸರ್ಚ್ ಕಂಪನಿಯ ಉಪಾಧ್ಯಕ್ಷರಾದ ರಂಗೇಶ್ ರಾಘವನ್, ಕಾರ್ತಿಕ್ ರಾಮಮೋಹನ್, ಪ್ಯಾಟ್ ಲಾರ್ಡ್, ಲಿಯೋ ಲ್ಯಾಬ್ ಕಂಪನಿಯ ಸಂಸ್ಥಾಪಕ ಡ್ಯಾನ್ ಸೆಪರ್ಲಿ, ರಚಿತ್ ಭಾಟಿಯಾ ಮತ್ತು ಟೆಕಾಂಡ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಾಹಿಲ್ ಚಾಬ್ರಾ ಮತ್ತು ಸಹ ಸಂಸ್ಥಾಪಕ ರಮೇಶ್ ಸಿಂಗ್ ಚರ್ಚೆಯಲ್ಲಿ ಭಾಗವಹಿಸಿದ್ದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕ್‌ರೂಪ್ ಕೌರ್ ಮತ್ತು ಕೈಗಾರಿಕಾ ಇಲಾಖೆ ಆಯುಕ್ತ ಗುಂಜನ್ ಕೃಷ್ಣ ನಿಯೋಗದಲ್ಲಿದ್ದಾರೆ.

ಬಿಸಿಯೂಟ: 4 ತಿಂಗಳಿನಿಂದ ಶಾಲೆಗಳಿಗೆ ಅನುದಾನ ಇಲ್ಲ

• ಕೆ.ಸೋಮಶೇಖರ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಸರ್ಕಾರಿ ಶಾಲೆಗಳ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಸರ್ಕಾರ ನಾಲ್ಕು ತಿಂಗಳಿನಿಂದ ತರಕಾರಿ, ಮೊಟ್ಟೆ ಖರೀದಿಗೆ ಹಣ ಬಿಡುಗಡೆಗೊಳಿಸಿಲ್ಲ. ಇದರಿಂದ ಈ ಯೋಜನೆ ನಿರ್ವಹಿಸಲು ಸಾಧ್ಯವಾಗದೇ ಶಿಕ್ಷಕರು ಪರದಾಡುವಂತಾಗಿದೆ.

ಶಾಲೆಗಳಿಗೆ ಸರ್ಕಾರ ಪ್ರತಿ ತಿಂಗಳು ಆಹಾರ ಪದಾರ್ಥ ಪೂರೈಸುತ್ತದೆ. ಶೈಕ್ಷಣಿಕ ವರ್ಷ ಪ್ರಾರಂಭವಾದಾಗಿನಿಂದ ಈ ವರೆಗೆ ತರಕಾರಿ, ಮಸಾಲೆ ಪದಾರ್ಥ, ಉಪ್ಪು ಹಾಗೂ ಮೊಟ್ಟೆ ಖರೀದಿಗೆ ಸರ್ಕಾರ ಹಣ ಬಿಡುಗಡೆಗೊಳಿಸಿಲ್ಲ. ಈ ಎಲ್ಲ ಪದಾರ್ಥಗಳ ಬೆಲೆ ಏರಿಕೆಯ ಸಮಸ್ಯೆ ಒಂದೆಡೆಯಿದ್ದರೆ, ಖರೀದಿಗೆ ಹಣ ಬಿಡುಗಡೆ ಆಗದಿರುವುದು ಮತ್ತೊಂದು ಸಮಸ್ಯೆಯಾಗಿ ಪರಿಣಮಿಸಿದೆ.

'ನಮ್ಮ ಸ್ವಂತ ಹಣ ಖರ್ಚು ಮಾಡಿಕೊಂಡು ಮೊಟ್ಟೆ, ತರಕಾರಿ ಖರೀದಿಸಿ, ಶಾಲೆಗೆ ತರುತ್ತಿದ್ದೇವೆ. ಕೆಲ ತರಕಾರಿ ಅಂಗಡಿಗಳಲ್ಲಿ ಹತ್ತಾರು ಸಾವಿರ ರೂಪಾಯಿ ಬಾಕಿ ಉಳಿದುಕೊಂಡಿದೆ. ಬಾಕಿ ಪಟ್ಟಿ ಬೆಳೆಯುತ್ತಿದೆಯೇ ಹೊರತು ಅನುದಾನ ಮಾತ್ರ ಬಿಡುಗಡೆ ಆಗುತ್ತಿಲ್ಲ' ಎಂದು ಶಿಕ್ಷಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ತಾಂತ್ರಿಕ ಅಡಚಣೆಯಿಂದ ಹಣ ಬಿಡುಗಡೆಯಾಗಿರಲಿಲ್ಲ. ರಾಜ್ಯ ಕಚೇರಿಗೆ ಬೇಡಿಕೆ ಸಲ್ಲಿಸಿದ್ದು, ಸದ್ಯದಲ್ಲೇ ಎಲ್ಲ ಶಾಲೆಗಳಿಗೆ ಅನುದಾನ ಬಿಡುಗಡೆಯಾಗಲಿದೆ

ನಿರ್ಮಲಾದೇವಿ, ಜಿಲ್ಲಾ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ

ಹಣ ಬಿಡುಗಡೆ ಆಗದೇ ಇರುವುದು ಜನರಿಗೆ ಗೊತ್ತಿಲ್ಲ. ಬಿಸಿಯೂಟದಲ್ಲಿ ತರಕಾರಿ ಕಡಿಮೆಯಾದರೂ ಆಕ್ಷೇಪಿಸುತ್ತಾರೆ. ಮೊಟ್ಟೆಯನ್ನೂ ತಪ್ಪಿಸುವಂತಿಲ್ಲ. ಹಣ ಹೊಂದಿಸುವುದು ಕಷ್ಟವಾಗಿದೆ

ಶಿಕ್ಷಕರು

ಹೂವಿನಹಡಗಲಿ ತಾಲ್ಲೂಕಿನಲ್ಲಿ 61 ಕಿರಿಯ ಪ್ರಾಥಮಿಕ ಶಾಲೆಗಳು, 79 ಹಿರಿಯ ಪ್ರಾಥಮಿಕ ಶಾಲೆಗಳು, 30 ಪ್ರೌಢಶಾಲೆಗಳು, 4 ಪಬ್ಲಿಕ್ ಶಾಲೆಗಳು ಸೇರಿ 179 ಶಾಲೆಗಳಿವೆ.

ಪ್ರಾಥಮಿಕ ಶಾಲೆಗಳಲ್ಲಿ 19,854, ಪ್ರೌಢಶಾಲೆಗಳಲ್ಲಿ 5,791 ವಿದ್ಯಾರ್ಥಿಗಳು ಸೇರಿ ಒಟ್ಟು 25,645 ವಿದ್ಯಾರ್ಥಿಗಳು ಮಧ್ಯಾಹ್ನದ ಬಿಸಿಯೂಟ ಯೋಜನೆ ಫಲಾನುಭವಿಗಳಿದ್ದಾರೆ.

'ರಾಜ್ಯದಲ್ಲಿ ಮಧ್ಯಾಹ್ನದ ಬಿಸಿಯೂಟಕ್ಕೆ ಅಕ್ಕಿ, ಬೇಳೆ, ಎಣ್ಣೆಯನ್ನು ಸರ್ಕಾರ ಪೂರೈಸುತ್ತಿದೆ. ತರಕಾರಿ, ಮಸಾಲೆ, ಉಪ್ಪು ಖರೀದಿಗೆ 1 ರಿಂದ 5ನೇ ತರಗತಿವರೆಗಿನ ಪ್ರತಿ ವಿದ್ಯಾರ್ಥಿಗೆ ₹1.93 ಹಾಗೂ 6 ರಿಂದ 10ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ₹2.89ರಂತೆ ಸರ್ಕಾರ ಹಣ ನೀಡುತ್ತದೆ. ಪ್ರತಿ ವಿದ್ಯಾರ್ಥಿಗೆ ವಾರಕ್ಕೆ ಎರಡರಂತೆ ಮೊಟ್ಟೆ ನೀಡಲಾಗುತ್ತಿದೆ. ಇಷ್ಟೂ ದುಡ್ಡನ್ನು ಇದೀಗ ಶಿಕ್ಷಕರೇ ಹೊಂದಿಸಿಕೊಂಡು ವಿದ್ಯಾರ್ಥಿಗಳಿಗೆ ಊಟ ಬಡಿಸುತ್ತಿದ್ದೇವೆ' ಎಂದು ಶಿಕ್ಷಕರೊಬ್ಬರು ಮಾಹಿತಿ ನೀಡಿದರು.

ಲೈಂಗಿಕ ಕಿರುಕುಳ: ಪ್ರಭಾರ ಪ್ರಾಂಶುಪಾಲ ಅಮಾನತು

ದೇವದುರ್ಗ (ರಾಯಚೂರು ಜಿಲ್ಲೆ): ಲೈಂಗಿಕ ಕಿರುಕುಳ ನೀಡಿದ ಹಾಗೂ ಎರಡನೇ ಮದುವೆಯಾಗಿರುವ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ತಾಲ್ಲೂಕಿನ ಮಸರಕಲ್ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಸಿದ್ದಪ್ಪ ಅವರನ್ನು ಅಮಾನತು ಮಾಡಲಾಗಿದೆ.

ಸಿದ್ದಪ್ಪ

ಪ್ರಾಂಶುಪಾಲ ಸಿದ್ದಪ್ಪ ಅವರು ಎರಡನೇ ಹೆಂಡತಿಯೊಂದಿಗೆ ಇರುವ ಫೋಟೊ, ವಿದ್ಯಾರ್ಥಿನಿಯರೊಂದಿಗೆ ಇರುವ ಅಶ್ಲೀಲ ಚಿತ್ರ, ವಿಡಿಯೊ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದ ಹಿನ್ನೆಲೆ ತನಿಖೆಗೆ ಆದೇಶಿಸಿತ್ತು. ಡಿಡಿಪಿಯು ಸೋಮಶೇಖರ ಹೊತ್ರಾಣಿ ನೇತೃತ್ವದ ತ್ರಿಸದಸ್ಯ ಸಮಿತಿ ಸೆ.20ರಂದು ಕಾಲೇಜಿಗೆ ಭೇಟಿ ನೀಡಿ ವಿಚಾರಣೆ ಮಾಡಿ ರಾಜ್ಯ ನಿರ್ದೇಶಕರಿಗೆ ಪ್ರಾಥಮಿಕ ವರದಿಯನ್ನು ನೀಡಿತ್ತು.

ಸಿದ್ದಪ್ಪ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದ ಕಾರಣ ಇಲಾಖೆ ತನಿಖೆಗೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ.

ಅಕ್ರಮ ಸಂಬಂಧ: 'ಜೀವನಾಂಶ ಸಲ್ಲ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ವಿವಾಹೇತರ ಸಂಬಂಧ ಇಟ್ಟುಕೊಂಡು ಬೇರೊಬ್ಬ ಪುರುಷನೊಂದಿಗೆ ಸಹಜೀವನ ನಡೆಸುವ ಮಹಿಳೆ ಪತಿಯಿಂದ ಜೀವನಾಂಶ ನಿರೀಕ್ಷಿಸಲಾಗದು' ಎಂದು ಹೈಕೋರ್ಟ್ ಹೇಳಿದೆ.

ಚಿಕ್ಕಮಗಳೂರು 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿ ವಜಾಗೊಳಿಸಿದೆ.

'ಅರ್ಜಿದಾರ ಮಹಿಳೆ ಬೇರೊಬ್ಬ ಪುರುಷನೊಂದಿಗೆ ಓಡಿಹೋಗಿರುವ ಸಂಬಂಧ ದೂರು ದಾಖಲಾಗಿದೆ. ತನಿಖೆ ವೇಳೆ ಆಕೆ ತನ್ನ ಆಪ್ತನೊಂದಿಗೆ ನೆಲೆಸಲು ಇಚ್ಛಿಸುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇದೇ ಆಧಾರದಲ್ಲಿ ವಿಚ್ಛೇದನವೂ ಮಂಜೂರಾಗಿದೆ. ಈ ಪ್ರಕ್ರಿಯೆಯನ್ನು ಆಕೆ ಪ್ರಶ್ನಿಸಿಲ್ಲ. ಎಲ್ಲ ಸಂದರ್ಭಗಳಲ್ಲಿಯೂ ಆಕೆ ಪರಪುರುಷನ ಜೊತೆ ವಾಸ ಮಾಡುತ್ತಿರುವ ಅಂಶ ಸಾಕ್ಷ್ಯಾಧಾರಗಳಿಂದ ತಿಳಿದು ಬಂದಿದೆ. ಹಾಗಾಗಿ, ಅರ್ಜಿದಾರರಿಗೆ ಪರಿಹಾರ ನೀಡಲಾಗದು' ಎಂದು ನ್ಯಾಯಪೀಠ ಹೇಳಿದೆ.

'ಅರ್ಜಿದಾರರ ಮನವಿಯನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡದೆ ಜೀವನಾಂಶ ನೀಡಲು ನಿರ್ದೇಶಿಸಿದೆ. ಆದರೆ, ಸೆಷನ್ಸ್ ನ್ಯಾಯಾಲಯ ಎಲ್ಲ ಸಾಕ್ಷ್ಯಾಧಾರ ಪರಿಗಣಿಸಿಯೇ ಸೂಕ್ತ ಆದೇಶ ನೀಡಿದೆ. ಆದ್ದರಿಂದ, ಇದರಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ' ಎಂದು ತಿಳಿಸಿದೆ.

'ಸೋಮಶೇಖರ್ ಹೇಳಿಕೆ ಪಕ್ಷ ವಿರೋಧಿ'

ಬೆಂಗಳೂರು: ಬಿಜೆಪಿ– ಜೆಡಿಎಸ್ ಮೈತ್ರಿ ಬಗ್ಗೆ ಶಾಸಕ ಎಸ್.ಟಿ. ಸೋಮಶೇಖರ್ ಅವರ ಹೇಳಿಕೆ ಪಕ್ಷ ವಿರೋಧಿ ಚಟುವಟಿಕೆ ಎಂದು ಬಿಜೆಪಿ ಶಾಸಕ ಡಾ. ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, ವರಿಷ್ಠರ ಮಟ್ಟದಲ್ಲಿ ಮೈತ್ರಿಯಾದ ನಂತರ ಇತರೆ ನಾಯಕರು ಬಹಿರಂಗವಾಗಿ ಆಕ್ಷೇಪ ವ್ಯಕ್ತಪಡಿಸಬಾರದು. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಪಕ್ಷದ ವೇದಿಕೆಯಲ್ಲಿ ಎಲ್ಲವನ್ನೂ ಚರ್ಚಿಸಬೇಕು ಎಂದರು.

ಶಾಸಕ ಆರ್.ಅಶೋಕ, 'ಯಶವಂತಪುರ ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರಿಗೆ ಜೆಡಿಎಸ್ ಬಗ್ಗೆ ಕೋಪ ಇರಬಹುದು. ಅದಕ್ಕೆ ಆ ರೀತಿ ಮಾತನಾಡಿಬಹುದು. ಅವರ ಜತೆ ಮಾತನಾಡುವೆ' ಎಂದರು.

ಆರ್‌ಟಿಐ: ಸುತ್ತೋಲೆ ಹಿಂಪಡೆದ ಡಿಪಿಎಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ ಅಡಿಯಲ್ಲಿ ಮಾಹಿತಿ ಕೋರಿ ಮೂರು ತಿಂಗಳ ಅವಧಿಯಲ್ಲಿ ಅಧಿಕ ಸಂಖ್ಯೆಯ ಅರ್ಜಿಗಳನ್ನು ಸಲ್ಲಿಸಿದವರ ವಿವರಗಳನ್ನು ಸಂಗ್ರಹಿಸಿ, ಕಳುಹಿಸುವಂತೆ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ನೀಡಿದ್ದ ಸುತ್ತೋಲೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಹಿಂಪಡೆದಿದೆ.

ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠವು 2023ರ ಏಪ್ರಿಲ್ 10ರಂದು ನೀಡಿದ್ದ ಆದೇಶವನ್ನು ಆಧರಿಸಿ, ಡಿಪಿಎಆರ್‌ನ ಆಡಳಿತ ಸುಧಾರಣಾ ವಿಭಾಗವು ಸೆಪ್ಟೆಂಬರ್ 6ರಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಪತ್ರದ ಮೂಲಕ ಸೂಚನೆ ನೀಡಿತ್ತು. ಆರ್‌ಟಿಐ ಕಾಯ್ದೆ ಅಡಿಯಲ್ಲಿ ತ್ರೈಮಾಸಿಕ ಅವಧಿಯಲ್ಲಿ ಅಧಿಕ ಸಂಖ್ಯೆಯ ಅರ್ಜಿಗಳನ್ನು ಸಲ್ಲಿಸಿದ ವ್ಯಕ್ತಿಗಳ ಮಾಹಿತಿಯನ್ನು ಸೆ.20ರೊಳಗೆ ಸಲ್ಲಿಸುವಂತೆ ಪತ್ರದಲ್ಲಿ ಸೂಚಿಸಲಾಗಿತ್ತು.

ಸೆ.6ರ ಪತ್ರವನ್ನು ಹಿಂಪಡೆದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಶುಕ್ರವಾರ ಪತ್ರ ಬರೆದಿರುವ ಡಿಪಿಎಆರ್ ಪ್ರಧಾನ ಕಾರ್ಯದರ್ಶಿ ಮುನೀಷ್ ಮೌದ್ಗಿಲ್, 'ಇಲಾಖೆಯ ಮಾಹಿತಿ ಹಕ್ಕು ವಿಭಾಗದ ಅಧೀನ ಕಾರ್ಯದರ್ಶಿಯು ಸರ್ಕಾರದಿಂದ ಯಾವುದೇ ಅನುಮತಿ ಪಡೆಯದೆ ಅಥವಾ ಗಮನಕ್ಕೆ ತರದೇ ಪತ್ರವನ್ನು ಬರೆದಿದ್ದರು. ತಕ್ಷಣದಿಂದ ಜಾರಿಗೆ ಬರುವಂತೆ ಪತ್ರವನ್ನು ಹಿಂಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

'ರಾಜ್ಯ ಸರ್ಕಾರವು ತನ್ನ ಹೃದಯ ಮತ್ತು ಅಂತಃಕರಣದಿಂದ ಮಾಹಿತಿ ಹಕ್ಕು ಕಾಯ್ದೆಯನ್ನು ಜನಪರವಾಗಿ ಹಾಗೂ ಶಾಸನಬದ್ಧವಾಗಿ ಅನುಷ್ಠಾನಕ್ಕೆ ತರಲು ಬದ್ಧವಾಗಿದೆ. ಸರ್ಕಾರದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾಹಿತಿ ಹಕ್ಕು ಕಾಯ್ದೆ–2005 ಅನ್ನು ಶಾಸನಬದ್ಧವಾಗಿ ಪಾಲಿಸಬೇಕು. ಎಲ್ಲ ನಾಗರಿಕರಿಗೂ ಆರ್‌ಟಿಐ ಕಾಯ್ದೆಯಡಿ ಮಾಹಿತಿ ಪಡೆಯಲು ಶಾಸನಬದ್ಧ ಅಧಿಕಾರವಿದೆ. ಆದರೆ, ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದವರ ಕುರಿತ ಮಾಹಿತಿಯನ್ನು ಬೇರೆಯವರು ಪಡೆಯಲು ಅವಕಾಶ ಇರುವುದಿಲ್ಲ' ಎಂದು ತಿಳಿಸಿದ್ದಾರೆ.

'ರೋವರ್ಸ್, ರೇಂಜರ್ಸ್ ವಿ.ವಿ ಸ್ಥಾಪನೆಗೆ ಪ್ರಸ್ತಾವ'

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ವಿಶ್ವವಿದ್ಯಾಲಯ ಸ್ಥಾಪಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯ ಹೇಳಿದರು.

ಸರ್ಕಾರ ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದರೆ, ಕರ್ನಾಟಕವು ರೋವರ್ಸ್ ಮತ್ತು ರೇಂಜರ್ಸ್ ವಿಶ್ವವಿದ್ಯಾಲಯ ಹೊಂದುವ ಮೊದಲ ರಾಜ್ಯವಾಗಲಿದೆ ಎಂದು ಶುಕ್ರವಾರ ಇಲ್ಲಿ ತಿಳಿಸಿದರು.

ಸುಧಾ, ಮಯೂರ ಓದಿರಿ...

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Phone: 08194-234488 Email:-eerdwsd.chd@gmail.com
ನಂ.ಗ್ರಾ.ನೀ.ಸ.&ನೈ./ವಿ/ಚಿ/ಕಾಇಂ/ಬಿ4/ಟೆಂಡರ್/2023–24/737 ದಿ:–03.10.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–2 & 3 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರಾಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ 2022–23 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಹಿರಿಯೂರು ತಾಲ್ಲೂಕು ವ್ಯಾಪ್ತಿಯ 15 ಕಾಮಗಾರಿ ರೂ. 551.38 ಲಕ್ಷಗಳಿಗೆ (15 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ಹೊಂದಿದ ಕಾಮಗಾರಿಯ ಮೊತ್ತ ರೂ. 99.25 ಲಕ್ಷ) ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 12.10.2023 ಸಂಜೆ 4–00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.10.2023 ರ ಸಂಜೆ 4–30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.10.2023 ರ ಸಂಜೆ 11–00 ಗಂಟೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/253/2023-24
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ.ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:07/2023–24/384 ದಿ: 06–10–2023

ಅಲ್ಪಾವಧಿ ಟೆಂಡರ ಪಕಟಣೆ
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

JJM ಯೋಜನೆಯಡಿ ಬ್ಯಾಡಗಿ, ಹಿರೇಕೆರೂರ ಮತ್ತು ಶಿಗ್ಗಾಂವ ತಾಲೂಕುಗಳಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) Tender queries/ Clarifications ಗೆ ಕೊನೆಯ ದಿನಾಂಕ ಮತ್ತು ಸಮಯ : 13–10–2023 ರ 11:00 ಗಂಟೆವರೆಗೆ (2) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 17–10–2023 ರ 17:00 ಗಂಟೆವರೆಗೆ (3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : 18–10–2023ರ 17:00 ಗಂಟೆ ನಂತರ
ಇಂಡೆಂಟ್ ನಂ : **(1) RWSSD/2023-24/WS/WORK_INDENT6219 (2) RWSSD/2023-24/WS/WORK_INDENT6229 (3) RWSSD/2023-24/WS/WORK_INDENT5401 (4) RWSSD/2023-24/WS/WORK_INDENT5337 (5) RWSSD/2023-24/WS/WORK_INDENT6217 (6) RWSSD/2023-24/WS/WORK_INDENT6218 (7) RWSSD/2023-24/WS/WORK_INDENT6220 (SC) (8) RWSSD/2023-24/WS/WORK_INDENT6221) (ST)**
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **https://kppp.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/258/2023–24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in
ಸಂಖ್ಯೆ: ಅಸಂನಿ/ಅ/ಆಯವ್ಯಯ ಕಂಡಿಕೆ–174/ಸಿಆರ್–24/2023–24 ದಿನಾಂಕ: 05–10–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಕಂಡಿಕೆ 174ರಲ್ಲಿ ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಹಜ್ ಭವನದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ 10 ತಿಂಗಳ ವಸತಿ ಸಹಿತ IAS & KAS ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ನೀಡಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ 7 ದಿನಗಳ ಅವಧಿಗೆ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

(1) ಟೆಂಡರ್ ಪ್ರಕಟಣೆಯ ದಿನಾಂಕ: 06.10.2023, (2) ಟೆಂಡರ್ ಮೊತ್ತ: ರೂ. 400.00 ಲಕ್ಷಗಳು, (3) ಇ.ಎಂ.ಡಿ ಮೊತ್ತ: ರೂ. 6.00 ಲಕ್ಷಗಳು, (4) ಟೆಂಡರ್ ಕುರಿತು ಪೂರ್ವಭಾವಿ ಸಭೆ: ದಿನಾಂಕ: 09.10.2023 ಬೆಳಗ್ಗೆ 11.30 ಗಂಟೆಗೆ, (5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 13.10.2023, ಸಂಜೆ 5.30 ಗಂಟೆಯೊಳಗೆ, (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 16.10.2023, ಬೆಳಗ್ಗೆ 11.30 ಗಂಟೆಗೆ, (7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 17.10.2023, ಬೆಳಗ್ಗೆ 11.30 ಗಂಟೆಗೆ, (8) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಆಜಾದ್ ಭವನ, ನಂ.16 ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–52. (9) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902, 080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/1606/Zen/2023-24

ಸಮಾಜ ಕಲ್ಯಾಣ ಇಲಾಖೆ
ಅಪರ ನಿರ್ದೇಶಕರು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತ ನಗರ, ಬೆಂಗಳೂರು – 560001.
ದೂರವಾಣಿ ಸಂಖ್ಯೆ: 080–22207784
ಸಂಖ್ಯೆ:ಸಕಇ/ಪಪೂತಕೇ/ಎಸ್–4/ಸಿಆರ್– ಟ್ರೈನಿಂಗ್/2023–24 ದಿನಾಂಕ: 06.10.2023

ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವಿವಿಧ ಸಮವಸ್ತ್ರ ಸೇವೆ ಹಾಗೂ ಖಾಸಗಿ ರಂಗದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು (regarding GiG workforce and their benefits) ಕಲ್ಪಿಸುವ ನಿಟ್ಟಿನಲ್ಲಿ ತರಬೇತಿಗಳನ್ನು ನೀಡಲು ಅರ್ಹ ತರಬೇತಿ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆ ಸಂಖ್ಯೆಗಳು ಈ ಕೆಳಗಿನಂತಿವೆ.

1. SWD/PETC/0S-4/2023 – Uniform Service
2. SWD/PETC/0S-4/2023 – GiG Workers

ಹೆಚ್ಚಿನ ವಿವರಗಳಿಗೆ **http://kppp.karnataka.gov.in** ವೆಬ್ ಸೈಟನ್ನು ನೋಡಬಹುದಾಗಿದೆ.
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: GiG Workers–17.10.2023, ಸಮವಸ್ತ್ರ ಸೇವಾ ತರಬೇತಿ – **20.10.2023ರ ಮಧ್ಯಾಹ್ನ 3.00ಗಂಟೆಗೆ** ಸಹಿ/–
ಅಪರ ನಿರ್ದೇಶಕರು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ
ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1608/ಶಿರಡಿಸಾಯಿ/2023–24

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ3:ಇ.ಟೆಂಡರ್:12:2023–24 ದಿನಾಂಕ: 30.09.2023

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

2023–24ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ–08 ಸಂಖ್ಯೆಯ ನೀರು ಸರಬರಾಜು ಕಾಮಗಾರಿ ಟೆಂಡರ್ ಮತ್ತು 02–ಸಂಖ್ಯೆಯ ವಿದ್ಯುತ್ ಕಾಮಗಾರಿ, 2021–22ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (ಉಳಿಕೆ)– 05 ಸಂಖ್ಯೆಯ ವಿದ್ಯುತ್ ಕಾಮಗಾರಿ ಮತ್ತು 01–ಸಂಖ್ಯೆಯ ನೀರು ಸರಬರಾಜು ಕಾಮಗಾರಿ, 2022–23ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (ಉಳಿಕೆ)– 05 ಸಂಖ್ಯೆಯ ನೀರು ಸರಬರಾಜು ಕಾಮಗಾರಿ ಮತ್ತು 01 ಸಂಖ್ಯೆಯ ವಿದ್ಯುತ್ ಕಾಮಗಾರಿ, 2022–23ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್–01 ಸಂಖ್ಯೆಯ ವಿದ್ಯುತ್ ಕಾಮಗಾರಿ,2020–21ನೇ ಸಾಲಿನ ಶೇ 24.10 ಪಾಲಿಕೆ ಸಾಮನ್ಯ ನಿಧಿ – 01 ಸಂಖ್ಯೆಯ ಯೋಜನೆ, 2022–23ನೇ ಸಾಲಿನ ಸಾಮನ್ಯ ನಿಧಿ – 01 ಸಂಖ್ಯೆಯ ಯೋಜನೆಗೆ ಪೂರ್ಣಾವಧಿ ಟೆಂಡರ್‌ನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ದತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು. ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿರುವ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
(1) ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ: 25.10.2023 ಸಮಯ : 17.30 (2) ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 26.10.2023 ಸಮಯ : 17.00 (3) ಪೂಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ: 27.10.2023.ಸಮಯ : 17.30 ನಂತರ

ವಾಸಾಇ/ದಾವಣಗೆರೆ/266/ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಅಭಿಯಂತರರು (ವಿ)
ಮಹಾನಗರ ಪಾಲಿಕೆ, ದಾವಣಗೆರೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ,
ಮೈಸೂರು ಜಿಲ್ಲೆ, ಮೈಸೂರು
ಸಂಖ್ಯೆ : DTWO/2023–24 ದಿನಾಂಕ: 05.10.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್

2023–24ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ, ನಂಜನಗೂಡು ಮತ್ತು ಮೈಸೂರು ತಾಲ್ಲೂಕುಗಳಲ್ಲಿ ವಾಸಿಸುತ್ತಿರುವ ಒಟ್ಟು 12921 (ಬದಲಾವಣೆಗೊಳಪಟ್ಟಿರುತ್ತದೆ) ಜೇನುಕುರುಬ, ಕಾಡುಕುರುಬ, ಸೋಲಿಗ ಮತ್ತು ಯರವ ಸಮುದಾಯದ ಕುಟುಂಬಗಳಿಗೆ ಪೌಷ್ಠಿಕ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿರುತ್ತದೆ.
1) ಟೆಂಡರ್ ಸಂಖ್ಯೆ.: DTWO/2023-24 ದಿ: 06.10.2023 **2)** ಬಿಡ್ ಸಲ್ಲಿಸಲು ಕೊನೆಯ ದಿ: 20.10.2023 @ 17.00 **3)** ಪ್ರಿ ಬಿಡ್ ದಿ: 11.10.2023 @ 3.00 PM **4)** ತಾಂತ್ರಿಕ ಲಕೋಟೆ ತೆರೆಯುವ ದಿ: 26.10.2023 @ 11.00 **5)** ಟೆಂಡರ್ ಒಟ್ಟಾರೆ ಮೊತ್ತ: ರೂ.900.00 ಲಕ್ಷಗಳು **6)** ಇ. ಎಂ. ಡಿ.: ರೂ.13.50 ಲಕ್ಷಗಳು
ಎಲ್ಲಾ ದಾಖಲಾತಿಗಳನ್ನು ಆನ್ ಲೈನ್ ಮೂಲಕ http://kppp.karnataka.gov.in ವೆಬ್ ಸೈಟ್‌ನಲ್ಲಿ ದಾಖಲಿಸುವುದು. ಯಾವುದೇ ಕಾರಣ ನೀಡದೇ ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ಜಿಲ್ಲಾಧಿಕಾರಿಗಳು, ಮೈಸೂರು ರವರಿಗೆ ದತ್ತವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0821–2427140 ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–ಯೋಜನಾ ಸಮನ್ವಯಾಧಿಕಾರಿ, ಐ.ಟಿ.ಡಿ.ಪಿ., ಮೈಸೂರು
DIPR/DDMYS/KSMCA/480/2023-24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–17/277/2023–24 ದಿನಾಂಕ:05.10.2023

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳೂ, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಸಿ.ಇ.ಐ ದರ್ಜೆ–1 (ವಿದ್ಯುತ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ಹೆಸರು: (1) ರಾಮನಗರ ಜಿಲ್ಲೆ, ಹಾರೋಹಳ್ಳಿ 4ನೇ ಹಂತ ಕೈಗಾರಿಕಾ ಪ್ರದೇಶದ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ (2ನೇ ಕರೆ). (2) ತುಮಕೂರು ಜಿಲ್ಲೆ, ವಸಂತನರಸಾಪುರ 2ನೇ ಮತ್ತು 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿರುವ ಉಪಬಡಾವಣೆಗಳ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ (2ನೇ ಕರೆ).**
ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **27.10.2023ರ ಸಂಜೆ 4.00 ಗಂಟೆಯವರೆಗೆ.**
ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1
ವಾಸಾಸಂಇ/ವಾಪ್ರ/ಜಿಎ/1598/2023–24

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029. Website: http://www.nimhans.ac.in
Ref. No.: NIMH:A&E-EA:ADMSN:2023-24:Session-2 Date: 06.10.2023

ADMISSION NOTICE

Applications are invited for admission to the following courses under Session 2 of the Academic Year 2023-24:

Ph.D. Programs

Sl. No.	Name of the Course	Availability of guideship slots under External Funding Category *
1	Ph.D. Degree in Biophysics	5
2	Ph.D. Degree in Biostatistics	3
3	Ph.D. Degree in Child & Adolescent Psychiatry	1
4	Ph.D. Degree in Clinical Psychology	18
5	Ph.D. Degree in Clinical Psychopharmacology and Toxicology	3
6	Ph.D. Degree in Human Genetics	3
7	Ph.D. Degree in Mental Health Education	2
8	Ph.D. Degree in Neurochemistry	3
9	Ph.D. Degree in Neuroimaging and Interventional Radiology	9
10	Ph.D. Degree in Neurology	17
11	Ph.D. Degree in Neurological Rehabilitation	2
12	Ph.D. Degree in Neuromicrobiology	3
13	Ph.D. Degree in Neuropathology	3
14	Ph.D. Degree in Neurophysiology	6
15	Ph.D. Degree in Neurovirology	3
16	Ph.D. Degree in Nursing	3
17	Ph.D. Degree in Psychiatric Social Work	16
18	Ph.D. Degree in Psychiatry Ph.D. Degree in History of Psychiatry Ph.D. Degree in Mental Health Rehabilitation	24
19	Ph.D. Degree in Speech Pathology & Audiology	5
20	Ph.D. Degree in Integrative Medicine	4
21	Ph.D. Degree in Psychosocial Support in Disaster Management	2

** External Funding Category includes applicants applying with Fellowship from External Funding Agencies, Foreign Nationals and permanent/tenured employees Sponsored/Deputed from various Government Institutions/Universities including candidates working under various projects at NIMHANS. For complete details regarding the same please refer to Session – 2 Prospectus 2023-24. The no. of seats under external funding category may vary depending on the availability of research & other facilities and the faculty- scholar ratio of the respective department.*
The Entrance test for Session - 2 will be conducted @ NIMHANS Campus, Bengaluru city only.
Please refer to NIMHANS website http://www.nimhans.ac.in for more details.
Sd/-, DIRECTOR, NIMHANS

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ,
ಧಾರವಾಡ ದೂರವಾಣಿ : 0836–2233851 ಫ್ಯಾಕ್ಸ್ : 0836–2441609
E-mail : dudc_dwd@yahoo.co.in
ಡಿಯುಡಿಸಿ/ಎ.ಡಿ.ಎಂ/ಇಂ.ಕ್ಯಾ/2023–24 ದಿನಾಂಕ : 06–10–2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಧಾರವಾಡ ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ತ್ವರಿತವಾಗಿ ತಿಂಡಿ, ಊಟ, ಆಹಾರ ಸಾಮಗ್ರಿ ಪೂರೈಕೆ ಹಾಗೂ ಸರಬರಾಜು ಮಾಡಲು ಆಸಕ್ತವುಳ್ಳ ಸರಬರಾಜುದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗಿನಂತೆ ಪ್ಯಾಕೇಜ್‌ವಾರು ಟೆಂಡರ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ವಿವರ	ಕಾಮಗಾರಿ ಮೊತ್ತ (ರೂ. ಲಕ್ಷಗಳಲ್ಲಿ)	
1	Package-1-Providing Catering Services for Indira Canteens in Urban Local Bodies of Dharwad District in Karnataka State HDMC Area Indira canteens (1) KIMS Premisises (2) New Bus stand Hubli (3) SM Krishna nagr (4) New English High scholl (5) Sonia Gandhi Nagar (Totals 5 nos) of Dharwad District (INDENT-0599)	565.75	ಘೋಷಣಾ ಪತ್ರ
2	(Package-2 Providing Catering Services HDMC Area Indira canteens (1) New Bustand Dharwad (2) Mini vidhan soudha (3) Unkal (4) Bengeri sanate maidan (Totals 4 nos) of Dharwad District (INDENT-0581)	452.60	ಘೋಷಣಾ ಪತ್ರ

ಇ–ಪ್ರೊಕ್ಯೂರಮೆಂಟ್ ಪ್ಲಾಟ್‌ಪಾರ್ಮನಲ್ಲಿ ನೊಂದಾಯಿಸಿದ ಗುತ್ತಿಗೆದಾರರು ಭಾಗವಹಿಸತಕ್ಕದ್ದು, ಟೆಂಡರ ಪ್ರೊಸೆಸಿಂಗ್ ಫೀ ಯನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು, ಟೆಂಡರ ದಾಖಲೆಗಳನ್ನು (https://kppp.karnataka.gov.in) ಪಡೆದು ಸಲ್ಲಿಸತಕ್ಕದ್ದು.
(1) ದಾಖಲೆ ಸಲ್ಲಿಸಲು ಕೊನೆಯ ದಿನಾಂಕ : **04.11.2023** ರಂದು 16.00 ಘಂಟೆಗೆ (2) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ : **05.11.2023** ರಂದು 16.30 ಘಂಟೆಗೆ. (3) ಆರ್ಥಿಕ ದಾಖಲೆಗಳನ್ನು ತೆರೆಯುವ ದಿನಾಂಕ : **06.11.2023** ಬೆಳಿಗ್ಗೆ 16.35 ಘಂಟೆಗೆ
ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಧಾರವಾಡ
ವಾಸಾಸಂಇ/ಧಾ/ಕೆಎಸ್‌ಎಂಸಿಎ/341/2023–24

ವಿವಿಧ ಸ್ಥಳಗಳಲ್ಲಿ ರೈತರನ್ನು ಭೇಟಿಯಾಗಿ ಬರ ಪರಿಸ್ಥಿತಿಯ ಮಾಹಿತಿ ಸಂಗ್ರಹಿಸಿದ ಕೇಂದ್ರ ತಂಡ

ಸಮಸ್ಯೆ ಆಲಿಸದ್ದಕ್ಕೆ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಅಪ್ಪಾಸಾಹೇಬ ಲಕ್ಕುಂಡಿ

ಬೆಳಗಾವಿ: 'ಕೇಂದ್ರ ಬರ ಅಧ್ಯಯನ ತಂಡ ಸಮಸ್ಯೆ ಆಲಿಸಲಿಲ್ಲ' ಎಂದು ಆರೋಪಿಸಿ ಬೈಲಹೊಂಗಲ ತಾಲ್ಲೂಕಿನ ಕಲಕಪ್ಪಿಯಲ್ಲಿ ಶುಕ್ರವಾರ ರೈತ ಅಪ್ಪಾಸಾಹೇಬ ಲಕ್ಕುಂಡಿ ಕೀಟನಾಶಕ ಬಾಟ್ಲಿ ಹಿಡಿದು, ಆತ್ಮಹತ್ಯೆಗೆ ಯತ್ನಿಸಿದರು.

ಕಲಕುಪ್ಪಿಯಲ್ಲಿ ಕೆಲ ರೈತರ ಸಂಕಷ್ಟ ಆಲಿಸಿದ ಅಧಿಕಾರಿಗಳು, ಸವದತ್ತಿ ತಾಲ್ಲೂಕಿನ ಚಚಡಿಯತ್ತ ಹೊರಟಾಗ ಆಕ್ರೋಶಗೊಂಡ ಅಪ್ಪಾಸಾಹೇಬ ಬಾಟಲಿ ಹಿಡಿದು ಆತ್ಮಹತ್ಯೆಗೆ ಮುಂದಾದರು. ತಕ್ಷಣವೇ ಬಾಟ್ಲಿಯನ್ನು ಕಸಿದುಕೊಂಡ ಅಧಿಕಾರಿಗಳು ಮತ್ತು ಪೊಲೀಸರು, 'ನಿಮ್ಮ ಬೇಡಿಕೆ ಸರ್ಕಾರದ ಗಮನಕ್ಕೆ ತನ್ನಿ. ಹೀಗೆ ಮಾಡಬೇಡಿ' ಎಂದರು.

ಉತ್ತರ ಕೊಡಲು ಹೆಣಗಾಟ: ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ನೇತೃತ್ವದ ತಂಡ ಜಿಲ್ಲೆಯ ಬೈಲಹೊಂಗಲ, ಸವದತ್ತಿ, ಯರಗಟ್ಟಿ, ರಾಮದುರ್ಗ ತಾಲ್ಲೂಕುಗಳಿಗೆ ಭೇಟಿ ನೀಡಿತು.

ಬೆಳಿಗ್ಗೆ ಸಭೆ ನಡೆಸಿದ ತಂಡದ ಸದಸ್ಯರು, ನೇರವಾಗಿ ಬರಪೀಡಿತ ಪ್ರದೇಶಗಳತ್ತ ಮುಖಮಾಡಿದರು. ಬೆಳೆ ಹಾನಿ ಕುರಿತು ರೈತರಿಂದ ಮಾಹಿತಿ ಕೇಳಿದರು. ಆದರೆ, ಹಿಂದಿ ಮಾತನಾಡಲು ಬಾರದ ಹಲವು ರೈತರಿಗೆ ಉತ್ತರಿಸಲು ಕಷ್ಟವಾಯಿತು. ಆಗ, ಅಕ್ಕ-ಪಕ್ಕದ ಸ್ಥಳೀಯ ಅಧಿಕಾರಿಗಳೇ ರೈತರನ್ನು ವಿಚಾರಿಸಿ, ಉತ್ತರವನ್ನು ಕೇಂದ್ರ ತಂಡಕ್ಕೆ ತಿಳಿಸಿದರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಲಕುಪ್ಪಿಯಲ್ಲಿ ಸೋಯಾಬೀನ್ ಬೆಳೆ ಹಾನಿಯಾಗಿರುವುದನ್ನು ಕೇಂದ್ರ ಬರ ಅಧ್ಯಯನ ತಂಡಕ್ಕೆ ರೈತರು ಶುಕ್ರವಾರ ತೋರಿಸಿದರು

42 ಲಕ್ಷ ಹೆಕ್ಟೇರ್ ಬೆಳೆ ನಷ್ಟ

(ಚಿತ್ರದುರ್ಗ ವರದಿ): 'ರಾಜ್ಯದಲ್ಲಿ 122 ವರ್ಷಗಳ ಬಳಿಕ ಭೀಕರ ಬರ ಪರಿಸ್ಥಿತಿ ತಲೆದೋರಿದೆ. 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಮತ್ತೊಂದು ಸುತ್ತಿನ ಬರ ಘೋಷಣೆಗೆ ಸಿದ್ಧತೆ ನಡೆಯುತ್ತಿದೆ. ಸೋಮವಾರದ ವೇಳೆಗೆ ಇನ್ನೂ ಕೆಲ ತಾಲ್ಲೂಕುಗಳು ಬರಪೀಡಿತ ಪಟ್ಟಿಗೆ ಸೇರಲಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಇಡೀ ದೇಶದಲ್ಲೇ ಸಮರ್ಪಕ ಮಳೆಯಾಗಿಲ್ಲ. ಮಲೆನಾಡು, ಕರಾವಳಿಯಲ್ಲೂ ಮಳೆ ಇಲ್ಲ. ಕೇರಳ, ಮಹಾರಾಷ್ಟ್ರ ಸೇರಿ ಅನೇಕ ರಾಜ್ಯದಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಕಾವೇರಿ ಕಣಿವೆಯಲ್ಲಿ ನೀರು ಇಲ್ಲ. ರಾಜ್ಯದ 42 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು ₹ 30,000 ಕೋಟಿ ಮೊತ್ತದ ಬೆಳೆನಷ್ಟ ಉಂಟಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ನಿಯಮದ ಪ್ರಕಾರ ₹ 4,860 ಲಕ್ಷ ಕೋಟಿ ಪರಿಹಾರಕ್ಕೆ ಕೇಂದ್ರಕ್ಕೆ ಮನವಿ ಮಾಡಿದ್ದೇವೆ' ಎಂದು ಅವರು ವಿವರಿಸಿದರು.

ಗ್ಯಾರಂಟಿ ಯೋಜನೆ ಬದಲು ಪರಿಹಾರ ನೀಡಿ ಅಧಿಕಾರಿಗಳ ಮುಂದೆ ರೈತರ ಅಳಲು

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಬರ ಪರಿಸ್ಥಿತಿ ಅಧ್ಯಯನಕ್ಕೆ ಶುಕ್ರವಾರ ತಾಲ್ಲೂಕಿನ ವಿವಿಧೆಡೆ ಭೇಟಿ ನೀಡಿದ ಕೇಂದ್ರ ತಂಡದ ಎದುರು ರೈತರು ಅಳಲು ತೋಡಿಕೊಂಡರು. ಸೂಕ್ತ ಪರಿಹಾರ ಕೋರಿದರು.

ತಾಲ್ಲೂಕಿನ ಗೊಜನೂರು ಗ್ರಾಮಕ್ಕೆ ತಂಡ ಭೇಟಿ ನೀಡಿದ ಸಂದರ್ಭದಲ್ಲಿ ರೈತ ಮಹಿಳೆಯರು 'ಗ್ಯಾರಂಟಿ' ಯೋಜನೆಗಳ ಬದಲು ರೈತರಿಗೆ ಪರಿಹಾರ ನೀಡಿ' ಎಂದು ಕೋರಿದರು.

'ಕೃಷಿ ಸಾಲಮನ್ನಾ ಮಾಡಿ. ರೈತ ಮಹಿಳೆಯರು ನಿತ್ಯ ಬಸ್‌ಗಳಲ್ಲಿ ತಿರುಗಲ್ಲ. ನಿಮ್ಮ 'ಶಕ್ತಿ' ಯೋಜನೆ ನಿಶ್ಶಕ್ತವಾಗಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ರೈತರಿಗೆ ವರ ಆಗುವ ಬದಲು ಶಾಪವಾಗಿವೆ' ಎಂದು ರೈತ ಮಹಿಳೆಯರಾದ ನೀಲಮ್ಮ ಈ. ಪಾಟೀಲ, ಚೆನ್ನವ್ವ ದುರ್ಗಣ್ಣವರ, ಬಸಮ್ಮ ಮರಡಿ ಆಕ್ರೋಶ ವ್ಯಕ್ತಪಡಿಸಿದರು.

'ನಮ್ಮ ಮಕ್ಕಳಿಗೆ ಕನ್ಯೆ ಕೊಡಲು ಹಿಂದೇಟು ಹಾಕುತ್ತಿದ್ದಾರೆ. ಇದಕ್ಕೆ ಕಾರಣ ಅಕಾಲಿಕ ಮಳೆಗಾಲ. ತಾಲ್ಲೂಕಿನಲ್ಲಿ ಶಾಶ್ವತ ನೀರಾವರಿ ಯೋಜನೆ ಜಾರಿಗೊಳಿಸಿ. ಇಲ್ಲದಿದ್ದರೆ, ರೈತರ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಲಿದೆ' ಎಂದು ಕೃಷಿ ಸಮಾಜದ ಅಧ್ಯಕ್ಷ ಚೆನ್ನಪ್ಪ ಷಣ್ಮುಖಿ ತಿಳಿಸಿದರು.

ಕೊಪ್ಪಳದಲ್ಲಿ ಹಸಿ ಬರದ ಪರಿಶೀಲನೆ

ಕೊಪ್ಪಳ: ಕೇಂದ್ರ ಬರ ಅಧ್ಯಯನ ತಂಡ ಜಿಲ್ಲೆಯ ಯಲಬುರ್ಗಾ ಹಾಗೂ ಕುಷ್ಟಗಿ ತಾಲ್ಲೂಕಿನ ಗ್ರಾಮಗಳ ವ್ಯಾಪ್ತಿಯಲ್ಲಿ ಶುಕ್ರವಾರ ಪರಿಶೀಲನೆ ನಡೆಸಿತು.

ಹಸಿರು ಬೆಳೆಯ ಕೆಲವು ಪ್ರದೇಶಕ್ಕೆ ತಂಡ ಭೇಟಿ ನೀಡಿದಾಗ ಅಧಿಕಾರಿಗಳು ಬೆಳೆ ಹಸಿರಾಗಿ ಕಂಡರೂ ಇಳುವರಿಯಲ್ಲಿ ಭಾರಿ ಕುಸಿತ ಆಗಿದೆ ಎನ್ನುವ ಅಂಶವನ್ನು ಗಮನಕ್ಕೆ ತಂದರು. 'ಜಿಲ್ಲಾಡಳಿತ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಕೇಂದ್ರ ತಂಡಕ್ಕೆ ತೋರಿಸಲು ವಿಫಲವಾಗಿದೆ. ಬರವೆಂದು ಹೇಳಿ ಎಲ್ಲವೂ ಹಸಿರುಮಯವಾಗಿದ್ದರೆ ಪರಿಹಾರ ಹೇಗೆ ಸಿಗುತ್ತದೆ?' ಎಂದು ಹಲವು ರೈತರು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ನಲಿನ್ ಅತುಲ್, 'ಬರ ಇದ್ದಾಗಲೂ ಬೆಳೆಗಳು ಹಸಿರಾಗಿರುತ್ತವೆ. ಇಳುವರಿ ಸಂಪೂರ್ಣವಾಗಿ ಕುಸಿದಿದೆ ಎನ್ನುವ ಅಂಶವನ್ನು ತಂಡಕ್ಕೆ ಮನವರಿಕೆ ಮಾಡಿಕೊಡಲಾಗಿದೆ' ಎಂದರು.

ದಾಖಲೆಯಿಲ್ಲ ಎಂದ ಅಜ್ಜಿ: ಕುಷ್ಟಗಿ ತಾಲ್ಲೂಕಿನ ದೊಣ್ಣೆಗುಡ್ಡ ಗ್ರಾಮಕ್ಕೆ ಭೇಟಿ ನೀಡಿದ ತಂಡದಲ್ಲಿದ್ದ ಸದಸ್ಯ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ನಿರ್ದೇಶಕ ಕರಿಗೌಡ ಅವರು ಬಸಮ್ಮ ಎಂಬವರಿಂದ ಬೆಳೆ ಹಾನಿ ಬಗ್ಗೆ ಮಾಹಿತಿ ಪಡೆದರು. ಬೆಳೆಯಿಲ್ಲದೇ ಜೀವನ ಹೇಗೆ ನಡೆಯುತ್ತಿದೆ ಎಂದು ಕೇಳಿದಾಗ 'ಬೆಳೆ ಇಲ್ಲ. ಆಧಾರ್ ಕಾರ್ಡ್, ಪಡಿತರ ಕಾರ್ಡ್ ಕೂಡ ಇಲ್ಲ' ಎಂದು ಬೇಸರ ತೋಡಿಕೊಂಡರು. ಜಿಲ್ಲಾಧಿಕಾರಿ 'ತಕ್ಷಣವೇ ಅಜ್ಜಿಗೆ ದಾಖಲೆ ಒದಗಿಸಿಕೊಡಿ' ಎಂದು ಸೂಚಿಸಿದರು.

ಪ್ರಜಾವಾಣಿ@75 DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ನೂಲ ಬಿ.ಎಸ್.**, ನಂ 225 ಎ, 3ನೇ ಅಡ್ಡರಸ್ತೆ, ರಾಜಾಜಿನಗರ	40,000
2	**ಸಿ. ಭಾರತಿ**, ನಂ 11, ಪಾರಿಜಾತ, 21ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪೊಲೀಸ್ ಠಾಣೆ ರಸ್ತೆ, ಮಾರೇನಹಳ್ಳಿ, ಜೆ.ಪಿ. ನಗರ 2ನೇ ಹಂತ	30,000
3	**ಜಿ. ಮಂಜುಳಾ**, ರಾಜಾಜಿನಗರ	20,000
4	**ಡಾ.ಪ್ರೊ. ಎಚ್. ಹನುಮಂತಪ್ಪ**, ನಂ 899, ಸಾಧನೆ, ಯೋಗ ನರಸಿಂಹಸ್ವಾಮಿ ದೇವಸ್ಥಾನ ಬಳಿ, 1ನೇ ಹಂತ, ವಿಜಯನಗರ, ಮೈಸೂರು	10,500
5	**ಬಿ.ಸಿ. ಪುಷ್ಪಾ**, ನಂ 140, 7ನೇ ಬ್ಲಾಕ್ ನಾಗರಭಾವಿ, 2ನೇ ಹಂತ	10,000
6	**ಜಿ. ಗೋಪಾಲರಾಜು**, ನಂ 30, ಶಿವ ಅಪಾರ್ಟ್‌ಮೆಂಟ್ 1ನೇ ಮುಖ್ಯರಸ್ತೆ, ನಾಗರಭಾವಿ	10,000
7	**ಡಿ. ಗಂಗಾಧರಯ್ಯ**, ನಂ 1102, 10ನೇ ಡಿ ಅಡ್ಡರಸ್ತೆ, ವೆಸ್ಟ್ ಆಫ್ ಕೋರ್ಡ್ ರಸ್ತೆ, 2ನೇ ಹಂತ ಮಹಾಲಕ್ಷ್ಮಿಪುರಂ	10,000
8	**ಮಂಜುಳಾಶ್ರೀಧರ್** ನಂ 86/ಡಿ, 16ನೇ ಮುಖ್ಯರಸ್ತೆ, ವಿವಿ ಮೊಹಲ್ಲಾ ಮೈಸೂರು-2, ಮೈಸೂರು	10,000
9	**ಎ.ಆರ್. ನರಸಿಂಹಸ್ವಾಮಿ**, ನಂ., 372/373, ಎಫ್‌ಎಫ್-4, ಧನುಷ್ ಪ್ಯಾರಡೈಸ್, 5ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ವಿಜಯಾ ಬ್ಯಾಂಕ್ ಲೇಔಟ್, ಬೆಂಗಳೂರು	10,000
10	**ಎಂ.ಕೆ. ಗಣಪತಿ**, ನಂ 574, 30ನೇ ಮುಖ್ಯರಸ್ತೆ, ಬನಗಿರಿನಗರ, ಬನಶಂಕರಿ 3ನೇ ಹಂತ	5,001
11	**ಸಿ. ಕೆಂಪಣ್ಣ**, ನಂ 588, 1ನೇ ಮಹಡಿ, 4ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, ಬಿಎಸ್‌ಕೆ 1ನೇ ಹಂತ, 2ನೇ ಬ್ಲಾಕ್	5,000
12	**ಬಿ.ಎಸ್. ರಮಾನಂದ**, ನಂ 156–ಸಿ, 7ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಬಿಇಎಂಎಲ್ 3ನೇ ಹಂತ, ರಾಜ ರಾಜೇಶ್ವರಿ ನಗರ	5,000
13	**ಭಿಕ್ಕು ಗೋಪಾಲ್ ಶೆಟ್ಟಿ**, ಕಾರವಾರ	5,000
14	**ಲಕ್ಷ್ಮಿಕಾಂತ್ ಆರ್.ಕೆ**, ನಂ 8, ಬ್ಲಾಕ್ ಸಂಖ್ಯೆ 21, ಎಸ್‌ಬಿಎಂ ಕಾಲೊನಿ ಶ್ರೀರಾಂಪುರ, 2ನೇ ಹಂತ	5,000
15	**ಸೋಮನಾಥ್**, ನಂ 1–11–52/81 ಮಾರುತಿ ಕಾಲೊನಿ, ರಾಯಚೂರು	2,501
16	**ಜಿ. ಗಾಯತ್ರಿ**, ನಂ 350, 15 ಎ ಅಡ್ಡರಸ್ತೆ, 2ನೇ ಹಂತ, ಮಹಾಲಕ್ಷ್ಮಿ ಲೇಔಟ್	2,500
17	**ಎಂ. ರಾಮಕೃಷ್ಣ**, ನಂ 350, 15 ಎ ಅಡ್ಡರಸ್ತೆ, ಡಬ್ಲ್ಯುಸಿ ರಸ್ತೆ, 2ನೇ ಹಂತದ ಮಹಾಲಕ್ಷ್ಮಿ ಲೇಔಟ್	2,500
18	**ಟಿ.ಎಸ್. ನಂಜುಂಡೇಶ್ವರ**, ನಂ 39, 7ನೇ ಅಡ್ಡರಸ್ತೆ, ಅಮೃತಹಳ್ಳಿ, ಜಕ್ಕೂರು	2,001
19	**ಶಂಕರ್ ಗುಬ್ಬಣ್ಣವರ್**, ನಿವೃತ್ತ ಮುಖ್ಯ ಶಿಕ್ಷಕ, ಎಸ್‌ಬಿಐ ಪ್ರೌಢಶಾಲೆ ಹತ್ತಿರ, ರಾಜೇಂದ್ರ ನಗರ	2,000
20	**ದಶರಥ ಎಚ್.ಎನ್**, ನಂ ಬಿ 175, ಲಕ್ಷ್ಮಿ ನಿಲಯ, 3ನೇ ಹಂತ, 2ನೇ ಅಡ್ಡರಸ್ತೆ ಸಿಡಿಎ ಲೇಔಟ್, ಕಲ್ಯಾಣ ನಗರ, ಚಿಕ್ಕಮಗಳೂರು	2,000
21	**ಸೌಂದರ್ ರಾಜನ್ ಆರ್**, ನಂ 574, ಡಿ, ಗ್ರಾಪ್ಲೇಯರ್, ಶ್ರೀಗಂಧದ ಕಾವಲ್, ಬೆಂಗಳೂರು	2,000
22	**ಮುರಿಗೆಪ್ಪ ಕೋಟಿ**	1,010
23	**ಪುಟ್ಟಸ್ವಾಮಿ**, ಬಿಎಸ್‌ಎನ್‌ಎಲ್ ಕ್ವಾಟ್ರಸ್, ಹೊಳಲ್ಕೆರೆ ರಸ್ತೆ, ಚಿತ್ರದುರ್ಗ	1,000
24	**ಅಶೋಕ್ ಕುಮಾರ್**, ನಂ 004, ಗಗನ್ ಶಿಲ್ಪ್, ನಂ.1, ಅಂಬೇಡ್ಕರ್ ಲೇಔಟ್, ಎಲ್.ಆರ್. ಬಂಡೆ, ಆರ್.ಟಿ. ನಗರ ಬೆಂಗಳೂರು	1,000
25	**ಆನಂದ ಕುಮಾರ್ ಎಂ.ಪಿ**, ನಂ 291, 5ನೇ ಅಡ್ಡರಸ್ತೆ, ಚರ್ಚ್ ರಸ್ತೆ, 100 ಅಡಿ ಹೊರವರ್ತುಲ ರಸ್ತೆ, ಬೆಂಗಳೂರು	1,000
	ಇಂದಿನ ಮೊತ್ತ	1,95,013
	ಒಟ್ಟು ಮೊತ್ತ	8,56,059

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.fnc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

ಸಂಕ್ಷಿಪ್ತ ಸುದ್ದಿ

ಆ್ಯಂಟಿ ರೇಬೀಸ್: ಲಸಿಕೆ ಉಚಿತ

ಬೆಂಗಳೂರು: ಪ್ರಾಣಿ ಕಡಿತಕ್ಕೊಳಗಾದವರಿಗೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ 'ಆ್ಯಂಟಿ ರೇಬಿಸ್ ಲಸಿಕೆ' ಮತ್ತು 'ರೇಬಿಸ್ ಇಮ್ಯುನೋಗ್ಲಾಬ್ಯುಲಿನ್' ಚುಚ್ಚು ಮದ್ದನ್ನು ಉಚಿತವಾಗಿ ನೀಡಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಸೂಚಿಸಿದ್ದಾರೆ.

ರೇಬಿಸ್ ಮಾರಣಾಂತಿಕ ಕಾಯಿಲೆಯಾಗಿದ್ದರೂ ಸಮಯೋಚಿತ ಚಿಕಿತ್ಸೆಯಿಂದ ಪ್ರಾಣ ಉಳಿಸಬಹುದು. 2030ರ ವೇಳೆಗೆ ನಾಯಿ ಕಡಿತದಿಂದ ಬರುವ ರೇಬಿಸ್ ರೋಗವನ್ನು ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ. ರಾಜ್ಯದಲ್ಲಿ ಈಗಾಗಲೇ ರೇಬಿಸ್ ರೋಗವನ್ನು 'ಗುರುತಿಸಬಹುದಾದ ರೋಗ' ಎಂದು ಘೋಷಿಸಲಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧ ದಾಸ್ತಾನು ಇರುವಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವೈದ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಎಪಿಎಲ್ ಹಾಗೂ ಬಿಪಿಎಲ್ ಕಾರ್ಡ್ ಎಂದು ಪರಿಗಣಿಸದೆ, ಪ್ರಾಣಿ ಕಡಿತಕ್ಕೆ ಒಳಗಾದ ಎಲ್ಲರಿಗೂ ಈ ಲಸಿಕೆ ಹಾಗೂ ಚುಚ್ಚುಮದ್ದನ್ನು ಒದಗಿಸಬೇಕು ಎಂದು ಹೇಳಿದ್ದಾರೆ.

ವರ್ಗಾವಣೆಗೊಂಡ ಸ್ಥಳಕ್ಕೆ ತೆರಳಲು ಶಿಕ್ಷಕರಿಗೆ ಸಮ್ಮತಿ

ಬೆಂಗಳೂರು: ಅತಿಥಿ ಶಿಕ್ಷಕರು ಕೆಲಸಕ್ಕೆ ವರದಿ ಮಾಡಿಕೊಂಡ ತಕ್ಷಣ ವರ್ಗಾವಣೆಗೊಂಡ ಶಾಲೆಗೆ ತೆರಳಲು ಕಾಯಂ ಶಿಕ್ಷಕರಿಗೆ ಅನುಮತಿ ನೀಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಎಲ್ಲ ಡಿಡಿಪಿಐಗಳಿಗೂ ಸೂಚನೆ ನೀಡಿದ್ದಾರೆ. ವರ್ಗಾವಣೆಯಿಂದ ಖಾಲಿ ಇರುವ ಕಡೆ 43 ಸಾವಿರ ಅತಿಥಿ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಿದೆ. ಅವರು ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ವೈದ್ಯಕೀಯ ಸೀಟು ವಂಚನೆ ಜಾಲ

ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಕಚೇರಿ ● ನಾಲ್ವರನ್ನು ಬಂಧಿಸಿದ ಹೈಗ್ರೌಂಡ್ಸ್ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರತಿಷ್ಠಿತ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಹಾಗೂ ಇತರೆ ವೈದ್ಯಕೀಯ ಕೋರ್ಸ್‌ಗಳಿಗೆ ಸೀಟು ಕೊಡಿಸುವ ಆಮಿಷವೊಡ್ಡಿ ಹಣ ಪಡೆದು ವಂಚಿಸುತ್ತಿದ್ದ ಜಾಲವನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಆಶೀಷ್ ಆನಂದ್, ನಿಖಿಲ್ ಕುಮಾರ್, ಅಶುತೋಷ್ ಹಾಗೂ ಬಸಂತ್‌ಕುಮಾರ್ ಬಂಧಿತರು. ಪ್ರಮುಖ ಆರೋಪಿಯಾಗಿರುವ ಮಧ್ಯಪ್ರದೇಶದ ಮಾನವ್ ಗುಪ್ತಾ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎಜುಟೆನ್ಸಿ ಕನ್ಸಲ್ಟೆನ್ಸಿ ಸರ್ವೀಸ್ ಹೆಸರಿನಲ್ಲಿ ಕಂಪನಿ ಸ್ಥಾಪಿಸಿದ್ದ ಮಾನವ್ ಗುಪ್ತಾ, ಬೆಂಗಳೂರಿನ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಕಚೇರಿ ತೆರೆದಿದ್ದ. ಪರಿಚಯಸ್ಥರು ಹಾಗೂ ಸ್ಥಳೀಯರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ. ಅವರ ಮೂಲಕವೇ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಹಣ ಪಡೆದು ವಂಚಿಸುತ್ತಿದ್ದ' ಎಂದು ತಿಳಿಸಿವೆ.

'ದಾವಣಗೆರೆಯಲ್ಲಿರುವ ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಹೇಳಿದ್ದ ಆರೋಪಿಗಳು, ವಿದ್ಯಾರ್ಥಿಯೊಬ್ಬರ ಪೋಷಕರಿಂದ ₹ 10.80 ಲಕ್ಷ ಪಡೆದಿದ್ದ. ಸೀಟು ಕೊಡಿಸಿರಲಿಲ್ಲ. ಹಣವನ್ನೂ ವಾಪಸು ಕೊಟ್ಟಿರಲಿಲ್ಲ. ಪೋಷಕರು ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಂಪನಿಯ ಕಚೇರಿಗೆ ಬೀಗ

'ಎಜುಟೆನ್ಸಿ ಕನ್ಸಲ್ಟೆನ್ಸಿ ಸರ್ವೀಸ್ ಕಂಪನಿ ಕಚೇರಿಯಲ್ಲಿ ಶೋಧ ನಡೆಸಿ, ಬ್ಯಾಂಕ್ ಖಾತೆಗಳ ದಾಖಲೆಗಳು, ಕಂಪ್ಯೂಟರ್, ಮೊಬೈಲ್‌ಗಳನ್ನು ಸುಪರ್ದಿಗೆ ಪಡೆಯಲಾಗಿದೆ. ಕಚೇರಿಗೆ ಬೀಗ ಹಾಕಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೀಟ್ ಬರೆದ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಮೊಬೈಲ್‌ಗಳಿಗೆ ಸಾಮೂಹಿಕ ಸಂದೇಶ ಕಳುಹಿಸುತ್ತಿದ್ದರು. 'ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಖಾಲಿ ಇರುವ ಎಂಬಿಬಿಎಸ್ ಸೀಟುಗಳ ಪ್ರವೇಶಾತಿಗೆ ನೋಂದಣಿ ಮಾಡುತ್ತಿದೆ. ಕೇವಲ ₹ 75 ಲಕ್ಷಕ್ಕೆ? ಕರೆ ಮಾಡಿ. 90******36' ಎಂದು ಸಂದೇಶದಲ್ಲಿ ಬರೆಯುತ್ತಿದ್ದರು. ಈ ಸಂಖ್ಯೆಗೆ ಕರೆ ಮಾಡಿದ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ಕಚೇರಿಗೆ ಕರೆಸಿಕೊಳ್ಳುತ್ತಿದ್ದ ಆರೋಪಿಗಳು, ವೈದ್ಯಕೀಯ ಕಾಲೇಜಿನ ಕಾರ್ಯದರ್ಶಿ ಎಂಬುದಾಗಿ ಹೇಳಿ ವ್ಯಕ್ತಿಯೊಬ್ಬರನ್ನು ಪರಿಚಯ ಮಾಡಿಸುತ್ತಿದ್ದರು. ಸೀಟು ಕೊಡಿಸಲು ಕಮಿಷನ್ ನೀಡಬೇಕೆಂದು ಹೇಳಿ ಹಂತ ಹಂತವಾಗಿ ₹ 5 ಲಕ್ಷದಿಂದ ₹ 10 ಲಕ್ಷದವರೆಗೂ ಹಣ ಪಡೆಯುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ಪ್ರಕರಣ ದಾಖಲಾಗುತ್ತಿದ್ದಂತೆ ಬಹುತೇಕ ಆರೋಪಿಗಳು ನಗರ ತೊರೆದಿದ್ದಾರೆ. ಹಲವು ವಿದ್ಯಾರ್ಥಿಗಳು ವಂಚನೆಗೀಡಾಗಿರುವ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು

ಆಳ್ವಾಸ್ ಉದ್ಯೋಗ ಮೇಳ 7,986 ಅಭ್ಯರ್ಥಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ಶುಕ್ರವಾರ ಆರಂಭವಾಗಿರುವ ಎರಡು ದಿನಗಳ 'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳದಲ್ಲಿ 198 ಕಂಪನಿಗಳು ಭಾಗವಹಿಸಿದ್ದು, ಮೊದಲ ದಿನ 7,986 ಉದ್ಯೋಗಾಕಾಂಕ್ಷಿಗಳು ಸಂದರ್ಶನದಲ್ಲಿ ಭಾಗವಹಿಸಿದರು.

ಆನ್‌ಲೈನ್ ಮೂಲಕ 9,018 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರೆ, ಸ್ಥಳದಲ್ಲಿ 1,432 ಜನರು ನೋಂದಣಿ ಮಾಡಿಕೊಂಡಿದ್ದಾರೆ.

'ಹೋಟೆಲ್ ಮ್ಯಾನೇಜ್‌ಮೆಂಟ್ ಪದವೀಧರನಾಗಿರುವ ನಾನು, ವಂಡರ್ ಲಾ, ಇಂಡಿಗೊ, ಗೋಲ್ಡ್‌ಫಿಂಚ್ ಹೋಟೆಲ್‌ಗಳಿಗೆ ಸಂದರ್ಶನ ನೀಡಿದ್ದೇನೆ. ಉದ್ಯೋಗ ಪಡೆಯಲು ಎಷ್ಟೆಲ್ಲ ಅಲೆಯಬೇಕು. ಆದರೆ, ಇಲ್ಲಿ ಒಂದೇ ವೇದಿಕೆಯಲ್ಲಿ ಎಷ್ಟೊಂದು ಕಂಪನಿಗಳಿಗೆ ಸಂದರ್ಶನ ನೀಡಬಹುದು' ಎಂದು ಬೆಂಗಳೂರು ಕ್ರೈಸ್ಟ್ ಕಾಲೇಜಿನಲ್ಲಿ ಪದವಿ ಪೂರೈಸಿರುವ ಸ್ಯಾಮ್ಯುಲ್ ಅಭಿಪ್ರಾಯಪಟ್ಟರು.

ಸಂಸದ ನಳಿನ್‌ಕುಮಾರ್ ಕಟೀಲ್ ಉದ್ಯೋಗ ಮೇಳವನ್ನು ಉದ್ಘಾಟಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ನಿರುದ್ಯೋಗ ಸಮಸ್ಯೆ ಬಗೆಹರಿಸಲು ಜಿಲ್ಲೆಗೊಂದು ಉದ್ಯೋಗ ಮೇಳದ ಕಲ್ಪನೆ ತಂದಿದ್ದರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ದೇಶದ ಕನಸು ನನಸು ಮಾಡುತ್ತಿದೆ. ಯಾರೂ ನಿರುದ್ಯೋಗಿ ಆಗಬಾರದು. ಎಲ್ಲರೂ ನೆಮ್ಮದಿಯಿಂದ ಇರಬೇಕೆಂಬ ಸಂಸ್ಥೆಯ ಚಿಂತನೆ ಉತ್ಕೃಷ್ಟವಾಗಿದೆ ಎಂದು ಅವರು ಶ್ಲಾಘಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಪ್ರಾಸ್ತಾವಿಕವಾಗಿ ಮಾತನಾಡಿ, ಉದ್ಯೋಗ ಎಂದಾಕ್ಷಣ ವಿದೇಶದತ್ತ ದೃಷ್ಟಿ ಹಾಯಿಸುವ ಬದಲು, ದೇಶದಲ್ಲಿ ನೆಲೆ ನಿಂತು ಸಾಧಿಸುವ ಛಲ ಹೊಂದಬೇಕು ಎಂದರು.

'ಡಿ. 23ರಿಂದ ವೀರಶೈವ-ಲಿಂಗಾಯತ ಮಹಾ ಅಧಿವೇಶನ'

ಪ್ರಜಾವಾಣಿ ವಾರ್ತೆ



ಈಶ್ವರ ಖಂಡ್ರೆ

ದಾವಣಗೆರೆ: 'ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾ ಸಭಾದ 24ನೇ ಮಹಾ ಅಧಿವೇಶನವನ್ನು ಡಿಸೆಂಬರ್ 23, 24 ರಂದು ಇಲ್ಲಿನ ಎಂಬಿಎ ಕಾಲೇಜು ಮೈದಾನದಲ್ಲಿ ನಡೆಸಲು ಉದ್ದೇಶಿಸಲಾಗಿದೆ' ಎಂದು ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ತಿಳಿಸಿದರು.

ಅಧಿವೇಶನ ಸಂಬಂಧ ನಗರದಲ್ಲಿ ಶುಕ್ರವಾರ ನಡೆದ ಮಹಾಸಭಾದ ಪೂರ್ವಭಾವಿ ಸಭೆಯ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ವೀರಶೈವ–ಲಿಂಗಾಯತ ಸಮುದಾಯಕ್ಕೆ ಒಬಿಸಿ ಮೀಸಲಾತಿ, ಸಮುದಾಯ ಎದುರಿಸುತ್ತಿರುವ ಸವಾಲು, ಸಮಸ್ಯೆಗಳ ಬಗ್ಗೆ ಈ ಅಧಿವೇಶನದಲ್ಲಿ ಚರ್ಚಿಸಲಾಗುವುದು. ಹಲವು ನಿರ್ಣಯಗಳನ್ನು ಅಂಗೀಕರಿಸಲಾಗುವುದು. ಸುತ್ತೂರು ಶ್ರೀ, ಸಿದ್ಧಗಂಗಾಶ್ರೀ, ಗುರು–ವಿರಕ್ತರು ಸೇರಿದಂತೆ ಎಲ್ಲ ಮಠಾಧೀಶರನ್ನು ಆಹ್ವಾನಿಸಲಾಗುವುದು' ಎಂದು ಅವರು ಹೇಳಿದರು.

'ಪ್ರತಿ 5 ವರ್ಷಗಳಿಗೊಮ್ಮೆ 3 ದಿನ ಅಧಿವೇಶನ ನಡೆಸಲಾಗುತ್ತಿತ್ತು. ಕೋವಿಡ್ ಕಾರಣ ಅಧಿವೇಶನ ನಡೆದಿರಲಿಲ್ಲ. ಬರಗಾಲದ ಕಾರಣ ಈ ಬಾರಿ ಎರಡು ದಿನಕ್ಕೆ ಸೀಮಿತಗೊಳಿಸಲಾಗಿದೆ. ಮಹಿಳಾ ವಿಚಾರಗೋಷ್ಠಿ, ಯುವ, ರೈತ ಗೋಷ್ಠಿ ನಡೆಯಲಿದೆ. ಈ ಸಂದರ್ಭ ಸ್ಮರಣ ಸಂಚಿಕೆಯನ್ನೂ ಬಿಡುಗಡೆ ಮಾಡಲಾಗುವುದು' ಎಂದು ಮಾಹಿತಿ ನೀಡಿದರು.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷರಾದ ಎನ್.ತಿಪ್ಪಣ್ಣ, ಅಥಣಿ ವೀರಣ್ಣ, ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ, ವಿಧಾನಪರಿಷತ್ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ, ಮಾಜಿ ಶಾಸಕ ಪರಣ್ಣ ಮುನವಳ್ಳಿ ಸೇರಿದಂತೆ ಮಹಾಸಭಾದ ವಿವಿಧ ಜಿಲ್ಲಾ ಘಟಕಗಳ ಪದಾಧಿಕಾರಿಗಳು, ಆಂಧ್ರಪ್ರದೇಶ, ಮಹಾರಾಷ್ಟ್ರದ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

'ಲಿಂಗಾಯತ ಸಿ.ಎಂ: ಕುರ್ಚಿ ಖಾಲಿ ಇಲ್ಲ'

'ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಹೀಗಿರುವಾಗ ಲಿಂಗಾಯತರಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

'ರಾಜ್ಯದಲ್ಲಿ ನಡೆಸಲಾದ ಜಾತಿ ಗಣತಿ ವರದಿ ಬಿಡುಗಡೆ ಸಂಬಂಧ ಸಚಿವ ಸಂಪುಟದಲ್ಲಿ ಪ್ರಾಥಮಿಕ ಹಂತದ ಚರ್ಚೆ ನಡೆದಿದೆ. ಈ ಕುರಿತು ಮತ್ತೊಮ್ಮೆ ಚರ್ಚಿಸಿದಾಗ ನಮ್ಮ ಅಭಿಪ್ರಾಯ ತಿಳಿಸುತ್ತೇವೆ' ಎಂದರು.

'ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಅನ್ಯಾಯ ಆಗುತ್ತಿದೆ ಎಂಬ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆ ಕುರಿತು ಸಭೆಯಲ್ಲಿ ಯಾವುದೇ ರೀತಿಯ ಚರ್ಚೆ ಆಗಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಯಾರಿಗೂ ಅನ್ಯಾಯ ಆಗಲು ಬಿಡುವುದಿಲ್ಲ. ನಮ್ಮದು ಸಮಬಾಳು– ಸಮಪಾಲು ತತ್ವದ ಸರ್ಕಾರ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಲಾಗುವುದು' ಎಂದರು.

ಪ್ರತಿಕ್ರಿಯೆಗೆ ಶಾಮನೂರು ನಕಾರ

'ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂಬ ಹೇಳಿಕೆ ನೀಡಿದ್ದರ ಕುರಿತು ಮುಖ್ಯಮಂತ್ರಿ ನಿಮ್ಮೊಂದಿಗೆ ಚರ್ಚೆ ನಡೆಸಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ಶಾಸಕ ಶಾಮನೂರು ಶಿವಶಂಕರಪ್ಪ, 'ಅದೆಲ್ಲ ಸೀಕ್ರೆಟ್. ನಿಮ್ಮ ಮುಂದೆ ಹೇಳಲಾಗದು' ಎಂದರು.

ಈ ಹೇಳಿಕೆ ನೀಡಿದ್ದಕ್ಕೆ ಪಕ್ಷದ ಹೈಕಮಾಂಡ್ ನಿಮಗೆ ಯಾವುದಾದರೂ ಸೂಚನೆ ನೀಡಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಯಾವ ಹೈಕಮಾಂಡ್ ಇಲ್ಲ, ಏನೂ ಇಲ್ಲ ನಡೀರಪ್ಪ' ಎಂದು ಹೇಳಿದರು.

'ಪಂಚಮಸಾಲಿ ಮೀಸಲಾತಿ: 13ಕ್ಕೆ ಹುಬ್ಬಳ್ಳಿಯಲ್ಲಿ ಸಮಾವೇಶ'



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಹುಬ್ಬಳ್ಳಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ 6ನೇ ಹಂತದ ಸಮಾವೇಶ ಅಕ್ಟೋಬರ್ 13ರಂದು ಹುಬ್ಬಳ್ಳಿಯ ಗಬ್ಬೂರ ಬೈಪಾಸ್ ಸಮೀಪದ ಮೈದಾನದಲ್ಲಿ ಆಯೋಜಿಸಲಾಗಿದೆ' ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಈಗಾಗಲೇ ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಬಾಗಲಕೋಟೆ ಜಿಲ್ಲೆಯ ಜಮಖಂಡಿ, ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ಸಮಾವೇಶ ನಡೆಸಲಾಗಿದೆ. ಸಾಮೂಹಿಕ ಇಷ್ಟಲಿಂಗ ಪೂಜೆಯಡಿ ಹೋರಾಟ ನಡೆದಿದೆ' ಎಂದು ಅವರು ಶುಕ್ರವಾರ ಮಾಧ್ಯಮದವರಿಗೆ ತಿಳಿಸಿದರು.

ಸಿ.ಎಂ ಸಮಸ್ಯೆ ಬಗೆಹರಿಸಲಿ: 'ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಸೂಕ್ತ ಸ್ಥಾನ ಸಿಗುತ್ತಿಲ್ಲ ಎಂದು ಶಾಮನೂರು ಶಿವಶಂಕರಪ್ಪ ಅವರಲ್ಲಿ ಸಮುದಾಯದ ಅಧಿಕಾರಿಗಳು ಹೇಳಿರಬಹುದು. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಶಂಕರಪ್ಪ ಅವರನ್ನು ಕರೆದು, ಅನ್ಯಾಯ ಸರಿಪಡಿಸುವ ಕೆಲಸ ಮಾಡಬೇಕು' ಎಂದು ಸ್ವಾಮೀಜಿ ಹೇಳಿದರು.

'ಹೊಸ ಮದ್ಯದಂಗಡಿ ತೆರೆಯಲ್ಲ'

ಒಂದನೇ ಪುಟದಿಂದ...

'ಶಿವಮೊಗ್ಗದಲ್ಲಿ ಮುಸ್ಲಿಂ ಸಮುದಾಯದ ಮೆರವಣಿಗೆ ಮೇಲೆ ಕಿಡಿಗೇಡಿಗಳು ಕಲ್ಲು ಎಸೆದಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡುವಂತೆ ಪೊಲೀಸರಿಗೆ ಸೂಚಿಸಲಾಗಿದೆ. ಕಾನೂನು ಎಲ್ಲರಿಗೂ ಒಂದೇ. ತಪ್ಪು ಮಾಡಿದವರು ಯಾವ ಸಮುದಾಯದವರೇ ಆಗಿರಲಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ. ಅಲ್ಲಿ ಬಿಜೆಪಿಯವರು ಏನು ಸತ್ಯ ಶೋಧನೆ ಮಾಡಿದ್ದಾರೆ' ಎಂದು ಪ್ರಶ್ನಿಸಿದರು.

ಕಲುಷಿತ ನೀರಿಗೆ ಅಧಿಕಾರಿಯೇ ಹೊಣೆ: 'ರಾಜ್ಯದಲ್ಲಿ ಎಲ್ಲೇ ಆಗಲಿ, ಕಲುಷಿತ ನೀರು ಪೂರೈಕೆ ಮಾಡಿದರೆ ಸಂಬಂಧಿಸಿದ ಅಧಿಕಾರಿ ವಿರುದ್ಧವೇ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಸಂಬಂಧ ರಾಜಿ ಇಲ್ಲ' ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

ಕಲುಷಿತ ನೀರು ಕುಡಿದು ಆರು ಜನರು ಮೃತಪಟ್ಟಿರುವ ಕವಾಡಿಗರಹಟ್ಟಿಗೆ ಶುಕ್ರವಾರ ಭೇಟಿ ನೀಡಿ ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ, ಅವರು ಮಾತನಾಡಿದರು.

'ಮೃತರ ಕುಟುಂಬದ ಸದಸ್ಯರಲ್ಲಿ ಒಬ್ಬರಿಗೆ ಸರ್ಕಾರದಿಂದ ಉದ್ಯೋಗ ನೀಡಲಾಗುವುದು ಎಂದು ಭರವಸೆ ನೀಡಿದ ಅವರು, ಮೂರು ಎಕರೆಯಲ್ಲಿ ಬಡಾವಣೆ ಅಭಿವೃದ್ಧಿಪಡಿಸಿ ನಿವೇಶನ ಹಾಗೂ ಮನೆ ನೀಡಲಾಗುವುದು. ದುರಂತದಲ್ಲಿ ಸಂಕಷ್ಟ ಎದುರಿಸಿದ ಕುಟುಂಬದ ಜೊತೆ ಸರ್ಕಾರ ಇದೆ' ಎಂದು ಧೈರ್ಯ ತುಂಬಿದರು.

ಚಿತ್ರದುರ್ಗದ ಕವಾಡಿಗರಹಟ್ಟಿಗೆ ಶುಕ್ರವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲುಷಿತ ನೀರು ಕುಡಿದು ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು

'ಹಳ್ಳಿ ಹಳ್ಳಿಯಲ್ಲಿ ಬಾರ್ ತೆರೆಯುವುದಿಲ್ಲ'

ಮಾಗಡಿ (ರಾಮನಗರ): ಹಳ್ಳಿ, ಹಳ್ಳಿಯಲ್ಲಿ ಬಾರ್ ತೆರೆಯುವುದಿಲ್ಲ. ಜನರು ಕುಡಿಯುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಶುಕ್ರವಾರ ಕುದೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಆರ್ಥಿಕ ಇಲಾಖೆ ನಿರ್ಧಾರ ಕೂಡ. ಈ ಕುರಿತು ಮುಖ್ಯಮಂತ್ರಿ ಎಲ್ಲರ ಜೊತೆ ಚರ್ಚಿಸಿ, ಸೂಕ್ತ ತೀರ್ಮಾನ ಮಾಡುತ್ತಾರೆ ಎಂದರು.

ಹೆಚ್ಚಿನ ಜನರಿಗೆ ಉದ್ಯೋಗ ಸೃಷ್ಟಿಸುವ ಸವಾಲು ಸರ್ಕಾರದ ಮುಂದಿದೆ. ಎಲ್ಲಿ ಮದ್ಯದಂಗಡಿ ತೆರೆಯಬೇಕು ಎಂದು ಚರ್ಚೆ ಮಾಡುತ್ತೇವೆ ಎಂದರು.

ಅಯೋಧ್ಯೆಯ ರಾಮಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಸಮರ್ಪಣೆ ಕಾರ್ಯಕ್ರಮ

'ಧರ್ಮ ರಕ್ಷಣೆಗೆ 'ಭವಾನಿ' ಜಾಗೃತವಾಗಿರಲಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಹಿಂದೂ ಧರ್ಮ ರಕ್ಷಣೆಗೆ ಶಿವಾಜಿಯ 'ಭವಾನಿ' ಖಡ್ಗ ಸದಾ ಜಾಗೃತವಾಗಿ ಇರಬೇಕಾಗುತ್ತದೆ' ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅಭಿಪ್ರಾಯಪಟ್ಟರು.

ಅಯೋಧ್ಯೆಯಲ್ಲಿ ನಿರ್ಮಾಣ ಆಗುತ್ತಿರುವ ರಾಮಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಸಮರ್ಪಿಸಲು ಶುಕ್ರವಾರ ಇಲ್ಲಿನ ರೇಣುಕ ಮಂದಿರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ಟಿಪ್ಪು ಸುಲ್ತಾನ್, ಮಹಮ್ಮದ್ ಘಜಿನಿ, ಮಹಮ್ಮದ್ ಘೋರಿ, ಬಾಬರ್, ಔರಂಗ್‌ಜೇಬ್‌ನ ಮತಾಂಧ ಮಾನಸಿಕತೆಯನ್ನು ಪೋಷಿಸುವಂತಹ ಮನಃಸ್ಥಿತಿ ಜೀವಂತವಾಗಿದೆ. ಇಂತಹ ಮಾನಸಿಕತೆಗೆ ಜಾಗೃತ ಶಕ್ತಿಯಾಗಿ ಶಿವಾಜಿ, ರಾಣಾಪ್ರತಾಪ್, ಉರಿಗೌಡ, ನಂಜೇಗೌಡ ಅವರಂಥವರ ಮೂಲಕವೇ ಸಮಾಜವನ್ನು ಜಾಗೃತಗೊಳಿಸುವ ಕೆಲಸ ಮಾಡಬೇಕಿದೆ ಎಂದು ಅವರು ಹೇಳಿದರು.

'ನಮ್ಮ ದೇವರು ಒಂದೆಡೆ ಶಸ್ತ್ರವನ್ನೂ ಹಿಡಿದಿದ್ದಾನೆ. ಮತ್ತೊಂದೆಡೆ ಅಭಯ ಹಸ್ತವನ್ನೂ ತೋರಿಸಿದ್ದಾನೆ. ಶಿಷ್ಟರು, ಸಜ್ಜನರಿಗೆ ವರ, ದುಷ್ಟರಿಗೆ ಶಸ್ತ್ರದ ಮೂಲಕವೇ ಉತ್ತರ ಕೊಟ್ಟಿದ್ದಾನೆ. ಹಿಂದೂ ಸಮಾಜದ ಉಳಿವಿಗೆ ಶಸ್ತ್ರ ಮತ್ತು ಶಾಸ್ತ್ರ ಎರಡರ ಅವಶ್ಯವೂ ಇದೆ. ಶಸ್ತ್ರ ಮರೆತರೆ, ಶಾಸ್ತ್ರ ಉಳಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು.

'ಶಸ್ತ್ರ ಇಲ್ಲದ ದೇವರುಗಳೇ ಇಲ್ಲ. ಕೃಷ್ಣ, ಶಿವ, ದುರ್ಗೆ, ರಾಮ ಸೇರಿ ಎಲ್ಲ ದೇವರ ಬಳಿಯೂ ಶಸ್ತ್ರ ಇವೆ. ದುಷ್ಟರ ದಮನ, ಶಿಷ್ಟರ ರಕ್ಷಣೆ ಸಮಾಜದ ಹೊಣೆಯೂ ಹೌದು. ಅವಶ್ಯ ಎನಿಸಿದಾಗ ಶಸ್ತ್ರ ಹಿಡಿಯಬೇಕು ಎಂಬ ಸಂದೇಶವನ್ನು ದೇವರುಗಳೇ ನೀಡಿದ್ದಾರೆ' ಎಂದು ಹೇಳಿದರು.

'ಹಿಂದೂಗಳು ಸಹಬಾಳ್ವೆಗೆ ಸಿದ್ಧರಿದ್ದೇವೆ. ಆದರೆ, ಶಿಶುನಾಳ ಷರೀಫರನ್ನು ತಮ್ಮವರೆಂದು ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಅಬ್ದುಲ್ ಕಲಾಂ ಅವರನ್ನು ಅವರು ಹೊಗಳುವುದೇ ಇಲ್ಲ. ಈ ನೆಲದ ಮೂಲದವರಾದ ರಾಮ, ಕೃಷ್ಣ, ಬುದ್ಧನನ್ನು ನೀವೂ ಸ್ಮರಿಸಿದಾಗ ಮಾತ್ರ ನಮ್ಮವರಾಗುತ್ತೀರಿ' ಎಂದರು.

ಅಯೋಧ್ಯೆಯಲ್ಲಿ ನಿರ್ಮಾಣ ಆಗುತ್ತಿರುವ ರಾಮಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಸಮರ್ಪಿಸಲು ದಾವಣಗೆರೆಯ ರೇಣುಕ ಮಂದಿರದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಗಣ್ಯರು 15 ಕೆ.ಜಿ.ಯ ಬೆಳ್ಳಿ ಇಟ್ಟಿಗೆ, ಶ್ರೀರಾಮ ಹಾಗೂ ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಹೆಬ್ಬಾಳು ವಿರಕ್ತಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ, ಬಿಜೆಪಿ ಮುಖಂಡ ಸಿ.ಟಿ ರವಿ, ಸಂಸದ ಜಿ.ಎಂ ಸಿದ್ದೇಶ್ವರ ಇದ್ದಾರೆ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಆಂದೋಲಶ್ರೀ ವಿರುದ್ಧ ಪ್ರಕರಣ

ಸಿದ್ಧಲಿಂಗ ಸ್ವಾಮೀಜಿ

ಶಹಾಪುರ (ಯಾದಗಿರಿ ಜಿಲ್ಲೆ): ಶಹಾಪುರದಲ್ಲಿ ಈಚೆಗೆ ನಡೆದ ಮಹಾ ಗಣಪತಿ ವಿಸರ್ಜನಾ ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿದ್ದಾರೆ ಎಂದು ಕಲಬುರಗಿ ಜಿಲ್ಲೆಯ ಜೇವರ್ಗಿಯ ಆಂದೋಲ ಸಿದ್ದಲಿಂಗ ಸ್ವಾಮೀಜಿ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದಾರೆ.

'ಸಿದ್ದಲಿಂಗ ಸ್ವಾಮೀಜಿ ಸಮುದಾಯದ ಆಧಾರಗಳ ಮೇಲೆ ವೈಷಮ್ಯ ಬೆಳೆಸುವ ಉದ್ದೇಶದಿಂದ ಸಾರ್ವಜನಿಕವಾಗಿ ಅವಹೇಳನಕಾರಿಯಾಗಿ ಹಾಗೂ ಭೀತಿಯನ್ನುಂಟು ಮಾಡುವ ರೀತಿಯಲ್ಲಿ ಪ್ರಚೋದನಕಾರಿಯಾಗಿ ಮಾತನಾಡಿದ್ದಾರೆ. ಕಲಂ 295 (ಎ), 153 ಐಪಿಸಿ ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಮ್ಮದು ಏನಿದ್ದರೂ ಏಕ ಮಾರೋ ದೊ ತುಕಡಾ. ಹಿಂದೂಗಳ ಮೇಲೆ ಹಲ್ಲೆಯಾದರೆ ರಾಜ್ಯದಲ್ಲಿ ಮೊತ್ತೊಂದು ಗೋದ್ರಾ ಘಟನೆಯಾಗಲಿದೆ. ಶಹಾಪುರ ಮುಸ್ಲಿಂ ಊರು ಎಂದು ಭಾವಿಸಿದ್ದಾರೆ. ಇವೆಲ್ಲ ನಮ್ಮ ಹಿಂದೂಗಳ ಮುಂದೆ ನಡೆಯುವುದಿಲ್ಲ. ಇದು ಸಿಂಹಗಳ ಊರು; ಒಮ್ಮೆ ಘರ್ಜಿಸಿದರೆ ಸಾಕು ಎಲ್ಲವೂ ಮುಗಿಯುತ್ತದೆ' ಎಂದು ಸ್ವಾಮೀಜಿ ಹೇಳಿದ್ದರು.

ಡಿಸೆಂಬರ್ ತಿಂಗಳಿನಲ್ಲಿ ಪ್ರಶಸ್ತಿ ಪ್ರದಾನ

ನಾರ್ಗಿಸ್ ಇದುವರೆಗೆ 13 ಬಾರಿ ಜೈಲಿಗೆ ಹೋಗಿದ್ದಾರೆ, ಐದು ಬಾರಿ ಶಿಕ್ಷೆಗೆ ಗುರಿಯಾಗಿದ್ದಾರೆ. ಅವರನ್ನು ಒಟ್ಟು 31 ವರ್ಷಗಳ ಅವಧಿಗೆ ಸೆರೆವಾಸಕ್ಕೆ ನೂಕಲಾಗಿದೆ

ಸೆರೆಯಲ್ಲಿರುವ ನಾರ್ಗಿಸ್‌ಗೆ ನೊಬೆಲ್ ಶಾಂತಿ ಪುರಸ್ಕಾರ

ಓಸ್ಲೊ/ಜಿನೀವಾ (ಎಪಿ): ಮಹಿಳೆಯರ ಹಕ್ಕುಗಳು, ಪ್ರಜಾತಂತ್ರದ ಪರವಾಗಿ ಹಾಗೂ ಮರಣದಂಡನೆಯ ವಿರುದ್ಧ ಇರಾನ್‌ನಲ್ಲಿ ವರ್ಷಗಳಿಂದ ಹೋರಾಟ ನಡೆಸುತ್ತಿರುವ ಸಾಮಾಜಿಕ ಕಾರ್ಯಕರ್ತೆ ನಾರ್ಗಿಸ್ ಮೊಹಮ್ಮದಿ ಅವರಿಗೆ 2023ನೆಯ ಸಾಲಿನ ನೊಬೆಲ್ ಶಾಂತಿ ಪುರಸ್ಕಾರ ಘೋಷಿಸಲಾಗಿದೆ. ನಾರ್ಗಿಸ್ ಅವರು ಈಗ ಜೈಲಿನಲ್ಲಿದ್ದಾರೆ.

51 ವರ್ಷ ವಯಸ್ಸಿನ ನಾರ್ಗಿಸ್ ಅವರು ಹಲವು ಬಾರಿ ಬಂಧನಕ್ಕೆ ಒಳಗಾಗಿದ್ದರೂ, ವರ್ಷಗಳ ಕಾಲ ಜೈಲಿನಲ್ಲಿದ್ದರೂ ಈ ಹೋರಾಟ ನಡೆಸುತ್ತಿದ್ದಾರೆ. ಅವರು ಈಗ ಟೆಹರಾನ್‌ನ ಕುಖ್ಯಾತ ಎವಿನ್ ಜೈಲಿನಲ್ಲಿ ಇದ್ದಾರೆ. ಪಾಶ್ಚಿಮಾತ್ಯ ದೇಶಗಳ ಜೊತೆ ನಂಟು ಹೊಂದಿರುವವರನ್ನು, ರಾಜಕೀಯ ಕೈದಿಗಳನ್ನು ಈ ಜೈಲಿನಲ್ಲಿ ಇರಿಸಲಾಗಿದೆ.

ನಾರ್ಗಿಸ್ —ಎಎಫ್‌ಪಿ ಚಿತ್ರ

ನೊಬೆಲ್ ಶಾಂತಿ ಪುರಸ್ಕಾರಕ್ಕೆ ಆಯ್ಕೆಯಾಗಿರುವ 19ನೆಯ ಮಹಿಳೆ, ಇರಾನಿನ ಎರಡನೆಯ ಮಹಿಳೆ ನಾರ್ಗಿಸ್. ಈ ಹಿಂದೆ ಮಾನವ ಹಕ್ಕುಗಳ ಕಾರ್ಯಕರ್ತೆ ಶಿರಿನ್ ಎಬಾದಿ ಅವರಿಗೆ 2003ರಲ್ಲಿ ನೊಬೆಲ್ ಶಾಂತಿ ಪುರಸ್ಕಾರ ಘೋಷಿಸಲಾಗಿತ್ತು.

ನೊಬೆಲ್ ಪ್ರಶಸ್ತಿಯು 1 ಮಿಲಿಯನ್ ಡಾಲರ್ (ಅಂದಾಜು ₹8.32 ಕೋಟಿ) ನಗದು, ಚಿನ್ನದ ಪದಕ ಮತ್ತು ಪ್ರಶಂಸಾ ಪತ್ರವನ್ನು ಒಳಗೊಂಡಿದೆ.

ಬಿಡುಗಡೆಗೆ ಒತ್ತಾಯ (ಎಎಫ್‌ಪಿ): ನಾರ್ಗಿಸ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ಘೋಷಣೆಯಾದ ನಂತರ ಪ್ರತಿಕ್ರಿಯಿಸಿರುವ ವಿಶ್ವಸಂಸ್ಥೆಯು, ನಾರ್ಗಿಸ್ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರನ್ನೆಲ್ಲ ಜೈಲಿನಿಂದ ಬಿಡುಗಡೆ ಮಾಡಬೇಕು ಎಂದು ಇರಾನ್ ಸರ್ಕಾರವನ್ನು ಒತ್ತಾಯಿಸಿದೆ. 'ಇರಾನಿನ ಮಹಿಳೆಯರು ಇಡೀ ಜಗತ್ತಿಗೆ ಸ್ಫೂರ್ತಿ' ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯು ಹೇಳಿದೆ.

(ಪ್ಯಾರಿಸ್ ವರದಿ): ಪ್ರಶಸ್ತಿ ಘೋಷಣೆಯು 'ಸ್ವಾತಂತ್ರ್ಯಕ್ಕಾಗಿ ಇರಾನ್‌ನಲ್ಲಿ ನಡೆಯುತ್ತಿರುವ ಹೋರಾಟದ ಪಾಲಿಗೆ ಐತಿಹಾಸಿಕ' ಎಂದು ನಾರ್ಗಿಸ್ ಅವರ ಕುಟುಂಬದ ಸದಸ್ಯರು ಹೇಳಿದ್ದಾರೆ.

'ವಿಷಾದದ ಸಂಗತಿಯೆಂದರೆ ಈ ಅಸಾಮಾನ್ಯ ಸಂದರ್ಭದಲ್ಲಿ ನಾರ್ಗಿಸ್ ಅವರು ನಮ್ಮ ಜೊತೆ ಇಲ್ಲ. ಅನ್ಯಾಯವಾಗಿ ಅವರನ್ನು ಜೈಲಿಗೆ ಹಾಕಿರುವ ಕಾರಣ ಅವರು ಸಂತಸಪಡುವುದನ್ನು ನೋಡಲು ನಮ್ಮಿಂದ ಆಗುತ್ತಿಲ್ಲ' ಎಂದು ಕೂಡ ಕುಟುಂಬದ ಸದಸ್ಯರು ಹೇಳಿದ್ದಾರೆ.

ನ್ಯೂಸ್‌ಕ್ಲಿಕ್ ಸುದ್ದಿತಾಣದ ವಿರುದ್ಧ ಪೊಲೀಸರು ದಾಖಲು ಮಾಡಿಕೊಂಡಿರುವ ಎಫ್‌ಐಆರ್‌ನಲ್ಲಿ ಹೇಳಿಕೆ

'ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಚೀನಾ ಹಣ'

ನವದೆಹಲಿ (ಪಿಟಿಐ): ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಹಾಗೂ ದೇಶದ ವಿರುದ್ಧ ಅವಿಶ್ವಾಸ ಮೂಡಿಸಲು ಚೀನಾದಿಂದ ಭಾರಿ ಪ್ರಮಾಣದಲ್ಲಿ ಹಣ ಸಂದಾಯ ಆಗಿದೆ ಎಂದು ದೆಹಲಿ ಪೊಲೀಸರು ನ್ಯೂಸ್‌ಕ್ಲಿಕ್ ಸುದ್ದಿತಾಣದ ವಿರುದ್ಧ ದಾಖಲು ಮಾಡಿಕೊಂಡಿರುವ 'ಪ್ರಥಮ ಮಾಹಿತಿ ವರದಿ'ಯಲ್ಲಿ (ಎಫ್‌ಐಆರ್) ಹೇಳಲಾಗಿದೆ. ಭಯೋತ್ಪಾದನೆಯ ನಿಗ್ರಹಕ್ಕೆ ಬಳಸಲಾಗುವ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ ಅಡಿಯಲ್ಲಿ ನ್ಯೂಸ್‌ಕ್ಲಿಕ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

2019ರ ಲೋಕಸಭಾ ಚುನಾವಣೆಯ ಪ್ರಕ್ರಿಯೆಯನ್ನು ಹಾಳುಗೆಡವಲು ನ್ಯೂಸ್‌ಕ್ಲಿಕ್ ಪ್ರಧಾನ ಸಂಪಾದಕ ಹಾಗೂ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರು ಪೀಪಲ್ಸ್ ಅಲಯನ್ಸ್ ಫಾರ್ ಡೆಮಾಕ್ರಸಿ ಆ್ಯಂಡ್ ಸೆಕ್ಯುಲರಿಸಂ (ಪಿಎಡಿಎಸ್) ಗುಂಪಿನ ಜೊತೆ ಪಿತೂರಿ ನಡೆಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ಪಿಎಡಿಎಸ್ ಸಂಯೋಜಕಿ ಭಟ್ಟಿನಿ ರಾವ್, ಇತಿಹಾಸಕಾರ ದಿಲೀಪ್ ಸಿಮಿಯೋನ್, ಸಾಮಾಜಿಕ ಕಾರ್ಯಕರ್ತ ದೀಪಕ್ ಧೋಲಾಕಿಯಾ, ದೆಹಲಿ ಮೂಲದ ಸರ್ಕಾರೇತರ ಸಂಸ್ಥೆ ಅಮನ್ ಟ್ರಸ್ಟ್‌ನ ನಿರ್ದೇಶಕ ಜಮಾಲ್ ಕಿದ್ವಾಯಿ ಮತ್ತು ಪತ್ರಕರ್ತರಾದ ಕಿರಣ್ ಶಹೀನ್ ಅವರು ಈ ಪಿತೂರಿಯಲ್ಲಿ ಭಾಗಿ ಎಂದು ಹೇಳಲಾಗಿದೆ.

ವಿದೇಶಿ ಹಣವನ್ನು ಚೀನಾದ ಕಮ್ಯುನಿಸ್ಟ್ ಪಕ್ಷದ ಪ್ರಚಾರಾಂದೋಲನ ವಿಭಾಗದ ಸಕ್ರಿಯ ಸದಸ್ಯ ನೆವಿಲ್ಲೆ ರಾಯ್ ಸಿಂಘಮ್ ಎನ್ನುವವರು ಅಕ್ರಮವಾಗಿ ನೀಡಿದ್ದಾರೆ ಎಂದು ಎಫ್‌ಐಆರ್ ಹೇಳಿದೆ.

ದೆಹಲಿ ಪೊಲೀಸರು ನ್ಯೂಸ್‌ಕ್ಲಿಕ್ ಸುದ್ದಿತಾಣಕ್ಕೆ ಎಫ್‌ಐಆರ್ ಪ್ರತಿಯನ್ನು ಶುಕ್ರವಾರ ತಲುಪಿಸಿದ್ದಾರೆ. ಪ್ರತಿಯನ್ನು ನೀಡುವಂತೆ ದೆಹಲಿಯ ನ್ಯಾಯಾಲಯವೊಂದು ಗುರುವಾರ ಆದೇಶಿಸಿತ್ತು.

ಚೀನಾದ ಶಓಮಿ, ವಿವೊನಂತಹ ದೈತ್ಯ ಟೆಲಿಕಾಂ ಕಂಪನಿಗಳು ಭಾರತದಲ್ಲಿ ಸಾವಿರಾರು ಶೆಲ್ ಕಂಪನಿಗಳನ್ನು ಆರಂಭಿಸಿವೆ. ಪಿತೂರಿಯ ಭಾಗವಾಗಿ ಭಾರತಕ್ಕೆ ವಿದೇಶಿ ಹಣ ರವಾನಿಸಲು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಉಲ್ಲಂಘಿಸಿ ಶೆಲ್ ಕಂಪನಿಗಳನ್ನು ಆರಂಭಿಸಲಾಗಿದೆ ಎಂದು ಕೂಡ ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಮತ್ತು ಭಾರತದ ವಿರುದ್ಧ ಅವಿಶ್ವಾಸ ಮೂಡಿಸುವ ಪಿತೂರಿಯ ಭಾಗವಾಗಿ, ಚೀನಾದಿಂದ ಭಾರಿ ಪ್ರಮಾಣದಲ್ಲಿ ಹಣವನ್ನು ಸುತ್ತುಬಳಸಿನ ಮಾರ್ಗದಲ್ಲಿ ಹಾಗೂ ಮರೆಮಾಚಿದ ಬಗೆಯಲ್ಲಿ ರವಾನಿಸಲಾಗಿದೆ. ದೇಶದ ಆಂತರಿಕ ನೀತಿಗಳನ್ನು, ಅಭಿವೃದ್ಧಿ ಯೋಜನೆಗಳನ್ನು ಟೀಕಿಸಲು, ಚೀನಾ ಸರ್ಕಾರದ ಯೋಜನೆಗಳನ್ನು ಪ್ರಚುರಪಡಿಸಲು, ಅವುಗಳನ್ನು ಸಮರ್ಥಿಸಿಕೊಳ್ಳಲು ಹಣ ಪಡೆದು ರೂಪಿಸಿದ ಸುದ್ದಿಗಳನ್ನು ಹರಿಬಿಡಲಾಗಿದೆ' ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಈ ವಿದೇಶಿ ಹಣವನ್ನು ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಾಖಾ ಅವರಿಗೆ ಮತ್ತು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಅವರ ಸಹವರ್ತಿಗಳಿಗೆ, ತೀಸ್ತಾ ಅವರ ಪತಿ ಜಾವೇದ್ ಆನಂದ್ ಅವರಿಗೆ, ಪತ್ರಕರ್ತರಾದ ಊರ್ಮಿಳೇಶ್, ಅರಾತ್ರಿಕಾ ಹಲ್ದರ್, ಪರಂಜಯ್ ಗುಹಾ ಠಾಕುರ್ತಾ ಮತ್ತು ಅಭಿಸಾರ್ ಶರ್ಮ ಅವರಿಗೆ ಹಂಚಿರುವ ಶಂಕೆ ಇದೆ ಎಂದು ಪೊಲೀಸರು ಎಫ್‌ಐಆರ್‌ನಲ್ಲಿ ಹೇಳಿದ್ದಾರೆ.

ಗೃಹಬಂಧನದಲ್ಲಿ ಇರುವ ನವಲಾಖಾ ಅವರು 1991ರಿಂದಲೂ ಪುರಕಾಯಸ್ಥ ಅವರೊಂದಿಗೆ ಒಡನಾಟ ಹೊಂದಿದ್ದಾರೆ. ಅಲ್ಲದೆ, ಪಿಪಿಕೆ ನ್ಯೂಸ್‌ಕ್ಲಿಕ್ ಸ್ಟೂಡಿಯೊ ಪ್ರೈ.ಲಿ. ಕಂಪನಿಯ ಷೇರುದಾರ ಕೂಡ ಹೌದು ಎಂದು ಎಫ್‌ಐಆರ್ ಹೇಳಿದೆ.

'ಪಾಕಿಸ್ತಾನದ ಐಎಸ್‌ಐ ಏಜೆಂಟ್ ಆಗಿರುವ ಗುಲಾಮ್ ನಬಿ ಫಾಯ್ ಜೊತೆ ನವಲಾಖಾ ಅವರು ರಾಷ್ಟ್ರವಿರೋಧಿ ಸಂಪರ್ಕ ಹೊಂದಿದ್ದಾರೆ. ಪ್ರಬೀರ್, ನೆವಿಲ್ಲೆ ಮತ್ತು ಶಾಂಘೈನಲ್ಲಿ ನೆವಿಲ್ಲೆ ಅವರು ಹೊಂದಿರುವ ಸ್ಟಾರ್‌ಸ್ಟ್ರೀಮ್ ಕಂಪನಿಯ ನೌಕರರ ನಡುವೆ ವಿನಿಮಯ ಆಗಿರುವ ಇ–ಮೇಲ್‌ಗಳು ಕಾಶ್ಮೀರ ಹಾಗೂ ಅರುಣಾಚಲ ಪ್ರದೇಶವು ಭಾರತದ ಭಾಗವಲ್ಲ ಎಂದು ತೋರಿಸಲು ಅವರು ಹೊಂದಿದ್ದ ಇರಾದೆಯನ್ನು ಬಹಿರಂಗಪಡಿಸುತ್ತಿವೆ' ಎಂದು ಎಫ್‌ಐಆರ್ ಆರೋಪಿಸಿದೆ.

ಕೋವಿಡ್–19 ಸಾಂಕ್ರಾಮಿಕವನ್ನು ನಿಗ್ರಹಿಸಲು ಕೇಂದ್ರ ಸರ್ಕಾರ ನಡೆಸಿದ್ದ ಯತ್ನಗಳಿಗೆ ಕೆಟ್ಟ ಹೆಸರು ತರಲು ಸುಳ್ಳು ಸಂಕಥನವೊಂದನ್ನು ಹರಿಬಿಡಲಾಗಿತ್ತು ಎಂದು ಕೂಡ ಆರೋಪಿಸಲಾಗಿದೆ. ಪುರಕಾಯಸ್ಥ ಹಾಗೂ ನ್ಯೂಸ್‌ಕ್ಲಿಕ್ ಸುದ್ದಿತಾಣದ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ದೆಹಲಿ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

ಎಫ್‌ಐಆರ್‌ನಲ್ಲಿನ ಆರೋಪಗಳು

- ಭಾರತದಲ್ಲಿ ಶೆಲ್ ಕಂಪನಿಗಳನ್ನು ಆರಂಭಿಸಿರುವ ಚೀನಾದ ಮೊಬೈಲ್ ಕಂಪನಿಗಳು
- ಚೀನಾ ಪರ ಪ್ರಚಾರಕ್ಕೆ ಹಣ ಪಡೆದು ಸುದ್ದಿ ರೂಪಿಸಲಾಗಿದೆ
- ಕೇಂದ್ರ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಸುಳ್ಳು ಸಂಕಥನ ಸೃಷ್ಟಿ

ಪುರಕಾಯಸ್ಥ ಅರ್ಜಿ: ಪ್ರತಿಕ್ರಿಯೆ ಕೇಳಿದ ಕೋರ್ಟ್

ನವದೆಹಲಿ (ಪಿಟಿಐ): ನ್ಯೂಸ್‌ಕ್ಲಿಕ್ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಮತ್ತು ಅದರ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ತಮ್ಮ ಬಂಧನ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ದೆಹಲಿ ಹೈಕೋರ್ಟ್, ದೆಹಲಿ ಪೊಲೀಸರಿಂದ ಪ್ರತಿಕ್ರಿಯೆ ಕೇಳಿದೆ.

ಈ ಅರ್ಜಿಯ ವಿಚಾರಣೆ ಬಾಕಿ ಇರುವವರೆಗೆ ತಮ್ಮನ್ನು ಪೊಲೀಸರ ವಶದಿಂದ ಬಿಡುಗಡೆ ಮಾಡಬೇಕು ಎಂದು ಕೂಡ ಪುರಕಾಯಸ್ಥ ಮತ್ತು ಚಕ್ರವರ್ತಿ ಕೋರಿದ್ದಾರೆ. ಈ ಬಗ್ಗೆಯೂ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರು ಪೊಲೀಸರಿಗೆ ಸೂಚಿಸಿದ್ದಾರೆ. ವಿಚಾರಣೆಯನ್ನು ಹೈಕೋರ್ಟ್ ಸೋಮವಾರಕ್ಕೆ ಮುಂದೂಡಿದೆ. ಪುರಕಾಯಸ್ಥ ಮತ್ತು ಚಕ್ರವರ್ತಿ ಅವರು ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದು ಮಾಡುವಂತೆಯೂ ಕೋರಿದ್ದಾರೆ.

ಭಾರಿ ಮಳೆ... ಭಾರಿ ಮಳೆಯಿಂದಾಗಿ ಅಸ್ಸಾಂ ರಾಜಧಾನಿ ಗುವಾಹಟಿಯ ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲಿಯೇ ಜನರು ಸೈಕಲ್ ರಿಕ್ಷಾದಲ್ಲಿ ಶುಕ್ರವಾರ ಸಂಚರಿಸಿದರು ಪಿಟಿಐ ಚಿತ್ರ

ಮೋದಿ ಟೀಕೆಗೆ ಮಲ್ಲಿಕಾರ್ಜುನ ಖರ್ಗೆ ತಿರುಗೇಟು

'ಬಡವರ ಹಕ್ಕು ಕಸಿದುಕೊಳ್ಳದಿರಿ'

ನವದೆಹಲಿ (ಪಿಟಿಐ): ಗ್ರಾಮೀಣ ಭಾರತದಲ್ಲಿ ಜನರು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಚುನಾವಣಾ ನಡೆಯಲಿರುವ ರಾಜ್ಯಗಳ ಪ್ರವಾಸದ ವೇಳೆ ಕಾಂಗ್ರೆಸ್ ಪಕ್ಷವನ್ನು ಟೀಕಿಸುತ್ತ ತಮ್ಮ ವೈಫಲ್ಯವನ್ನು ಮರೆಮಾಚುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಆರೋಪಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆ, ಭ್ರಷ್ಟಾಚಾರ ಮತ್ತು ಕಾನೂನು ಸುವ್ಯವಸ್ಥೆ ವಿಷಯಕ್ಕೆ ಸಂಬಂಧಿಸಿದಂತೆ ಅಶೋಕ್ ಗೆಹಲೋತ್ ನೇತೃತ್ವದ ರಾಜಸ್ಥಾನ ಸರ್ಕಾರದ ವಿರುದ್ಧ ಗುರುವಾರ ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಖರ್ಗೆ ಈ ಹೇಳಿಕೆ ನೀಡಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಖರ್ಗೆ ಅವರು, 'ಪ್ರಧಾನಿ ಅವರು ಕಾಂಗ್ರೆಸ್ ಪಕ್ಷವನ್ನು ಮನಸೋ ಇಚ್ಛೆ ಟೀಕಿಸಲಿ, ಆದರೆ, ಬಡಜನರ ಹಕ್ಕುಗಳನ್ನು ಕಸಿದುಕೊಳ್ಳಬಾರದು' ಎಂದು ಹೇಳಿದ್ದಾರೆ.

'ಆದಾಯ ಕಡಿಮೆಯಾಗಿ ಹಣದುಬ್ಬರ ಏರಿಕೆಯಾಗಿರುವ ಕಾರಣ ಬಡ ಜನರು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನೀಡಿ ಎಂಬ ಬೇಡಿಕೆ ಹೆಚ್ಚುತ್ತಿದೆ. ಆದರೆ, ಬಜೆಟ್‌ನಲ್ಲಿ ಅದಕ್ಕೆ ಮೀಸಲಿಡುವ ಅನುದಾನವನ್ನು ಕಡಿತ ಮಾಡಲಾಗಿದೆ' ಎಂದು ಆರೋಪಿಸಿದರು.

'ಗ್ರಾಮೀಣ ಭಾಗದಲ್ಲಿ ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿದೆ. ಹೀಗಾಗಿ ಸೆಪ್ಟೆಂಬರ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಬೇಡಿಕೆ ಶೇ 30ರಷ್ಟು ಹೆಚ್ಚಾಗಿದೆ. ಪರಿಸ್ಥಿತಿ ಹೀಗಿರುವಾಗ ಉದ್ಯೋಗ ಖಾತ್ರಿ ಯೋಜನೆಯ ಅನುದಾನ ಶೇ 4ರಷ್ಟು ಮಾತ್ರ ಬಾಕಿ ಉಳಿದಿದೆ. ಈ ವಿಷಯದಲ್ಲಿ ಕ್ರಮ ಕೈಗೊಳ್ಳುವುದು ಬಿಟ್ಟು ಪ್ರಧಾನಿ ಮೋದಿ ಅವರು ಚುನಾವಣಾ ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಶಾಪ ಹಾಕುತ್ತಿದ್ದಾರೆ. ತಮ್ಮ ಭಾಷಣದ ಮೂಲಕ ತಮ್ಮ ವೈಫಲ್ಯವನ್ನು ಮುಚ್ಚಿ ಹಾಕುತ್ತಿದ್ದಾರೆ' ಎಂದು ಹೇಳಿದ್ದಾರೆ.

'2023ರ ಬಜೆಟ್‌ನಲ್ಲಿ ಮೋದಿ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಗೆ ಮೀಸಲಿಟ್ಟ ಅನುದಾನದ ಪೈಕಿ ಶೇ 33ರಷ್ಟನ್ನು ಕಡಿತ ಮಾಡಿದೆ ಎನ್ನುವುದು ಈ ದೇಶದ ಜನರಿಗೆ ನೆನಪಿದೆ' ಎಂದೂ ಹೇಳಿದರು.

ಸುಳ್ಳು ಹಬ್ಬಿಸುತ್ತಿರುವ ಖರ್ಗೆ: ಬಿಜೆಪಿ

ನವದೆಹಲಿ (ಪಿಟಿಐ): ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಮೀಸಲಿಟ್ಟ ಅನುದಾನವನ್ನು ಕಡಿತ ಮಾಡಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ ಎಂದು ಬಿಜೆಪಿ ತಿರುಗೇಟು ನೀಡಿದೆ.

ನರೇಂದ್ರ ಮೋದಿ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಕಲ್ಪಿಸುವ ಯೋಜನೆಯ ಬೇಡಿಕೆಗೆ ಅನುಗುಣವಾಗಿ ಬಜೆಟ್ ಅಂದಾಜನ್ನು ಪದೇ ಪದೇ ಪರಿಷ್ಕರಿಸಿದೆ ಎಂದೂ ಸ್ಪಷ್ಟನೆ ನೀಡಿದೆ. ಖರ್ಗೆ ಹೇಳಿಕೆ ಬೆನ್ನಲ್ಲೇ 'ಎಕ್ಸ್' ನಲ್ಲಿ ಪ್ರತಿಕ್ರಿಯೆ ನೀಡಿರುವ ಬಿಜೆಪಿಯ ಮಾಹಿತಿ ಮತ್ತು ತಂತ್ರಜ್ಞಾನ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು, '2023–24ನೇ ಸಾಲಿನ ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆ ಅನುದಾನವನ್ನು ಕಡಿತ ಮಾಡಲಾಗಿದೆ ಎನ್ನುವುದು ಸುಳ್ಳು. ಸುಳ್ಳಿನ ದತ್ತಾಂಶಗಳನ್ನು ಜನರ ಮುಂದಿಡುವಲ್ಲಿ ಕಾಂಗ್ರೆಸ್ ಪರಿಣತಿ ಪಡೆದಿದೆ' ಎಂದು ಹೇಳಿದ್ದಾರೆ.

ಹಿಮಾಚಲ: ಒಂದೇ ಹೆಣ್ಣು ಮಗು ಹೆತ್ತವರಿಗೆ ₹2 ಲಕ್ಷ ಪ್ರೋತ್ಸಾಹಧನ

ಶಿಮ್ಲಾ (ಪಿಟಿಐ): ಹೆಣ್ಣು ಭ್ರೂಣ ಹತ್ಯೆ ನಿರ್ಮೂಲನೆ ಮಾಡುವ ಉದ್ದೇಶದಿಂದ ಒಂದೇ ಹೆಣ್ಣು ಮಗು ಹೊಂದಿರುವ ದಂಪತಿಗೆ ₹2 ಲಕ್ಷ ಪ್ರೋತ್ಸಾಹಧನ ನೀಡಲಾಗುವುದು ಎಂದು ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಗುರುವಾರ ತಿಳಿಸಿದ್ದಾರೆ.

ಇಂದಿರಾ ಗಾಂಧಿ ಬಾಲಿಕಾ ಯೋಜನೆಯಡಿಯಲ್ಲಿ ನೀಡುತ್ತಿರುವ ಪ್ರೋತ್ಸಾಹ ಧನವನ್ನು ₹35 ಸಾವಿರದಿಂದ ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸುಖ್ವಿಂದರ್ ಸಿಂಗ್ ಸುಖು

ಕಾರ್ಯಕ್ರಮವೊಂದರಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸುಖು, 'ಒಂದು ಹೆಣ್ಣು ಮಗು ಜನಿಸಿದ ನಂತರ ಕುಟುಂಬ ಯೋಜನೆ ಅಳವಡಿಸಿಕೊಂಡ ದಂಪತಿಗೆ ₹2 ಲಕ್ಷ ಹಾಗೂ ಎರಡು ಹೆಣ್ಣು ಮಕ್ಕಳಾದ ನಂತರ ಮತ್ತೊಂದು ಮಗು ಬೇಡ ಎಂದು ನಿರ್ಧರಿಸಿದ ಪೋಷಕರಿಗೆ ₹1 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು' ಎಂದು ಹೇಳಿದರು.

ಸಾಮಾಜಿಕ ಮಾಧ್ಯಮಗಳಿಗೆ ಕೇಂದ್ರದಿಂದ ನೋಟಿಸ್

ನವದೆಹಲಿ: ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದ ವಿಷಯಗಳನ್ನು ಭಾರತದಲ್ಲಿನ ತಮ್ಮ ವೇದಿಕೆಗಳಿಂದ ತೆಗೆದು ಹಾಕುವಂತೆ ಸಾಮಾಜಿಕ ಮಾಧ್ಯಮಗಳಾದ ಎಕ್ಸ್, ಯೂಟ್ಯೂಬ್ ಹಾಗೂ ಟೆಲಿಗ್ರಾಮ್‌ಗಳಿಗೆ ಕೇಂದ್ರ ಸರ್ಕಾರ ಶುಕ್ರವಾರ ನೋಟಿಸ್ ನೀಡಿದೆ.

'ಈ ವಿಚಾರವಾಗಿ ಸಾಮಾಜಿಕ ಮಾಧ್ಯಮ ವೇದಿಕೆಗಳು ತಕ್ಷಣವೇ ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ, ಐಟಿ ಕಾಯ್ದೆಯ ಸೆಕ್ಷನ್ 79ರ ಅಡಿ ಈ ವೇದಿಕೆಗಳಿಗೆ ನೀಡಲಾಗುವ ರಕ್ಷಣೆಯನ್ನು ಹಿಂತೆಗೆದುಕೊಳ್ಳಲಾಗುವುದು. ನಿಷೇಧಿತ ವಿಷಯಗಳನ್ನು ಅಪ್‌ಲೋಡ್ ಮಾಡಿರದಿದ್ದರೂ, ವೇದಿಕೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದಾಗಿದೆ' ಎಂದು ಐಟಿ ಸಚಿವ ರಾಜೀವ್ ಚಂದ್ರಶೇಖರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

₹300 ಕೋಟಿ ಡ್ರಗ್ಸ್ ವಶ

ಮುಂಬೈ (ಪಿಟಿಐ): ಮುಂಬೈ ಪೊಲೀಸರು ಕಳೆದ ಕೆಲವು ದಿನಗಳಿಂದ ನಡೆಸುತ್ತಿರುವ ಕಾರ್ಯಾಚರಣೆಯಲ್ಲಿ ₹300 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು, ಹಲವು ನಗರಗಳಿಂದ ಈ ಜಾಲದ 12 ಮಂದಿಯನ್ನು ಬಂಧಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ನಾಸಿಕ್ ಜಿಲ್ಲೆಯ ಎಂಐಡಿಸಿ ಶಿಂಧೆ ಗಾಂವ್‌ನಲ್ಲಿ ಕಾರ್ಖಾನೆಯ ಮೇಲೆ ದಾಳಿ ನಡೆಸಿ, 151 ಕೆ.ಜಿಗೂ ಅಧಿಕ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ. ಡ್ರಗ್ಸ್ ಜಾಲದಲ್ಲಿ ತೊಡಗಿದ್ದ ಮುಂಬೈ ಮಹಾನಗರದ ವಿವಿಧ ಭಾಗಗಳಿಂದ ಹಾಗೂ ನಾಸಿಕ್, ತೆಲಂಗಾಣದ ಹೈದರಾಬಾದ್‌ನಿಂದ ಒಟ್ಟು 12 ಜನರನ್ನು ಬಂಧಿಸಲಾಗಿದೆ.

ತೆಲಂಗಾಣ: 'ಮುಖ್ಯಮಂತ್ರಿ ಉಪಾಹಾರ ಯೋಜನೆ' ಶುರು

ಹೈದರಾಬಾದ್(ಪಿಟಿಐ): ತೆಲಂಗಾಣದ ಶಾಲಾ ಮಕ್ಕಳಿಗಾಗಿ ರೂಪಿಸಿರುವ 'ಮುಖ್ಯಮಂತ್ರಿಗಳ ಉಪಾಹಾರ ಯೋಜನೆ'ಗೆ ಶುಕ್ರವಾರ ಚಾಲನೆ ನೀಡಲಾಯಿತು.

ಐಟಿ ಸಚಿವ ಕೆ.ಟಿ.ರಾಮ ರಾವ್ ಸೇರಿದಂತೆ ಇತರ ಸಚಿವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಈ ಯೋಜನೆಗೆ ಚಾಲನೆ ನೀಡಿದರು. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 23 ಲಕ್ಷ ವಿದ್ಯಾರ್ಥಿಗಳಿಗೆ ಈ ಯೋಜನೆಯ ಪ್ರಯೋಜನ ಸಿಗಲಿದೆ. ಯೋಜನೆಗೆ ಚಾಲನೆ ನೀಡಿದ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ರಾಮ ರಾವ್, 'ರಾಜ್ಯದಲ್ಲಿರುವ 27,147 ಸರ್ಕಾರಿ ಶಾಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು' ಎಂದರು.

'ಇಡ್ಲಿ ಸಾಂಬಾರ್, ಗೋಧಿ ರವೆಯ ಉಪ್ಪಿಟ್ಟು, ಪೂರಿ–ಆಲೂ ಕೂರ್ಮಾ, ಟೊಮಾಟೊ ಬಾತ್, ಕಿಚಡಿ, ಸಿರಿಧಾನ್ಯಗಳ ಇಡ್ಲಿ ಹಾಗೂ ಪೊಂಗಲ್ ಸೇರಿದಂತೆ ಪೌಷ್ಟಿಕ ಖಾದ್ಯಗಳನ್ನು ನೀಡಲಾಗುತ್ತದೆ' ಎಂದು ಹೇಳಿದರು.

'ಆಹಾರದ ಗುಣಮಟ್ಟವನ್ನು ಕಾಪಾಡಬೇಕು. ನಿಯಮಿತವಾಗಿ ಪರೀಕ್ಷಿಸಬೇಕು' ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

1 ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ ಉಪಾಹಾರ ನೀಡುವ ಈ ಯೋಜನೆಗೆ ಅ.24ರಂದು ಚಾಲನೆ ನೀಡಲು ಸರ್ಕಾರ ಉದ್ದೇಶಿಸಿತ್ತು. ಆದರೆ, ಅದಕ್ಕೂ ಮೊದಲೇ ಯೋಜನೆ ಶುರು ಮಾಡಿದೆ.

ಬಿಆರ್‌ಎಸ್ ತೊರೆದ ಇಬ್ಬರು ಶಾಸಕರು

ಹೈದರಾಬಾದ್ (ಪಿಟಿಐ): ಬಿಆರ್‌ಎಸ್ ಪಕ್ಷದ ಇಬ್ಬರು ಶಾಸಕರು ಶುಕ್ರವಾರ ಪಕ್ಷ ತೊರೆದಿದ್ದು, ತೆಲಂಗಾಣ ವಿಧಾನಸಭೆ ಚುನಾವಣೆಗೂ ಮುನ್ನ ಆಡಳಿತಾರೂಢ ಪಕ್ಷಕ್ಕೆ ಹಿನ್ನಡೆ ಆಗಿದೆ.

ಖಾನಾಪುರ ಶಾಸಕಿ ಅಜ್ಮೀರಾ ರೇಖಾ ಮತ್ತು ವಿಧಾನ ಪರಿಷತ್ ಸದಸ್ಯ ಕಾಸಿರೆಡ್ಡಿ ನಾರಾಯಣ ರೆಡ್ಡಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಿಸಿಸಿ ಅಧ್ಯಕ್ಷ ರೇವಂತ್ ರೆಡ್ಡಿ ಅವರ ನೇತೃತ್ವದಲ್ಲಿ ನವದೆಹಲಿಯಲ್ಲಿ ಕಾಂಗ್ರೆಸ್ ಸೇರಿದರು. ಇವರ ಜತೆಗೆ ನಾಗರ್‌ಕರ್ನೂಲ್ ಜಿಲ್ಲೆಯ ಹಲವು ಮುಖಂಡರು ಕೂಡ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಜಾತಿ ಗಣತಿ ವರದಿ ಸಲ್ಲಿಕೆ: ದಿನಾಂಕ ನಿಗದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ದಿನಾಂಕವನ್ನು ನಿಗದಿಪಡಿಸುವಂತೆ ಹಿಂದುಳಿದ ವರ್ಗಗಳ ಮುಖಂಡರ ನಿಯೋಗವು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರನ್ನು ಆಗ್ರಹಿಸಿದೆ.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್, ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಮತ್ತು ಜಾತಿ ಗಣತಿ ನಡೆಸಿದ್ದ ಎಚ್. ಕಾಂತರಾಜ ನೇತೃತ್ವದ ಆಯೋಗದ ಸದಸ್ಯರಾಗಿದ್ದ ಲಿಂಗಪ್ಪ ನೇತೃತ್ವದಲ್ಲಿ ಜಯಪ್ರಕಾಶ್ ಹೆಗ್ಡೆ ಅವರನ್ನು ಶುಕ್ರವಾರ ಭೇಟಿಮಾಡಿದ ವಿವಿಧ ಸಮುದಾಯಗಳ ಮುಖಂಡರು, ಈ ಕುರಿತು ಚರ್ಚೆ ನಡೆಸಿದರು.

'ಜಾತಿ ಗಣತಿ ನಡೆಸಿ ಹಲವು ವರ್ಷಗಳಾಗಿವೆ. ತಾಂತ್ರಿಕ ತೊಡಕಿನ ಕಾರಣದಿಂದ ವರದಿಯನ್ನು ಈವರೆಗೂ ಸರ್ಕಾರಕ್ಕೆ ಸಲ್ಲಿಸಿಲ್ಲ. ನವೆಂಬರ್‌ನಲ್ಲಿ ಈ ಆಯೋಗದ ಅವಧಿಯೂ ಮುಕ್ತಾಯವಾಗಲಿದೆ. ಅದಕ್ಕೂ ಮುನ್ನವೇ ವರದಿಯನ್ನು ಸಲ್ಲಿಸಬೇಕು. ವರದಿ ಸಲ್ಲಿಸುವ ದಿನಾಂಕವನ್ನು ನಿಗದಿಪಡಿಸಬೇಕು' ಎಂದು ಆಯೋಗದ ಅಧ್ಯಕ್ಷರನ್ನು ಆಗ್ರಹಿಸಿದರು.

'ಬಿಹಾರ ಸರ್ಕಾರವರು ಜಾತಿ ಗಣತಿಯನ್ನು ನಡೆಸಿ, ವರದಿಯನ್ನು ಬಹಿರಂಗಪಡಿಸಿದೆ. ಕರ್ನಾಟಕದಲ್ಲಿ ಜಾತಿ ಗಣತಿ ನಡೆದು ದೀರ್ಘ ಸಮಯ ಕಳೆದರೂ ವರದಿಯೇ ಸಲ್ಲಿಕೆಯಾಗಿಲ್ಲ. ಹಿಂದುಳಿದ ವರ್ಗಗಳು ಸೇರಿದಂತೆ ಎಲ್ಲ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಈ ವರದಿಯಲ್ಲಿನ ದತ್ತಾಂಶಗಳು ಸಹಕಾರಿಯಾಗಲಿವೆ. ವರದಿ ಸಲ್ಲಿಕೆ ಇನ್ನೂ ವಿಳಂಬ ಆಗದಂತೆ ಆಯೋಗವು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ನವೆಂಬರ್‌ನೊಳಗೆ ವರದಿ ಸಲ್ಲಿಕೆ'

ಮುಖಂಡರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಜಯಪ್ರಕಾಶ್ ಹೆಗ್ಡೆ, 'ಜಾತಿ ಗಣತಿ ವರದಿಯನ್ನು ನವೆಂಬರ್ ಒಳಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು. ಅದಕ್ಕೆ ಬೇಕಿರುವ ಸಿದ್ಧತೆಯನ್ನು ಆರಂಭಿಸಲಾಗಿದೆ' ಎಂದರು. 'ಹಿಂದೆ ಆಯೋಗವು ಸಂಗ್ರಹಿಸಿದ್ದ ದತ್ತಾಂಶಗಳಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಅದಕ್ಕೆ ಅವಕಾಶವೂ ಇಲ್ಲ. ಸರ್ಕಾರ ಕೇಳಿದರೂ ಬದಲಾವಣೆ ಮಾಡಲಾಗದು. ತಾಂತ್ರಿಕ ತೊಡಕುಗಳ ನಿವಾರಣೆಗೆ ಸೀಮಿತವಾಗಿ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ವರದಿ ಸಲ್ಲಿಸುವುದು ನಮ್ಮ ಕೆಲಸ. ಅದನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಸರ್ಕಾರದ ಅಧಿಕಾರ ವ್ಯಾಪ್ತಿಗೆ ಸೇರಿದ ವಿಷಯ' ಎಂದರು.

ಸೆಲೆಬ್ರಿಟಿ ಆಕರ್ಷಣೆ: ಕಾಂಚಾಣ ಕುಣಿತ!

ಒಂದನೇ ಪುಟದಿಂದ

ಚಿನ್ನದ ಗಟ್ಟಿಗಳು, ಆಭರಣಗಳು, ನಗದು ಸೇರಿದಂತೆ ₹ 417 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದೆ ಎಂದು ಎನ್‌ಡಿಟಿವಿ ಸುದ್ದಿತಾಣ ವರದಿ ಮಾಡಿದೆ.

ರಣಬೀರ್ ಕಪೂರ್

ಶ್ರದ್ಧಾ ಕಪೂರ್



ಕಪಿಲ್ ಶರ್ಮಾ

ಹೀನಾ ಖಾನ್

ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ. ನಟ ರಣಬೀರ್ ಕಪೂರ್ ಹಾಗೂ ಶ್ರದ್ಧಾ ಕಪೂರ್ ಅವರನ್ನು ಇ.ಡಿ. ವಿಚಾರಣೆಗೆ ಒಳಪಡಿಸಿದೆ.

ಬೆಳಕಿಗೆ ಬಂದ ಬಗೆ: ದುಬೈನಲ್ಲಿ ಕಳೆದ ಫೆಬ್ರುವರಿಯಲ್ಲಿ ನಡೆದಿದ್ದ ₹ 200 ಕೋಟಿ ವೆಚ್ಚದ ಮದುವೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸೆಲೆಬ್ರಿಟಿಗಳಿಗೆ ನಗದು ಪಾವತಿ ಮಾಡಲಾಗಿತ್ತು. ಇದರ ಜಾಡು ಹಿಡಿದ ಇ.ಡಿ.ಗೆ ಮಹಾದೇವ್ ಆ್ಯಪ್‌ನ ನಂಟಿರುವ ವ್ಯವಹಾರದ ಕುರಿತು ತಿಳಿಯಿತು ಎಂದು ಎನ್‌ಡಿಟಿವಿ ವರದಿಯಲ್ಲಿ ಹೇಳಲಾಗಿದೆ.

ದುಬೈನಲ್ಲಿದ್ದುಕೊಂಡು ಕಾರ್ಯಾಚರಣೆ: ಮಹಾದೇವ್ ಆನ್‌ಲೈನ್ ಆ್ಯಪ್‌ನ ಕಾರ್ಯಾಚರಣೆಯನ್ನು ದುಬೈನಲ್ಲಿರುವ ಸೌರಭ್ ಚಂದ್ರಕರ್ ಮತ್ತು ರವಿ ಉಪ್ಪಲ್ ಎಂಬುವವರು ನಡೆಸುತ್ತಿದ್ದಾರೆ. ಇವರು ಮೂಲತಃ ಛತ್ತೀಸಗಢದ ಭಿಲಾಯಿಯವರು.

ಹೊಸ ವೆಬ್‌ಸೈಟ್‌ಗಳು, ವಾಟ್ಸ್‌ಆ್ಯಪ್‌ನಂತಹ ಚಾಟ್ ಆ್ಯಪ್‌ಗಳಲ್ಲಿ ಗ್ರೂಪ್ ರಚಿಸಿ, ಅವುಗಳ ಮೂಲಕ ಆಮಿಷ ಒಡ್ಡಿ ಹೊಸ ಗ್ರಾಹಕರನ್ನು ಸೆಳೆಯುತ್ತಿದ್ದರು. ಸಾಮಾಜಿಕ ಮಾಧ್ಯಮಗಳ ಆ್ಯಪ್‌ಗಳಲ್ಲಿ ಜಾಹೀರಾತುಗಳನ್ನು ಕೂಡ ಬಿತ್ತರಿಸುತ್ತಿದ್ದ ಸೌರಭ್ ಹಾಗೂ ರವಿ, ತಮ್ಮ ಮೊಬೈಲ್ ಸಂಖ್ಯೆಯನ್ನು ಕಳಿಸುವ ಮೂಲಕ ಹಣ ಗಳಿಸಬಹುದು ಎಂದು ಜನರಿಗೆ ಆಮಿಷವೊಡ್ಡುತ್ತಿದ್ದರು ಎಂದು ಇ.ಡಿ ತನ್ನ ದೂರಿನಲ್ಲಿ ವಿವರಿಸಿದೆ.

ಬಳಕೆದಾರರು ಕಂಪನಿ ಪ್ರತಿನಿಧಿಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಮಾತ್ರ ಸಂಪರ್ಕಿಸಬೇಕಿತ್ತು ಎಂದು ಇ.ಡಿ ಹೇಳಿದೆ.

ಹೊಸ ಬಳಕೆದಾರರನ್ನು ಸಂಪರ್ಕಿಸುತ್ತಿದ್ದ ಮಹಾದೇವ್ ಆ್ಯಪ್‌ನ 'ಕಸ್ಟಮರ್ ಕೇರ್' ಸಿಬ್ಬಂದಿ, ಐ.ಡಿ ಸೃಷ್ಟಿಸುವ ಕುರಿತು ಮಾರ್ಗದರ್ಶನ ಮಾಡುತ್ತಿದ್ದರು. ಐ.ಡಿ ಸೃಷ್ಟಿಸುತ್ತಿದ್ದ ಬಳಕೆದಾರರಿಗೆ ಎರಡು ಮೊಬೈಲ್ ಸಂಖ್ಯೆಗಳನ್ನು ನೀಡಲಾಗುತ್ತಿತ್ತು.

ಬಳಕೆದಾರರು ಒಂದು ಸಂಖ್ಯೆಯನ್ನು ಬಳಸಿ ಬೆಟ್ಟಿಂಗ್ ಆ್ಯಪ್‌ನ ತಮ್ಮ ಖಾತೆಯಲ್ಲಿ ಹಣ ಠೇವಣಿ ಇಟ್ಟು, ಬೆಟ್ಟಿಂಗ್ ಮಾಡಬಹುದಿತ್ತು. ಮತ್ತೊಂದು ಸಂಖ್ಯೆಯನ್ನು ಗ್ರಾಹಕರ ಸೇವಾ ಕೇಂದ್ರ ಸಂಪರ್ಕಿಸಲು ಹಾಗೂ ತಮ್ಮ ಖಾತೆಗಳಲ್ಲಿ ಸಂಗ್ರಹವಾದ ಪಾಯಿಂಟ್‌ಗಳ ನಗದೀಕರಣಕ್ಕಾಗಿ ಬಳಸಬೇಕಿತ್ತು ಎಂದು ಇ.ಡಿ ವಿವರಿಸಿದೆ.

ಈ ಖಾತೆಗಳೆಲ್ಲ ಬೇನಾಮಿ ಖಾತೆಗಳಾಗಿರುತ್ತಿದ್ದವು. ಆರಂಭದಲ್ಲಿ ಒಂದಿಷ್ಟು ಲಾಭ ಪಡೆಯುತ್ತಿದ್ದ ಹೊಸ ಬಳಕೆದಾರರು ನಂತರ ಹೆಚ್ಚಿನ ಹಣ ಗಳಿಸುವ ಆಸೆಯಿಂದ ದೊಡ್ಡ ಮೊತ್ತವನ್ನು ಆ್ಯಪ್‌ನಲ್ಲಿನ ತಮ್ಮ ಖಾತೆಗಳಲ್ಲಿ ಠೇವಣಿ ಇಡುತ್ತಿದ್ದರು. ಕೆಲ ದಿನಗಳ ನಂತರ, ಅವರು ತಮ್ಮ ಎಲ್ಲಾ ಹಣವನ್ನು ಕಳೆದುಕೊಳ್ಳುತ್ತಿದ್ದರು.

ಕಾಲ್ ಸೆಂಟರ್‌ಗಳ ಜಾಲ: ಕಂಪನಿಯ ಬ್ಯಾಂಕ್ ಖಾತೆಗಳು ಮಾತ್ರ ಅಕ್ರಮವಾಗಿರದೇ, ಅದು ಸ್ಥಾಪಿಸಿದ್ದ ಕಾಲ್ ಸೆಂಟರ್‌ಗಳು ಕೂಡ ಅಕ್ರಮವಾಗಿವೆ.

ಭಾರತವಲ್ಲದೇ, ಮಲೇಷ್ಯಾ, ಥಾಯ್ಲೆಂಡ್ ಹಾಗೂ ಯುಎಇಯಲ್ಲಿ ನೂರಾರು ಕಾಲ್ ಸೆಂಟರ್‌ಗಳನ್ನು ಸ್ಥಾಪಿಸಿರುವ ಕಂಪನಿ, ಅವುಗಳ ಮೂಲಕ ಹತ್ತಾರು ಆ್ಯಪ್, ವೆಬ್‌ಸೈಟ್‌ಗಳನ್ನು ಅಭಿವೃದ್ಧಿಪಡಿಸಿ, ಗ್ರಾಹಕರೊಂದಿಗೆ ಸಂಪರ್ಕ ಸಾಧಿಸುತ್ತಿತ್ತು ಎಂದೂ ಇ.ಡಿ ಹೇಳಿದೆ.

ಈ ಬೆಟ್ಟಿಂಗ್ ಮೂಲಕ ನಿತ್ಯವೂ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿತ್ತು. ಪ್ರತಿನಿತ್ಯ ಕಂಪನಿಯು ₹ 200 ಕೋಟಿಯಷ್ಟು ಲಾಭ ಗಳಿಸುತ್ತಿತ್ತು ಎಂದೂ ಇ.ಡಿ ಹೇಳಿದೆ ಎಂದು ವರದಿ ಮಾಡಿದೆ.

ಪೊಲೀಸರು, ಅಧಿಕಾರಿಗಳು ಹಾಗೂ ರಾಜಕಾರಣಿಗಳ ನಂಟು

ದುಬೈನಿಂದಲೇ ಮಹಾದೇವ್ ಬೆಟ್ಟಿಂಗ್ ಆ್ಯಪ್‌ನ ನಿರ್ವಹಣೆ, ಕಾರ್ಯಾಚರಣೆ ನಡೆಯುತ್ತಿದ್ದರೂ, 'ಶಾಖೆಗಳು/ಗುಂಪು'ಗಳು ಎಂಬ ಫ್ರಾಂಚೈಸಿಗಳ ಮೂಲಕವೇ ಹೆಚ್ಚು ಕಾರ್ಯಾಚರಣೆ ನಡೆಯುತ್ತಿತ್ತು. ಬಂದ ಲಾಭವನ್ನು 70:30 ಅನುಪಾತದಲ್ಲಿ ಹಂಚಿಕೊಳ್ಳಲಾಗುತ್ತಿತ್ತು ಎಂಬ ವಿವರವೂ ತನಿಖೆಯಿಂದ ತಿಳಿದುಬಂದಿದೆ ಎಂದು ಇ.ಡಿ ಹೇಳಿದೆ.

ಈ ಕಾರ್ಯದಲ್ಲಿ ಪೊಲೀಸರು, ರಾಜಕಾರಣಿಗಳು ಹಾಗೂ ಅಧಿಕಾರಿಗಳನ್ನು ಒಳಗೊಂಡ 'ಸಿಂಡಿಕೇಟ್' ಕೂಡ ಸಕ್ರಿಯವಾಗಿತ್ತು. ಇವರಿಗೂ ಲಾಭದಲ್ಲಿ ಪಾಲು ನೀಡಲಾಗುತ್ತಿತ್ತು.

ಈ ಎಲ್ಲ ವ್ಯವಹಾರಗಳನ್ನು ಸೌರಭ್ ಮತ್ತು ರವಿ ಅವರ ಆಪ್ತರಾದ ಅನಿಲ್ ದಮ್ಮಾನಿ ಹಾಗೂ ಸುನಿಲ್ ದಮ್ಮಾನಿ ಎಂಬುವವರು ನೋಡಿಕೊಳ್ಳುತ್ತಿದ್ದರು. ದಮ್ಮಾನಿ ಸಹೋದರರನ್ನು ಇ.ಡಿ ಈಗಾಗಲೇ ಬಂಧಿಸಿದೆ.

'ಹವಾಲಾ' ಮೂಲಕ ಬಂದ ಹಣವನ್ನು ಪೊಲೀಸರಿಗೆ, ರಾಜಕಾರಣಿಗಳಿಗೆ ಹಾಗೂ ಅಧಿಕಾರಿಗಳಿಗೆ ತಲುಪಿಸುವ ಜವಾಬ್ದಾರಿಯನ್ನು ಅನಿಲ್ ನಿಭಾಯಿಸುತ್ತಿದ್ದರು. ಈ 'ಸಿಂಡಿಕೇಟ್', ಆ್ಯಪ್‌ನ ವ್ಯವಹಾರ ಜಾರಿ ನಿರ್ದೇಶನಾಲಯದ ಕಣ್ಣಿಗೆ ಬೀಳದಂತೆ ನೋಡಿಕೊಳ್ಳುತ್ತಿತ್ತು ಎಂದೂ ದೂರಿನಲ್ಲಿ ವಿವರಿಸಲಾಗಿದೆ.

ಭಾರತದಲ್ಲಿನ ಕೆನಡಾ ರಾಜತಾಂತ್ರಿಕರ ಸ್ಥಳಾಂತರ

ಟೊರಂಟೊ(ಪಿಟಿಐ): ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಳ್ಳುವಂತೆ ಭಾರತ ನೀಡಿದ್ದ ಗಡುವು ಸಮೀಪಿಸುತ್ತಿರುವಂತೆಯೇ, ತನ್ನ ಬಹುತೇಕ ರಾಜತಾಂತ್ರಿಕರನ್ನು ಸಿಂಗಪುರ ಇಲ್ಲವೇ ಕ್ವಾಲಾಲಂಪುರಕ್ಕೆ ಕೆನಡಾ ಸ್ಥಳಾಂತರಿಸಿದೆ ಎಂದು ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

'ದೆಹಲಿ ಹೊರತುಪಡಿಸಿದಂತೆ ಭಾರತದ ಇತರ ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆನಡಾ ರಾಜತಾಂತ್ರಿಕರ ಪೈಕಿ ಬಹುತೇಕರನ್ನು ಸಿಂಗಪುರ ಇಲ್ಲವೇ ಕ್ವಾಲಾಲಂಪುರಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಕೆನಡಾದ ಖಾಸಗಿ ಸುದ್ದಿವಾಹಿನಿ ಸಿಟಿವಿ ನ್ಯೂಸ್ ವರದಿ ಮಾಡಿದೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ ಎಂದು ಪ್ರಧಾನಿ ಜಸ್ಟಿನ್ ಟ್ರೂಡೊ ಆರೋಪಿಸಿದ್ದರು.

ಈ ಆರೋಪಗಳನ್ನು ಭಾರತ ತಳ್ಳಿಹಾಕಿತ್ತು. ನಂತರ, ಎರಡು ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ಶುರುವಾಗಿದೆ.

ದೇಶದಲ್ಲಿರುವ ರಾಜತಾಂತ್ರಿಕರ ಸಂಖ್ಯೆಯನ್ನು 41ಕ್ಕೆ ಇಳಿಸಬೇಕು. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 10 ರ ಒಳಗಾಗಿ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಳ್ಳುವಂತೆ ಭಾರತ ಗಡುವು ನೀಡಿತ್ತು.

'ಸ್ಪೀಕರ್‌ಗಳ ಶೃಂಗದಲ್ಲಿ ವಿಷಯ ಪ್ರಸ್ತಾಪ'

ನವದೆಹಲಿ (ಪಿಟಿಐ): ಮುಂದಿನ ವಾರ ಇಲ್ಲಿ ನಡೆಯಲಿರುವ ಜಿ20 ರಾಷ್ಟ್ರಗಳ ಸಂಸತ್ ಸ್ಪೀಕರ್‌ಗಳ ಶೃಂಗಸಭೆಯಲ್ಲಿ ಕೆನಡಾ ಜತೆಗಿನ ಎಲ್ಲ ವಿಷಯಗಳ ಬಗ್ಗೆ ಭಾರತ ಪ್ರಸ್ತಾಪಿಸಲಿದೆ ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದ್ವಾರಕಾದಲ್ಲಿನ 'ಯಶೋಭೂಮಿ'ಯಲ್ಲಿ ಇದೇ 12ರಿಂದ 14ರವರೆಗೆ ನಡೆಯಲಿರುವ ಈ ಶೃಂಗಸಭೆಯಲ್ಲಿ 25 ರಾಷ್ಟ್ರಗಳ ಸ್ಪೀಕರ್‌ಗಳು ಮತ್ತು ಜಿ20 ದೇಶಗಳು ಮತ್ತು ಆಹ್ವಾನಿತ ದೇಶಗಳಿಂದ 10 ಮಂದಿ ಉಪ ಸ್ಪೀಕರ್‌ಗಳು ಸೇರಿ 350ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅ.13ರಂದು ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಭಾರತದ ಮೇಲೆ ಆರೋಪ ಮಾಡಲು ಕೆನಡಾ ಸಂಸತ್ತನ್ನು ಬಳಸಿಕೊಂಡ ವಿಷಯವನ್ನು ಕೆನಡಾ ಸ್ಪೀಕರ್ ಜತೆಗೆ ಪ್ರಸ್ತಾಪಿಸಲಾಗುತ್ತದೆಯೇ ಎಂದು ಕೇಳಿದಾಗ, ಬಿರ್ಲಾ ಅವರು 'ಅನೌಪಚಾರಿಕವಾಗಿ ಚರ್ಚಿಸಲಾಗುವುದು' ಎಂದರು.

'ಬಿಜೆಪಿಗೆ ಲೋಕಸಭೆ ಚುನಾವಣೆಯಲ್ಲಿ ಸೋಲುವ ಭೀತಿ'

'ಇಂಡಿಯಾ' ಕೂಟ ಹತ್ತಿಕ್ಕಲು ಯತ್ನ: ಎಎಪಿ

ನವದೆಹಲಿ (ಪಿಟಿಐ): 2024ರ ಲೋಕಸಭೆ ಚುನಾವಣೆ ವೇಳೆ ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಎದುರು ಬಿಜೆಪಿಗೆ ಸೋಲುವ ಭೀತಿ ಎದುರಾಗಿದೆ. ಇದೇ ಕಾರಣಕ್ಕೆ ಮೈತ್ರಿಕೂಟವನ್ನು ಹತ್ತಿಕ್ಕಲು ತನ್ನ ಎಲ್ಲ ತನಿಖಾ ಸಂಸ್ಥೆಗಳನ್ನು ಪ್ರತಿಪಕ್ಷಗಳ ನಾಯಕರ ವಿರುದ್ಧ ಛೂ ಬಿಟ್ಟಿದೆ ಎಂದು ಎಎಪಿ ಆರೋಪಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಹಿರಿಯ ನಾಯಕಿ ಆತಿಶಿ, 'ವಿವಿಧ ವಿರೋಧ ಪಕ್ಷಗಳು ಮೈತ್ರಿ ಮಾತುಕತೆಗೆ ಮುಂದಾದ ಬೆನ್ನಲ್ಲೇ, ವಿರೋಧ ಪಕ್ಷಗಳ ನಾಯಕರು ಜಾರಿ ನಿರ್ದೇಶನಾಲಯ(ಇ.ಡಿ) ಮತ್ತು ಕೇಂದ್ರೀಯ ತನಿಖಾ ದಳದ (ಸಿಬಿಐ) ದಾಳಿಗೆ ಗುರಿಯಾಗಿದ್ದಾರೆ' ಎಂದು ದೂರಿದರು.

ಇ.ಡಿ, ಸಿಬಿಐ ಬಳಸಿಕೊಂಡು ಪ್ರತಿಪಕ್ಷಗಳ ನಾಯಕರನ್ನು ಬೆದರಿಸಿ, ಬಿಜೆಪಿಗೆ ಸೇರುವಂತೆ ಆಮಿಷ ಒಡ್ಡುತ್ತದೆ. ಬಿಜೆಪಿಯು ಒಂದು ರೀತಿ ಬಟ್ಟೆ ತೊಳೆಯುವ ಸಲಕರಣೆ ಇದ್ದಂತೆ

ಅತಿಶಿ, ಎಎಪಿ ನಾಯಕಿ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಟಿಎಂಸಿ ಅಧ್ಯಕ್ಷೆ ಹಾಗೂ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೇರಿದಂತೆ ಸಿಬಿಐ ಮತ್ತು ಇ.ಡಿ ದಾಳಿಗೆ ಗುರಿಯಾದ ಪ್ರತಿಪಕ್ಷಗಳ ನಾಯಕರ ಪಟ್ಟಿಯನ್ನು ಹಂಚಿಕೊಂಡರು.

ಕಳೆದ ವಾರದಿಂದ ತನಿಖಾ ಸಂಸ್ಥೆಗಳ ಚಟುವಟಿಕೆಯು ಮತ್ತಷ್ಟು ತೀವ್ರಗೊಂಡಿದೆ. ಮೊದಲಿಗೆ ಪ್ರಧಾನಿ ಮೋದಿ ಸರ್ಕಾರದ ಅವಧಿಯಲ್ಲಿ ಹೆಚ್ಚಿದ ನಿರುದ್ಯೋಗದ ವಿರುದ್ಧ ಧ್ವನಿಯೆತ್ತಿದ ಕಾರಣಕ್ಕೆ ಪತ್ರಕರ್ತರ ಮೇಲೆ ದಾಳಿ ನಡೆಸಲಾಯಿತು. ಈ ವೇಳೆ ಅವರ ಮೊಬೈಲ್ ಮತ್ತು ಲ್ಯಾಪ್‌ಟಾಪ್‌ಗಳನ್ನು ತನಿಖಾ ಸಂಸ್ಥೆಗಳು ವಶಕ್ಕೆ ಪಡೆದಿವೆ. ಆ ಬಳಿಕ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಕೃಷಿ ಭವನದಲ್ಲಿ ದೆಹಲಿ ಪೊಲೀಸರು ಎಳೆದಾಡಿದರು. ನಂತರ ಸಂಜಯ್ ಸಿಂಗ್ ಅವರನ್ನು ಬಂಧಿಸಲಾಗಿದೆ ಎಂದರು.

ಇಂಡಿಯಾ ಮೈತ್ರಿಕೂಟವು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಿದ್ದೆಗೆಡಿಸಿದೆ. 2024ರ ಚುನಾವಣೆಯಲ್ಲಿ ಇಂಡಿಯಾ ಕೂಟದ ಎದುರು ಸೋಲುತ್ತೇವೆ ಎಂಬುದು ಅವರಿಗೆ ಗೊತ್ತಾಗಿದೆ. ಇದೇ ಕಾರಣಕ್ಕೆ ಇಂಡಿಯಾ ಮೈತ್ರಿಕೂಟದ ಧ್ವನಿಯನ್ನು ಹತ್ತಿಕ್ಕಲು ಪ್ರತಿಪಕ್ಷಗಳ ನಾಯಕರ ವಿರುದ್ಧ ತನ್ನೆಲ್ಲಾ ತನಿಖಾ ಸಂಸ್ಥೆಗಳನ್ನು ಛೂಬಿಟ್ಟಿದೆ ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಜನ ಎಲ್ಲ ಬಗೆಯಲ್ಲೂ ಸುಂದರವಾಗಿ ಇರಬೇಕು– ತಮ್ಮ ಮುಖದಲ್ಲಿ, ವೇಷಭೂಷಣದಲ್ಲಿ, ಚಿಂತನೆಗಳಲ್ಲಿ ಮತ್ತು ಅಂತರ್ಯದಲ್ಲಿ.

–ಆ್ಯಂಟನ್ ಚೆಖೋವ್

ಮಹಾರಾಷ್ಟ್ರ ಆಸ್ಪತ್ರೆಯಲ್ಲಿನ ಸಾವು ವ್ಯವಸ್ಥೆಯ ಲೋಪದಲ್ಲಿ ಎಲ್ಲರೂ ಭಾಗಿ

ಮಹಾರಾಷ್ಟ್ರದ ಆಸ್ಪತ್ರೆಗಳಲ್ಲಿ ದುರಂತಗಳು ಒಂದಾದ ನಂತರ ಒಂದರಂತೆ ಸಂಭವಿಸುತ್ತಿವೆ. ಚಿಕಿತ್ಸೆಗೆಂದು ದಾಖಲಾಗಿದ್ದವರು ಸಾಯುತ್ತಿದ್ದಾರೆ. ನಾಂದೇಡ್‌ನ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕೆಲವು ದಿನಗಳ ಹಿಂದೆ 31 ರೋಗಿಗಳು ಮೃತಪಟ್ಟಿದ್ದಾರೆ. ಇವರಲ್ಲಿ ಸರಿಸುಮಾರು ಅರ್ಧದಷ್ಟು ಮಂದಿ ನವಜಾತ ಶಿಶುಗಳು ಹಾಗೂ ಮಕ್ಕಳು. ಕೇವಲ 48 ಗಂಟೆಗಳ ಅವಧಿಯಲ್ಲಿ ಇಷ್ಟು ಸಾವುಗಳು ವರದಿಯಾಗಿವೆ. ನಾಗಪುರದಲ್ಲಿನ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದೇ ದಿನದಲ್ಲಿ 23 ಮಂದಿ ಸಾವನ್ನಪ್ಪಿದ್ದಾರೆ. ಸಂಭಾಜಿನಗರದಲ್ಲಿನ (ಔರಂಗಾಬಾದ್) ಆಸ್ಪತ್ರೆಯೊಂದರಲ್ಲಿ ಹಲವರು ಮೃತಪಟ್ಟ ವರದಿಗಳು ಇವೆ. ಠಾಣೆಯ ಒಂದು ಆಸ್ಪತ್ರೆಯಲ್ಲಿ ಆಗಸ್ಟ್‌ನಲ್ಲಿ ಒಂದೇ ದಿನದಲ್ಲಿ ಕನಿಷ್ಠ 18 ರೋಗಿಗಳು ಮೃತಪಟ್ಟಿದ್ದಾರೆ. ಇವರೆಲ್ಲ ಯಾವುದೋ ಸಾಂಕ್ರಾಮಿಕಕ್ಕೆ ತುತ್ತಾಗಿದ್ದ ರೋಗಿಗಳಲ್ಲ. ಬದಲಿಗೆ, ಅವರೆಲ್ಲ ಒಬ್ಬೊಬ್ಬರು ಒಂದೊಂದು ಕಾಯಿಲೆಗೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ದಾಖಲಾಗಿದ್ದವರು. ಮೃತಪಟ್ಟವರಲ್ಲಿ ಹೆಚ್ಚಿನವರು ಬಡವರು. ಅವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಗುವ ದುಬಾರಿ ವೆಚ್ಚದ ಚಿಕಿತ್ಸೆಗಳನ್ನು ಭರಿಸಲು ಬಹುಶಃ ಆಗುತ್ತಿರಲಿಲ್ಲ.

ಆಸ್ಪತ್ರೆಗಳಲ್ಲಿನ ಕೆಟ್ಟ ಪರಿಸ್ಥಿತಿ ಹಾಗೂ ಅಲ್ಲಿ ರೋಗಿಗಳಿಗೆ ಸಿಗುವ ಕಳಪೆ ಗುಣಮಟ್ಟದ ಆರೈಕೆಗೆ ಅಧಿಕಾರಿಗಳು ಹೊಣೆ ಹೊರಲೇಬೇಕು

ಕೆಲವೇ ದಿನಗಳ ಅಂತರದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ರೋಗಿಗಳು ಸಾವನ್ನಪ್ಪಿರುವುದು ಆಸ್ಪತ್ರೆಗಳ ಕೆಟ್ಟ ಸ್ಥಿತಿಯನ್ನು ಹಾಗೂ ಅಲ್ಲಿ ರೋಗಿಗಳಿಗೆ ಸಿಗುತ್ತಿರಬಹುದಾದ ಚಿಕಿತ್ಸೆಯ ಗುಣಮಟ್ಟ ಹೇಗಿರಬಹುದು ಎಂಬುದನ್ನು ಹೇಳುತ್ತಿದೆ. ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆಯು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ, ಅದಕ್ಕೆ ಅನುಗುಣವಾದ ಪ್ರಮಾಣದಲ್ಲಿ ಸಿಬ್ಬಂದಿ ಮತ್ತು ಔಷಧ ಇಲ್ಲ ಎಂದು ಆಡಳಿತವು ಆರಂಭದಲ್ಲಿ ಹೇಳಿತ್ತು. ಆದರೆ ಈ ಸಮಸ್ಯೆಯು ಕೆಲವೇ ದಿನಗಳಲ್ಲಿ ಇಷ್ಟೊಂದು ಜನ ಸಾಯುವುದಕ್ಕೆ ಕಾರಣವಾಗಿದ್ದು ಹೇಗೆ ಎಂಬುದು ಸ್ಪಷ್ಟವಾಗಿಲ್ಲ. ನಂತರದಲ್ಲಿ ಇನ್ನೊಂದು ವಿಚಿತ್ರವಾದ ವಾದವನ್ನು ಮುಂದಿರಿಸಿದ ಅಧಿಕಾರಿಗಳು, ರೋಗಿಗಳನ್ನು ಬಹಳ ಚೆನ್ನಾಗಿ ಆರೈಕೆ ಮಾಡಲಾಗಿತ್ತಾದರೂ ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಹೇಳಿದರು. ಆದರೆ ಆಸ್ಪತ್ರೆಗಳಲ್ಲಿನ ಕೆಟ್ಟ ಪರಿಸ್ಥಿತಿ ಹಾಗೂ ಅಲ್ಲಿ ರೋಗಿಗಳಿಗೆ ಸಿಗುವ ಕಳಪೆ ಗುಣಮಟ್ಟದ ಆರೈಕೆಗೆ ಅಧಿಕಾರಿಗಳು ಹೊಣೆ ಹೊರಲೇಬೇಕು. ಪರಿಸ್ಥಿತಿ ಇದ್ದಕ್ಕಿದ್ದಂತೆ ಹೀಗಾಗಿರಲಿಕ್ಕೆ ಸಾಧ್ಯವಿಲ್ಲ. ಬಹಳ ಕಾಲದಿಂದಲೂ ಅಲ್ಲಿ ಪರಿಸ್ಥಿತಿ ಕೆಟ್ಟದ್ದಾಗಿಯೇ ಇದ್ದಿರಬೇಕು. ಆಸ್ಪತ್ರೆಗಳಲ್ಲಿ ಸಿಬ್ಬಂದಿ ಅಗತ್ಯ ಸಂಖ್ಯೆಯಲ್ಲಿ ಇರಲಿಲ್ಲ, ಔಷಧ ಖರೀದಿಯಲ್ಲಿನ ವಿಳಂಬದ ಕಾರಣದಿಂದಾಗಿ ಅಗತ್ಯ ಔಷಧಗಳು ಲಭ್ಯವಿರಲಿಲ್ಲ ಎಂಬ ವರದಿಗಳು ಇವೆ. ನಾಂದೇಡಿನ ಆಸ್ಪತ್ರೆಯು 500 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದರೂ, ಅದರ ಎರಡು ಪಟ್ಟು ಹೆಚ್ಚು ಸಂಖ್ಯೆಯಲ್ಲಿ ರೋಗಿಗಳನ್ನು ಸೇರಿಸಿಕೊಂಡಿತ್ತು. ಅಲ್ಲದೆ, ಅಲ್ಲಿ ಎಂಆರ್‌ಐ ಮತ್ತು ಸಿ.ಟಿ. ಸ್ಕ್ಯಾನ್ ಯಂತ್ರ ಇರಲಿಲ್ಲ. ಪರಿಸ್ಥಿತಿ ಈ ರೀತಿ ಆಗಲು ಕಾರಣರಾದವರು ತಮ್ಮಿಂದ ಆಗಿರುವ ಲೋಪಕ್ಕೆ ಉತ್ತರದಾಯಿ ಆಗಬೇಕು. ಯಶಸ್ಸು ಸಿಕ್ಕಾಗ ಅದಕ್ಕೆ ತಾವೇ ಕಾರಣ ಎಂದು ಹೇಳುವ, ಸಮಸ್ಯೆಗಳು ಎದುರಾದಾಗ ತಕ್ಷಣ ಕೈತೊಳೆದುಕೊಳ್ಳುವ ರಾಜಕಾರಣಿಗಳೂ ಹೊಣೆ ಹೊರಬೇಕು.

ಸಾವಿನ ಬಗ್ಗೆ ತನಿಖೆ ನಡೆಸಲು, ಕಾಲಮಿತಿಯಲ್ಲಿ ವರದಿ ಸಲ್ಲಿಸಲು ರಾಜ್ಯ ಸರ್ಕಾರವು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿದೆ. ಠಾಣೆಯಲ್ಲಿ ಆಗಸ್ಟ್‌ನಲ್ಲಿ ಸಂಭವಿಸಿದ ಸಾವುಗಳ ಬಗ್ಗೆ ತನಿಖೆ ನಡೆಸಿರುವ ಸಮಿತಿಯೊಂದು ಇನ್ನೂ ವರದಿ ಸಲ್ಲಿಸಿಲ್ಲ. ಸಾವಿನ ವಿಚಾರವು ರಾಜಕೀಯಕ್ಕೆ ಬಳಕೆಯಾಗುವುದು ಸರ್ಕಾರಕ್ಕೆ ಬೇಕಿಲ್ಲ. ಆದರೆ ಆರೋಗ್ಯ ಸೇವಾ ವ್ಯವಸ್ಥೆಯನ್ನು ಸುಧಾರಿಸಬೇಕಿರುವುದು ಸರ್ಕಾರದ ಕೆಲಸವೇ ಆಗಿದೆ. ಅಂದರೆ, ಮೂಲಸೌಕರ್ಯ ಹೆಚ್ಚಳ, ಸಿಬ್ಬಂದಿ ಲಭ್ಯತೆ ಹೆಚ್ಚಿಸುವುದು ಸರ್ಕಾರದ ಕೆಲಸ. 2022–23ರಿಂದ 2023–24ರ ನಡುವೆ ಸಾರ್ವಜನಿಕ ಆರೋಗ್ಯಕ್ಕೆ ನೀಡುವ ಬಜೆಟ್ ಅನುದಾನವನ್ನು ಮಹಾರಾಷ್ಟ್ರ ಸರ್ಕಾರವು ಶೇಕಡ 7ರಷ್ಟು ಕಡಿಮೆ ಮಾಡಿದೆ. ಇದು ಸರ್ಕಾರದ ಆದ್ಯತೆ ಏನು ಎಂಬುದನ್ನು ಹೇಳುತ್ತಿದೆ. ಆಸ್ಪತ್ರೆಯೊಂದರ ಡೀನ್ ವಿರುದ್ಧ ಪ್ರಕರಣ ದಾಖಲಿಸುವುದರಿಂದ ಅಥವಾ ಶಿವಸೇನಾ ಸಂಸದ ಹೇಮಂತ ಪಾಟೀಲ್ ಅವರು ಡೀನ್ ಶೌಚಾಲಯ ಸ್ವಚ್ಛಗೊಳಿಸುವಂತೆ ಮಾಡಿದ್ದರಿಂದ ಸುಧಾರಣೆಗಳು ಆಗುವುದಿಲ್ಲ. ಆರೋಗ್ಯಸೇವಾ ವ್ಯವಸ್ಥೆಯಲ್ಲಿನ ಲೋಪದಲ್ಲಿ ಎಲ್ಲರೂ ಭಾಗಿಗಳು.

ದಿನದ ಟ್ವೀಟ್

ಅಧಿಕಾರದ ದರ್ಪ

ಹೂಗುಚ್ಛವನ್ನು ಸಮಯಕ್ಕೆ ಸರಿಯಾಗಿ ತಂದುಕೊಡಲಿಲ್ಲ ಎಂಬ ಕಾರಣಕ್ಕೆ ತೆಲಂಗಾಣ ಗೃಹ ಸಚಿವ ಮಹಮೂದ್ ಅಲಿ ತಮ್ಮ ಗನ್‌ಮ್ಯಾನ್‌ಗೆ ಸಾರ್ವಜನಿಕರ ಎದುರೇ ಕಪಾಳಮೋಕ್ಷ ಮಾಡುತ್ತಾರೆ... ಬಡ ಗನ್‌ಮ್ಯಾನ್‌ನ ಮುಖ ಕ್ರೋಧದಿಂದ ಕೂಡಿತ್ತು! ನಾಚಿಕೆಗೇಡು.

ನಬಿಲಾ ಜಮಾಲ್, ಪತ್ರಕರ್ತೆ

ಕಿಡಿನುಡಿ

ಬೆಂಗಳೂರಿನಲ್ಲಿ ಸುಮಾರು 50,000 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ 190 ಕಿ.ಮೀ. ಉದ್ದದ ಸುರಂಗ ರಸ್ತೆ ಅವೈಜ್ಞಾನಿಕ ಹಾಗೂ ಅತಾರ್ಕಿಕ ಯೋಜನೆಯಾಗಿದೆ. ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಪರ್ಯಾಯ ಮಾರ್ಗೋಪಾಯಗಳನ್ನು ಹುಡುಕಬೇಕು. ತೆರಿಗೆದಾರರ ಹಣವನ್ನು ಈ ರೀತಿ ದುಂದುವೆಚ್ಚ ಮಾಡುವುದನ್ನು ಕೈಬಿಡಬೇಕು.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 7-10-1998

● **ಆಲಮಟ್ಟಿ ಕಾಮಗಾರಿಯ ವರದಿಗೆ ಕಮಿಷನರ್: ಕೋರ್ಟ್ ಕ್ರಮ**

ನವದೆಹಲಿ, ಅ. 6– ಆಲಮಟ್ಟಿ ಅಣೆಕಟ್ಟು ನಿರ್ಮಾಣದ, ವಿಶೇಷವಾಗಿ ಕ್ರೆಸ್ಟ್‌ಗೇಟ್ ಹಾಕುವ ಎತ್ತರದ ಕಾಮಗಾರಿಯನ್ನು ಖುದ್ದು ಪರಿಶೀಲಿಸಿ ವರದಿ ನೀಡಲು ಸುಪ್ರೀಂ ಕೋರ್ಟ್ ಇಂದು ಕಮಿಷನರ್ ಒಬ್ಬರನ್ನು ನೇಮಕ ಮಾಡಿತು.

ಆಲಮಟ್ಟಿ ಅಣೆಕಟ್ಟು ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸಿ ಕ್ರೆಸ್ಟ್‌ಗೇಟ್‌ಗಳನ್ನು ಹಾಕುವುದಾಗಿ ಕರ್ನಾಟಕದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಭಾರಿ ನೀರಾವರಿ ಖಾತೆ ಸಚಿವ ಕೆ.ಎನ್. ನಾಗೇಗೌಡ ಕೆಲವು ತಿಂಗಳ ಹಿಂದೆ ನೀಡಿದ್ದಾರೆನ್ನಲಾದ ಹೇಳಿಕೆಯನ್ನು ಆಂಗ್ಲ ಪತ್ರಿಕೆಯೊಂದು ಪ್ರಕಟಿಸಿದ ಹಿನ್ನೆಲೆಯಲ್ಲಿ ಆಂಧ್ರ ಸರ್ಕಾರ ನ್ಯಾಯಾಲಯ ನಿಂದನೆ ಪ್ರಕರಣ ದಾಖಲಿಸಿದೆ.

● **ಅಸೆಂಬ್ಲಿ ವಿಸರ್ಜನೆ ಬೆದರಿಕೆಗೆ ಬಗ್ಗದ ಭಿನ್ನರು: ದಳ ಬಿಕ್ಕಟ್ಟು ಉಲ್ಬಣ**

ಬೆಂಗಳೂರು, ಅ. 6– ಭಿನ್ನಮತೀಯ ಚಟುವಟಿಕೆ ಮುಂದುವರಿಸಿದ್ದೇ ಆದರೆ ವಿಧಾನಸಭೆ ವಿಸರ್ಜಿಸುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹಾಕಿರುವ ಬೆದರಿಕೆಗೆ ಸೊಪ್ಪು ಹಾಕದೇ, ಶಾಸಕಾಂಗ ಪಕ್ಷದ ಸಭೆ ಕರೆಯಬೇಕು ಎಂದು ಒತ್ತಾಯಿಸಲು ದಳ ಭಿನ್ನಮತೀಯ ಶಾಸಕರು ನಿರ್ಧರಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 7-10-1973

● **ಕೋಮು ಭಾವನೆ ಕೆರಳಿಸುವ ಅಭ್ಯರ್ಥಿಗೆ ಆರು ವರ್ಷಗಳ ಅನರ್ಹತೆ**

ನವದೆಹಲಿ, ಅ. 6– ಚುನಾವಣೆ ಕಾಲದಲ್ಲಿ ಹುಟ್ಟಿದ ಊರು, ವಾಸಸ್ಥಳ ಮೊದಲಾದ ನೆಪಗಳನ್ನು ಮುಂದು ಮಾಡಿ ಕೋಮು ಭಾವನೆ ಕೆರಳಿಸುವುದನ್ನು ಭ್ರಷ್ಟಾಚಾರ ಎಂದು ಪರಿಗಣಿಸಲಾಗುವುದು. ಇಂಥ ಅಭ್ಯರ್ಥಿ ಆರು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಾಗುತ್ತಾರೆ.

ಜನತಾ ಪ್ರತಿನಿಧಿ ಶಾಸನಕ್ಕೆ ಸೂಚಿಸಲಾಗಿರುವ ಈ ತಿದ್ದುಪಡಿಯನ್ನು ಸಂಸತ್ತಿನ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು.

ಈವರೆಗೆ ಕೋಮು ಭಾವನೆ ಪ್ರಚೋದಿಸುವಂಥ ಬರಹಗಳನ್ನು ಬರೆದವರು ಅಥವಾ ಕೋಮು ಪ್ರಚಾರ ನಡೆಸುವವರು ಮಾತ್ರ ಜನತಾ ಪ್ರತಿನಿಧಿ ಶಾಸನದನ್ವಯ ಅನರ್ಹರಾಗುತ್ತಿದ್ದರು.

● **ಲಂಚಕೋರ ಸಚಿವರ ಮೇಲೆ ಸಿನಿಮಾ ಸಾಧ್ಯವೇ?**

ಮುಂಬಯಿ, ಅ. 6– ಚಿತ್ರರಂಗದ ಪ್ರಖ್ಯಾತ ನಿರ್ಮಾಪಕರು, ನಟರು ಮತ್ತು ಪತ್ರಕರ್ತರು ಸೆನ್ಸಾರ್ ಬೋರ್ಡನ್ನು ತರಾಟೆಗೆ ತೆಗೆದುಕೊಂಡರು.

‘ಭ್ರಷ್ಟಾಚಾರಿ ಸಚಿವರೊಬ್ಬರ ಮೇಲೆ ನಾನು ಚಿತ್ರ ತೆಗೆಯಬಹುದೇ’ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಚಿತ್ರ ನಿರ್ಮಾಪಕ ರಾಜ್ ಖೋಸ್ಲಾ ಈ ರೀತಿ ಪ್ರಶ್ನಿಸಿದಾಗ ಜನ ಉತ್ಸಾಹದಿಂದ ಚಪ್ಪಾಳೆ ತಟ್ಟಿದರು. ಚಪ್ಪಾಳೆ ಧ್ವನಿ ಅಡಗುತ್ತಿದ್ದಂತೆ ಖೋಸ್ಲಾ ಹೇಳಿದರು, ‘ಅದು ಸಾಧ್ಯವಿಲ್ಲ. ಕಾರಣವೇನೆಂದರೆ, ಭ್ರಷ್ಟಾಚಾರಿ ಸಚಿವರು ಇರುವರೆಂದು ಸೆನ್ಸಾರಿನವರು ಒಪ್ಪಿಕೊಳ್ಳುತ್ತಾರೆ. ಆದರೆ, ಅವರನ್ನು ತೆರೆಯ ಮೇಲೆ ತೋರಿಸಲು ಅವಕಾಶ ಕೊಡುವುದಿಲ್ಲ’ ಎಂದರು.

‘ಹಿಂಸಾಚಾರವನ್ನು, ಲೈಂಗಿಕತೆಯನ್ನು ಚಿತ್ರಗಳಲ್ಲಿ ತೋರಿಸಬೇಡಿ ಎಂದು ಸೆನ್ಸಾರಿನವರು ಹೇಳುತ್ತಾರೆ. ಹರಿಜನರ ಸಜೀವ ದಹನ ಪ್ರಸಂಗಗಳು ನಡೆಯುತ್ತಿವೆ. ಆದರೆ, ಇಂತಹ ಪ್ರಸಂಗಗಳ ಕುರಿತು ಚಿತ್ರ ತೆಗೆಯಲು ಅವಕಾಶ ನೀಡುವುದಿಲ್ಲ’ ಎಂದರು.

ಮಾನವ– ವನ್ಯಜೀವಿ ಸಂಘರ್ಷ ತಡೆಗೆ ಸಂತಾನಶಕ್ತಿಹರಣ ಉಪಕ್ರಮ ಮದ್ದಾಗದು

ಚಿರತೆಯ ಉಪಟಳ: ಪ್ರಶ್ನೆ, ಪರಿಹಾರ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಆಫ್ರಿಕಾದ ಚೀತಾಗಳನ್ನು ನಮ್ಮ ನೆಲದಲ್ಲಿ ಪುನರ್ ನೆಲೆಗೊಳಿಸುವ ‘ಚೀತಾ ಯೋಜನೆ’ಗೆ ಒಂದು ವರ್ಷ ತುಂಬಿದೆ. ಬರಮಾಡಿಕೊಂಡಿದ್ದ 20 ಚೀತಾಗಳಲ್ಲಿ 6 ವಯಸ್ಕ ಹಾಗೂ ಹೊಸದಾಗಿ ಜನಿಸಿದ 3 ಮರಿಗಳು ಮೃತಪಟ್ಟಿದ್ದು, ಇಡೀ ಯೋಜನೆಯೇ ತೀಕ್ಷ್ಣ ಟೀಕೆಗೆ ಒಳಗಾಗಿದೆ. ಇಲ್ಲಿನ ವಾಯುಗುಣಕ್ಕೆ ಅವು ಹೊಂದಿಕೊಳ್ಳಲಾರವು ಎಂಬ ಅನುಮಾನ ಶುರುವಾಗಿದೆ.

ಇತ್ತ ನಮ್ಮದೇ ನೆಲದ ಚಿರತೆಗಳು ಮಾನವ ನೆಲೆಗೆ ನುಗ್ಗಿ ದಾಂದಲೆ ಎಬ್ಬಿಸಿ ಆಸ್ತಿ– ಪ್ರಾಣಹಾನಿಗೆ ಕಾರಣವಾಗುತ್ತಿರುವುದು ಇಲ್ಲವೇ ಜನರ ಆಕ್ರೋಶಕ್ಕೆ ಸಿಲುಕಿ ಸಾಯುತ್ತಿರುವುದು ಹಲವು ಪ್ರಶ್ನೆಗಳನ್ನು ಎತ್ತಿದೆ. ಚಿರತೆಯ ಉಪಟಳದಿಂದ ಬೇಸತ್ತ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಚಿರತೆಗಳ ಸಂತಾನಶಕ್ತಿಹರಣಕ್ಕೆ ಮುಂದಾಗಿವೆ. ವಿಸ್ತೃತ ಯೋಜನೆ ತಯಾರಿಸಿ, ಕೇಂದ್ರಕ್ಕೆ ಸಲ್ಲಿಸಿ ಅನುಮತಿಗಾಗಿ ಕಾಯುತ್ತಿವೆ. ಇದು ಅವೈಜ್ಞಾನಿಕ ಎಂದಿರುವ ವನ್ಯಜೀವಿ ತಜ್ಞರು, ಅವಸರದ ಕ್ರಮ ಸರಿಯಲ್ಲ, ಚಿರತೆ– ಮಾನವ ಸಂಘರ್ಷಕ್ಕೆ ಅವುಗಳ ಆವಾಸ ನಾಶವೇ ಕಾರಣ, ಮೊದಲು ಅದನ್ನು ಸರಿಪಡಿಸಿ ಎಂದಿದ್ದಾರೆ.

ಬಾವಿಗೆ ಬಿದ್ದ ಚಿರತೆಯನ್ನು ಜನ ರಕ್ಷಿಸಿದರು ಎಂದೋ ಚಿರತೆ ಶಾಲೆಗೇ ನುಗ್ಗಿತು ಎಂದೋ ಮನೆಯ ಅಂಗಳದಲ್ಲಿದ್ದ ನಾಯಿಯನ್ನು ಹೊತ್ತೊಯ್ದಿದೆ ಎಂದೋ ಹೊಲದ ದಾರಿಯಲ್ಲಿ ಬರುತ್ತಿದ್ದ ರೈತನ ಮೇಲೆ ಎರಗಿತು ಎಂದೋ ಅರಣ್ಯ ಇಲಾಖೆಯವರು ಅದನ್ನು ಬಲೆ ಬೀಸಿ ಹಿಡಿದರು ಎಂದೋ... ಹೀಗೆ ಚಿರತೆಯ ಕುರಿತು ಒಂದಿಲ್ಲೊಂದು ಪ್ರಕರಣ ದಿನವೂ ವರದಿಯಾಗುತ್ತಿದೆ. ಚಿರತೆಯ ಆಕ್ರಮಣಕ್ಕೆ ನಲುಗಿದ ಕುಟುಂಬಗಳು, ಸಾರ್ವಜನಿಕರು ವಿಪರೀತ ಸಿಟ್ಟಿಗೆದ್ದು ಅದರ ಪ್ರಾಣ ತೆಗೆದ ಪ್ರಕರಣಗಳೂ ನಡೆದಿವೆ. ತಮ್ಮ ಆವಾಸದಲ್ಲಿ ಆಹಾರ ದೊರಕದೆ ಮನುಷ್ಯವಾಸದ ಪ್ರದೇಶಗಳಿಗೆ ಬರುವ ಚಿರತೆಗಳ ಸಂಖ್ಯೆ ಕಳೆದೊಂದು ದಶಕದಲ್ಲಿ ಗಣನೀಯವಾಗಿ ಏರಿದೆ. ಪ್ರಾಣ ಕಳೆದುಕೊಂಡ ಇಲ್ಲವೇ ತೀವ್ರವಾಗಿ ಗಾಯಗೊಂಡವರ ಸಂಖ್ಯೆಯೂ ಏರುಹಾದಿಯಲ್ಲಿದೆ.

ದೇಶದ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ 12,852 ಚಿರತೆಗಳಿವೆ ಎಂದು ಅಂದಾಜಿಸಲಾಗಿದೆ. ಅತಿ ಹೆಚ್ಚು (3,421) ಮಧ್ಯಪ್ರದೇಶ ರಾಜ್ಯದಲ್ಲಿವೆ. ಗುಜರಾತ್‌ನಲ್ಲಿ 2,274, ಕರ್ನಾಟಕ 1,783 ಮತ್ತು ಮಹಾರಾಷ್ಟ್ರದಲ್ಲಿ 1,690 ಚಿರತೆಗಳಿವೆ. ಉಳಿದ ರಾಜ್ಯಗಳಲ್ಲಿನ ಗಣತಿ ವರದಿ ಲಭ್ಯವಿಲ್ಲ. ಮಹಾರಾಷ್ಟ್ರದ 2021ರ ಮಾನವ– ಚಿರತೆ ಸಂಘರ್ಷದ ವರದಿಯಂತೆ, ಅಲ್ಲಿರುವ 376 ಅರಣ್ಯ ವಲಯಗಳ ಪೈಕಿ 333ರಲ್ಲಿ ಚಿರತೆಗಳಿವೆ. ಅದರಲ್ಲೂ ಶೇ 70ರಷ್ಟು ಚಿರತೆಗಳು ಸಂರಕ್ಷಿತ ಅರಣ್ಯ ಪ್ರದೇಶಗಳಿಂದ ಹೊರಗಿವೆ.

ಹಿಂದಿನ ಐದಾರು ವರ್ಷಗಳಲ್ಲಿ ಚಿರತೆಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿದೆ ಎನ್ನುವ ಅರಣ್ಯಾಧಿಕಾರಿಗಳು, ಏರುತ್ತಿರುವ ವ್ಯಾವಸಾಯಿಕ ಮೂಲ ಸೌಲಭ್ಯಗಳೇ ಅದಕ್ಕೆ ಕಾರಣ ಎಂದಿದ್ದಾರೆ. ವರ್ಷದ ಎಲ್ಲ ಕಾಲದಲ್ಲೂ ವ್ಯವಸಾಯಕ್ಕೆ ನೀರು ದೊರಕುತ್ತಿರುವುದರಿಂದ ಸಾತಾರ, ಸೊಲ್ಲಾಪುರ, ಪುಣೆ, ಅಹಮದ್‌ನಗರ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ವಾಣಿಜ್ಯ ಬೆಳೆಗಳಾದ ಕಬ್ಬು, ದಾಳಿಂಬೆ ಮತ್ತು ದ್ರಾಕ್ಷಿ ಬೆಳೆಯಲಾಗುತ್ತಿದೆ. ಸದಾ ಅಡಗಿಕೊಳ್ಳಬೇಕೆನ್ನುವ ಸ್ವಭಾವದ ಚಿರತೆಗಳಿಗೆ ಇವು ಪ್ರಶಸ್ತ ತಾಣಗಳು. ಈ ಹೊಲ, ಗದ್ದೆಗಳಿಗೆ ಆಹಾರ ಅರಸಿ ಬರುವ ಕಾಡುಹಂದಿಗಳೇ ಚಿರತೆಗಳ ಸ್ವಾದಿಷ್ಟ ಆಹಾರ. ಊರಂಚಿನಲ್ಲಿ ಜನ ಬಿಸಾಕುವ ಕಸಕ್ಕೆ ಬಾಯಿ ಹಾಕಲು ಬರುವ ಹಂದಿಗಳನ್ನು ಹುಡುಕಿ ಚಿರತೆಗಳು ಬರುತ್ತವೆ. ಆಗ ಮನುಷ್ಯರ ಕಣ್ಣಿಗೆ ಬಿದ್ದು ಅವಘಡಗಳಾಗುತ್ತವೆ. ಆದ್ದರಿಂದ ಅರಣ್ಯದಂಚು ಮತ್ತು ಊರಿನ ಹೊರವಲಯಗಳಲ್ಲಿ ಕಸ ಗುಡ್ಡೆ ಹಾಕುವುದನ್ನು ನಿಲ್ಲಿಸಬೇಕು. ಇಸ್ರೇಲಿನಲ್ಲಿ ನರಿಗಳ ಹಾವಳಿ ಜಾಸ್ತಿಯಾದಾಗ ಕಾಡಂಚಿನ ಕೆಲವು ಹಳ್ಳಿಗಳ ತಿಪ್ಪೆಯನ್ನು ಸ್ವಚ್ಛ ಮಾಡಲಾಯಿತು. ನಂತರದ ದಿನಗಳಲ್ಲಿ ಒಂದೇ ಒಂದು ನರಿ ಅತ್ತ ಕಡೆ ತಲೆಹಾಕಿರಲಿಲ್ಲ.

ವಾಸ್ತವ ಬೇರೆಯೇ ಇದೆ. ಚಿರತೆಗಳು ಸಾಮಾನ್ಯವಾಗಿ ವಾಸಿಸಲು ಇಷ್ಟಪಡುವ ಬಂಡೆ ಪ್ರದೇಶಗಳಲ್ಲೀಗ ಗ್ರ್ಯಾನೈಟ್ ಗಣಿಗಾರಿಕೆ ನಡೆಯುತ್ತಿದೆ. ಕುರುಚಲು ಕಾಡುಗಳು ಹೊಲ, ಗದ್ದೆಗಳಾಗಿ ಒತ್ತುವರಿಯಾಗಿವೆ, ನಿತ್ಯಹರಿದ್ವರ್ಣ ಕಾಡುಗಳು ವಿದ್ಯುತ್ತು, ನೀರಿನ ಯೋಜನೆಗಳಿಗಾಗಿ ಮುಳುಗಡೆಯಾಗಿವೆ. ರಸ್ತೆ, ಕಾಲುವೆ, ರೈಲ್ವೆ ಲೈನ್‌ಗಳಿಗಾಗಿ ಕಾಡುಗಳು ಛಿದ್ರಗೊಂಡಿವೆ. ನಿಲ್ಲಲು ನೆಲೆಯಿಲ್ಲದೆ ಚಿರತೆಗಳು ಅನಿವಾರ್ಯವಾಗಿ ಕಬ್ಬು ಮತ್ತು ಮೆಕ್ಕೆಜೋಳದ ಹೊಲಗಳಿಗೆ ನುಗ್ಗುತ್ತಿವೆ. ನಲವತ್ತರಿಂದ ಅರವತ್ತೈದು ಕಿಲೊ ತೂಗುವ ಇವು ಭಾರಿ ಪ್ರಮಾಣದ ಆಹಾರವನ್ನೇನೂ ಬಯಸುವುದಿಲ್ಲ. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಎಲ್ಲ ಬಗೆಯ ಆವಾಸಗಳಿಗೆ ಹೊಂದಿಕೊಳ್ಳುವ ಗುಣ ಪಡೆದಿರುವ ಚಿರತೆಗಳು ಮಾನವ ನೆಲೆಗೆ ಬರುತ್ತಿರುವುದು ಸಂಘರ್ಷಕ್ಕೆ ಕಾರಣವಾಗಿದೆ.

2014–18ರ ನಡುವಿನ ಅವಧಿಯಲ್ಲಿ ಚಿರತೆಗಳ ಸಂಖ್ಯೆ ಶೇ 63ರಷ್ಟು ಹೆಚ್ಚಿದೆ. ಮೊದಲೆಲ್ಲ ನೂರು ಚದರ ಕಿ.ಮೀ ವ್ಯಾಪ್ತಿಯಲ್ಲಿ ಎರಡರಿಂದ ಮೂರು ಚಿರತೆಗಳು ಇರುತ್ತಿದ್ದವು. ಈಗ ಸಂಖ್ಯೆ ಆರಕ್ಕೇರಿದೆ. ಕಾಡುಗಳಲ್ಲಿ ಜನಿಸಿದ ಮರಿಗಳ ಮರಣ ಪ್ರಮಾಣ ಶೇ 50ಕ್ಕಿಂತ ಕಡಿಮೆ. ಆದರೆ ಅರೆನಗರ ಮತ್ತು ಹಳ್ಳಿಗಳ ವ್ಯಾಪ್ತಿಯ ಹೊಲ ಗದ್ದೆಗಳಲ್ಲಿ ಜನಿಸುವ ಮರಿಗಳಿಗೆ ಯಾವುದೇ ಅಪಾಯ ಇಲ್ಲವಾದ್ದರಿಂದ ಚಿರತೆಗಳ ಸಂಖ್ಯೆ ಸಹಜವಾಗಿಯೇ ಏರಿಕೆ ಕಂಡಿದೆ. ಒಂದು ಲೆಕ್ಕದಂತೆ, ಮಹಾರಾಷ್ಟ್ರದಲ್ಲಿ 2010ರಿಂದ 18ರವರೆಗೆ 97 ಜನ ಚಿರತೆ ದಾಳಿಗೆ ಬಲಿಯಾಗಿದ್ದರು. ನಂತರದ ಮೂರು ವರ್ಷಗಳಲ್ಲಿ ಚಿರತೆ ದಾಳಿಯಿಂದ ಸತ್ತವರ ಸಂಖ್ಯೆ 58. ಮನುಷ್ಯರಷ್ಟೇ ಅಲ್ಲ, ದೊಡ್ಡ ಸಂಖ್ಯೆಯ ಚಿರತೆಗಳೂ ಪ್ರಾಣ ತೊರೆದಿವೆ.

ಆಹಾರ ಹುಡುಕಿ ಬರುವ ಚಿರತೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ ಎಂದಾಕ್ಷಣ ಅವುಗಳ ಸಂಖ್ಯೆ ಹೆಚ್ಚಿದೆ ಎನ್ನುವುದು ಎಷ್ಟು ಸರಿ ಎಂದು ಪ್ರಶ್ನಿಸುವ ದೆಹಲಿ ಮೂಲದ ವೈಲ್ಡ್‌ಲೈಫ್ ಎಸ್‌ಒಎಸ್‌ನ ಕಾರ್ತಿಕ್ ಸತ್ಯನಾರಾಯಣನ್, ಚಿರತೆಗಳ ಸಂತಾನಶಕ್ತಿಹರಣಕ್ಕಾಗಿ ಬೃಹತ್ ಮೊತ್ತದ ಹಣ ಖರ್ಚು ಮಾಡುವುದು ತರವಲ್ಲ ಎನ್ನುತ್ತಾರೆ. ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ನೋಡಲ್ ಅಧಿಕಾರಿ ಕಮರ್ ಖುರೇಶಿ, ವನ್ಯಜೀವಿಗಳ ಸಂತಾನಶಕ್ತಿಹರಣ ಪ್ರಯೋಗ ತುಂಬಾ ಸಂಕೀರ್ಣವಾದದ್ದು, ಅದಕ್ಕಾಗಿ ದೊಡ್ಡ ಸಂಖ್ಯೆಯ ತಜ್ಞರ ಅವಶ್ಯಕತೆ ಇದೆ, ಅಲ್ಲದೆ ಈ ಕೆಲಸ ದೀರ್ಘಕಾಲದವರೆಗೆ ದೊಡ್ಡ ಪ್ರಮಾಣದಲ್ಲಿ ನಡೆಯಬೇಕು ಮತ್ತು ಪುನರಾವರ್ತಿಸುವಂತೆ ಇರಬೇಕು ಎನ್ನುತ್ತಾ, ಈಗಾಗಲೇ ಕೋತಿ, ನಾಯಿಗಳ ಸಂತಾನಶಕ್ತಿಹರಣದ ವಿಚಾರದಲ್ಲಿ ದೊಡ್ಡ ಯಶಸ್ಸೇನೂ ಸಿಕ್ಕಿಲ್ಲ, ಆದ್ದರಿಂದ ಜಾಗರೂಕರಾಗಿ ಯೋಜನೆ ಜಾರಿ ಮಾಡಬೇಕು ಎಂದು ಎಚ್ಚರಿಸಿದ್ದಾರೆ.

ಯೋಜನೆಯನ್ನು ದೊಡ್ಡದಾಗಿ ಜಾರಿ ಮಾಡುವ ಮುನ್ನ ಸೆರೆಸಿಕ್ಕ ಇಲ್ಲವೇ ಗಾಯಗೊಂಡ ಚಿರತೆಗಳ ಮೇಲೆ ಪ್ರಯೋಗ ಮಾಡಿ ನೋಡಬೇಕು. ಸಂಖ್ಯೆಯನ್ನು ನಿಯಂತ್ರಿಸಲೇಬೇಕು ಎಂದಾದರೆ ಶೇ 70ರಷ್ಟು ಚಿರತೆಗಳ ಸಂತಾನಶಕ್ತಿಯ ಹರಣ ಮಾಡಬೇಕು. ಸ್ವಚ್ಛಂದ ಸಂತಾನವೃದ್ಧಿ ಪ್ರವೃತ್ತಿಯ ಚಿರತೆಗಳ ಲೋಕದಲ್ಲಿ ಇದು ಯಶಸ್ವಿಯಾಗುತ್ತದೆಯೇ ಎಂಬ ಅನುಮಾನಗಳಿವೆ.

ಸಂತಾನಶಕ್ತಿಹರಣದ ನಂತರ, ಸರಹದ್ದಿನ ನಿರ್ವಹಣೆಗಾಗಿ ಚಿರತೆಗಳ ನಡುವೆ ನಡೆಯುವ ಹೋರಾಟದ ಮಾದರಿಯೇ ಬದಲಾಗಬಹುದು ಎಂಬ ಮಾತಿದೆ. ತಮ್ಮ ಮೂಲ ಆವಾಸ ಕಳೆದುಕೊಂಡು ಮನುಷ್ಯವಾಸದ ಜಾಗಕ್ಕೆ ಕಾಲಿಟ್ಟಿರುವ ಚಿರತೆಗಳೊಂದಿಗೆ ಸಹಬಾಳ್ವೆ ನಡೆಸುವುದೊಂದೇ ದಾರಿ ಎನ್ನುವ ಮಾತು ಬಹಳ ದಿನಗಳಿಂದ ಕೇಳಿಬರುತ್ತಿದೆ. ಅದು ಸಾಧ್ಯವೂ ಹೌದು ಎನ್ನುವ ತಜ್ಞರು, ಮಹಾರಾಷ್ಟ್ರ ರಾಜ್ಯದ ಜುನ್ನಾರ್ ತಾಲ್ಲೂಕಿನ ಉದಾಹರಣೆ ನೀಡುತ್ತಾರೆ. ಆದರೆ ಅಲ್ಲಿ ಚಿರತೆಗಳಿಂದಾದ 27 ದಾಳಿಗಳ ಬಗ್ಗೆಯಾಗಲೀ ಸಂಭವಿಸಿದ ಮೂರು ಜನರ ಸಾವಿನ ಕುರಿತಾಗಲೀ ಯಾರೂ ಚಕಾರ ಎತ್ತುವುದಿಲ್ಲ.

ವಿಚಿತ್ರವೆಂದರೆ, ಕಾಡಿನವಾಸಿಗಳಿಗೆ ಚಿರತೆಗಳಿಂದ ಯಾವತ್ತೂ ತೊಂದರೆಯಾಗಿಲ್ಲ. ಸಮಸ್ಯೆ ಇರುವುದು ಕಾಡಿನ ಅಂಚಿನ ಪ್ರದೇಶಗಳಲ್ಲಿ ಮಾತ್ರ. ಅಂದರೆ ಅದಕ್ಕೆ ಪರಿಹಾರ ಹುಡುಕುವುದನ್ನು ಬಿಟ್ಟು ಚಿರತೆಯ ಸಂತಾನಶಕ್ತಿ ಹರಣಕ್ಕೆ ಕೈ ಹಾಕುವುದು ಎಷ್ಟು ಸರಿ?

ಚುರುಮುರಿ

ಇಗೋ ಇಗ್ನೊಬೆಲ್!

● ತುರುವೇಕೆರೆ ಪ್ರಸಾದ್

ಹರಟೆಕಟ್ಟೇಲಿ ಗುದ್ಲಿಂಗ ಮಾತು ತೆಗೆದ: ‘ಅದೇನೋ ನೊಬೆಲ್ ಪ್ರೈಸ್ ಅಂತ ಪೇಪರ್ನಾಗ್ ಬತ್ತೈತೆ. ನಮ್ಮಪ್ಪ ನನ್ ಎಮ್ಮೆ ಕಾಯಕ್ ಕಳಿಸ್ದಿದ್ರೆ ನಾನೂ ಒಂದು ಕೈ ನೋಡ್ಕತಿದ್ದೆ’. ‘ಲೇಯ್, ಎಮ್ಮೆ ಕಾಯೋದಿರ್ಲಿ, ಎಮ್ಮೆಲ್ಯೆ ಕಾದ್ರೂ ಇದು ನಮಗೆ ಸಿಗಲ್ಲ. ನಮಗೋಸ್ಕರ ಬೇರೆಯದೇ ಆದ, ಎಡವಟ್ಟು ಸಾಧನೆ, ಸಂಶೋಧನೆಗಾಗಿ ಇಗ್ನೊಬೆಲ್ ಪ್ರಶಸ್ತಿ ಅಂತ ಐತೆ’ ಎಂದ ಪರ್ಮೇಶಿ.

‘ಅಂಗೂ ಒಂದು ಪ್ರಶಸ್ತಿ ಐತಾ?’ ಮಾಲಿಂಗ ಕಣ್ಣರಳಿಸಿದ.

‘ಹ್ಞೂಂ ಕಣ್ರೋ, ಈ ವರ್ಷನೂ ಮೊನ್ನೆ ಮೊನ್ನೆ ಇಗ್ನೊಬೆಲ್ ಪ್ರಶಸ್ತಿ ಕೊಟ್ಟದಾರೆ. ವೈದ್ಯಕೀಯ ಕ್ಷೇತ್ರದಲ್ಲಿ, ಮನುಷ್ಯರ ಮೂಗಿನ ಎರಡೂ ಹೊಳ್ಳೆಗಳೊಳಗೆ ಸಮಾನ ಕೂದಲುಗಳಿರುತ್ವಾ ಅನ್ನೋ ಸಂಶೋಧನೆಗೆ ಇಗ್ನೊಬೆಲ್ ಸಿಕ್ಕಿದೆ’.

‘ಅಯ್ಯೋ ಹೌದಾ? ಹೊಸರುಚಿ ವಾಸನೆ ನೋಡಿ ನೋಡಿ ಗಂಡಂದಿರ ಮೂಗಿನ ಹೊಳ್ಳೆ ಕೂದಲುಗಳೇ ಉದುರಿ ಹೋಗಿರುತ್ತವೆ ಅಂತ ನಾವೂ ಸಂಶೋಧನೆ ಮಾಡ್ಬಹುದು’.

‘ಆಮೇಲೆ ಎಲೆಕ್ಟ್ರಿಕ್ ಶಾಕ್ ಕೊಟ್ಟ ಸ್ಟ್ರಾ ಫುಡ್ ಟೇಸ್ಟ್‌ನೇ ಬದಲಿಸುತ್ತಂತೆ’.

‘ವಾಹ್! ಇದು ಹೆಂಡ್ತೀರಿಗೆ ಸಿಕ್‌ಬಿಟ್ರೆ, ಗಂಡಂದಿರಿಗೆ ಸಿಕ್ಕಿಸಿ ಎಂತ ಕಲಗಚ್ಚೂ ಟೇಸ್ಟ್‌ಫುಲ್ ಅನ್ನೋ ಹಾಗ್ ಮಾಡ್ಬಿಡ್ತಾರೆ’.

‘ಅಷ್ಟೇ ಅಲ್ಲ, ಹುಡುಗ್ರಿಗೆ ಮೇಷ್ಟ್ರು ಪಾಠ ಯಾಕ್ ಬೋರ್ ಹೊಡೆಯುತ್ತೆ ಅನ್ನೋದರ ಬಗೆಗಿನ ಸಂಶೋಧನೆಗೂ ಇಗ್ನೊಬೆಲ್ ಸಿಕ್ಕಿದೆ’.

‘ಹಾಗೆ ಬೋರ್ ಹೊಡೆದಾಗ ಹಾರ್ಸೋ ರಾಕೆಟ್ ಯಾಕೆ ಸ್ಮೂತಾಗಿ ಲ್ಯಾಂಡ್ ಆಗಲ್ಲ ಅಂತ ನಾವೂ ಕಂಡ್‌ಹಿಡೀಬಹುದು’.

‘ಒಬ್ಬ ಆಕಾಶ ನೋಡ್ತಿದ್ರೆ ಮಿಕ್ಕವರೂ ಹಾಗೇ ನೋಡ್ತಾರೆ ಅನ್ನೋದಕ್ಕೆ ಪ್ರಶಸ್ತಿ ದಕ್ಕಿದೆಯಂತೆ’.

‘ಅಯ್ಯಯ್ಯೋ! ಎಂತ ಕೆಲಸ ಆಯ್ತು? ಇದ ಕ್ಕಂತೂ ನಮಗೇ ಪ್ರಶಸ್ತಿ ಬರ್ಬೇಕಿತ್ತು. ಕಾರಣ ಹುಡುಕ್ದೆ ನಾವೂ ಆಕಾಶ ನೋಡ್ತಾ ನಿಂತ್ಕೊಂಡು ಮಿಸ್ಸಾಯ್ತು’ ಎಂದು ಹಲುಬಿದ ಕಲ್ಲೇಶಿ.

‘ಇದೊಂದೇ ಅಲ್ಲಲೇ, ತೆನೆ, ಕಮಲದ ಮೈತ್ರಿಗೆ ಕೆಮಿಸ್ಟ್ರಿಲಿ, ಎಣ್ಣೆ ಮೇಲೇ ನಿಂತಿರೋ ಪಂಚ ಗ್ಯಾರಂಟಿಗಳಿಗೆ ಫಿಜಿಕ್ಸ್‌ನಲ್ಲಿ, ರಕ್ತವೇ ಇಲ್ಲದ ಆಪರೇಶನ್‌ಗೆ ಮೆಡಿಸಿನ್‌ನಲ್ಲಿ ನಮ್ಗೆ ಇವತ್ತಲ್ಲ ನಾಳೆ ಇಗ್ನೊಬೆಲ್ ಬಂದೇ ಬರುತ್ತೆ’ ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

‘ಬಿಳಿ ಬಂಗಾರ’: ಬೇಡಿಕೆ ಭರಪೂರ

ಹತ್ತಿ ಬೆಳೆಗಾರರನ್ನು ಸಂಕಷ್ಟದಿಂದ ಪಾರು ಮಾಡಲು, ಗುಜರಾತ್ ಮಾದರಿಯಲ್ಲಿ ಅವರಿಗೆ ದೇಶದಾದ್ಯಂತ ತೆರಿಗೆ ವಿನಾಯಿತಿಯನ್ನು ವಿಸ್ತರಿಸಬೇಕಾಗಿದೆ

● ಬಸವರಾಜ ಶಿವಪ್ಪ ಗಿರಗಾಂವಿ

ವಿಶ್ವದಾದ್ಯಂತ 2019ರಿಂದ ವಿಶ್ವ ಹತ್ತಿ ದಿನವನ್ನು ಆಚರಿಸಲಾಗುತ್ತಿದೆ. ಆಫ್ರಿಕಾದಲ್ಲಿ ಕಾಟನ್-4 ಎಂದು ಕರೆಯಲಾಗುವ, ಹತ್ತಿ ಬೆಳೆಯುವ ದೇಶಗಳಾದ ಬೆನಿನ್, ಬುರ್ಕಿನಾ ಫಾಸೊ, ಚಾಡ್ ಹಾಗೂ ಮಾಲಿಯಲ್ಲಿ ವಿಶ್ವ ವಾಣಿಜ್ಯ ಸಂಘಟನೆಯು (ಡಬ್ಲ್ಯುಟಿಒ) 2009ರ ಅಕ್ಟೋಬರ್ 7ರಂದು ಇಂತಹದ್ದೊಂದು ದಿನ ಆಚರಿಸಲು ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪ ಮಾಡಿತು. ನಂತರ ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ವಿಶ್ವಸಂಸ್ಥೆಯು ಹತ್ತಿಯ ಆರೋಗ್ಯಕರ ಬಳಕೆಯನ್ನು ಮನಗಂಡು, 2021ರ ಮಹಾ ಅಧಿವೇಶನದಲ್ಲಿ ಈ ಕುರಿತು ನಿರ್ಣಯ ಅಂಗೀಕರಿಸಿತು. ಈ ಮೂಲಕ ಪ್ರತಿವರ್ಷ ಅ. 7ರಂದು ಅಧಿಕೃತವಾಗಿ ವಿಶ್ವ ಹತ್ತಿ ದಿನವನ್ನು ಆಚರಿಸಲಾಗುತ್ತಿದೆ.

ಹತ್ತಿಯು ಅರಿವೆಯಾಗಿ ಮಾತ್ರ ಉಪಯೋಗವಾಗದೆ ಆಹಾರವಾಗಿಯೂ ಮನುಕುಲದ ಅವಶ್ಯಕತೆಯನ್ನು ಪೂರೈಸುತ್ತಿರುವುದು ವಿಶೇಷ. ಪ್ರಸ್ತುತ ವಿಶ್ವದಾದ್ಯಂತ ಅಂದಾಜು 80 ದೇಶಗಳಲ್ಲಿ 10 ಕೋಟಿ ಕುಟುಂಬಗಳು ಹತ್ತಿಯಿಂದ ನೇರವಾದ ಪ್ರಯೋಜನ ಪಡೆಯುತ್ತಿವೆ. ಇವರಲ್ಲಿ ಕನಿಷ್ಠ ಅರ್ಧದಷ್ಟು ಮಹಿಳೆಯರು ಪಾಲ್ಗೊಂಡಿರುವುದು ವಿಶೇಷ. ಹತ್ತಿಯು ಸಮಾಜದಲ್ಲಿನ ಪ್ರತಿಯೊಬ್ಬರೂ ಮರ್ಯಾದೆಯಿಂದ, ಆರೋಗ್ಯಕರವಾಗಿ ಹಾಗೂ ಆರಾಮದಾಯಕವಾಗಿ ಬದುಕಲು ಬಹಳ ಅವಶ್ಯ. ಅದರಂತೆ ವಿಶ್ವಸಂಸ್ಥೆಯ ಪ್ರಮುಖ ಅಂಗಸಂಸ್ಥೆಗಳಾದ ಇಂಟರ್‌ನ್ಯಾಷನಲ್ ಟ್ರೇಡ್ ಸೆಂಟರ್ ಹಾಗೂ ಡಬ್ಲ್ಯುಟಿಒ ಸಹ ಹತ್ತಿಯ ಉತ್ಪಾದನೆ ಮತ್ತು ಅದರ ವ್ಯಾಪಾರವನ್ನು ಉತ್ತೇಜಿಸಲು ಹಾಗೂ ಸ್ಥಳೀಯ ಸಂಸ್ಕರಣಾ ಸಾಮರ್ಥ್ಯವನ್ನು ಸುಧಾರಿಸಲು ಸಿ-4 ರಾಷ್ಟ್ರಗಳಿಗೆ ವಿಶೇಷ ಸಹಕಾರವನ್ನು ನೀಡಿವೆ.

ಒಂದು ಅಂದಾಜಿನ ಪ್ರಕಾರ, ಒಂದು ಟನ್ ಹತ್ತಿಯು ಸರಾಸರಿ ಐದು ಜನರಿಗೆ ಉದ್ಯೋಗ ಒದಗಿಸುತ್ತದೆ. ವಿಶ್ವದ ಒಟ್ಟು ಹತ್ತಿ ಉತ್ಪಾದನೆಯ ಶೇ 80ರಷ್ಟನ್ನು ಉಡುಪುಗಳಿಗಾಗಿ ಬಳಸಲಾಗುತ್ತಿದೆ. ಇನ್ನುಳಿದ ಶೇ 15ರಷ್ಟು ಗೃಹೋಪಯೋಗಿ ಹಾಗೂ ಶೇ 5ರಷ್ಟು ಇತರ ಕಾರಣಗಳಿಗಾಗಿ ಬಳಕೆಯಾಗುತ್ತಿದೆ. ವಿಶ್ವದ ಕೃಷಿಯಲ್ಲಿನ ಶೇ 3ರಷ್ಟು ಪ್ರದೇಶವನ್ನು ಹತ್ತಿ ಕೃಷಿಯು ಆಕ್ರಮಿಸಿಕೊಂಡಿದೆ. ಹತ್ತಿ ಬೀಜದ ಎಣ್ಣೆಯನ್ನು ಅಡುಗೆ, ಸೌಂದರ್ಯವರ್ಧಕ, ಸಾಬೂನು ಹಾಗೂ ಪಶು ಆಹಾರವಾಗಿ ಬಳಸಲಾಗುತ್ತಿದೆ. ಚೀನಾ, ಭಾರತ, ಯುಎಸ್‌ಎ, ಬ್ರೆಜಿಲ್ ಹಾಗೂ ಪಾಕಿಸ್ತಾನ ಅತಿಹೆಚ್ಚು ಹತ್ತಿ ಬೆಳೆಯುವ ದೇಶಗಳಾಗಿವೆ.

ಹತ್ತಿ ಕುರಿತು ಕೆಲವು ಆಸಕ್ತಿದಾಯಕ ಸಂಗತಿಗಳಿವೆ. ಅವುಗಳೆಂದರೆ, ಹತ್ತಿ ಗಿಡದಲ್ಲಿ ಯಾವುದೇ ನಿರುಪಯುಕ್ತ ತ್ಯಾಜ್ಯ ಇರುವುದಿಲ್ಲ. ಹತ್ತಿಯು ನಾರು ಹಾಗೂ ಬಟ್ಟೆಯಾದರೆ, ಬೀಜವು ಎಣ್ಣೆಯಾಗುವುದರಿಂದ ಆಹಾರವಾಗಿ ಪರಿವರ್ತನೆಯಾಗುತ್ತದೆ. ಕಾಂಡವು ಭೂಮಿಗೆ ಮರಳಿ ಸೇರ್ಪಡೆಯಾಗಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತದೆ.

ಹತ್ತಿ ಬೀಜವನ್ನು ಭೂಮಿಯ ಮೇಲೆ ಮಾತ್ರವಲ್ಲ, ದೂರದ ಚಂದ್ರಲೋಕದಲ್ಲಿಯೂ ಬೆಳೆಯಲಾಗಿತ್ತಂತೆ. ಚೀನಾವು 2019ರ ಜನವರಿಯಲ್ಲಿ ನಡೆಸಿದ ತನ್ನ ಚಂದ್ರಯಾನದಲ್ಲಿ ಆಕಾಶನೌಕೆಯೊಂದಿಗೆ ಹತ್ತಿ ಬೀಜಗಳನ್ನು ಕಳುಹಿಸಿಕೊಟ್ಟಿತ್ತಂತೆ. ಆದರೆ ಇವು ಮೊಳಕೆಯೊಡೆಯಲು ಪ್ರಾರಂಭಿಸಿದರೂ ಅಲ್ಲಿದ್ದ ಚಳಿಯ ಪರಿಣಾಮದಿಂದ ನಾಶವಾದವು ಎಂದು ಆ ದೇಶ ಹೇಳಿಕೊಂಡಿದೆ.

ಬಹುತೇಕ ಕಡೆ ನೋಟುಗಳನ್ನು ಹತ್ತಿಯಿಂದ ತಯಾರಿಸಲಾಗುತ್ತದೆ. ಹೆಚ್ಚಿನವರು ನೋಟುಗಳು ಕಾಗದದಿಂದ ತಯಾರಾಗುತ್ತವೆ ಎಂದು ತಿಳಿದಿದ್ದಾರೆ. ಒಂದು ವೇಳೆ ಕಾಗದದಿಂದ ತಯಾರಾಗಿದ್ದರೆ ಅವು ಸ್ವಲ್ಪ ಒದ್ದೆಯಾದರೂ ನಿರುಪಯುಕ್ತವಾಗುತ್ತಿದ್ದವು. ವಿಶ್ವದ ಬಹುಪಾಲು ರಾಷ್ಟ್ರಗಳು ತಮ್ಮ ಕರೆನ್ಸಿ ನೋಟುಗಳನ್ನು ತಯಾರಿಸಲು ಶೇ 75ರಷ್ಟು ಹತ್ತಿ ಹಾಗೂ ಶೇ 25ರಷ್ಟು ಲಿನಿನ್ ಮಿಶ್ರಣವನ್ನು ಬಳಸುತ್ತವೆ. ಹತ್ತಿ ಕೃಷಿಯು 5,000 ವರ್ಷಗಳಷ್ಟು ಹಿಂದೆಯೇ ಭಾರತ, ಈಜಿಪ್ಟ್ ಹಾಗೂ ಅಮೆರಿಕದಲ್ಲಿನ ಪ್ರಾಚೀನ ನಾಗರಿಕತೆಗಳಲ್ಲಿ ಪ್ರಚಲಿತದಲ್ಲಿತ್ತು ಎಂದು ನಂಬಲಾಗಿದೆ.

ಹತ್ತಿಯಲ್ಲಿ ನಾಲ್ಕು ಪ್ರಭೇದಗಳಿದ್ದು, ಪ್ರತಿಯೊಂದು ಪ್ರಭೇದವೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿದೆ. 1793ರಲ್ಲಿ ಅಮೆರಿಕದ ಸಂಶೋಧಕ ಎಲಿ ವಿಟ್ನಿ ಅವರು ಕಂಡುಹಿಡಿದ ಹತ್ತಿಯ ರಾಟೆ ಹಾಗೂ ಅದರ ಪರಿಣಾಮಕಾರಿ ಬಳಕೆಯು ಹತ್ತಿ ಉತ್ಪಾ-

ದನೆಯಲ್ಲಿ ಬಹುದೊಡ್ಡ ಕ್ರಾಂತಿಯನ್ನು ಮಾಡಿತು. ಹತ್ತಿ ಬೆಳೆಯು ಕಡಿಮೆ ನೀರನ್ನು ಬೇಡುವ ವಾಣಿಜ್ಯ ಬೆಳೆಯಾಗಿದೆ. ಹತ್ತಿ ಬಟ್ಟೆಯು ಫ್ಯಾಷನ್ ಉದ್ಯಮದ ಪ್ರಧಾನ ವಸ್ತುವಾಗಿದೆ. ಬೇರೆ ವಸ್ತುಗಳಿಂದ ತಯಾರಿಸಿದ ಫ್ಯಾಷನ್ ಉಡುಪುಗಳಿಗೆ ಹತ್ತಿ ಫ್ಯಾಷನ್ ಉಡುಪುಗಳ ರೀತಿಯಲ್ಲಿ ಜನರ ಮನಗೆಲ್ಲಲು ಇಂದಿನವರೆಗೂ ಸಾಧ್ಯವಾಗಿಲ್ಲ.

‘ಬಿಳಿ ಬಂಗಾರ’ ಎಂದು ಕರೆಯಲಾಗುವ ಹತ್ತಿಯ ಬೇಡಿಕೆಯಲ್ಲಿ ಭಾರತವು ವಿಶ್ವದ ಶೇ 25ರಷ್ಟು ಪಾಲನ್ನು ಪೂರೈಸುತ್ತಿದೆ. ಅತಿಹೆಚ್ಚು ಸ್ವದೇಶಿ ಬೇಡಿಕೆಯನ್ನು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ದೇಶದಲ್ಲಿ ಅಂದಾಜು 5 ಕೋಟಿ ಜನ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹತ್ತಿಯಿಂದ ಬದುಕು ಕಟ್ಟಿಕೊಂಡಿದ್ದಾರೆ. ಹತ್ತಿ ಬೇಡಿಕೆಯು ವಿಶ್ವದಾದ್ಯಂತ ಹೆಚ್ಚಾಗಿದ್ದರೂ ಬೆಳೆಗಾರರು ಪ್ರಮುಖವಾಗಿ ಮಧ್ಯವರ್ತಿಗಳ ಹಾವಳಿ, ಪ್ರತಿಕೂಲ ಹವಾಮಾನ ಹಾಗೂ ಅನಿಶ್ಚಿತ ಬೆಲೆಯ ಪರಿಣಾಮದಿಂದ ನಷ್ಟವನ್ನು ಅನುಭವಿಸುತ್ತಿದ್ದಾರೆ. ಇದರ ಸುಧಾರಣೆಗಾಗಿ ಗುಜರಾತ್ ಮಾದರಿಯಲ್ಲಿ ಹತ್ತಿ ಬೆಳೆಗಾರರಿಗೆ ತೆರಿಗೆ ವಿನಾಯಿತಿಯನ್ನು ದೇಶದಾದ್ಯಂತ ವಿಸ್ತರಿಸಬೇಕು. ದೇಶದಲ್ಲಿರುವ ಬಹುತೇಕ ಸ್ಪಿನ್ನಿಂಗ್ ಮಿಲ್ಲುಗಳು ಆಡಳಿತದಲ್ಲಿನ ಏರುಪೇರುಗಳಿಂದ ನಷ್ಟ ಅನುಭವಿಸುತ್ತಿವೆ. ಇದಕ್ಕಾಗಿ ಸರ್ಕಾರವು ಸ್ಥಳೀಯ ಮಟ್ಟದಲ್ಲಿ ಹತ್ತಿ ಬೆಳೆಗಾರರನ್ನು ಒಳಗೊಂಡ ಸಮನ್ವಯ ಸಮಿತಿಗಳನ್ನು ರಚಿಸಬೇಕಾದುದು ಅತ್ಯಂತ ಅವಶ್ಯಕ.

ವಾಚಕರ ವಾಣಿ

ಹೀಗಿದೆ ಎಕ್ಸ್‌ಪ್ರೆಸ್ ಬಸ್ಸಿನ ಹಣೆಬರಹ...

ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಇತ್ತೀಚೆಗೆ ನಾನು ಕೆಎಸ್‌ಆರ್‌ಟಿಸಿ ಸುವರ್ಣ ಸಾರಿಗೆ ಬಸ್ಸಿನಲ್ಲಿ ಪ್ರಯಾಣಿಸಬೇಕಾಗಿ ಬಂತು. ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ಕೇಂದ್ರ ನಿಲ್ದಾಣದಿಂದ ಹೊರಟ ಬಸ್ಸು ಶಿವಮೊಗ್ಗ ತಲುಪಿದಾಗ ಬರೋಬ್ಬರಿ ಮಧ್ಯಾಹ್ನ ಒಂದೂಮುಕ್ಕಾಲು ಗಂಟೆ. ದಾರಿಯುದ್ದಕ್ಕೂ ಅರ್ಧಂಬರ್ಧ ಕಾಮಗಾರಿ ನಡೆದು ನಿಂತುಹೋಗಿರುವ ಹೆದ್ದಾರಿ ಮೇಲ್ಸೇತುವೆಗಳು, ಅದರಿಂದಾಗಿ ಇರುವ ರಸ್ತೆಯೂ ಇಲ್ಲದಂತಾಗಿರುವುದು, ಊರಿಗೂ ಹೆದ್ದಾರಿಗೂ ಸಂಬಂಧವಿಲ್ಲದಂತೆ ಇರುವ ಬಸ್ ನಿಲ್ದಾಣಗಳು, ಬೀರೂರಿನ ಬಳಿ ಸುಮಾರು 25 ನಿಮಿಷ ಮುಚ್ಚಿದ ರೈಲ್ವೆ ಗೇಟು, ಜನನಿಬಿಡ ರಸ್ತೆಗಳಲ್ಲಿ ನಿಂತೂ ನಿಂತೂ ಹೊರಡುವ ಎಕ್ಸ್‌ಪ್ರೆಸ್ ಬಸ್ಸಿನ ಹಣೆಬರಹವನ್ನು ಕಂಡು ತುಂಬಾ ಬೇಸರವಾಯಿತು.

ಜನಸ್ನೇಹಿ ಸೇವೆಯನ್ನು ಕೈಗೆಟಕುವ ದರದಲ್ಲಿ ಕೊಡುವಲ್ಲಿ ಕೆಎಸ್‌ಆರ್‌ಟಿಸಿ ದೇಶಕ್ಕೇ ಒಂದು ಮಾದರಿಯಾಗಿ ಬೆಳೆದ ಸಂಸ್ಥೆ. ಆದರೆ ಇಂದು ಐರಾವತ, ಅಂಬಾರಿ ಎಂದೆಲ್ಲ ದುಬಾರಿ ದರದ ವೋಲ್ವೊ ಬಿಳಿಯಾನೆಗಳನ್ನು ಸಾಕುವ ದುರಾಸೆಗೆ ಬಿದ್ದು ಸಾಮಾನ್ಯ ಕೆಂಪು ಬಸ್ಸುಗಳನ್ನು ಕಳಪೆ ಹಾದಿಗೆ ಅಟ್ಟಿರುವುದು ನಾಡಿನ ದುರ್ದೈವ. ಬೆಂಗಳೂರಿನ ಕೆಟ್ಟ ಟ್ರಾಫಿಕ್ ಸಮಸ್ಯೆಯಿಂದ ತಪ್ಪಿಸಿಕೊಂಡರೂ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ದುರವಸ್ಥೆಯ ಕಾರಣದಿಂದ 300 ಕಿ.ಮೀ. ಪ್ರಯಾಣಕ್ಕೆ ಬರೋಬ್ಬರಿ ಏಳೂಮುಕ್ಕಾಲು ಗಂಟೆ ಸವೆಸುವಂತೆ ಆಗಿರುವ ಈ ಪರಿಸ್ಥಿತಿಯನ್ನು ಯಾವ ರೀತಿಯ ಅಭಿವೃದ್ಧಿ ಎಂದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವು ಭಾವಿಸಿವೆಯೋ ಗೊತ್ತಿಲ್ಲ. ಬೆಂಗಳೂರು– ಮೈಸೂರು ಹೆದ್ದಾರಿಯನ್ನು ಕೊಂಡಾಡುವವರಿಗೆ ರಾಜ್ಯದ ಉಳಿದ ಭಾಗಗಳ ರೋದನ ಕೇಳದಂತಾಗಿದೆ.

ಶ್ರೀಕಂಠ, ಬೆಂಗಳೂರು

ಮತ್ತೆ ಮತ್ತೆ ಅಭಿವೃದ್ಧಿಯಾಗುತ್ತದೆ ನಮ್ಮ ರಸ್ತೆ!

ಗುತ್ತಿಗೆದಾರ ಶೇ 5ರಷ್ಟು ಕಮಿಷನ್ ಪಾವತಿಸಲು ನಿರಾಕರಿಸಿದ್ದಕ್ಕೆ ಆಕ್ರೋಶಗೊಂಡ ಶಾಸಕರ ಬೆಂಬಲಿಗರೊಬ್ಬರು, ಹೊಸದಾಗಿ ಡಾಂಬರ್ ಹಾಕಿ ಅಭಿವೃದ್ಧಿಪಡಿಸಿದ್ದ ರಸ್ತೆಯನ್ನು ಬುಲ್ಡೋಜರ್ ಬಳಸಿ ಸುಮಾರು ಅರ್ಧ ಕಿ.ಮೀ.ನಷ್ಟು ದೂರ ಕಿತ್ತು ಹಾಕಿರುವ ಪ್ರಕರಣ ಉತ್ತರಪ್ರದೇಶದಿಂದ ವರದಿಯಾಗಿದೆ (ಪ್ರ.ವಾ., ಅ. 6). ನಮ್ಮಲ್ಲಿ ಗುತ್ತಿಗೆದಾರರಿಂದ ಶೇ 40ರಿಂದ 50ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂಬ ದೂರು ಕೇಳಿಬಂದರೂ ಮತ್ತು ಆ ದೂರು ದಿಲ್ಲಿ ತನಕ ಮುಟ್ಟಿದರೂ ಕಮಿಷನ್ ನೀಡದ್ದಕ್ಕೆ ಉತ್ತರಪ್ರದೇಶದಂತೆ ರಸ್ತೆಗಳನ್ನು ಅಗೆದುಹಾಕುವುದು ಅಥವಾ ಮಾಡಲಾದ ಕಾಮಗಾರಿಗಳನ್ನು ಕೆಡವಿ ಹಾಕುವುದು ಕಂಡುಬಂದಿಲ್ಲ. ಹಾಗೆ ಆಗಿದ್ದರೆ ನಮ್ಮಲ್ಲಿ ಒಂದೂ ಕಾಮಗಾರಿ ಉಳಿಯುತ್ತಿರಲಿಲ್ಲ. ನಮ್ಮ ನೇತಾರರು, ಅನುಯಾಯಿಗಳು ಇನ್ನೂ ಆ ಮಟ್ಟಕ್ಕೆ ಇಳಿದಿಲ್ಲ. ಹೀಗಾಗಿ, ಗುತ್ತಿಗೆದಾರರೇ ಯಾರಿಗೆಲ್ಲ ಕೊಡಬೇಕೋ ಅಷ್ಟನ್ನು ಕೊಟ್ಟು ಉಳಿದ ಹಣದಲ್ಲಿ ರಸ್ತೆ ಅಭಿವೃದ್ಧಿ ಮಾಡಿ, ಅವು ಅಲ್ಪಾವಧಿಯಲ್ಲಿ ಕಿತ್ತು ಹೋಗುವಂತೆ ಮಾಡುತ್ತಾರೆ. ಅದೇ ರಸ್ತೆಯನ್ನು ಮತ್ತೆ ಮತ್ತೆ ಅಭಿವೃದ್ಧಿಪಡಿಸುತ್ತಾ ಎಲ್ಲರೂ ನಿರಂತರ ಲಾಭದಲ್ಲಿ ಇರಬಹುದು ಎಂಬ ಕಾರಣದಿಂದ!

ಕಮಿಷನ್ ಕೊಡಲಾಗದವರು ಬಾಕಿ ಹಣ ಬಿಡುಗಡೆಗೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ, ಕಾಮಗಾರಿಗಳ ಗುಣಮಟ್ಟದ ಬಗ್ಗೆ ಒಂದಿಷ್ಟು ಗೊಣಗುತ್ತಾ ಇರುತ್ತಾರೆ. ಜನಸಾಮಾನ್ಯರು ಇದನ್ನೆಲ್ಲಾ ಅಸಹಾಯಕರಾಗಿ ಗಮನಿಸುತ್ತಾರೆ!

ವೆಂಕಟೇಶ ಮಾಚಕನೂರ, ಧಾರವಾಡ

ಕ್ರೀಡಾ ಸಾಧನೆ: ಶ್ರೇಷ್ಠತೆ ಅನುಕರಿಸೋಣ

ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟವು ಭಾರತೀಯರಾದ ನಮ್ಮಲ್ಲಿ ಕುತೂಹಲವನ್ನು ಕೆರಳಿಸಿದೆ. ಪರರಾಷ್ಟ್ರಗಳ ಕ್ರೀಡಾಳುಗಳ ಸಾಧನೆಯ ಎತ್ತರವನ್ನು ಗಮನಿಸಿದಾಗ, ನಮ್ಮ ಕ್ರೀಡಾಪಟುಗಳೂ ಏಕೆ ಅವರಂತೆ ಸಾಧಿಸಲು ಆಗುವುದಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಹೀಗೆ ಹೇಳುವಾಗ ಇಲ್ಲಿ ಮಾತ್ಸರ್ಯದ ಸೋಂಕು ಇಲ್ಲ. ಅನುಕರಿಸಬೇಕೆಂಬ ಹಂಬಲ ಮಾತ್ರ ಇದೆ. ಚೀನಾ, ದಕ್ಷಿಣ ಕೊರಿಯಾ ಮತ್ತು ಜಪಾನ್ ರಾಷ್ಟ್ರವು ಪದಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಈ ದೇಶಗಳಲ್ಲಿ ಅವರು ತಮ್ಮ ಸ್ಪರ್ಧಾಳುಗಳಿಗಾಗಿ ನೀಡುತ್ತಿರುವ ವ್ಯವಸ್ಥೆಗಳೇನೇನು, ಕೊಡುವ ಸೌಲಭ್ಯಗಳ್ಯಾವುವು, ಪ್ರೋತ್ಸಾಹ ಯಾವ ಬಗೆಯದು ಎಂದು ತಿಳಿದುಕೊಳ್ಳಲು ನಮ್ಮ ಕೇಂದ್ರ ಸರ್ಕಾರವು ಕ್ರೀಡಾ ವಿಭಾಗದ ಮುಖ್ಯಸ್ಥರು, ವಿವಿಧ ಕ್ರೀಡಾ ಪರಿಣತರ ಒಂದು ನಿಯೋಗವನ್ನು ರಚಿಸಿ ಅಲ್ಲಿಗೆ ಕಳುಹಿಸಿಕೊಡಬಹುದು.

ಈ ನಿಯೋಗವು ಅಲ್ಲಿಯ ಕ್ರೀಡಾಪಟುಗಳಿಗಾಗಿ ಮಾಡಿದ ವ್ಯವಸ್ಥೆ ಮತ್ತು ರೂಪುರೇಷೆಗಳನ್ನು ಅಭ್ಯಸಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ನಂತರ ನಮ್ಮ ದೇಶದಲ್ಲಿಯ ಎಲ್ಲ ಕ್ರೀಡಾಪ್ರಕಾರಗಳ ಅಧಿಕಾರಿಗಳು, ಪರಿಣತರನ್ನು ಆಹ್ವಾನಿಸಿ, ವರದಿಯಲ್ಲಿಯ ಯಾವ ಅಂಶಗಳನ್ನು ನಮ್ಮ ಕ್ರೀಡಾ ಸಂಹಿತೆಯಲ್ಲಿ ಸೇರಿಸಲು ಸಾಧ್ಯ ಎಂಬುದನ್ನು ಚರ್ಚಿಸಿ, ನಿರ್ಧರಿಸಿ ಅನುಷ್ಠಾನಕ್ಕೆ ತರುವ ಮೂಲಕ ನಮ್ಮ ಸ್ಪರ್ಧಾತ್ಮಕ ಕ್ರೀಡಾಕ್ಷೇತ್ರದಲ್ಲಿ ಇನ್ನೂ ಉನ್ನತ ಸಾಧನೆಯ ಭರವಸೆಯನ್ನು ಮೂಡಿಸುವ ಪ್ರಯತ್ನಗಳು ತುರ್ತಾಗಿ ಆಗಬೇಕು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಮಿತಿಮೀರಿದ ಶಬ್ದಮಾಲಿನ್ಯ ನಿಯಂತ್ರಿಸಿ

ಯಾವುದೇ ಧಾರ್ಮಿಕ ಆಚರಣೆಯ ಭಾಗವಾಗಿ ನಡೆಯುವ ಉತ್ಸವಗಳಲ್ಲಿ ಇತ್ತೀಚೆಗೆ ಮಿತಿಮೀರಿ ಧ್ವನಿವರ್ಧಕಗಳನ್ನು ಬಳಸಲಾಗುತ್ತಿದೆ. ಈ ಮೂಲಕ ಸುತ್ತಮುತ್ತಲಿನ ಪರಿಸರಕ್ಕೆ ತೀವ್ರತರವಾದ ಶಬ್ದಮಾಲಿನ್ಯ ಉಂಟಾಗುತ್ತಿದೆ. ಮಕ್ಕಳು, ವಯೋವೃದ್ಧರು ಅನಾರೋಗ್ಯಪೀಡಿತರು, ಹೃದಯಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವವರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಉತ್ಸವ ನಿರ್ವಹಣೆಗೆ ಆಯೋಜನೆಗೊಂಡ ಪೊಲೀಸ್ ವ್ಯವಸ್ಥೆಯೂ ಈ ಬಗ್ಗೆ ಚಕಾರ ಎತ್ತುವುದಿಲ್ಲ. ಇದು ವ್ಯವಸ್ಥೆಯ ಲೋಪವೇ? ಧ್ವನಿವರ್ಧಕದ ಅತಿಯಾದ ಶಬ್ದದ ಆಧಾರದ ಮೇಲೆಯೇ ಉತ್ಸವದ ಅದ್ದೂರಿತನ ನಿಂತಿದೆ ಎಂದು ಅನೇಕರು ತಪ್ಪು ತಿಳಿದಂತಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಉತ್ಸವಗಳ ಸಂದರ್ಭದಲ್ಲಿ ಧ್ವನಿವರ್ಧಕದ ಬಳಕೆಗೆ ಮಿತಿ ಹೇರಬೇಕು.

ಮಂಜುನಾಥ್ ಬಿ., ಹೊಳೆಹೊನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ನಾಡಿನ ಪರಿಸರವಾಣಿಯಾಗಿ ಪ್ರಜಾವಾಣಿ

'ದೊಡ್ಡ ಅಣೆಕಟ್ಟುಗಳೆಂದರೆ ಒಂದು ರೂಪಾಯಿಯನ್ನು ಮುಳುಗಿಸಿ 70 ಪೈಸೆಯನ್ನು ಮೇಲಕ್ಕೆ ಎತ್ತಿದಷ್ಟೇ ವ್ಯಾವಹಾರಿಕ' ಎಂದು ಕೋಲ್ಕತಾದ ಮಾನವಶಾಸ್ತ್ರಜ್ಞ ಪ್ರೊ. ಕೆ.ಸಿ. ಮಲ್ಹೋತ್ರ ಹೇಳಿದ್ದು ಪ್ರಜಾವಾಣಿಯ ಮುಖಪುಟದಲ್ಲಿ ಹೆಡ್‌ಲೈನ್ ಆಗಿದ್ದೇ ಪರಿಸರ ವೈಚಾರಿಕತೆ ಕುರಿತಂತೆ ಕನ್ನಡದ ಮೊದಲ ವರದಿಯಾಗಿ ದಾಖಲಾಯಿತು..

● ನಾಗೇಶ ಹೆಗಡೆ

ವಿಶ್ವ ಪರಿಸರ ದಿನದ ಅಂಗವಾಗಿ 1989ರ ಜೂನ್ ನಾಲ್ಕರ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾಗಿದ್ದ 'ಪರಿಸರ ಚಿಪ್ಕೋದಿಂದ ಕೈಗಾವರೆಗೆ' ಲೇಖನ

80ರ ದಶಕದ ಆರಂಭದಲ್ಲಿ ಕನ್ನಡ ಪ್ರಜ್ಞಾಕೊಳಕ್ಕೆ ಹೊಸ ನೀರು ಸೇರಿತು. ಅಮೆರಿಕದ ಪ್ರಿನ್ಸ್‌ಟನ್‌ನಿಂದ ಪ್ರೊ. ಅಮೂಲ್ಯ ರೆಡ್ಡಿ, ಹಾರ್ವರ್ಡ್‌ನಿಂದ ಡಾ. ಮಾಧವ ಗಾಡ್ಗೀಳ್, ಷಿಕ್ಯಾಗೊದಿಂದ ಡಾ. ಎಸ್. ಆರ್. ಹಿರೇಮಠ, ಮುಂಬೈಯಿಂದ ಡಾ. ಕುಸುಮಾ ಸೊರಬ, ದಿಲ್ಲಿಯಿಂದ ಪಾಂಡುರಂಗ ಹೆಗಡೆ ಎಲ್ಲರೂ ತಂತಮ್ಮೊಳಗೆ ಮಾತಾಡಿಕೊಂಡಂತೆ ಕರ್ನಾಟಕಕ್ಕೆ ಬಂದಿಳಿದರು. ಅದೇ ವೇಳೆಗೆ ಶುದ್ಧ ಗಾಳಿ, ಶುದ್ಧ ನೀರು ಮತ್ತು ಅರಣ್ಯ ಪರಿಸರ ರಕ್ಷಣೆಗೆ ಹೊಸ ಕಾನೂನುಗಳು ಒಂದೊಂದಾಗಿ ಜಾರಿಗೆ ಬರತೊಡಗಿದವು. ಕರ್ನಾಟಕದಲ್ಲೂ 'ಮಾಲಿನ್ಯ ನಿಯಂತ್ರಣ ಮಂಡಳಿ' ಅಸ್ತಿತ್ವಕ್ಕೆ ಬಂತು. ಪ್ರಜಾವಾಣಿಯೂ 'ಪತ್ರಕರ್ತರಲ್ಲದ' ವಿಷಯತಜ್ಞರನ್ನು ನೇಮಕ ಮಾಡಿಕೊಂಡು ಪತ್ರಿಕೋದ್ಯಮದಲ್ಲಿ ಹೊಸ ಪ್ರಯೋಗಕ್ಕೆ ಮುಂದಾಯಿತು. ಕನ್ನಡ ಪತ್ರಿಕೋದ್ಯಮಕ್ಕೆ ಹೊಸದೆನಿಸಿದ 'ವಿಜ್ಞಾನ ಮತ್ತು ಅಭಿವೃದ್ಧಿ ಕರೆಸ್ಪಾಂಡೆಂಟ್', 'ನುಡಿಚಿತ್ರ ಲೇಖಕ' ಮುಂತಾದ ಹೊಸ ಹುದ್ದೆಗಳು ಸೃಷ್ಟಿಯಾದವು.

1981ರ ಜನವರಿ ತಿಂಗಳು. ಭಾರತದಲ್ಲಿ ಬೃಹತ್ ಅಣೆಕಟ್ಟುಗಳ ಸಾಧಕ ಬಾಧಕಗಳ ಚರ್ಚೆಗೆಂದು ಶಿರಸಿಯಲ್ಲಿ ರಾಷ್ಟ್ರೀಯ ಸಮ್ಮೇಳನ ನಡೆಯಿತು. ದಿಲ್ಲಿ, ಕೋಲ್ಕತಾ, ಪುಣೆ, ಹೈದರಾಬಾದ್‌ಗಳಿಂದ ವಿಜ್ಞಾನಿಗಳು, ಅರಣ್ಯ ತಜ್ಞರು, ಆಡಳಿತ ವಿಶಾರದರು ಮತ್ತು ಅರ್ಥಶಾಸ್ತ್ರ ಸಂಶೋಧಕರು ಭಾಗವಹಿಸಿದ ಈ ಸಮ್ಮೇಳನಕ್ಕೆ ಚಿಪ್ಕೊ ಖ್ಯಾತಿಯ ಸುಂದರಲಾಲ್ ಬಹುಗುಣ ಮತ್ತು ಚಂಡೀಪ್ರಸಾದ್ ಭಟ್ ಕೂಡ ಬಂದರು. ಸ್ವರ್ಣವಲ್ಲಿ ಸರ್ವಜ್ಞೇಂದ್ರ ಸ್ವಾಮೀಜಿಯವರು 'ಅರಣ್ಯಸೂಕ್ತ'ವನ್ನು ಪಠಿಸುವ ಮೂಲಕ ಆರಂಭವಾಗಿ ಡಾ. ಶಿವರಾಮ ಕಾರಂತರ ಸರ್ವಾಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದ ಮೂಲಕವೇ ಕರ್ನಾಟಕದಲ್ಲಿ ವಿಧ್ಯುಕ್ತವಾಗಿ ಪರಿಸರ ಪ್ರಜ್ಞೆಯ ಅನಾವರಣವಾಯಿತು.

ನಿಜ, ಅದಕ್ಕಿಂತ ತುಸು ಮೊದಲೇ ಅದಾಗಿತ್ತು. ಪ್ರಕೃತಿಯ ಜೊತೆ ಸಹವರ್ತಿಯಾಗಿ ಮಾನವ ಅಭಿವೃದ್ಧಿ ಸಾಧ್ಯವೆ ಎಂಬ ಬಗ್ಗೆ ಚರ್ಚೆ ನಡೆದವು. ಎರಡು ದಿನಗಳ ಆ ಸಮ್ಮೇಳನದಲ್ಲಿ 'ಪ್ರಜಾವಾಣಿ'ಯನ್ನು ಪ್ರತಿನಿಧಿಸಿದ ವರದಿಗಾರ ಕೂಡ ದಿಲ್ಲಿಯಲ್ಲಿ ಪರಿಸರ ವಿಜ್ಞಾನದಲ್ಲಿ ಪದವಿ ಪಡೆದ (ದೇಶದ ಮೊದಲ ತಂಡದ) ವಿದ್ಯಾರ್ಥಿಯೇ ಆಗಿದ್ದೊಂದು ವಿಶೇಷ.

'ದೊಡ್ಡ ಅಣೆಕಟ್ಟುಗಳೆಂದರೆ ಒಂದು ರೂಪಾಯಿಯನ್ನು ಮುಳುಗಿಸಿ 70 ಪೈಸೆಯನ್ನು ಮೇಲಕ್ಕೆ ಎತ್ತಿದಷ್ಟೇ ವ್ಯಾವಹಾರಿಕ' ಎಂದು ಕೋಲ್ಕತಾದ ಮಾನವಶಾಸ್ತ್ರಜ್ಞ ಪ್ರೊ. ಕೆ.ಸಿ. ಮಲ್ಹೋತ್ರ ಹೇಳಿದ್ದು ಪ್ರಜಾವಾಣಿಯ ಮುಖಪುಟದಲ್ಲಿ ಹೆಡ್‌ಲೈನ್ ಆಗಿದ್ದೇ ಪರಿಸರ ವೈಚಾರಿಕತೆ ಕುರಿತಂತೆ ಕನ್ನಡದ ಮೊದಲ ವರದಿಯಾಗಿ ದಾಖಲಾಯಿತು.

ಎಂಬತ್ತರ ದಶಕವೆಂದರೆ ಚಳವಳಿಗಳ ದಶಕವೇ ಆಗಿತ್ತು. ಅದುವರೆಗಿನ ಎಂದಿನ ಕಾರ್ಮಿಕ ಚಳವಳಿ, ವಿದ್ಯಾರ್ಥಿ ಚಳವಳಿಗಳ ಸಾಲಿಗೆ ಹೊಸದಾಗಿ ದಲಿತ ಚಳವಳಿ, ರೈತ ಚಳವಳಿ, ಗ್ರಾಹಕ ಚಳವಳಿ, ಪರಿಸರ ಚಳವಳಿಗಳೂ ಸೇರಿ ಒಂದಕ್ಕೊಂದು ಪೂರಕವಾಗಿ, ಅನೇಕ ಬಾರಿ ಜಂಟಿಯಾಗಿ ಘೋಷಣೆಗಳನ್ನು ಹೊಮ್ಮಿಸುತ್ತಿದ್ದ ಕಾಲ. ತಿಂಗಳಿಗೆ ಒಂದಲ್ಲ ಒಂದು ಅಂಥ ಸಮಾವೇಶ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನಡೆಯುತ್ತಿತ್ತು. ಬಹಳಷ್ಟು ಮೆರವಣಿಗೆಗಳು 'ಪ್ರಜಾವಾಣಿ' ಕಚೇರಿಯ ಎದುರಿಗೇ ಸಾಗುತ್ತಿದ್ದವು.

'ಬೇಡ್ತಿಗೆ ಅಣೆಕಟ್ಟು ಬೇಡವೆಂದರೆ ರಾಜ್ಯಕ್ಕೆ ವಿದ್ಯುತ್ ಶಕ್ತಿ ಬೇಡವೆ' ಎಂದು ಕೇಳುತ್ತ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಪರಮಾಣು ವಿಜ್ಞಾನಿ ಡಾ. ರಾಜಾ ರಾಮಣ್ಣನವರ ಜೊತೆ ಸಮಾಲೋಚಿಸಿ ಬೇಡ್ತಿ ಪಕ್ಕದ ಕಾಳಿ ಕಣಿವೆಯಲ್ಲಿ ಹೊಸ ಪರಮಾಣು ಸ್ಥಾವರಕ್ಕೆ ಅಡಿಪಾಯ ಹಾಕಿದರು. ಭೂಗರ್ಭದಲ್ಲಿ ಆಳ ಬಿರುಕು ಇರುವ ಕಣಿವೆಯಲ್ಲಿ ಆಗಲೇ ಐದು ಅಣೆಕಟ್ಟು ಕಟ್ಟಲಾಗಿದ್ದು ಅಲ್ಲೇ ಅಣುಸ್ಥಾವರ ತಲೆ ಎತ್ತಿದರೆ ಭವಿಷ್ಯಕ್ಕೆ ಭಾರೀ ಅಪಾಯಕಾರಿ ಎಂದು ಡಾ. ಶಿವರಾಮ ಕಾರಂತರ ನೇತೃತ್ವದಲ್ಲಿ ಹೊಸ ಚಳವಳಿ ಆರಂಭವಾಯಿತು. ಸಮುದ್ರದಲ್ಲಿ ತೆಪ್ಪದ ಮೇಲೆ ಕಲ್ಲಿದ್ದಲ ಉಷ್ಣ ವಿದ್ಯುತ್ ಸ್ಥಾವರವನ್ನು ಹೂಡಲು ಸರಕಾರ ಸಿದ್ಧತೆ ನಡೆಸಿತು. ದಕ್ಷಿಣ ಕನ್ನಡದಲ್ಲಿ ಅದಕ್ಕೂ ವಿರೋಧ ಬಂತು. ಕಾಡು ಕಡಿದು ನೀಲಗಿರಿ ತೋಪು ಬೆಳೆಸುವ ವಿರುದ್ಧ ಚಿಪ್ಕೊ ಮಾದರಿಯ ಚಳವಳಿ (ಅದಕ್ಕೆ 'ಅಪ್ಪಿಕೋ' ಚಳವಳಿ ಎಂಬ ನಾಮಕರಣ ಪ್ರಜಾವಾಣಿ ಮೂಲಕವೇ ಆಗಿದ್ದು), ಶರಾವತಿ ಕಣಿವೆಯ ಸದಾಹಸಿರಿನ ಕಾಡನ್ನು ಮುಳುಗಿಸಿ ಟೇಲ್‌ರೇಸ್ ಅಣೆಕಟ್ಟನ್ನು ನಿರ್ಮಿಸುವ ಪ್ರಸ್ತಾವದ ವಿರುದ್ಧವೂ ಚಳವಳಿ ನಡೆಯಿತು. ಗುಜರಿ ಹಡಗುಗಳನ್ನು ಮಂಗಳೂರಿನ ತಣ್ಣೀರಬಾವಿ ಎಂಬಲ್ಲಿಗೆ ಸಾಗಿಸಿ ತಂದು ಒಡೆಯುವ ಯೋಜನೆಗೂ ವಿರೋಧ ಬಂತು. ಕೊಜೆಂಟ್ರಿಕ್ಸ್‌ಗೆ ವಿರೋಧ ಬಂತು, ಪಶ್ಚಿಮ ಘಟ್ಟದಲ್ಲಿ ಮ್ಯಾಂಗನೀಸ್ ಗಣಿಗಾರಿಕೆಗೆ ವಿರುದ್ಧ, ಹರಿಹರದ ಪಾಲಿಫೈಬರ್ ಕಾರ್ಖಾನೆಯ ಮಾಲಿನ್ಯದ ವಿರುದ್ಧ, ನೀಲಗಿರಿ ನೆಡುತೋಪುಗಳ ವಿರುದ್ಧ ಚಳವಳಿ ನಡೆದವು.

ಐತಿಹಾಸಿಕ 'ಪಶ್ಚಿಮಘಟ್ಟ ಉಳಿಸಿ ಪಾದಯಾತ್ರೆ', ಮಧ್ಯಪ್ರದೇಶದ ಹರ್ಸೂದ್‌ನಲ್ಲಿ ನಡೆದ ಬೃಹತ್ 'ನರ್ಮದಾ ಬಚಾವೊ' ಸಮಾವೇಶ, ಬ್ರಝಿಲ್ ದೇಶದ ರಿಯೊ ನಗರದಲ್ಲಿ ನಡೆದ ಪ್ರಥಮ ಪೃಥ್ವೀ ಶೃಂಗಸಭೆಗೆ 'ಪ್ರಜಾವಾಣಿ' ತನ್ನ ವರದಿಗಾರರನ್ನು ಕಳುಹಿಸಿತ್ತು. ವರದಿ ಅಷ್ಟೇ ಅಲ್ಲ, ಸಂಪಾದಕೀಯಗಳೂ ವಿಸ್ತೃತ ಲೇಖನಗಳೂ 'ಸಾಪ್ತಾಹಿಕ ಪುರವಣಿ'ಗಳಲ್ಲಿ ಪ್ರಕಟವಾದವು. ದೀಪಾವಳಿಯ ವಿಶೇಷಾಂಕಗಳಲ್ಲೂ ಪರಿಸರದ ಮಹತ್ವವನ್ನು ಸಾರುವ ಲೇಖನ, ಪ್ರಬಂಧ, ಕವನಗಳು ಹೊಮ್ಮತೊಡಗಿದವು. ಅಂದಿನ ಪರಿಸರ 'ಯೋಧ'ರ ಸಂಭ್ರಮ ಅದೆಷ್ಟಿತ್ತೆಂದರೆ ಡಾ. ಶಿವರಾಮ ಕಾರಂತರನ್ನೂ ಒತ್ತಾಯಿಸಿ 1988ರಲ್ಲಿ ಲೋಕಸಭಾ ಚುನಾವಣೆಯ 'ಪರಿಸರ ಅಭ್ಯರ್ಥಿ'ಯಾಗಿ ನಿಲ್ಲಿಸಿ, ಗೆಲ್ಲಿಸಲಾಗದೆ ಸೋತರು.

90ರ ದಶಕದಲ್ಲಿ ಜಾಗತೀಕರಣದ ಸುನಾಮಿಯ ಜೊತೆಜೊತೆಗೇ ಕಲರ್ ಟಿ.ವಿ, ಕಂಪ್ಯೂಟರ್ ಶಿಕ್ಷಣ, ಹೊಸ ಉದ್ಯೋಗಾವಕಾಶಗಳ ಬಾಗಿಲು ತೆರೆದಾಗ ಹೋರಾಟಗಳಿಗೆ ಯುವಜನರೇ ಇಲ್ಲದಂತಾಗಿ ಎಲ್ಲ ತರಾವರಿ ಚಳವಳಿಗಳೂ ನೆಲ ಕಚ್ಚಿದವು. ಪ್ರತಿಭಟನೆಯೇ ಇಲ್ಲದಾದಾಗ ಒಂದರ ಮೇಲೊಂದರಂತೆ ಹೊಸ ಹೊಸ ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದವು.

ಪರಿಸರ ಕಾಳಜಿ ಎಂದರೆ ಕೇವಲ ಹೃದಯವಂತಿಕೆ, ಕವಿಮನಸ್ಸು, ನುಡಿಚಿತ್ರ ಕೌಶಲ ಅಷ್ಟೇ ಅಲ್ಲವಲ್ಲ! ವೈಜ್ಞಾನಿಕ ದೃಷ್ಟಿಕೋನ, ಅಭಿವೃದ್ಧಿಯ ಅಗತ್ಯಗಳು, ಜನನಾಯಕರ ಅನಿಸಿಕೆ, ಕಾನೂನಿನ ಇತಿಮಿತಿ, ನಿಖರ ಅಂಕಿಸಂಖ್ಯೆ ಎಲ್ಲವನ್ನೂ ಗಮನಿಸಿ ಸಮತೂಕದ ವಿಶ್ಲೇಷಣೆ ಕೂಡ ಬೇಕಾಗುತ್ತದೆ. ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತು ಡಾ. ಮಾಧವ ಗಾಡ್ಗೀಳ್ ಮತ್ತು ಕಸ್ತೂರಿ ರಂಗನ್ ವರದಿಗಳನ್ನು ಅಥವಾ ಆ ಘಟ್ಟಗಳಿಗೆ 'ಯುನೆಸ್ಕೊ' ಮಾನ್ಯತೆಯ ಪ್ರಸ್ತಾವನೆಯನ್ನು ಶಾಸನ ಸಭೆಯಲ್ಲಿ ಚರ್ಚೆಯನ್ನೇ ನಡೆಸದೆ ಮೂಲೆಗೊತ್ತಿದಾಗ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಖಡಕ್ ಸಂಪಾದಕೀಯಗಳು ಅನನ್ಯವೆನಿಸಿವೆ. ಅಂಥ ವಿವಾದಾತ್ಮಕ ಘಟನೆ ನಡೆದಾಗಲೆಲ್ಲ ಈ ಪತ್ರಿಕೆ ನಾಡಿನ ತಜ್ಞರಿಂದ ಲೇಖನವನ್ನು ಬರೆಸಿ ಪ್ರಕಟಿಸಿದೆ. ಜೊತೆಗೆ ಪರಿಸರ ಧ್ವಂಸದ ಅನೇಕ ಸತ್ಯನಿಷ್ಠುರ ತನಿಖಾ ಚಿತ್ರಣಗಳನ್ನು 'ಪ್ರಜಾವಾಣಿ'ಯ ವರದಿಗಾರರು ಕಾಲಕಾಲಕ್ಕೆ ನೀಡುತ್ತಲೇ ಬಂದಿದ್ದಾರೆ. 'ಕರ್ನಾಟಕ ದರ್ಶನ'ದಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಸ್ಯಾಂಕಿಕೆರೆಯ ದಡದಲ್ಲಿ ನಿರ್ಮಾಣವಾಗಲಿದ್ದ ಬಹುಮಹಡಿ ಕಟ್ಟಡ ನಿರ್ಮಾಣ ಅಡಿಪಾಯದಲ್ಲೇ ಸ್ಥಗಿತಗೊಂಡಿದೆ. ಗದಗ ಜಿಲ್ಲೆಯ ಮಾಗಡಿ ಕೆರೆ, ಮಂಡಗದ್ದೆ ಪಕ್ಷಿಧಾಮ ಸುತ್ತಲಿನ ಒತ್ತುವರಿಗೆ ತಡೆ ಬಿದ್ದಿದೆ. ಅಭಿವೃದ್ಧಿಯ ನೀಲನಕ್ಷೆಯಲ್ಲಿ ಭಲೇಭಲೇ ಎನ್ನುವಂಥ ಯೋಜನೆಗಳು ಅನುಷ್ಠಾನಕ್ಕೆ ಬಂದಾಗ ಅದೆಷ್ಟು ಅಧ್ವಾನದ್ದಾಗುತ್ತವೆ ಎಂಬುದನ್ನು ತೋರಿಸುವ ಬಹಳಷ್ಟು ಉದಾಹರಣೆಗಳು, ಸರಣಿ ಲೇಖನಗಳು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿವೆ. ರವೀಂದ್ರ ಭಟ್ ಅವರು ಕಾವೇರಿ ನದೀಪಾತ್ರದುದ್ದಕ್ಕೂ ಸಂಚರಿಸಿ ನೀಡಿದ ಸರಣಿ ವರದಿ, ಇಳಕಲ್ ಸುತ್ತಮುತ್ತಲಿನ ಕಲ್ಲುಗಣಿಗಳ ಅಧ್ವಾನ, ಮೈಸೂರು ಜಿಲ್ಲೆಯ ಬುಡಕಟ್ಟು ಜನರ ಸ್ಥಿತಿಗತಿ, ಹೂಳು ತುಂಬಿ ದುರ್ಗತಿಗೀಡಾದ ಜಲಾಶಯಗಳ ಸಮೀಕ್ಷೆ ಇವೆಲ್ಲ 'ಪ್ರಜಾವಾಣಿ'ಯ ತನಿಖಾ ವರದಿಗಳ ಹೆಗ್ಗುರುತಾಗಿ ಉಳಿದಿವೆ. ನಾಡಿನ ಅರಣ್ಯ ಪರಿಸರದಲ್ಲಿ ನಡೆಯುತ್ತಿರುವ ತರಾವರಿ ಗೋಲ್‌ಮಾಲ್‌ಗಳ ಬಗ್ಗೆ ಜಿ.ಡಿ. ಯತೀಶ್‌ಕುಮಾರ್ ನೀಡುತ್ತ ಬಂದ ಅನೇಕ ವರದಿಗಳನ್ನು (ಉದಾ: ಭೀಮಗಢದಲ್ಲಿ ಅಕ್ರಮ ರೆಸಾರ್ಟ್‌ಗಳು) ಆಧರಿಸಿ ಸರಕಾರ ತಕ್ಷಣ ತುರ್ತುಕ್ರಮ ಕೈಗೊಂಡಿದ್ದೂ ಇದೆ. ಹುಬ್ಬಳ್ಳಿ-ಅಂಕೋಲಾ ರೈಲುಮಾರ್ಗ ಮತ್ತು ಕಪ್ಪತಗುಡ್ಡದ ಗಣಿಗಾರಿಕೆಗೆ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳೇ ಕುಮ್ಮಕ್ಕು ನೀಡಿರುವ ಬಗ್ಗೆ ಯತೀಶ್ ನಿರ್ಭೀತ ವರದಿ ನೀಡಿದ್ದರು.

ಆನಂದ ತೀರ್ಥ ಪ್ಯಾಟಿ, ಗಾಣಧಾಳು ಶ್ರೀಕಂಠ ಇಬ್ಬರಿಗೂ ವಾರ್ತಾ ಇಲಾಖೆ ಪತ್ರಿಕೋದ್ಯಮ ಪ್ರಶಸ್ತಿ ನೀಡಿ ಸನ್ಮಾನಿಸಿತು. ಶಿಕ್ಷಕ ವೃತ್ತಿಯಲ್ಲಿರುವ ಗುರುರಾಜ್ ದಾವಣಗೆರೆ ಪ್ರಜಾವಾಣಿಗೆ ಬರೆದ ಲೇಖನಗಳ ಸಂಗ್ರಹ 'ಹಸಿರು ಮನ್ವಂತರ' ಕೃತಿಗೆ ಪ್ರಶಸ್ತಿಯೂ ಬಂತು.

ಇಂದು ಹೈಸ್ಕೂಲ್, ಕಾಲೇಜು, ವಿಶ್ವವಿದ್ಯಾಲಯಗಳವರೆಗಿನ ಅನೇಕ ತರಗತಿಗಳ ಪಠ್ಯಗಳಲ್ಲಿ ಪರಿಸರ ಪಾಠಗಳಿವೆ. ಅವುಗಳಲ್ಲಿ ಬಹುಮಟ್ಟಿನ ಲೇಖನಗಳೆಲ್ಲ ಈ ಮೊದಲು 'ಪ್ರಜಾವಾಣಿ'ಯಲ್ಲಿ ಪ್ರಕಟವಾದವುಗಳೇ ಆಗಿದೆ. ಕನ್ನಡ ನಾಡಿನಲ್ಲಿ ಪರಿಸರ ಸಾಕ್ಷರತೆಯನ್ನು ಪಸರಿಸುವಲ್ಲಿ ಪ್ರಜಾವಾಣಿಯ ಕೊಡುಗೆಯ ಬಗ್ಗೆ ಬೇರೆ ಉದಾಹರಣೆ ಬೇಕೆ?.



ಪಶ್ಚಿಮ ಘಟ್ಟಗಳ ಕುರಿತು ಸಾಪ್ತಾಹಿಕ ಪುರಾವಣಿಯಲ್ಲಿ 1986ರ ಮೇ 25ರಂದು ಪ್ರಕಟವಾಗಿದ್ದ ಲೇಖನ

ಚಿತ್ರಗಳು :ಪ್ರಜಾವಾಣಿ ಆರ್ಕೈವ್

ಪಶ್ಚಿಮ ಘಟ್ಟ ಸಂರಕ್ಷಣೆ ಸಂಬಂಧ 1987ರ 24ನೇ ಅಕ್ಟೋಬರ್‌ನ ಸಂಪಾದಕೀಯ ಪುಟದಲ್ಲಿ ಪ್ರಕಟವಾಗಿದ್ದ 'ಪಶ್ಚಿಮಘಟ್ಟ ಉಳಿಸಿ ಅಭಿಯಾನ' ಲೇಖನ

ಪರಿಣತರಿಂದ ಜಾಗೃತಿ

ಯಾವುದೇ ಹೊಸ ಯೋಜನೆಯ ಪ್ರಸ್ತಾಪ ಬಂದರೂ 'ಪ್ರಜಾವಾಣಿ' ಅದನ್ನು ಮೊದಲೇ ಗ್ರಹಿಸಿ ಅಂಥ ಯೋಜನೆಯ ಬಗ್ಗೆ ಗಾಡ್ಗೀಳ, ಸೆಸಿಲ್ ಸಾಲ್ಡಾನ್ಹಾ, ಅಮೂಲ್ಯ ರೆಡ್ಡಿಯಂಥ ವಿಜ್ಞಾನಿಗಳ, ಪರಿಸರ ತಜ್ಞರ, ಕಾನೂನು ತಜ್ಞರ ಮತ್ತು ಸ್ಥಳೀಯ ನಾಗರಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ವರದಿ ಮಾಡುತ್ತಿತ್ತು. 'ಸುಸ್ಥಿರ ಅಭಿವೃದ್ಧಿ', 'ಧಾರಣ ಶಕ್ತಿ', 'ಜೀವಜಾಲ' ಮುಂತಾದ ಹೊಸ ಪರಿಕಲ್ಪನೆಗಳು ಮತ್ತು ಪದಪುಂಜಗಳು ಕನ್ನಡಕ್ಕೆ ಸೇರ್ಪಡೆಯಾದವು. ಪರಿಸರ ಚಳವಳಿಗಳಿಗೆ ಕೆಲವೊಮ್ಮೆ ಮುಂಬೆಳಕಾಗಿ, ಕೆಲವೊಮ್ಮೆ ಹಿಂಬೆಳಕಾಗಿ 'ಪ್ರಜಾವಾಣಿ' ಕನ್ನಡ ಸಮಾಜಕ್ಕೆ ಹೊಸ ಆಕರ ಸಾಹಿತ್ಯವನ್ನು ಸೃಷ್ಟಿಸತೊಡಗಿತ್ತು. ಚೆರ್ನೊಬಿಲ್ ದುರಂತ, ಭೋಪಾಲ ಅನಿಲ ದುರಂತಗಳ ವಿಸ್ತೃತ ವಿಶ್ಲೇಷಣೆಗಳನ್ನೂ ಓದುಗರಿಗೆ ನೀಡುತ್ತ ಬಂದಿತ್ತಷ್ಟೇ ಅಲ್ಲ, ಎಚ್.ಆರ್. ಕೃಷ್ಣಮೂರ್ತಿ, ಪಾಂಡುರಂಗ ಹೆಗಡೆ, ನರೇಂದ್ರ ರೈ ದೇರ್ಲ, ಯೆಲ್ಲಪ್ಪ ರೆಡ್ಡಿ, ಸುಮಂಗಲಾ ಮುಮ್ಮಿಗಟ್ಟಿ, ಸುರೇಶ್ ಹೆಬ್ಳೀಕರ್, ಸಂಜಯ್ ಗುಬ್ಬಿ, ಅನಂತ ಅಶೀಸರ, ಉಲ್ಲಾಸ್ ಕಾರಂತ ಮುಂತಾದವರ ಲೇಖನ, ಸಂದರ್ಶನಗಳನ್ನೂ ಪ್ರಕಟಿಸತೊಡಗಿತ್ತು.

ಬೇಡ್ತಿ-ಅಘನಾಶಿನಿ ಚಳವಳಿಗಳು ನಡೆದವಾದರೂ ಅವೆಲ್ಲ ಆಸ್ತಿಪಾಸ್ತಿಯ ಮುಳುಗಡೆ, ಮರುವಸತಿ ಅಥವಾ ಪರಿಹಾರಗಳ ಸಾಧಕ-ಬಾಧಕಗಳಿಗಷ್ಟೇ ಸೀಮಿತವಾಗಿತ್ತು. ಯಾರ ಖಾಸಗೀ ಒಡೆತನಕ್ಕೂ ಸೇರಿರದ ಜೀವಮಂಡಲದ ಯೋಗಕ್ಷೇಮ ಕುರಿತ ಮೊದಲ ಬೌದ್ಧಿಕ ವಿಚಾರಮಂಥನ

ಕರ್ನಾಟಕದ ದರ್ಶನ

ಕರ್ನಾಟಕ ದರ್ಶನ

ಪರಿಸರ ಚಳವಳಿಗಳ ಅಬ್ಬರ ತಗ್ಗಿದರೂ ನೆಲಮಟ್ಟದಲ್ಲಿ ಅದರ ಕಾವು ಆರಿರಲಿಲ್ಲ. ಅದೇ ವೇಳೆಗೆ 'ಕರ್ನಾಟಕ ದರ್ಶನ' ಹೆಸರಿನ ಹೊಸ ವರ್ಣರಂಜಿತ ಪುರವಣಿಯನ್ನು 'ಪ್ರಜಾವಾಣಿ' ಪ್ರಾರಂಭಿಸಿತು. ಅದರ ಉಸ್ತುವಾರಿ ನನ್ನ ಹೆಗಲಿಗೇ ಬಂತು. ಈ ಮೂಲಕ ಜಿಲ್ಲಾಮಟ್ಟದ, ತಾಲ್ಲೂಕು ಮಟ್ಟದ ವರದಿಗಾರರಿಗಷ್ಟೇ ಅಲ್ಲ, ಯುವ ಫ್ರೀಲಾನ್ಸ್ ಬರಹಗಾರರಿಗೂ ಹೊಸ ಅವಕಾಶ ತೆರೆದಂತಾಗಿ ನಾಡಿನ ನಾಲ್ಕೂ ನಿಟ್ಟಿನಿಂದ ಪ್ರಕೃತಿ ವಿಶೇಷಗಳ ಕುರಿತು ನುಡಿಚಿತ್ರ, ಛಾಯಚಿತ್ರಗಳ ಸರಮಾಲೆಗಳೇ ಪ್ರಕಟವಾಗತೊಡಗಿದವು. ಜಾಹೀರಾತುಗಳ ದಟ್ಟಣೆ ಇಲ್ಲದ್ದರಿಂದ ಪುಟಸಂಯೋಜನೆಯಲ್ಲೂ ಹೊಸ ಹೊಸ ಪ್ರಯೋಗಗಳನ್ನು ನಡೆಸಲು ಸಾಧ್ಯವಾಯಿತು. ಸುಂದರ ಗಿರಿಶಿಖರ, ನದಿ- ಸರೋವರ, ಕರಾವಳಿ, ಅರಣ್ಯ, ಗಿಡಮೂಲಿಕೆ, ಪ್ರಾಣಿಪಕ್ಷಿ ಸಂಕುಲಗಳ ಸುಸ್ಥಿತಿ, ಅವನತಿಯ ಚಿಕಿತ್ಸಕ ದೃಷ್ಟಿಕೋನವುಳ್ಳ ಬರೆಹಗಳನ್ನು ಒದಗಿಸಲು ಪ್ರಜಾವಾಣಿಯ ವರದಿಗಾರರಿಗೂ ಫ್ರೀಲಾನ್ಸಿಗಳಿಗೂ ಪೈಪೋಟಿಯೇ ಏರ್ಪಟ್ಟಂತಾಗಿತ್ತು. ಅಕ್ಷರ ಬಲ್ಲವರಲ್ಲೆಲ್ಲ ಪರಿಸರ ಪ್ರಜ್ಞೆ ವ್ಯಕ್ತವಾಗತೊಡಗಿತ್ತು. ನೂರಾರು ಹೊಸ ಬರೆಹಗಾರರಿಗೆ 'ಪ್ರಜಾವಾಣಿ'ಯೇ ಪ್ರಮುಖ ವೇದಿಕೆಯಾಗಿತ್ತು.

ಈ ಪುರವಣಿಯ ಕೊನೆಯ ಪುಟದ 'ಕೃಷಿದರ್ಶನ'ದ ಮೂಲಕ ಸಾವಯವ ಕೃಷಿ, ದೇಸೀ ಬೀಜ ಸಂರಕ್ಷಣೆ, ಅಲ್ಪನೀರಿನ ಬೇಸಾಯ, ಕುಲಾಂತರಿ ತಂತ್ರಜ್ಞಾನದ ಅಪಾಯಗಳ ಬಗ್ಗೆ ಜಾಗೃತಿ ಮೂಡಿದ್ದೂ ಅಲ್ಲದೆ, ನಾರಾಯಣ ರೆಡ್ಡಿ, ಭರಮಗೌಡ್ರ, ಜಿ. ಕೃಷ್ಣಪ್ರಸಾದ್ ಬೆಳಕಿಗೆ ಬರುವಂತಾಯಿತು. ಕರ್ನಾಟಕ ಸರ್ಕಾರ ಸಾವಯವ ಕೃಷಿನೀತಿಯನ್ನು ಘೋಷಿಸುವಲ್ಲಿ ಈ ಪುರವಣಿ ಮಹತ್ತರ ಪಾತ್ರವನ್ನು ನಿರ್ವಹಿಸಿತು.

1989ರ ಸೆಪ್ಟೆಂಬರ್ 28ರಂದು ಮಧ್ಯಪ್ರದೇಶದ ಮರ್ಸೂದ್‌ನಲ್ಲಿ ನಡೆದಿದ್ದ ಬೃಹತ್ ಪರಿಸರ ಮೇಳ ಕುರಿತು 1989ರ ಅಕ್ಟೋಬರ್ 15ರಂದು ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾಗಿದ್ದ ಲೇಖನ

ನಾವು ನೋಡಿದ ಸಿನಿಮಾ

ಬರಿ ಹೊಡೆದಾಟವೇ ಗುರಿ

ಫೈಟರ್

- **ನಿರ್ದೇಶನ**: ನೂತನ್ ಉಮೇಶ್
- **ನಿರ್ಮಾಣ**: ಕೆ.ಸೋಮಶೇಖರ್
- **ತಾರಾಗಣ**: ವಿನೋದ್ ಪ್ರಭಾಕರ್, ಲೇಖಾಚಂದ್ರ, ಪಾವನಾ ಗೌಡ ಮತ್ತಿರರು

ನಟ ವಿನೋದ್ ಪ್ರಭಾಕರ್ ಚಿತ್ರದಲ್ಲಿದ್ದ ಮೇಲೆ ಒಂದಷ್ಟು ಆ್ಯಕ್ಷನ್ ಇರಲೇಬೇಕು. ಚಿತ್ರ-ವಿಚಿತ್ರ ಫೈಟ್‌ಗಳು ಕಾಣಿಸಬೇಕು. ಭರಪೂರ ಫೈಟ್‌ನಿಂದಲೇ ತುಂಬಿ ತುಳುಕುವ 'ಫೈಟರ್'ನ ಕಥೆಯನ್ನು ಒಂದು ಸಾಲಿನಲ್ಲಿ ಹೇಳುವುದು ಕಷ್ಟ. ನಾಯಕ ವಿನೋದ್ ಪ್ರಭಾಕರ್ ಮೋಹಕ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕಿ ಲೇಖಾಚಂದ್ರ ವಿಸ್ಮಯಳಾಗಿ ಬರುತ್ತಾರೆ. ಸಣ್ಣ ಹುಡುಗನೊಬ್ಬನ ಮೇಲೆ ನಾಲ್ಕಾರು ನಾಯಿಗಳು ದಾಳಿ ಮಾಡುತ್ತವೆ. ಆತ ಅದರಿಂದ ಬದುಕುಳಿಯುವ ದೃಶ್ಯದಿಂದ ಸಿನಿಮಾ ಪ್ರಾರಂಭವಾಗುತ್ತದೆ. ಮೊಮ್ಮಗನ ಮೇಲೆ ನಾಯಿಗಳನ್ನು ಹರಿಬಿಟ್ಟವನು ಸ್ವಂತ ತಾತ. ಯಾಕೆ ಎಂಬುದಕ್ಕೆ ಚಿತ್ರದ ಕ್ಲೈಮ್ಯಾಕ್ಸ್‌ತನಕ ಕಾಯಬೇಕು.

ಚಿತ್ರದಲ್ಲಿ ಹಲವಾರು ಕಥೆಗಳು ಬಂದು ಹೋಗುವುದರಿಂದ ಮುಖ್ಯ ಕಥೆ ಇದೇ ಆಗಿರಬಹುದೆಂದು ನಾವೇ ಊಹಿಸಿಕೊಳ್ಳಬೇಕು! ಮೋಹಕನ ತಾಯಿ ಪಾತ್ರದಲ್ಲಿ ತಮಿಳು ನಟಿ ನಿರೋಷ ರಾಧಾ ಕಾಣಿಸಿಕೊಂಡಿದ್ದಾರೆ. ಅವರು ಜಿಲ್ಲಾಧಿಕಾರಿ. ಆದರೆ ಪಾತ್ರಕ್ಕೆ ಅವರು ಸೂಕ್ತ ಆಯ್ಕೆ ಆಗಿರಲಿಲ್ಲವೇನೋ ಎನ್ನಿಸುತ್ತದೆ. ಅಧಿಕಾರಿಯಾಗಿಯೂ, ತಾಯಿಯಾಗಿಯೂ ಅವರು ಕನೆಕ್ಟ್ ಆಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಸಾಕಷ್ಟು ಕಡೆ ಅವರ ಡಬ್ಬಿಂಗ್ ಸೂಕ್ತವಾಗಿಲ್ಲ. ಈ ಪಾತ್ರಕ್ಕೆ ಸ್ಥಳೀಯ ಪೋಷಕನಟಿಯರನ್ನು ನಿರ್ದೇಶಕರು ಬಳಸಿಕೊಳ್ಳಬಹುದಿತ್ತು.

ಚಿತ್ರದ ಮೊದಲಾರ್ಧ ಬ್ಲಡ್‌ಬ್ಯಾಂಕ್ ಮಾಫಿಯಾದ ಮೇಲೆ ಸಾಗುತ್ತದೆ. ನಾಯಕನ ಹೊಡೆದಾಟಕ್ಕೊಂದು ಕಾರಣ ಬೇಕು, ಖಳನಾಯಕರು ಇರಬೇಕು ಎಂಬ ಕಾರಣಕ್ಕೆ ಈ ಸನ್ನಿವೇಶಗಳನ್ನು ಸೃಷ್ಟಿಸಿದಂತೆ ಭಾಸವಾಗುತ್ತದೆ. ಯಾಕೆಂದರೆ ಚಿತ್ರದ ಕ್ಲೈಮ್ಯಾಕ್ಸ್‌ಗೂ ಮೊದಲಾರ್ಧಕ್ಕೂ ಸಂಬಂಧವೇ ಇಲ್ಲ. ಬ್ಲಡ್‌ಬ್ಯಾಂಕ್ ಮಾಫಿಯಾ ವಿರುದ್ಧದ ಹೋರಾಟ ಎಂದುಕೊಳ್ಳುತ್ತಿದ್ದಂತೆ ನಾಯಕಿ ವಿಸ್ಮಯಾಳ ಪ್ರವೇಶವಾಗುತ್ತದೆ. ಮೋಹಕ ಮತ್ತು ವಿಸ್ಮಯಳ ಪ್ರೇಮ ಕಥೆ ಆರಂಭವಾಗುತ್ತದೆ. ಪ್ರೇಮಕಥೆ ಅದೆಷ್ಟು ಪೇಲವವಾಗಿದೆಯೆಂದರೆ, 10 ವರ್ಷದ ಹಿಂದಿನ ಸಿನಿಮಾವೊಂದನ್ನು ನೋಡಿದಂತೆ ಭಾಸವಾಗುತ್ತದೆ. ನಾಯಕಿ ಬಾಯಿಯಲ್ಲಿ ಬರೀ ದ್ವಂದಾರ್ಥದ ಮಾತುಗಳನ್ನು ಹೇಳಿಸಿ ಪ್ರೇಕ್ಷಕನನ್ನು ನಗಿಸುವ ನಿರ್ದೇಶಕರ ಯತ್ನ ಫಲ ನೀಡಿಲ್ಲ. ನಾಯಕಿ ನಟನೆಯೂ ಅಷ್ಟಕಷ್ಟೆ.

ಪ್ರೇಮವಾದರೂ ಮುಂದುವರೆಯುತ್ತದೆಯಾ ಎಂದರೆ, ಅದೂ ಇಲ್ಲ. ಒಂದು ಫೈಟ್ ಮುಗಿಯುತ್ತಿದ್ದಂತೆ ಹಾಡು ಎಂಬ ಸಿದ್ಧ ಸೂತ್ರದಡಿ ಮೊದಲಾರ್ಧ ಮುಗಿದರೆ, ದ್ವಿತೀಯಾರ್ಧ ಬೇರೆಯದೇ ಕಥೆ. ಮತ್ತೊಂದು ನಾಯಕಿಯ ಪ್ರವೇಶ. ಮತ್ತೊಬ್ಬ ಖಳನಾಯಕನಾಗಿ ಶರತ್ ಲೋಹಿತಾಶ್ವ ಬರುತ್ತಾರೆ. ಗುರುಕಿರಣ್ ಸಂಗೀತದಲ್ಲಿ ಯಾವ ಹಾಡುಗಳೂ ಕಿವಿಗೆ ಹಿತ ಎನ್ನಿಸುವುದಿಲ್ಲ. ಹಿನ್ನೆಲೆ ಸಂಗೀತವೂ ಹಿತವಾಗಿಲ್ಲ. ಛಾಯಾಗ್ರಹಣ ಕೂಡ ನಡೆಯುತ್ತಿರುವ ದೃಶ್ಯಗಳಿಗೆ ಪೂರಕವಾಗಿಲ್ಲ. ಅನವಶ್ಯ ಸಂಗತಿಗಳು, ಜೂನಿಯರ್ ಆರ್ಟಿಸ್ಟ್‌ಗಳಿಂದ ಪ್ರೇಮು ತುಂಬಿಸುವ ಕೆಲಸವಾಗಿದೆಯಷ್ಟೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5463

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಬರ ಬಂದಾಗಲೂ ತೋರಿದ ಡೌಲು! (4)
3.ತುಂಬಾ ಹದಗೆಟ್ಟ ಸ್ಥಿತಿ (3)
4.ಕೊತ್ತಂಬರಿ ಬೀಜವನ್ನು ಹೀಗೂ ಹೇಳುವರು (3)
6.ಮರ್ಯಾದೆಯನ್ನು ಹೊಂದಿರುವ ಒಡೆಯ (4)
9.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಮನಸ್ಸಿನ ಅಭಿಪ್ರಾಯ ಮತದಲ್ಲಿದೆ (4)
15.ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಭಾರೀ ಪೆಟ್ಟಿಗೆ (3)
16.ರವಿಕೆ ಹತ್ತಿರ ಒಸರಿದ ಕೀವು (3)
17.ಎಳೆತನದಿಂದಲೇ ಮೊಳೆತ ಸ್ನೇಹ (4)

ಮೇಲಿಂದ ಕೆಳಕ್ಕೆ
1.ಅನಿರೀಕ್ಷಿತವಾಗಿ ಬಂದಿರುವ ವ್ಯಕ್ತಿ (4)
2.ಸ್ವಾರಸ್ಯವಾಗಿರುವ ಗುಟ್ಟು! (3)
4.ತುಸುವೇ ಬೀರಿದ ಮಂದಹಾಸ (4)
5.ಅಪಜಯದಲ್ಲೂ ಸಿಕ್ಕಿರುವ ಗೆಲುವು! (2)
7.ಹುಟ್ಟಿಗೊಂದು ಪರ್ಯಾಯ ಪದ (3)
8.ಹೊಸತನ ಇಲ್ಲಿ ಕಾಣುತ್ತಿದೆಯೇ? (3)
9.ಉತ್ತರದ ಕಡೆಯವರ ಮಂಚ (3)
10.ನರನಿಗೆ ಸಲ್ಲಿಸಿದ ನಮನ (4)
11.ಮಾಯವಾಗುವಿಕೆಯನ್ನು ಹೀಗೆನ್ನಿ (4)
13.ತರಗತಿಯಲ್ಲೇ ಸಮೂಹವಿದೆ (2)
14.ಸರೀಕರೆದು ಧರಿಸಿಕೊಂಡ ಕಂಠಾಭರಣ (3)

5462ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಜಯ 3.ಸಹವಾಸ 5.ತುರಿ 7.ಮಗ 8.ಮತಿ 10.ಅಮುಖ್ಯ 11.ಸಂಕಟ 13.ಮಿತಿ 15.ಶುಕ 16.ಬಳಪ 18.ಕರೆಯೋಲೆ 19.ರಸಾಯನ

ಮೇಲಿಂದ ಕೆಳಕ್ಕೆ: 1.ಪರಂಧಾಮ 2.ಯುತಿ 3.ಸರಿ 4.ಸಲಗ 6.ಗುದಾಮು 7.ಮರುಭೂಮಿ 9.ತಿಲೋದಕ 12.ಕವಳ 14.ತಿರೋಧಾನ 15.ಶುನಕ 16.ಬಲೆ 17.ಪರ

ಸುಡೊಕು 5849

2		8		7			6	
	5		4		2			1
	3			5		2		
6		4		3			5	
5	7	2	6		9			8
				2			4	
3				1			9	
		5	8		3	6		7
1				6				3

5848 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಅಷ್ಟಮಿ ಗಂ. 08-09 ನಕ್ಷತ್ರ: ಪುನರ್ವಸು ಗಂ. 23-57 ಯೋಗ: ಶಿವ
ಅಹೋರಾತ್ರ ಕರಣ: ಕೌಲವ ಗಂ. 08-09, ಕನ್ಯಾ ಮಾಸದ 20ನೇ ದಿನ, ಮಳೆನಕ್ಷತ್ರ: ಹಸ್ತ 3.
ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-24 ಸೂರ್ಯಾಸ್ತ : 06-13,
ಮುಸ್ಲಿಂ ದಿನಾಂಕ : 21 ರಬಿಉಲ್ಲಾವಲ್
ದಿನ ವಿಶೇಷ : ಮಾತೃ ನವಮಿ
ಅದೃಷ್ಟ ಸಂಖ್ಯೆ : 8, 12

ಮೇಷ: ತಾಳಿದವನು ಬಾಳಿಯಾನು ಎಂಬಂತೆ ದುಡುಕದೆ ಸಮಾಧಾನದಿಂದ ವ್ಯವಹರಿಸಿ. ಕೃಷಿಗೆ ಸಂಬಂಧಿಸಿದಂತೆ ಮಾಡುವ ಕೆಲಸಕ್ಕೆ ಲಾಭ ಉಂಟಾಗುತ್ತದೆ. ಈಶ್ವರ ಆರಾಧನೆ ಶುಭವನ್ನು ಉಂಟುಮಾಡುತ್ತದೆ.

ವೃಷಭ: ಕಷ್ಟಗಳನ್ನು ಎದುರಿಸುವ ಉತ್ತಮ ಆತ್ಮವಿಶ್ವಾಸವನ್ನು ಹೊಂದುವಿರಿ. ಹಂತ ಹಂತವಾಗಿ ದುಃಖಗಳ ತೀವ್ರತೆ ಕಡಿಮೆಯಾಗಲಿದೆ. ಸಕಾರಾತ್ಮಕ ಮನೋಭಾವದಿಂದ ಮತ್ತು ಮಾತುಗಾರಿಕೆಯಿಂದ ಎಲ್ಲರ ಮನಸ್ಸು ಗೆಲ್ಲುವಿರಿ.

ಮಿಥುನ: ಶಾರೀರಿಕವಾಗಿ ಆರೋಗ್ಯದ ಬಗ್ಗೆ ಆಲಸ್ಯ ಮಾಡಬೇಡಿ. ಸಂತಾನ ಅಪೇಕ್ಷಿಗಳಿಗೆ ಸಂತಸದ ವಾತಾವರಣ ಅನುಗ್ರಹವಾಗಲಿದೆ. ತಾಂತ್ರಿಕ ವೃತ್ತಿಯ ದೋಷವನ್ನು ಇನ್ನೊಬ್ಬರಲ್ಲಿ ಕೇಳಿ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಿ.

ಕರ್ಕಾಟಕ: ಸುಗಂಧ ದ್ರವ್ಯ ಉತ್ಪನ್ನಗಳ ಮಾರಾಟದವರಿಗೆಉತ್ತಮ ವ್ಯಾಪಾರ ಕಂಡುಬರುತ್ತದೆ. ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಸಿಂಹ: ವಿದ್ಯಾರ್ಥಿ ವರ್ಗಕ್ಕೆ ಕೆಲವು ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಇಂದು ಸೂಕ್ತ ದಿನವಾಗಿದೆ. ಹಳೆಯ ವಿಷಯಗಳನ್ನು ನೆನಪಿಸಿಕೊಂಡು ದುಃಖ ಪಡುವುದು ಸರಿಯಲ್ಲ. ಬಿಳಿ ಬಣ್ಣ ನಿಮಗೆ ಅದೃಷ್ಟವನ್ನು ತರುವುದು.

ಕನ್ಯಾ: ದೀರ್ಘಕಾಲಿಕ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. ಹಳೇ ಬಾಕಿ ಸಂದಾಯವಾಗುವುದು. ಶತ್ರುಗಳ ಮತ್ತು ಸಾಲ ಕೇಳುವವರ ಬಲೆಗೆ ಬೀಳದಂತೆ ಈ ದಿನ ಎಚ್ಚರವಹಿಸಬೇಕು. ದೇಹದಲ್ಲಿ ಪಿತ್ತ ಅಧಿಕವಾಗಬಹುದು.

ತುಲಾ: ಮನಶಾಸ್ತ್ರಜ್ಞರಿಗೆ ಬೇಡಿಕೆ ಹೆಚ್ಚಾಗುವುದು. ಸಂಘ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಸ್ವಯಂ ಪ್ರೇರಿತರಾಗಿ ಅಧಿಕ ಕೆಲಸ ಅಥವಾ ಹಣಕಾಸಿನ ಜವಾಬ್ದಾರಿ ತೆಗೆದುಕೊಳ್ಳುವುದು ಸಮಸ್ಯೆಯನ್ನು ಎಳೆದುಕೊಂಡಂತಾಗುತ್ತದೆ.

ವೃಶ್ಚಿಕ: ಎಲ್ಲಾ ಕಿರಿ ಕಿರಿಗಳನ್ನೂ, ತೊಂದರೆ ತಾಪತ್ರಯಗಳನ್ನೂ ಶಾಂತ ರೀತಿಯಿಂದ ಎದುರಿಸುವಿರಿ. ಎಂತಹ ದುಃಸ್ಥಿತಿಯಿಂದಲೂ ಹೊರಬರುವ ಸಾಮರ್ಥ್ಯ ನಿಮ್ಮಲ್ಲಿದೆ. ಯಾವ ಪರಿಸ್ಥಿತಿಗೂ ಹೆದರುವ ಅವಶ್ಯಕತೆ ಇರುವುದಿಲ್ಲ.

ಧನು: ತೀರ್ಮಾನಗಳು ಇನ್ನೊಬ್ಬರ ಮನಸ್ಸಿಗೆ ಅಥವಾ ಅವರ ಭಾವನೆಗೆ ನೋವಾಗದಂತಿರಲಿ. ಪೊಲೀಸ್ ಅಧಿಕಾರಿಗಳಿಗೆ ಸಿಬ್ಬಂದಿ ವರ್ಗದವರಿಂದ ಮತ್ತು ಸಾರ್ವಜನಿಕರಿಂದ ಹೆಚ್ಚಿನ ಸಹಕಾರ ದೊರೆಯಲಿದೆ.

ಮಕರ: ಷೇರು ವ್ಯವಹಾರದಲ್ಲಿ ಹೆಚ್ಚಿನ ಗಳಿಕೆ ಮಾಡುವಿರಿ. ಆಫೀಸಿನ ವಿಷಯದಂತೆ ಮನೆಯ ವಿಷಯಗಳ ಕಡೆಗೂ ಈ ದಿನ ಹೆಚ್ಚಿನ ಗಮನವಹಿಸಿ. ಬರಹಗಾರರಿಗೆ ವೃತ್ತಿಯಲ್ಲಿ ಅಡಚಣೆ ಉಂಟಾಗಬಹುದು.

ಕುಂಭ: ನಿಷ್ಫಲ ವಿಚಾರದಲ್ಲಿ ಸಮಯಹರಣವೂ, ಕೀರ್ತಿಹಾನಿಯು ಸಂಭವಿಸಲಿದೆ. ಇಂದು ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ ನಿಮ್ಮಲ್ಲಿದೆ.

ಮೀನ: ಆಭರಣಗಳ ಖರೀದಿ, ಸತ್ಕಾರ್ಯದಲ್ಲಿ ಆಸಕ್ತಿ, ಬಂಧು- ಬಾಂಧವರ ಸಹಾಯ ಮೊದಲಾದ ಸತ್ಫಲವನ್ನು ಕಾಣಬಹುದು. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣದಲ್ಲಿ ಇರುವುದು.

ಷೇರುಪೇಟೆ ವಹಿವಾಟು 364



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,545
ಇಂದಿನ ಅಂತ್ಯ	19,653
▲	108
ದಿನದ ಗರಿಷ್ಠ	19,675

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1650)
ಸೋಯಾ (ರಿಫೈನ್ಡ್)	₹860 (865)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹805 (810)

ವಿನಿಮಯ ದರ

$ ಡಾಲರ್	83.23
£ ಪೌಂಡ್	101.58
€ ಯುರೊ	87.85
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-8565
ಕೆ ಆರ್ ಪೇಟೆ	₹8050-8050
ತಿಪಟೂರು	₹7200-8706
ತುಮಕೂರು	₹7250-8450
ತುರುವೇಕೆರೆ	₹8500-8500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹319-495
ದ್ವಿತಳಿ (ಬಿ.ವಿ)	₹333-600

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹10800
ಎಸಿ	₹6300
ಆರ್‌ಪಿ	₹9400
ಆರ್‌ಸಿ	₹5830

ಉಕ್ಕು ದರ ಏರಿಕೆ ಸಂಭವ

ನವದೆಹಲಿ (ರಾಯಿಟರ್ಸ್): ಉಕ್ಕು ಉದ್ಯಮದಲ್ಲಿ ಬಳಸುವ ಕೋಕಿಂಗ್ ಕಲ್ಲಿದ್ದಲು ದರ ಏರಿಕೆ ಆಗಿರುವುದರಿಂದ ಭಾರತದ ಕಂಪನಿಗಳು ಉಕ್ಕು ಬೆಲೆಯನ್ನು ಹೆಚ್ಚಿಸುವ ಆಲೋಚನೆ ನಡೆಸಿವೆ ಎಂದು ದೇಶಿ ಕಾರ್ಖಾನೆಗಳ ಅಧಿಕಾರಿಗಳು ಹೇಳಿದ್ದಾರೆ.

ಡಿಸೆಂಬರ್ ವೇಳೆಗೆ ಪ್ರತಿ ಟನ್‌ಗೆ ₹2,075ರಿಂದ ₹4,150ರವರೆಗೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನ ಮೇಲೆ ಅಧಿಕಾರಿಗಳು ತಿಳಿಸಿದ್ದಾರೆ.

ಆಸ್ಟ್ರೇಲಿಯಾದ ಕೋಕಿಂಗ್ ಕಲ್ಲಿದ್ದಲು ದರ ಶೇ 50ರಷ್ಟು ಏರಿಕೆ ಕಂಡಿದ್ದು ಪ್ರತಿ ಟನ್‌ಗೆ ₹29,050ಕ್ಕೆ ತಲುಪಿದೆ. ನಿರ್ವಹಣಾ ವೆಚ್ಚ, ಕ್ವೀನ್ಸ್‌ಲ್ಯಾಂಡ್‌ನಿಂದ ಪೂರೈಕೆ ಕಡಿಮೆ ಆಗಿರುವುದು ಸೇರಿದಂತೆ ಹಲವು ಕಾರಣಗಳಿಂದಾಗಿ ದರ ಏರಿಕೆ ಆಗಿದೆ ಎಂದು ಲಂಡನ್‌ನ ಸಂಶೋಧನಾ ಸಂಸ್ಥೆ ಸಿಆರ್‌ಯುನ ವಿಶ್ಲೇಷಕ ಬನ್ಮೀತ್ ಖುರ್ಮಿ ತಿಳಿಸಿದ್ದಾರೆ.

ಭಾರತವು ಆಮದು ಮಾಡಿಕೊಳ್ಳುತ್ತಿರುವ ಕೋಕಿಂಗ್ ಕಲ್ಲಿದ್ದಲಿನಲ್ಲಿ ವಾರ್ಷಿಕ 5.5 ಕೋಟಿ ಟನ್‌ನಿಂದ 6 ಕೋಟಿ ಟನ್‌ನಷ್ಟು ಆಸ್ಟ್ರೇಲಿಯಾದಿಂದ ತರಿಸಿಕೊಳ್ಳುತ್ತಿದೆ. ರಷ್ಯಾ ಮತ್ತು ಅಮೆರಿಕದಿಂದಲೂ ಭಾರತಕ್ಕೆ ಆಮದಾಗುತ್ತಿದೆ.

ಕೆಲವು ಉಕ್ಕು ಕಂಪನಿಗಳು ಈಗಾಗಲೇ ಕೆಲವು ವಿಧದ ಉಕ್ಕಿನ ಬೆಲೆಯ ಹೆಚ್ಚಿಸಲು ಆರಂಭಿಸಿವೆ. ಕಾರುಗಳಲ್ಲಿ ಬಳಸುವ ಉಕ್ಕಿನ ಬೆಲೆಯೂ ಏರಿಕೆ ಕಾಣುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಶೇ 4ಕ್ಕೆ ತಗ್ಗಿಸುವತ್ತ ಹೆಚ್ಚಿನ ಗಮನ: ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್

ಹಣದುಬ್ಬರದ ಆತಂಕ: ಬಡ್ಡಿದರ ಬದಲಿಲ್ಲ

ಮುಂಬೈ (ಪಿಟಿಐ): ಆರ್ಥಿಕ ತಜ್ಞರು, ಮಾರುಕಟ್ಟೆ ನಿರೀಕ್ಷೆಯಂತೆಯೇ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಡ್ಡಿದರವನ್ನು ಯಥಾಸ್ಥಿತಿಯಲ್ಲಿಯೇ ಉಳಿಸಿಕೊಂಡಿದೆ. ಇದರಿಂದಾಗಿ ಗೃಹ, ವಾಹನ ಮತ್ತು ಇತರೆ ಸಾಲಗಳ ಮೇಲಿನ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳಲು ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯರು ಶುಕ್ರವಾರ ಸರ್ವಾನುಮತದ ಒಪ್ಪಿಗೆ ನೀಡಿದ್ದಾರೆ. 'ಹೊಂದಾಣಿಕೆಯ ಹಣಕಾಸು ನೀತಿಯನ್ನು ಹಿಂಪಡೆಯುವ' ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡದಿರಲು ಸಹ ಸಮಿತಿ ನಿರ್ಧರಿಸಿದೆ.

'ಹಣದುಬ್ಬರ ಪ್ರಮಾಣ ಗರಿಷ್ಠ ಮಟ್ಟದಲ್ಲಿ ಇರುವುದು ಆರ್ಥಿಕ ಸ್ಥಿರತೆ ಮತ್ತು ಸುಸ್ಥಿರ ಬೆಳವಣಿಗೆಗೆ ದೊಡ್ಡ ಅಪಾಯ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಹಣದುಬ್ಬರವನ್ನು ಶೇ 4ರಲ್ಲಿ ನಿಯಂತ್ರಿಸುವತ್ತ ಗಮನ ಹರಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.


ಶಕ್ತಿಕಾಂತ ದಾಸ್ –ಪಿಟಿಐ ಚಿತ್ರ

'ಮುಂಗಾರು ಮಳೆಯು ವಾಡಿಕೆಗಿಂತಲೂ ಕಡಿಮೆ ಆಗಿರುವುದು ಹಾಗೂ ಬಿತ್ತನೆ ಇಳಿಮುಖ ಆಗಿರುವುದು ಮುಂಗಾರು ಬೆಳೆಗಳ ಉತ್ಪಾದನೆ ಮತ್ತು ದರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಆಹಾರ ಹಣದುಬ್ಬರವನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕಿದೆ' ಎಂದು ದಾಸ್ ಅಭಿಪ್ರಾಯಪಟ್ಟಿದ್ದಾರೆ.

'ತರಕಾರಿಗಳ ಬೆಲೆ ಇಳಿಕೆ ಆಗಿರುವುದು ಮತ್ತು ಎಲ್‌ಪಿಜಿ ದರ ಕಡಿತ ಮಾಡಿರುವುದರಿಂದಾಗಿ ಅಲ್ಪಾವಧಿಯಲ್ಲಿ ಹಣದುಬ್ಬರ ತಗ್ಗುವ ನಿರೀಕ್ಷೆ ಇದೆ. ಮುಂಬರುವ ದಿನಗಳಲ್ಲಿ ಹಲವು ಅಂಶಗಳು ಹಣದುಬ್ಬರದ ಪ್ರಮಾಣವನ್ನು ನಿರ್ಧರಿಸಲಿವೆ. ಪ್ರಸಕ್ತ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರವು ಶೇ 6ಕ್ಕಿಂತಲೂ ಕೆಳಕ್ಕೆ ಮತ್ತು ಮುಂದಿನ ತ್ರೈಮಾಸಿಕದಲ್ಲಿ ಶೇ 5.2ಕ್ಕೆ ಇಳಿಕೆ ಕಾಣುವ ಸಾಧ್ಯತೆ ಇದೆ' ಎಂದಿದ್ದಾರೆ.

ಪ್ರಮುಖ ಅಂಶಗಳು

- ಪ್ರಸಕ್ತ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆ ಅಂದಾಜಿನಲ್ಲಿ (ಶೇ 6.5) ಬದಲಿಲ್ಲ
- 2023–24ಕ್ಕೆ ಹಣದುಬ್ಬರದ ಮುನ್ನೋಟ ಶೇ 5.4ರಲ್ಲೇ ಉಳಿಸಿಕೊಳ್ಳಲಾಗಿದೆ.
- ತರಕಾರಿಗಳ ಬೆಲೆ ಇಳಿಕೆ, ಎಲ್‌ಪಿಜಿ ದರ ಕಡಿತದಿಂದ ಹಣದುಬ್ಬರ ಇಳಿಮುಖ

ಹಬ್ಬದ ಋತುವಿನಲ್ಲಿ ರೆಪೊ ದರ ಸ್ಥಿರವಾಗಿ ಇದ್ದರೆ ಆರ್ಥಿಕತೆಗೆ ವರವಾಗಿ ಪರಿಣಮಿಸಲಿದೆ. ಜನರ ಖರೀದಿ ಸಾಮರ್ಥ್ಯವನ್ನು ಇದು ಹೆಚ್ಚಿಸಲಿದೆ
ರಾಜೀವ್ ಕಪೂರ್, ಸ್ಟೀಲ್‌ಬರ್ಡ್ ಹೆಲ್ಮೆಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ

ಬಡ್ಡಿದರ ಸ್ಥಿರವಾಗಿದ್ದರೆ ವಿದ್ಯುತ್ ಚಾಲಿತ ವಾಹನ ಸಾಲ ಪಡೆಯುವುದರ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಜನರನ್ನು ಇ.ವಿ. ಖರೀದಿಸುವಂತೆ ಉತ್ತೇಜಿಸಲಿದೆ
ಆಯುಷ್ ಲೋಹಿಯಾ, ಲೋಹಿಯಾ ಆಟೊ ಇಂಡಸ್ಟ್ರೀಸ್‌ನ ಸಿಇಒ

ಮುಂದಿನ ವರ್ಷದ ಮೊದಲ ತ್ರೈಮಾಸಿಕದಲ್ಲಿ ರೆಪೊ ದರ ಇಳಿಕೆ ಆಗುವ ನಿರೀಕ್ಷೆ ಇದೆ
ಮದನ್ ಸಬ್ನವಿಸ್, ಬ್ಯಾಂಕ್ ಆಫ್ ಬರೋಡದ ಮುಖ್ಯ ಆರ್ಥಿಕ ತಜ್ಞ

ಚಿನ್ನದ ಸಾಲದ ಮಿತಿ ₹4 ಲಕ್ಷಕ್ಕೆ ಹೆಚ್ಚಳ

ನಗರ ಸಹಕಾರ ಬ್ಯಾಂಕ್‌ಗಳಲ್ಲಿ ಬುಲೆಟ್ ರಿಪೇಮೆಂಟ್ ಯೋಜನೆಯಡಿ ಪಡೆಯುವ ಚಿನ್ನದ ಸಾಲದ ಮಿತಿಯನ್ನು ₹2 ಲಕ್ಷದಿಂದ ₹4 ಲಕ್ಷಕ್ಕೆ ಹೆಚ್ಚಿಸಲು ನಿರ್ಧಾರ ಮಾಡಿರುವುದಾಗಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಶುಕ್ರವಾರ ತಿಳಿಸಿದ್ದಾರೆ.

2023ರ ಮಾರ್ಚ್ 31ರ ಅಂತ್ಯಕ್ಕೆ ಆದ್ಯತಾ ವಲಯದ ಸಾಲ ನೀಡಿಕೆಯ ಗುರಿಯನ್ನು ತಲುಪಿರುವ ಸಹಕಾರಿ ಬ್ಯಾಂಕ್‌ಗಳಿಗೆ ಮಾತ್ರವೇ ಇದು ಅನ್ವಯಿಸಲಿದೆ ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ.

ಏನಿದು ಯೋಜನೆ: ಸಾಮಾನ್ಯವಾಗಿ ಚಿನ್ನದ ಸಾಲ ಅಥವಾ ಇನ್ಯಾವುದೇ ವಿಧದ ಸಾಲ ಪಡೆದರೆ ಅದನ್ನು ಕಂತುಗಳ ಮೂಲಕ (ಇಎಂಐ) ಪಾವತಿ ಮಾಡಲಾಗುತ್ತದೆ. ಆದರೆ, ಈ ಯೋಜನೆಯಡಿ ಚಿನ್ನದ ಸಾಲ ಪಡೆದವರು, ಮೂಲ ಮೊತ್ತ ಮತ್ತು ಬಡ್ಡಿ ಮೊತ್ತವನ್ನು ಸಾಲದ ಅವಧಿ ಮುಗಿಯುವ ವೇಳೆಗೆ ಪಾವತಿಸುವ ಅವಕಾಶ ನೀಡಲಾಗಿದೆ.

ಪಿಐಡಿಎಫ್ ವ್ಯಾಪ್ತಿಗೆ ಪಿಎಂ ವಿಶ್ವಕರ್ಮ: ಪಾವತಿ ಮೂಲಸೌಕರ್ಯ ಅಭಿವೃದ್ಧಿ ನಿಧಿಯ (ಪಿಐಡಿಎಫ್) ವ್ಯಾಪ್ತಿಗೆ ಪಿಎಂ ವಿಶ್ವಕರ್ಮ ಯೋಜನೆಯನ್ನು ತರಲು ಆರ್‌ಬಿಐ ನಿರ್ಧರಿಸಿದೆ. ಕುಶಲಕರ್ಮಿಗಳಿಗೆ ಅಡಮಾನರಹಿತವಾಗಿ ಶೇ 5ರ ಬಡ್ಡಿದರದಲ್ಲಿ ₹3 ಲಕ್ಷದವರೆಗೆ ಸಾಲ ಸೌಲಭ್ಯ ಒದಗಿಸುವ ಯೋಜನೆಯೇ ಪಿಎಂ ವಿಶ್ವಕರ್ಮ.

ಪಿಐಡಿಎಫ್ ಯೋಜನೆಯ ಅವಧಿಯನ್ನು 2025ರ ಡಿಸೆಂಬರ್ 31ರವರೆಗೆ ವಿಸ್ತರಿಸುವ ನಿರ್ಧಾರವನ್ನು ಸಹ ತೆಗೆದುಕೊಂಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2400-2700
ಮಧ್ಯಮ	₹2000-2400
ಸಣ್ಣ	₹1500-2000

ಮುಂಬೈ ಧಾರಣೆ

ಶೇಂಗಾ 06-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1660)
ಒಂದು ವಾರದ ಡೆಲಿವರಿ	1655 (1655)
ಸೋಯಾ ಕಚ್ಚಾ	820 (820)
ಪಾಮ್ ವಾರದ ಡೆಲಿವರಿ	803 (808)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,450 (56,250)
ಬೆಳ್ಳಿ ಕೆ.ಜಿ 67,300 (67,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ನಿಧನ

ಶ್ರೀಮತಿ ಆರ್. ಸುಶೀಲರವರು
ಕೆ.ಎಸ್. ಶಿವರಾಜುರವರ ಧರ್ಮಪತ್ನಿರವರು ಅಕ್ಟೋಬರ್ 6 ರಂದು ನಿಧನರಾಗಿದ್ದಾರೆ. ಇವರ ಅಂತ್ಯಕ್ರಿಯೆಯು ಶನಿವಾರ ಅಕ್ಟೋಬರ್ 7 ರಂದು ಚಾಮರಾಜಪೇಟೆ ಟಿ.ಆರ್.ಮಿಲ್ ರುದ್ರಭೂಮಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನೆರವೇರಿಸಲಾಗುವುದು.
ಇಂತಿ ದುಃಖ ತಪ್ತರು
ಕೆ.ಎಸ್. ಶಿವರಾಜು ಮತ್ತು ಕುಟುಂಬ ವರ್ಗದವರು

ಕಲ್ಯಾಣ್ ಜುವೆಲರ್ಸ್: 33 ಹೊಸ ಮಳಿಗೆ

ಮುಂಬೈ (ಪಿಟಿಐ): ಕಲ್ಯಾಣ್ ಜುವೆಲರ್ಸ್ ಕಂಪನಿಯು ದೀಪಾವಳಿ ಹಬ್ಬಕ್ಕೂ ಮೊದಲೇ ದೇಶದಾದ್ಯಂತ ಒಟ್ಟು 33 ಹೊಸ ಮಳಿಗೆಗಳನ್ನು ತೆರೆಯುವುದಾಗಿ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಹೊಸ ಮಳಿಗೆಗಳ ಒಟ್ಟು ಸಂಖ್ಯೆಯು 51ಕ್ಕೆ ತಲುಪಲಿದೆ ಎಂದು ಷೇರುಪೇಟೆಗೆ ತಿಳಿಸಿದೆ. 2023–24ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಭಾರತದ ಕಾರ್ಯಾಚರಣೆಯಿಂದ ಬರುವ ವರಮಾನವು ಹಿಂದಿನ ಅವಧಿಗೆ ಹೋಲಿಸಿದರೆ ಶೇ 32ರಷ್ಟು ಹೆಚ್ಚಾಗಿದೆ ಎಂದು ಕಂಪನಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹಳತು	46000-48500
ಬೆಂಗಳೂರು	
ಇತರೆ	55000-60000
ಹೊಸನಗರ	
ಬಿಳಿಗೋಟು	20899-26599
ಚಾಲಿ	30899-36599
ಕೆಂಪುಗೋಟು	24899-34629
ರಾಶಿ	42899-47379
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	32019-34599
ಕೋಕ	10199-24699
ಫ್ಯಾಕ್ಟರಿ	10199-24699
ಹಳೆಚಾಲಿ	39999-40409
ಹೊಸಚಾಲಿ	37609-40019
ಪುತ್ತೂರು	
ಹೊಸತು	34000-45000
ಸಾಗರ	
ಸಿಪ್ಪೆಗೋಟು	13000-13000
ಶಿವಮೊಗ್ಗ	
ಗೊರಬಲು	17009-37158
ಹೊಸತು	41839-46599
ರಾಶಿ	39811-49100
ಸರಕು	50103-82800
ಸಿದ್ದಾಪುರ	
ಬಿಳಿಗೋಟು	32109-34709
ಚಾಲಿ	37819-40340
ಕೋಕ	30899-33699
ಕೆಂಪುಗೋಟು	32019-33012
ರಾಶಿ	43909-47700

ಆಧಾರರಹಿತ ಸಾಲ: ಆರ್‌ಬಿಐ ಕಳವಳ

ಮುಂಬೈ (ಪಿಟಿಐ): ಆಧಾರರಹಿತವಾಗಿ ನೀಡುವ ಸಾಲದ ಪ್ರಮಾಣ ಏರಿಕೆ ಆಗುತ್ತಿರುವುದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಆತಂಕ ವ್ಯಕ್ತಪಡಿಸಿದೆ. ಹಣಕಾಸು ಅಸ್ಥಿರತೆಗೆ ಇದು ಕಾರಣವಾಗಬಹುದು ಎಂದೂ ಹೇಳಿದೆ.

ಕಳೆದ ಎರಡು ವರ್ಷಗಳಲ್ಲಿ ಆಧಾರರಹಿತವಾಗಿ ರಿಟೇಲ್ ಸಾಲ ನೀಡಿಕೆಯು ಶೇ 23ರಷ್ಟು ಹೆಚ್ಚಳ ಕಂಡಿದೆ. ಆದರೆ, ಒಟ್ಟು ಸಾಲ ನೀಡಿಕೆಯಲ್ಲಿ ಶೇ 12–14ರವರೆಗೆ ಏರಿಕೆ ಆಗಿದೆ. ಹೀಗಾಗಿ ಈ ಬಗ್ಗೆ ಆರ್‌ಬಿಐ ಹೆಚ್ಚು ಗಮನ ಹರಿಸುವಂತೆ ಆಗಿದೆ ಎಂದು ಎಂದು ಆರ್‌ಬಿಐನ ಡೆಪ್ಯುಟಿ ಗವರ್ನರ್ ಜೆ. ಸ್ವಾಮಿನಾಥನ್ ತಿಳಿಸಿದ್ದಾರೆ.

ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಫಿನ್‌ಟೆಕ್‌ಗಳು ತಮ್ಮ ಆಂತರಿಕ ನಿಗಾ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳಬೇಕು. ಈ ಬಗ್ಗೆ ಆರ್‌ಬಿಐ ಪರಿಶೀಲನೆ ನಡೆಸಲಿದೆ ಎಂದು ಅವರು ಹೇಳಿದ್ದಾರೆ.

ಕೆಲವು ವೈಯಕ್ತಿಕ ಸಾಲ ನೀಡಿಕೆಯಲ್ಲಿ ಭಾರಿ ಪ್ರಮಾಣದ ಏರಿಕೆ ಕಂಡಿದೆ. ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಭೆಯ ಬಳಿಕ ನಡೆದ ಸುದ್ದಿಗೋಷ್ಠಿಯ ಹೇಳಿದ್ದಾರೆ.

ಮುಖ್ಯಾಂಶಗಳು

- ಆಂತರಿಕ ನಿಗಾ ವ್ಯವಸ್ಥೆ ಬಲಪಡಿಸಲು ಬ್ಯಾಂಕ್‌ಗಳಿಗೆ ಸೂಚನೆ
- ಸದ್ಯದ ಮಟ್ಟಿಗೆ ಬ್ಯಾಂಕಿಂಗ್ ವ್ಯವಸ್ಥೆ ಸ್ಥಿರ: ದಾಸ್

ಭವಿಷ್ಯದಲ್ಲಿ ಎದುರಾಗಬಹುದಾದ ಅಪಾಯದ ಬಗ್ಗೆ ಸಾಲದಾತರು ಬಹಳ ಎಚ್ಚರಿಕೆಯಿಂದ ಇರಬೇಕು. ಎಲ್ಲಿಂದ ಬಿಕ್ಕಟ್ಟು ಎದುರಾಗಬಹುದು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು ಎಂದು ದಾಸ್ ಸಲಹೆ ನೀಡಿದ್ದಾರೆ.

ಕ್ರೆಡಿಟ್ ಕಾರ್ಡ್, ವೈಯಕ್ತಿಕ ಸಾಲ ಮತ್ತು ಮೈಕ್ರೊಫೈನಾನ್ಸ್ ಮೂಲಕ ಆಧಾರರಹಿತ ಸಾಲ ನೀಡಿಕೆಯಲ್ಲಿ ಭಾರಿ ಏರಿಕೆ ಕಂಡುಬರುತ್ತಿದೆ. ಹೀಗಾಗಿ ಯಾವುದೇ ರೀತಿಯಲ್ಲಿ ಆದರೂ ಅಪಾಯಗಳು ಎದುರಾಗಬಹುದೇ ಎಂದು ಹಣಕಾಸು ಸಂಸ್ಥೆಗಳು ಆರಂಭಿಕ ಹಂತದಲ್ಲಿಯೇ ಪರಿಶೀಲನೆ ನಡೆಸಬೇಕು ಎಂದು ಸ್ವಾಮಿನಾಥನ್ ತಿಳಿಸಿದ್ದಾರೆ.

ಸದ್ಯದ ಮಟ್ಟಿಗೆ ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳ ಆರ್ಥಿಕ ಸ್ಥಿತಿಯು ಸ್ಥಿರವಾಗಿದೆ. ಜೂನ್ ತ್ರೈಮಾಸಿಕದಲ್ಲಿ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಇಳಿಕೆ ಕಂಡಿದೆ ಎಂದು ದಾಸ್ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

ವ್ಯಾಪಾರ

Business to Business

Others

ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

25.10.2023, 26.11.2023, ದೆಹಲಿ, ಹರಿದ್ವಾರ್, ಅಯೋದ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್25.11.2023 ರಾಜಸ್ಥಾನ್ ಪ್ರವಾಸ 3.12.2023 ಗುಜರಾತ್, ಮಧ್ಯಪ್ರದೇಶ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಶಿವನಂದಿ ಟ್ರಾವೆಲ್ಸ್, ಹನುಮಂತನಗರ, ಬೆಂಗಳೂರು.ಕಾಶಿಯಾತ್ರ ವಿಮಾನದಲ್ಲಿ 10ದಿನ 30.10.2023ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ವಾರಾಣಸಿ,ಪ್ರಯಾಗ್ ರಾಜ್. 9036056352, 9481027363.

27.10.2023 ನಿಗದಿತ ಪ್ರವಾಸ ಮೂರುಜ್ಯೋತಿರ್ಲಿಂಗ ದರ್ಶನದೊಂದಿಗೆ ಶಿರಡಿ ವಿಮಾನ ಪ್ರವಾಸ 15,500/-. 31.10.2023 ಕನ್ನಡ ಭುವನಗಿರಿ ಪ್ರವಾಸ. ಅನುಗ್ರಹಯಾತ್ರ. 9880079351

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/10 ಶಿರಡಿ, ಪಂಡರಪುರ ಪ್ಯಾಕೇಜ್. 6/11 ಕಾಶಿ ಪ್ಯಾಕೇಜ್. 16/11 ದೆಹಲಿ, ವೈಷ್ಣೋದೇವಿ ಪ್ಯಾಕೇಜ್.9591017782,9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ನೀವು ನಿಮ್ಮ ಮನೆ/ಸೈಟ್ ಮಾರಾಟ/ ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಫುಟ್‌ಬಾಲ್ ಮ್ಯಾಚ್ ಫಿಕ್ಸಿಂಗ್: ಕ್ಲಬ್‌ಗಳ ಮೇಲೆ ಅನುಮಾನ

ಬೆಂಗಳೂರು: 'ಇಂಡಿಯನ್ ಸೂಪರ್ ಲೀಗ್' ಫುಟ್‌ಬಾಲ್ ಪಂದ್ಯಾವಳಿಯಲ್ಲಿ ನಡೆದಿದೆ ಎನ್ನಲಾದ ಮ್ಯಾಚ್ ಫಿಕ್ಸಿಂಗ್ ಪ್ರಕರಣದ ಬಗ್ಗೆ ಸಿಸಿಬಿ ಪೊಲೀಸರು ತನಿಖೆ ನಡೆಸುತ್ತಿದ್ದು, ಎರಡು ಕ್ಲಬ್‌ಗಳ ಸದಸ್ಯರು ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನ ವ್ಯಕ್ತವಾಗಿದೆ.

'ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆದಿರುವ ಮಾಹಿತಿ ಇದೆ. ಪರಿಶೀಲಿಸಿ, ಕಾನೂನು ಕ್ರಮ ಜರುಗಿಸಿ' ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಉಪಾಧ್ಯಕ್ಷರೂ ಆಗಿರುವ ಶಾಸಕ ಎನ್.ಎ. ಹ್ಯಾರಿಸ್ ಅವರು ಪೊಲೀಸ್ ಕಮಿಷನರ್‌ಗೆ ಇತ್ತೀಚೆಗೆ ದೂರು ನೀಡಿದ್ದರು. ದೂರಿನನ್ವಯ ಸಿಸಿಬಿ ಪೊಲೀಸರ ತಂಡ ತನಿಖೆ ಆರಂಭಿಸಿದೆ.

'ಮ್ಯಾಚ್ ಫಿಕ್ಸಿಂಗ್ ಸಂಬಂಧ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಯಾವ ರೀತಿ ಮ್ಯಾಚ್ ಫಿಕ್ಸಿಂಗ್ ನಡೆದಿದೆ? ಹಾಗೂ ಯಾರೆಲ್ಲ ಭಾಗಿಯಾಗಿರುವ ಅನುಮಾನವಿದೆ? ಎಂಬುದರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಎರಡು ಕ್ಲಬ್‌ಗಳ ಆಟಗಾರರು ಹಾಗೂ ಸದಸ್ಯರು, ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಿರುವ ಅನುಮಾನ ದಟ್ಟವಾಗಿದೆ. ಈ ಸಂಬಂಧ ಸೂಕ್ತ ಪುರಾವೆಗಳು ಸಿಗುತ್ತಿದ್ದಂತೆ, ಆಟಗಾರರು ಹಾಗೂ ಸದಸ್ಯರನ್ನು ವಿಚಾರಣೆಗೆ ಒಳಪಡಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

'ಕ್ಲಬ್‌ವೊಂದರ ಆಟಗಾರರು ಆಡಿದ್ದ ಪಂದ್ಯವೊಂದರಲ್ಲಿ ಗೆಲ್ಲುವ ಅವಕಾಶವಿತ್ತು. ಆದರೆ, ಆಟಗಾರರು ಸುಲಭವಾಗಿ ಸೋತಿದ್ದರು. ಈ ಬಗ್ಗೆ ಆಂತರಿಕ ವಿಚಾರಣೆ ನಡೆಸಿದಾಗ, ಮ್ಯಾಚ್ ಫಿಕ್ಸಿಂಗ್ ಮಾಹಿತಿ ಲಭ್ಯವಾಗಿರುವುದಾಗಿ ದೂರುದಾರರು ತಿಳಿಸಿದ್ದಾರೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಫುಟ್‌ಬಾಲ್: ರೆಬೆಲ್ಸ್‌ಗೆ ಜಯ

ಬೆಂಗಳೂರು: ಸುರೇಜ್ ಗುರುಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ರೆಬೆಲ್ಸ್ ಎಫ್‌ಸಿ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 6–1ರಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ವಿರುದ್ಧ ಸುಲಭ ಗೆಲುವು ಸಾಧಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ ಪರ ಸುರೇಜ್ (43, 71, 74ನೇ ನಿ.), ಟಿ. ಅಮೋಸ್ (10, 68ನೇ), ಲಾಲ್ ಹ್ಯಯತ್ಪುಯಾ ಖಿಯಾಂಗ್ಟೆ (85) ಕ್ರಮವಾಗಿ ಮೂರು, ಎರಡು ಮತ್ತು ಒಂದು ಗೋಲು ಗಳಿಸಿದರು. ನಿಖಿಲ್ ಬನಿಯಾ (83ನೇ) ಯಂಗ್ ಚಾಲೆಂಜರ್ಸ್ ಪರ ಏಕೈಕ ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 1–1ರಿಂದ ಕೊಡಗು ಎಫ್‌ಸಿ ಜತೆ ಡ್ರಾ ಸಾಧಿಸಿತು.

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ತಾರಾ, ಆಯುಷ್

ನವದೆಹಲಿ: ಭಾರತದ ತಾರಾ ಶಾ ಮತ್ತು ಆಯುಷ್ ಶೆಟ್ಟಿ ಅಮೆರಿಕದಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಓಟ ಮುಂದುವರಿಸಿದ್ದು, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಆದರೆ, ಬಾಲಕರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ಶುಕ್ರವಾರ ನಡೆದ ಬಾಲಕರ ಸಿಂಗಲ್ಸ್‌ನ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಆಯುಷ್ ಶೆಟ್ಟಿ 21-16, 21-12 ರಿಂದ ಫಿಲಿಪ್ಪೀನ್ಸ್‌ನ ಜಮಾಲ್ ರಹಮತ್ ಅವರನ್ನು ಮಣಿಸಿದರೆ, ಬಾಲಕಿಯರ ಸಿಂಗಲ್ಸ್‌ನಲ್ಲಿ ತಾರಾ ಶಾ 21-8, 21-7 ರಿಂದ ಜೆಕ್ ಗಣರಾಜ್ಯದ ಲೂಸಿ ಕ್ರುಲೋವಾ ಅವರನ್ನು ಸೋಲಿಸಿ ಮುನ್ನಡೆದರು.

ಬಾಲಕರ ಡಬಲ್ಸ್ ಜೋಡಿ ದಿವ್ಯಂ ಅರೋರ ಮತ್ತು ಮಯಾಂಕ್ 12-21, 10-21 ರಿಂದ ಇಂಡೊನೇಷ್ಯಾದ ಮೊಹಮ್ಮದ್ ಅಲ್ ಫರಿಜಿ ಮತ್ತು ನಿಕೋಲಸ್ ಜೋಕ್ವಿನ್ ಜೋಡಿಗೆ ಹಾಗೂ ತುಷಾರ್ ಸುವೀರ್ ಮತ್ತು ನಿಕೊಲಸ್ ರಾಜ್ ಜೋಡಿಯು 14–21, 17–21ರಿಂದ ಮಲೇಷ್ಯಾದ ಬ್ರಿಯಾನ್ ಜೆರೆಮಿ ಗೂಂಟಿಂಗ್ ಮತ್ತು ಆರನ್ ತೈ ಜೋಡಿಗೆ ಮಣಿದರು.

ಮಿಶ್ರ ಡಬಲ್ಸ್‌ನಲ್ಲಿ ಸಾತ್ವಿಕ್ ರಾಜ್ ಮತ್ತು ವೈಷ್ಣವಿ ಖಡ್ಕೇಕರ್ 10-21, 20-22 ರಿಂದ ಇಂಡೊನೇಷ್ಯಾದ ಆಡ್ರಿಯನ್ ಪ್ರತಮ ಮತ್ತು ಫೆಲಿಶಾ ಅಲ್ಬೆರಾ ಅವರಿಗೆ, ಮತ್ತೊಂದು ಜೋಡಿ ಸಮರವೀರ್ ಮತ್ತು ರಾಧಿಕಾ ಶರ್ಮಾ 18-21, 17-21ರಿಂದ ಜಪಾನ್ ಕೆಂಟಾ ಮತ್ಸುಕಾವಾ ಮತ್ತು ನಾವೋ ಯಮಕಿತಾ ಅವರ ವಿರುದ್ಧ ಪರಾಭವಗೊಂಡರು.

ಭಾರತ– ಅಫ್ಗಾನ್ ಮುಖಾಮುಖಿ

ಏಷ್ಯನ್ ಕ್ರೀಡಾಕೂಟದ ಕ್ರಿಕೆಟ್ ಫೈನಲ್: ಚಿನ್ನದ ಪದಕಕ್ಕಾಗಿ ಇಂದು ಹಣಾಹಣಿ

ಹಾಂಗ್‌ಝೌ (ಪಿಟಿಐ): ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳು ಏಷ್ಯನ್ ಕ್ರೀಡಾಕೂಟದ ಟಿ20 ಕ್ರಿಕೆಟ್ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶ ವಿರುದ್ಧ 9 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ವಾಷಿಂಗ್ಟನ್ ಸುಂದರ್ (15ಕ್ಕೆ2) ಮತ್ತು ಸಾಯಿ ಕಿಶೋರ್ (12ಕ್ಕೆ3) ಅವರ ಅಮೋಘ ಬೌಲಿಂಗ್ ಮುಂದೆ ಬಾಂಗ್ಲಾದೇಶ ತಂಡಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 96 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಗುರಿ ಬೆನ್ನಟ್ಟಿದ ಭಾರತ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 64 ಎಸೆತಗಳು ಬಾಕಿಯಿರುವಾಗಲೇ ಜಯದ ಗಡಿ ಮುಟ್ಟಿತು. ಋತುರಾಜ್ ಗಾಯಕವಾಡ (ಅಜೇಯ 40; 26ಎ, 4X4, 6X3) ಮತ್ತು ತಿಲಕ್ ವರ್ಮಾ (ಅಜೇಯ 55; 26ಎ, 4X2, 6X6) ಮಿಂಚಿದರು.

ಅಫ್ಗಾನಿಸ್ತಾನ ಜಯಭೇರಿ: ಇನ್ನೊಂದು ಸೆಮಿಫೈನಲ್‌ನಲ್ಲಿ ಅಫ್ಗಾನಿಸ್ತಾನ ತಂಡವು 4 ವಿಕೆಟ್‌ಗಳಿಂದ ಪಾಕಿಸ್ತಾನ ತಂಡಕ್ಕೆ ಆಘಾತ ನೀಡಿತು.

ಟಾಸ್ ಗೆದ್ದ ಅಫ್ಗನ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಫರೀದ್ ಅಹಮದ್ (15ಕ್ಕೆ3), ಖೈಸ್ ಅಹಮದ್ (11ಕ್ಕೆ2) ಮತ್ತು ಝುಹೀರ್ ಖಾನ್ (20ಕ್ಕೆ2) ಅವರ ದಾಳಿಗೆ ಪಾಕ್ ತಂಡವು 18 ಓವರ್‌ಗಳಲ್ಲಿ 115 ರನ್ ಗಳಿಸಿ ಆಲೌಟ್ ಆಯಿತು. ಗುರಿ ಬೆನ್ನಟ್ಟಿದ ಅಫ್ಗನ್ ತಂಡವು ನೂರ್ ಅಲಿ ಝುದ್ರಾನ್ (39; 33ಎ) ಮತ್ತು ಗುಲ್ಬದೀನ್ ನೈಬ್ (26; 19ಎ) ಅವರ ನೆರವಿನಿಂದ ಗೆಲುವಿನ ಗುರಿ ಮುಟ್ಟಿತು. ಫೈನಲ್ ಪ್ರವೇಶಿಸಿತು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ಮತ್ತು ಅಫ್ಗಾನಿಸ್ತಾನ ಮುಖಾಮುಖಿಯಾಗಲಿವೆ.

ಹಾಂಗ್‌ಝೌನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದ ಪುರುಷರ ಟಿ20 ಕ್ರಿಕೆಟ್ ಸೆಮಿಫೈನಲ್‌ನಲ್ಲಿ ಅರ್ಧಶತಕ ಗಳಿಸಿದ ಭಾರತ ತಂಡದ ಆಟಗಾರ ತಿಲಕ್ ವರ್ಮಾ ಅವರು ತಮ್ಮ ತಂದೆ–ತಾಯಿಯ ಟ್ಯಾಟೂ (ಹಚ್ಚೆ) ಹಾಕಿಸಿಕೊಂಡಿರುವುದನ್ನು ಪ್ರದರ್ಶಿಸಿದರು. ಆ ಮೂಲಕ ಅರ್ಧಶತಕದ ಶ್ರೇಯವನ್ನು ಪಾಲಕರಿಗೆ ಸಮರ್ಪಿಸಿದರು –ಪಿಟಿಐ ಚಿತ್ರ

19th Asian Games Hangzhou 2022

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 96 (ಪರ್ವೇಜ್ ಹುಸೇನ್ ಇಮಾನ್ 23, ಜಾಕೀರ್ ಅಲಿ ಔಟಾಗದೆ 24, ರಕೀಬುಲ್ ಹಸನ್ 14, ವಾಷಿಂಗ್ಟನ್ ಸುಂದರ್ 15ಕ್ಕೆ2, ಸಾಯಿ ಕಿಶೋರ್ 12ಕ್ಕೆ3) ಭಾರತ: 9.2 ಓವರ್‌ಗಳಲ್ಲಿ 1 ವಿಕೆಟ್‌ಗೆ 97 (ಋತುರಾಜ್ ಗಾಯಕವಾಡ ಔಟಾಗದೆ 40, ತಿಲಕ್ ವರ್ಮಾ ಔಟಾಗದೆ 55, ರಿಪನ್ ಮಂಡಲ್ 26ಕ್ಕೆ1) ಫಲಿತಾಂಶ:ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ

ಪಾಕಿಸ್ತಾನ: 18 ಓವರ್‌ಗಳಲ್ಲಿ 115 (ಒಮರ್ ಯೂಸುಫ್ 24, ಅಮೀರ್ ಜಮಾಲ್ 14, ಫರೀದ್ ಅಹಮದ್ 15ಕ್ಕೆ3, ಖೈಸ್ ಅಹಮದ್ 11ಕ್ಕೆ2, ಝುಹೀರ್ ಖಾನ್ 20ಕ್ಕೆ2) ಅಫ್ಗಾನಿಸ್ತಾನ: 17.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 116 (ನೂರ್ ಅಲಿ ಝುದ್ರಾನ್ 39, ಅಫ್ಸರ್ ಝುಝೈ 13, ಗುಲ್ಬದೀನ್ ನಬಿ ಔಟಾಗದೆ 26, ಅರಾಫತ್ ಮಿನಾಸ್ 11ಕ್ಕೆ2, ಉಸ್ಮಾನ್ ಖಾದೀರ್ 20ಕ್ಕೆ2)
ಫಲಿತಾಂಶ: ಅಫ್ಗಾನಿಸ್ತಾನ ತಂಡಕ್ಕೆ 4 ವಿಕೆಟ್‌ಗಳ ಜಯ.

ಫೈನಲ್ ಪಂದ್ಯ
ಭಾರತ–ಅಫ್ಗಾನಿಸ್ತಾನ,
ಆರಂಭ: ಬೆಳಿಗ್ಗೆ 11.30
ಮೂರನೇ ಸ್ಥಾನಕ್ಕಾಗಿ ಪಂದ್ಯ
ಬಾಂಗ್ಲಾದೇಶ–ಪಾಕಿಸ್ತಾನ
ಆರಂಭ: ಬೆಳಿಗ್ಗೆ 6.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಕಬಡ್ಡಿ: ಸೆಮಿಯಲ್ಲಿ ಪಾಕ್, ನೇಪಾಳ ಎದುರು ಜಯ

ಫೈನಲ್‌ಗೆ ಭಾರತ ತಂಡಗಳ ಲಗ್ಗೆ

ಹಾಂಗ್‌ಝೌ (ಪಿಟಿಐ): ಎದುರಾಳಿಗಳನ್ನು ನಿರಾಯಾಸದಿಂದ ಮಣಿಸಿದ ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಏಷ್ಯನ್ ಕ್ರೀಡಾಕೂಟದ ಕಬಡ್ಡಿಯಲ್ಲಿ ಫೈನಲ್ ಪ್ರವೇಶಿಸಿದವು.

ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಪುರುಷರ ತಂಡ 61–14 ರಿಂದ ಪಾಕಿಸ್ತಾನ ವಿರುದ್ಧ ಗೆದ್ದರೆ, ಮಹಿಳೆಯರು 61–17 ರಿಂದ ನೇಪಾಳ ತಂಡವನ್ನು ಸೋಲಿಸಿದರು.

ಕೌಶಲ ಮತ್ತು ತಾಂತ್ರಿಕತೆಯಲ್ಲಿ ತಮಗಿಂತ ಸಾಕಷ್ಟು ಪ್ರಬಲವಾಗಿರುವ ಭಾರತ ತಂಡಕ್ಕೆ ಪೈಪೋಟಿ ನೀಡುವಲ್ಲಿ ಪಾಕಿಸ್ತಾನ ತಂಡ ವಿಫಲವಾಯಿತು. ಆಕ್ರಮಣಕಾರಿ ಆಟವಾಡಿದ ಭಾರತ, ವಿರಾಮದ ವೇಳೆಗೆ 30–5 ರಿಂದ ಮುನ್ನಡೆ ಸಾಧಿಸಿತ್ತು.

ಪವನ್ ಸೆಹ್ರಾವತ್ ಪಂದ್ಯದುದ್ದಕ್ಕೂ ಗಮನ ಸೆಳೆದರು. ಭಾರತ ತಂಡ ಎದುರಾಳಿಗಳನ್ನು ಮೂರು ಸಲ 'ಆಲೌಟ್' ಮಾಡಿತು.

ಭಾರತದ ಆಟಗಾರರು ಪಾಕಿಸ್ತಾನದ ರೇಡರ್ ತಹ್ಸೀನ್ ಉಲ್ಲಾ ಅವರನ್ನು ಔಟ್ ಮಾಡಿದ ಕ್ಷಣ –ಪಿಟಿಐ ಚಿತ್ರ

ಏಷ್ಯನ್ ಗೇಮ್ಸ್‌ನಲ್ಲಿ ಏಳು ಸಲ ಚಿನ್ನ ಜಯಿಸಿರುವ ಭಾರತ ಪುರುಷರ ತಂಡ, 2018ರ ಜಕಾರ್ತಾ ಕೂಟದಲ್ಲಿ ಕಂಚಿನ ಪದಕ ಗೆಲ್ಲಲಷ್ಟೇ ಯಶಸ್ವಿಯಾಗಿತ್ತು. ಈ ಬಾರಿ ಫೈನಲ್ ಪ್ರವೇಶಿಸಿದ್ದು, ಚಿನ್ನ ಅಥವಾ ಬೆಳ್ಳಿ ಪದಕ ಖಚಿತಪಡಿಸಿಕೊಂಡಿದೆ.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಇರಾನ್ ವಿರುದ್ಧ ಪೈಪೋಟಿ ನಡೆಸಲಿದೆ. ದಿನದ ಮತ್ತೊಂದು ನಾಲ್ಕರಘಟ್ಟದ ಹಣಾಹಣಿಯಲ್ಲಿ ಇರಾನ್ 47–24 ರಿಂದ ಚೀನಾ ತೈಪೆ ತಂಡವನ್ನು ಪರಾಭವಗೊಳಿಸಿತು.

ಮಹಿಳೆಯರ ವಿಭಾಗದಲ್ಲಿ ಕಳೆದ ಬಾರಿಯ 'ರನ್ನರ್ ಅಪ್' ಭಾರತ ತಂಡ ನೇಪಾಳ ತಂಡವನ್ನು ಐದು ಸಲ 'ಆಲೌಟ್' ಮಾಡಿ ಕ್ಷಿಪ್ರಗತಿಯಲ್ಲಿ ಪಾಯಿಂಟ್‌ಗಳನ್ನು ಪೇರಿಸಿತು. ಜಾರ್ಖಂಡ್‌ನ ಯುವ ಆಟಗಾರ್ತಿ ಅಕ್ಷಿಮಾ ಅವರು ರೇಡಿಂಗ್‌ನಲ್ಲಿ ಮಿಂಚಿದರು.

ಮಹಿಳೆಯರು ಚಿನ್ನದ ಪದಕಕ್ಕಾಗಿ ಚೀನಾ ತೈಪೆ ಜತೆ ಪೈಪೋಟಿ ನಡೆಸುವರು. ಮತ್ತೊಂದು ಸೆಮಿಯಲ್ಲಿ ಚೀನಾ ತೈಪೆ 35–24 ರಿಂದ ಇರಾನ್ ಎದುರು ಗೆದ್ದಿತು.

ಜಪಾನ್ ಮೇಲೆ 5–1 ಸುಲಭ ಜಯ • ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆದ ಹರ್ಮನ್‌ಪ್ರೀತ್ ಬಳಗ

ಹಾಕಿ ತಂಡದ ಆಟಕ್ಕೆ ಚಿನ್ನದ ಮೆರುಗು

ಹಾಂಗ್‌ಝೌ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಅವರ ದಿಟ್ಟ ನಾಯಕತ್ವದ ನೆರವಿನಿಂದ ಭಾರತ ತಂಡ ಏಷ್ಯನ್ ಕ್ರೀಡಾಕೂಟದ ಹಾಕಿ ಫೈನಲ್‌ನಲ್ಲಿ ಕಳೆದ ಸಲದ ಚಾಂಪಿಯನ್ ಜಪಾನ್ ತಂಡವನ್ನು ಶುಕ್ರವಾರ 5–1 ಗೋಲುಗಳಿಂದ ಸದೆಬಡಿದು ಸ್ವರ್ಣ ಪದಕ ಗೆದ್ದುಕೊಂಡಿತು. ಈ ಗೆಲುವಿನೊಡನೆ ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಗಿಟ್ಟಿಸಿತು.

ಏಷ್ಯನ್ ಗೇಮ್ಸ್ ಹಾಕಿಯಲ್ಲಿ ಇದು ಭಾರತಕ್ಕೆ ನಾಲ್ಕನೇ ಚಿನ್ನ. 9 ವರ್ಷಗಳ ಹಿಂದೆ, ದಕ್ಷಿಣ ಕೊರಿಯಾದ ಇಂಚಿಯಾನ್ ಕ್ರೀಡೆಗಳಲ್ಲಿ ಕೊನೆಯ ಬಾರಿ ಚಿನ್ನ ಗೆದ್ದುಕೊಂಡಿತ್ತು. 1966, 1998ರ ಕ್ರೀಡೆಗಳಲ್ಲೂ (ಎರಡೂ ಬಾರಿ ಬ್ಯಾಂಕಾಕ್) ಭಾರತ ಚಾಂಪಿಯನ್ ಆಗಿತ್ತು.

ಹರ್ಮನ್‌ಪ್ರೀತ್ 32ನೇ ಮತ್ತು 59ನೇ ನಿಮಿಷ ಎರಡು ಗೋಲುಗಳನ್ನು ಗಳಿಸಿದರು. ಅಮಿತ್ ರೋಹಿದಾಸ್ (36ನೇ ನಿಮಿಷ), ಮನ್‌ಪ್ರೀತ್ ಸಿಂಗ್ (25) ಮತ್ತು ಅಭಿಷೇಕ್ (48) ಉಳಿದ ಗೋಲುಗಳನ್ನು ಗಳಿಸಿ ಭಾರತಕ್ಕೆ ಅರ್ಹ ಗೆಲುವನ್ನು ಗಳಿಸಿಕೊಟ್ಟರು.

ಜಪಾನ್ ಪರ ಸೆರೆನ್ ತನಾಕ 51ನೇ ನಿಮಿಷ ಗೋಲು ಗಳಿಸಿದರು.

ಹರ್ಮನ್‌ಪ್ರೀತ್ ಈ ಟೂರ್ನಿಯಲ್ಲಿ 13 ಗೋಲುಗಳೊಡನೆ ಭಾರತದ ಪರ ಅತ್ಯಧಿಕ ಗೋಲುಗಳನ್ನು ಗಳಿಸಿದ ಗೌರವಕ್ಕೆ ಪಾತ್ರರಾದರು. ಇದು ಮನ್‌ದೀಪ್ ಸಿಂಗ್ (12) ಅವರಿಗಿಂತ ಒಂದು ಹೆಚ್ಚು. ಸ್ಪರ್ಧೆಯಲ್ಲಿ ಅಜೇಯ ಸಾಧನೆ ಪ್ರದರ್ಶಿಸಿದ ಭಾರತ ತಂಡವು, ಜಪಾನ್ ವಿರುದ್ಧ ಸುಧಾರಿತ ಆಟವಾಡಿತು. ಗುಂಪು ಹಂತದ ವೇಳೆ ಭಾರತ ಇದೇ ತಂಡದ ಮೇಲೆ 4–2 ಗೋಲುಗಳಿಂದ ಜಯ ಗಳಿಸಿತ್ತು.

ಭಾರತ ಎರಡೂ ಕಡೆಗಳಿಂದ ಪರಿಣಾಮಕಾರಿ ದಾಳಿ ನಡೆಸಿತು. ಲಾಂಗ್ ಪಾಸ್‌ಗಳನ್ನು ಪರಿಪೂರ್ಣವಾಗಿ ಬಳಸಿತು. ಹೀಗಾಗಿ ಜಪಾನ್ ರಕ್ಷಣಾ ವಿಭಾಗವು ಒತ್ತಡಕ್ಕೆ ಸಿಲುಕಿತು. ಐದನೇ ನಿಮಿಷವೇ ಮೊದಲ ಅವಕಾಶ ದೊರಕಿತ್ತು. ಆದರೆ ಎಡಗಡೆಯಿಂದ ಪಾಸ್ ಪಡೆದು ಲಲಿತ್ ಉಪಾಧ್ಯಾಯ ನಡೆದ ಗೋಲು ಯತ್ನವನ್ನು ಜಪಾನ್ ಗೋಲ್‌ಕೀಪರ್ ತಾಕುಮಿ ಕಿಟಗಾವಾ ತಡೆದರು. ಮೊದಲ ಪೆನಾಲ್ಟಿ ಕಾರ್ನರ್‌ನಲ್ಲೂ ಹರ್ಮನ್‌ಪ್ರೀತ್ ಯತ್ನವನ್ನು ಕಿಟಗಾವಾ ಅವರು ಅಡ್ಡಕ್ಕೆ ಜಿಗಿದು ಉತ್ತಮವಾಗಿ ರಕ್ಷಿಸಿದರು.

25ನೇ ನಿಮಿಷ ಕೊನೆಗೂ ಭಾರತ ಗೋಲುಖಾತೆ ತೆರೆಯಿತು. ಗೋಲಿನ ಸಮೀಪದಿಂದ ಅಭಿಷೇಕ್ ಅವರ ಯತ್ನವನ್ನು ಗೋಲ್‌ಕೀಪರ್ ತಡೆದಾಗ ಮರಳಿ ಬಂದ ಚೆಂಡನ್ನು ಮನ್‌ಪ್ರೀತ್ ಪ್ರಬಲ ರಿವರ್ಸ್ ಹಿಟ್ ಮೂಲಕ ಗುರಿತಲುಪಿಸಿದರು. ವಿರಾಮಕ್ಕೆ ಎರಡು ನಿಮಿಷಗಳಿರುವಾಗ ಜಪಾನ್ ನಡೆಸಿದ ಗೋಲು ಯತ್ನವನ್ನು ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅತ್ಯುತ್ತಮವಾಗಿ ತಡೆದರು.

ವಿರಾಮದ ನಂತರ ಎರಡು ನಿಮಿಷಗಳಲ್ಲೇ ಭಾರತ ಬೆನ್ನುಬೆನ್ನಿಗೆ ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಪಡೆಯಿತು. ಮೂರನೇ ಅವಕಾಶದಲ್ಲಿ ಹರ್ಮನ್‌ಪ್ರೀತ್ ತಪ್ಪು ಮಾಡಲಿಲ್ಲ; ಡ್ರ್ಯಾಗ್‌ಫ್ಲಿಕ್ ಮೂಲಕ ಗೋಲು ಗಳಿಸಿದರು. ಕಿಟಗಾವಾ ಕಾಲು ಚಾಚಿದರೂ ಚೆಂಡನ್ನು ತಡೆಯಲಾಗಲಿಲ್ಲ. ಕೆಲವೇ ನಿಮಿಷಗಳ ನಂತರ ಅಮಿತ್ ರೋಹಿದಾಸ್ ಅಂತರ ಹೆಚ್ಚಿಸಿದರು.

ಭಾರತ ಈ ಅವಧಿಯಲ್ಲಿ ಇನ್ನಷ್ಟು ಹಿಡಿತ ಸಾಧಿಸಿತು. ಕೆಲವು ಅವಕಾಶಗಳು ತಪ್ಪಿದ ನಂತರ, ಉಪನಾಯಕ ಹಾರ್ದಿಕ್ ಸಿಂಗ್ ಪಾಸ್‌ನಲ್ಲಿ ಅಭಿಷೇಕ್ ಗೋಲಿನ ಮುನ್ನಡೆಯನ್ನು 4–0ಗೆ ಹೆಚ್ಚಿಸಿದರು.

ಅಂತಿಮ ಸೀಟಿಗೆ ಕೆಲವೇ ಕ್ಷಣಗಳಿರುವಾಗ ಹರ್ಮನ್ ಪ್ರೀತ್ ಪೆನಾಲ್ಟಿ ಕಾರ್ನರ್ ಮೂಲಕ ಭಾರತಕ್ಕೆ ಮತ್ತೊಂದು ಗೋಲನ್ನು ಗಳಿಸಿದರು.

ಕೊರಿಯಾಕ್ಕೆ ಕಂಚು: ದಕ್ಷಿಣ ಕೊರಿಯಾ, ಆತಿಥೇಯ ಚೀನಾ ತಂಡದ ಪ್ರಬಲ ಹೋರಾಟವನ್ನು 2–1 ಗೋಲುಗಳಿಂದ ಬದಿಗೊತ್ತಿ ಕಂಚಿನ ಪದಕ ಪಡೆಯಿತು.

ಜಪಾನ್ ವಿರುದ್ಧದ ಫೈನಲ್ ಪಂದ್ಯದಲ್ಲಿ ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರರು –ಪಿಟಿಐ ಚಿತ್ರ

‘ಸಿದ್ಧತೆಗೆ ಸಾಕಷ್ಟು ಸಮಯ’

‘ಮಹತ್ವದ ವಿಷಯವೆಂದರೆ ನಮಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ವರ್ಷದ ಅವಧಿ ಸಿಗಲಿದೆ. ಎರಡನೆಯದಾಗಿ ಇದು ನಮಗೆ ಎಚ್ಚರಿಕೆಯ ಗಂಟೆಯಾಗಿತ್ತು. ಮೊದಲು ಏಷ್ಯನ್ ಚಾಂಪಿಯನ್‌ಷಿಪ್, ಈಗ ಏಷ್ಯನ್ ಗೇಮ್ಸ್‌ನಲ್ಲಿ ಯಶಸ್ಸು ಗಳಿಸಿದ್ದೇವೆ’ ಎಂದು ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ಹೇಳಿದರು.

ಮುಂಬರುವ ಪ್ರೊ ಲೀಗ್ ಋತುವಿನಲ್ಲಿ ತಂಡವು, ಒಲಿಂಪಿಕ್ಸ್‌ಗೆ ತನ್ನ ಸಿದ್ಧತೆಯನ್ನು ಪರೀಕ್ಷೆಗೆ ಒಳಪಡಿಸಲಿದೆ ಎಂದು ತಂಡದ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಹೇಳಿದರು.

ಆರ್ಚರಿ ರೀಕರ್ವ್: ಪುರುಷರಿಗೆ ಬೆಳ್ಳಿ, ಮಹಿಳೆಯರಿಗೆ ಕಂಚು

ಆರ್ಚರಿ ರೀಕರ್ವ್‌ನಲ್ಲಿ ಬೆಳ್ಳಿ ಗೆದ್ದ ಭಾರತದ ಪುರುಷರ ತಂಡದ ಅತನು ದಾಸ್, ತುಷಾರ್ ಶೆಲ್ಕೆ ಮತ್ತು ಧೀರಜ್ ಬೊಮ್ಮದೇವರ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ಮತ್ತು ಮಹಿಳಾ ತಂಡಗಳು, ಏಷ್ಯನ್ ಕ್ರೀಡಾಕೂಟದ ಬಿಲ್ಗಾರಿಕೆ (ಆರ್ಚರಿ) ಸ್ಪರ್ಧೆಯ ರಿಕರ್ವ್ ವಿಭಾಗದಲ್ಲಿ ಶುಕ್ರವಾರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡವು.

2010ರ (ಗುವಾಂಗ್‌ಝೌ) ಕ್ರೀಡೆಗಳ ನಂತರ ಇದೇ ಮೊದಲ ಬಾರಿ ಭಾರತ ಈ ಸ್ಪರ್ಧೆಯಲ್ಲಿ ಪದಕ ಗೆದ್ದುಕೊಂಡಿದೆ.

ಐದನೇ ಶ್ರೇಯಾಂಕದ ಮಹಿಳಾ ತಂಡ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ 6–2 ರಿಂದ (56–52, 55–56, 57–50, 51–48) ವಿಯೆಟ್ನಾಂ ತಂಡವನ್ನು ಸೋಲಿಸಿದರು. ಅಂಕಿತಾ ಭಕ್ತ್, ಸಿಮ್ರಣಜೀತ್ ಕೌರ್ ಮತ್ತು ಭಜನ್ ಕೌರ್ ಅವರು ತಂಡದಲ್ಲಿದ್ದರು. 18 ವರ್ಷದ ಭಜನ್ ಭುಜದ ನೋವಿನಿಂದ ಬಳಲಿದ್ದರೂ ಸ್ಪರ್ಧಿಸಿದರು. ಇದರ ಬೆನ್ನಿಗೇ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಅತನು ದಾಸ್, ತುಷಾರ್ ಶೆಲ್ಕೆ ಮತ್ತು ಧೀರಜ್ ಬೊಮ್ಮದೇವರ ಅವರನ್ನು ಒಳಗೊಂಡ ತಂಡ ಬೆಳ್ಳಿಯ ಪದಕ ಪಡೆಯಿತು.

ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಸೋಲಿಸಿದ್ದ ಭಾರತ, ಚಿನ್ನದ ಪದಕಕ್ಕೆ ನಡೆದ ಪೈಪೋಟಿಯಲ್ಲಿ ಪ್ರಬಲ ದಕ್ಷಿಣ ಕೊರಿಯಾ ಎದುರು ಹೆಚ್ಚೇನೂ ಮಾಡಲಾಗಲಿಲ್ಲ. ಲೀ ವೂಸಿಯೊಕ್, ಒಹ್ ಜಿನ್‌ಹೈಕ್ ತ್ತು ಕಿಮ್ ಜೆ ಡಿಯೊಕ್ ಅವರನ್ನೊಳಗೊಂಡ ಕೊರಿಯಾ ತಂಡ 5–1 ರಿಂದ (60–55, 57–57, 56–55) ರಲ್ಲಿ ಜಯ ಗಳಿಸಿ ಚಿನ್ನ ಗೆದ್ದಿತು.

ಪುರುಷರ ರೀಕರ್ವ್ ವಿಭಾಗದಲ್ಲಿ ಭಾರತ 2010ರಲ್ಲಿ ಕೊನೆಯ ಬಾರಿ ಪದಕ (ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ, ಪುರುಷ, ಮಹಿಳಾ ತಂಡ ವಿಭಾಗದಲ್ಲಿ ಕಂಚು) ಗೆದ್ದುಕೊಂಡಿತ್ತು. 13 ವರ್ಷಗಳ ಬಿಲ್ಗಾರರ ಗುರಿಗೆ ಪದಕ ಒಲಿದಿದೆ.

ಭಾರತಕ್ಕೆ ಇದು ಆರ್ಚರಿಯಲ್ಲಿ ಒಟ್ಟಾರೆ ದಾಖಲೆಯ ಎಂಟನೇ ಪದಕ. ಈಗಾಗಲೇ ಒಲಿಂಪಿಕ್‌ಯೇತರ ಸ್ಪರ್ಧೆಯಾದ ಕಾಂಪೌಂಡ್ ತಂಡ ಪುರುಷರ ತಂಡ, ಮಹಿಳೆಯರ ತಂಡ ಮತ್ತು ಮಿಶ್ರ ವಿಭಾಗದಲ್ಲಿ ಮೂರು ಚಿನ್ನ ಗೆದ್ದುಕೊಂಡಿದೆ. ವೈಯಕ್ತಿಕ ಸ್ಪರ್ಧೆಯಲ್ಲಿ ಈಗಾಗಲೇ ಭಾರತದ ಅಭಿಷೇಕ್ ವರ್ಮಾ ಮತ್ತು ಓಜಸ್ ದೇವತಾಳೆ ಅವರು ಚಿನ್ನ–ಬೆಳ್ಳಿಗಾಗಿ ಪೈಪೋಟಿ ನಡೆಸಲಿದ್ದಾರೆ. ಜ್ಯೋತಿ ಸುರೇಖಾ ವೆನ್ನಂ ಅವರು ಮಹಿಳೆಯರ ಕಾಂಪೌಂಡ್ ವೈಯಕ್ತಿಕ ವಿಭಾಗದ ಫೈನಲ್ ತಲುಪಿದ್ದಾರೆ.

ಭಾರತ ಬ್ರಿಜ್ ತಂಡಕ್ಕೆ ಬೆಳ್ಳಿ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಬ್ರಿಜ್ ಸ್ಪರ್ಧೆಯ ಫೈನಲ್‌ನಲ್ಲಿ ಎಡವಿದ ಭಾರತ ಪುರುಷರ ತಂಡ, ಬೆಳ್ಳಿ ಪದಕ ತನ್ನದಾಗಿಸಿಕೊಂಡಿತು.

ಶುಕ್ರವಾರ ಕೊನೆಗೊಂಡ ಫೈನಲ್‌ನಲ್ಲಿ ಭಾರತ, 152–238.1 ಪಾಯಿಂಟ್ಸ್‌ಗಳಿಂದ ಹಾಂಗ್‌ಕಾಂಗ್ ಎದುರು ಪರಾಭವಗೊಂಡಿತು.

ಜಗ್ಗಿ ಶಿವದಾಸಾನಿ, ಸಂದೀಪ್ ಟಕರಾಲ್, ಸುಮಿತ್ ಮುಖರ್ಜಿ, ರಾಜೇಶ್ವರ್ ತಿವಾರಿ, ರಾಜು ತೊಲಾನಿ ಮತ್ತು ಅಜಯ್ ಖರೆ ಅವರನ್ನೊಳಗೊಂಡ ಭಾರತ ತಂಡ, ಆರು ಸುತ್ತುಗಳ ಫೈನಲ್‌ನಲ್ಲಿ ಎದುರಾಳಿಗಳಿಗೆ ಪೈಪೋಟಿ ಒಡ್ಡುವಲ್ಲಿ ವಿಫಲವಾಯಿತು.

ಗುರುವಾರ ನಡೆದಿದ್ದ ಮೊದಲ ಮೂರು ಸುತ್ತುಗಳ ಹಣಾಹಣಿ ಬಳಿಕ ಭಾರತ ತಂಡ 1–2 ರಿಂದ ಹಿನ್ನಡೆ ಅನುಭವಿಸಿತ್ತು. ಶುಕ್ರವಾರ ನಡೆದ ನಾಲ್ಕನೇ ಸುತ್ತಿನ ಸ್ಪರ್ಧೆಯನ್ನು 32–42 ರಿಂದ ಕಳೆದುಕೊಂಡಿತು.

1–3 ರಿಂದ ಹಿನ್ನಡೆ ಅನುಭವಿಸಿದ ಭಾರತ ತಂಡ, ಚಿನ್ನದ ಪದಕದ ಆಸೆ ಜೀವಂತವಾಗಿರಿಸಿಕೊಳ್ಳಬೇಕಾದರೆ ಕೊನೆಯ ಎರಡೂ ಸುತ್ತುಗಳನ್ನು ಗೆಲ್ಲಬೇಕಿತ್ತು. ಆದರೆ ನಾಲ್ಕನೇ ಸುತ್ತನ್ನು 38–17 ರಿಂದ ಜಯಿಸಿದ ಹಾಂಗ್‌ಕಾಂಗ್ ಸ್ಪರ್ಧಿಗಳು 4–1 ರಿಂದ ಪಂದ್ಯ ಗೆದ್ದು ಬಂಗಾರದ ಪದಕ ಕೊರಳಿಗೇರಿಸಿಕೊಂಡರು.

ಬ್ರಿಜ್ ಸ್ಪರ್ಧೆಯ ಬೆಳ್ಳಿ ಗೆದ್ದ ಭಾರತ ಪುರುಷರ ತಂಡ

ಆಟಗಾರರಿಗೆ ತಲಾ ₹5 ಲಕ್ಷ ಘೋಷಿಸಿದ ಪಟ್ನಾಯಕ್

ಭುವನೇಶ್ವರ (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಬಂಗಾರ ಗೆದ್ದ ಭಾರತ ಹಾಕಿ ತಂಡವನ್ನು ಅಭಿನಂದಿಸಿರುವ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ತಂಡದ ಆಟಗಾರರಿಗೆ ಮತ್ತು ನೆರವು ಸಿಬ್ಬಂದಿಗೆ ತಲಾ ₹5 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ.

‘ಚಿನ್ನ ಗೆದ್ದು 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ತಂಡದ ಸಾಧನೆ ಗುರುತಿಸಿ ಈ ನಗದು ಬಹುಮಾನ ನೀಡುತ್ತಿದ್ದೇವೆ’ ಎಂದು ಸಂಭ್ರಮದಲ್ಲಿದ್ದ ಪಟ್ನಾಯಕ್ ತಿಳಿಸಿದರು.

ಹಾಂಗ್‌ಝೌನಲ್ಲಿ ಪದಕ ಪ್ರದಾನದ ನಂತರ, ವಿಡಿಯೊ ಕಾಲ್ ಮಾಡಿ ಅವರು ತಂಡದ ಜೊತೆ ಮಾತನಾಡಿದರು.

2018ರಿಂದ ಒಡಿಶಾ ಸರ್ಕಾರ ಹಾಕಿ ತಂಡದ ಪ್ರಾಯೋಜಕತ್ವ ವಹಿಸಿದೆ.

ಸೆಪೆಕ್ ಟಕ್ರಾ ಕ್ರೀಡೆಯ ರೆಗು ವಿಭಾಗದಲ್ಲಿ ಕಂಚಿನ ಪದಕ ಗೆದ್ದ ಭಾರತ ಮಹಿಳೆಯರ ತಂಡ

ಸೆಪೆಕ್ ಟಕ್ರಾ ಕ್ರೀಡೆಯ ರೆಗು ವಿಭಾಗ

ವನಿತೆಯರಿಗೆ ಐತಿಹಾಸಿಕ ಕಂಚು

ಜಿನಾಹು, ಚೀನಾ (ಪಿಟಿಐ): ಭಾರತದ ಮಹಿಳೆಯರ ತಂಡವು ಏಷ್ಯನ್ ಕ್ರೀಡಾಕೂಟದ ಸೆಪೆಕ್ ಟಕ್ರಾ ಕ್ರೀಡೆಯ ರೆಗು ವಿಭಾಗದಲ್ಲಿ ಕಂಚಿನ ಪದಕ ಜಯಿಸಿತು.

ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿಯೇ ಭಾರತ ಮಹಿಳೆಯರ ತಂಡವು ಈ ಕ್ರೀಡೆಯಲ್ಲಿ ಗೆದ್ದ ಮೊಟ್ಟಮೊದಲ ಪದಕ ಇದು. ದೇಶಕ್ಕೆ ಲಭಿಸಿದ ಒಟ್ಟಾರೆ ಎರಡನೇ ಪದಕ ಇದಾಗಿದೆ.

2018ರ ಜಕಾರ್ತಾ ಏಷ್ಯನ್ ಕೂಟದಲ್ಲಿ ಭಾರತ ಪುರುಷರ ತಂಡವೂ ಕಂಚು ಪದಕ ಗೆದ್ದಿತ್ತು.

ಅಯೆಕಪಾಲ್ ಮೈಪಾಕ್ ದೇವಿ, ಒಯಿನಾಮ್ ಚವೊಬಾ ದೇವಿ, ಖುಷ್ಬೂ, ಇಲಾಂಗ್‌ಬಮ್ ಪ್ರಿಯಾದೇವಿ ಮತ್ತು ಎಲಾಂಗಬಮ್ ಲೀರೆಂಟೊಂಬಿ ದೇವಿ ಅವರಿದ್ದ ತಂಡವು ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್ ವಿರುದ್ಧ ಸೋತಿತು.

ಸೆಪೆಕ್ ಟಕ್ರಾ ಕ್ರೀಡೆಯಲ್ಲಿ ಬಲಾಢ್ಯವಾಗಿರುವ ಥಾಯ್ಲೆಂಡ್ ದೇಶದ ತಂಡವು 10–21, 13–21ರಿಂದ ಭಾರತ ತಂಡವನ್ನು ಮಣಿಸಿತು. ಥಾಯ್ ತಂಡವು ಹೋದ ಸಲ ಚಿನ್ನದ ಪದಕ ಜಯಿಸಿತ್ತು.

ಗುಂಪು ಹಂತದಲ್ಲಿ ಭಾರತ ತಂಡವು ಎರಡನೇ ಸ್ಥಾನ ಪಡೆದಿತ್ತು. ವಿಯೆಟ್ನಾಂ ತಂಡ ಮೊದಲ ಸ್ಥಾನ ಪಡೆದಿತ್ತು.

ಸೆಮಿಫೈನಲ್ ಮುಗಿದ ನಂತರ ಉಭಯ ತಂಡಗಳೂ ಜೊತೆಯಾಗಿ ಚಿತ್ರ ತೆಗೆಸಿಕೊಂಡವು.

ಆಗ ಆಕ್ಷೇಪಿಸಿದ ರೆಫರಿ ಜೊತೆಗೆ ವಾದ ನಡೆಸಿದ ಭಾರತ ತಂಡದ ಮುಖ್ಯ ಕೋಚ್ ಹೇಮ್ ರಾಜ್, ‘ಥಾಯ್ಲೆಂಡ್ ಎದುರು ಆಡುವುದೇ ಒಂದು ದೊಡ್ಡ ಅನುಭವ. ವಿಶ್ವದಲ್ಲಿಯೇ ಶ್ರೇಷ್ಠ ಆಟಗಾರರು ಇರುವ ತಂಡ ಇದು. ಅವರೊಂದಿಗೆ ಸೆಣಸಿದ್ದೇ ಆತ್ಮವಿಶ್ವಾಸ ಇಮ್ಮಡಿಸಿದೆ‘ ಎಂದರು.

ಚೆಸ್: ಪದಕದತ್ತ ದಿಟ್ಟ ‘ನಡೆ’

ಹ್ವಾಂಗ್‌ಝೌ: ಪದಕದತ್ತ ದಿಟ್ಟ ಹೆಜ್ಜೆಯಿಟ್ಟಿರುವ ಭಾರತ ಪುರುಷರ ಮತ್ತು ಮಹಿಳಾ ತಂಡಗಳು, ಏಷ್ಯನ್ ಗೇಮ್ಸ್ ಚೆಸ್‌ನ ಎಂಟನೇ ಸುತ್ತಿನಲ್ಲೂ ಶುಕ್ರವಾರ ಸುಲಭ ಜಯ ಸಾಧಿಸಿದವು. ಪುರುಷರ ತಂಡ 3.5–0.5 ರಿಂದ ದಕ್ಷಿಣ ಕೊರಿಯಾ ತಂಡವನ್ನು ಸುಲಭವಾಗಿ ಸೋಲಿಸಿದರೆ, ಮಹಿಳಾ ತಂಡ 4–0 ಯಿಂದ ಹಾಂಗ್‌ಕಾಂಗ್ ಮೇಲೆ ನಿರಾಯಾಸ ಗೆಲುವು ಸಾಧಿಸಿತು.

ಅಗ್ರ ಶ್ರೇಯಾಂಕದ ಭಾರತ ಪುರುಷರ ಮತ್ತು ಎರಡನೇ ಶ್ರೇಯಾಂಕದ ಮಹಿಳೆಯರ ತಂಡಗಳು ಎರಡನೇ ಸ್ಥಾನ ಕಾಪಾಡಿಕೊಂಡಿದ್ದು ಪದಕ ಖಚಿತಪಡಿಸಿವೆ. ಶನಿವಾರ ಅಂತಿಮ ಸುತ್ತಿನ ಪಂದ್ಯಗಳು ಉಳಿದಿವೆ.

ಪುರುಷರ ವಿಭಾಗದಲ್ಲಿ ಇರಾನ್ (14 ಮ್ಯಾಚ್ ಪಾಯಿಂಟ್) ಅಗ್ರಸ್ಥಾನದಲ್ಲಿದೆ. ಭಾರತ (13 ಮ್ಯಾಚ್ ಪಾಯಿಂಟ್) 2ನೇ ಮತ್ತು ಉಜ್ಬೇಕಿಸ್ತಾನ (12) ಮೂರನೇ ಸ್ಥಾನದಲ್ಲಿವೆ. ಚೀನಾ (11) ನಾಲ್ಕನೇ ಸ್ಥಾನದಲ್ಲಿವೆ.

ಡಿ.ಗುಕೇಶ್

ಮಹಿಳಾ ವಿಭಾಗದಲ್ಲಿ, ಚೀನಾ (15 ಮ್ಯಾಚ್ ಪಾಯಿಂಟ್) ಅಗ್ರಸ್ಥಾನ ಕಾಪಾಡಿಕೊಂಡಿದೆ. ಭಾರತ 13 ಮ್ಯಾಚ್ ಪಾಯಿಂಟ್ಸ್ ಗಳಿಸಿದೆ. ಕಜಕಸ್ತಾನ (11) ಮೂರನೇ ಮತ್ತು ವಿಯೆಟ್ನಾಂ (10) ನಾಲ್ಕನೇ ಸ್ಥಾನದಲ್ಲಿವೆ.

ಗುಕೇಶ್, ಪ್ರಜ್ಞಾನಂದ, ಅರ್ಜುನ್ ಇರಿಗೇಶಿ ಮೊದಲ ಮೂರು ಬೋರ್ಡ್‌ಗಳಲ್ಲಿ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರೆ, ಪೆಂಟಾಲ ಹರಿಕೃಷ್ಣ ಕೊನೆಯ ಬೋರ್ಡ್‌ನಲ್ಲಿ ತಮಗಿಂತ ಕೆಳಕ್ರಮಾಂಕದ ಆನ್ ಹಾಂಗ್‌ಜಿನ್ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು.

ಭಾರತ ತಂಡ ಅಂತಿಮ (9ನೇ) ಸುತ್ತಿನಲ್ಲಿ ಫಿಲಿಪೀನ್ಸ್ ತಂಡವನ್ನು ಎದುರಿಸಲಿದೆ. ಇರಾನ್, ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ಮಹಿಳೆಯರ ವಿಭಾಗದಲ್ಲಿ ಹಾರಿಕಾ, ವೈಶಾಲಿ, ವಂತಿಕಾ ಮತ್ತು ಸವಿತಾ ಶ್ರೀ, ಹಾಂಗ್‌ಕಾಂಗ್ ಎದುರಾಳಿಗಳ ವಿರುದ್ಧ ಸುಲಭ ಜಯಪಡೆದರು. ಕೋನೇರು ಹಂಪಿ ಈ ಪಂದ್ಯದಲ್ಲಿ ಆಡಲಿಲ್ಲ. ಚೀನಾ ಫಿಲಿಪೀನ್ಸ್ ವಿರುದ್ಧ, ಕಜಕಸ್ತಾನ, ದಕ್ಷಿಣ ಕೊರಿಯಾ ವಿರುದ್ಧ ಇದೇ ಅಂತರದಲ್ಲಿ (4–0) ಜಯಪಡೆದವು.

ಮಹಿಳಾ ತಂಡ ಅಂತಿಮ ಸುತ್ತಿನಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಆಡಲಿದೆ. ಚೀನಾ ತಂಡ, ಯುಎಇ ವಿರುದ್ಧ ಆಡಲಿದೆ.

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	187	104	62	353
2	ಜಪಾನ್	46	57	62	165
3	ದಕ್ಷಿಣ ಕೊರಿಯಾ	36	49	84	169
4	ಭಾರತ	22	34	39	95
5	ಉಜ್ಬೇಕಿಸ್ತಾನ	20	18	26	64
6	ಚೀನಾ ತೈಪೆ	17	16	25	58
7	ಉತ್ತರ ಕೊರಿಯಾ	11	17	10	38
8	ಥಾಯ್ಲೆಂಡ್	10	14	30	54
9	ಬಹರೇನ್	10	3	5	18
10	ಕಜಕಿಸ್ತಾನ	9	18	41	68

ಈಕ್ವೆಸ್ಟ್ರಿಯನ್: ಯಶ್‌ಗೆ ನಿರಾಸೆ

ಹಾಂಗ್‌ಝೌ (ಪಿಟಿಐ): ಭಾರತದ ಯಶ್ ನೆನ್ಸೀ ಅವರು ಏಷ್ಯನ್ ಕ್ರೀಡಾಕೂಟದ ಈಕ್ವೆಸ್ಟ್ರಿಯನ್‌ನ ಜಂಪಿಂಗ್ ವಿಭಾಗದ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಅವರು ಯಾವುದೇ ಪಾಯಿಂಟ್ಸ್ ಗಳಿಸಲು ವಿಫಲರಾದರು. ಯಶ್, ಅರ್ಹತಾ ಸುತ್ತಿನಲ್ಲಿ 24ನೇ ಸ್ಥಾನ ಪಡೆದು ಫೈನಲ್ ಸುತ್ತು ತಲುಪಿದ್ದರು.

ಈಕ್ವೆಸ್ಟ್ರಿಯನ್‌ನಲ್ಲಿ ಈ ಬಾರಿ ಭಾರತವು ಎರಡು ಪದಕ ಜಯಿಸಿದೆ.

ಕುಸ್ತಿ: ಅಮನ್ ಸೆಹ್ರಾವತ್, ಕಿರಣ್, ಸೋನಂಗೆ ಕಂಚು

ಬಜರಂಗ್ ಪೂನಿಯಾಗೆ ಮುಖಭಂಗ

ಹಾಂಗ್‌ಝೌ (ಪಿಟಿಐ): ‘ಆಯ್ಕೆ ಟ್ರಯಲ್ಸ್’ನಿಂದ ವಿನಾಯಿತಿ ಪಡೆದು ಏಷ್ಯನ್ ಗೇಮ್ಸ್‌ಗೆ ನೇರ ಅರ್ಹತೆ ಪಡೆದುಕೊಂಡಿದ್ದ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಪದಕ ಗೆಲ್ಲಲು ವಿಫಲರಾಗಿ ಮುಖಭಂಗ ಅನುಭವಿಸಿದರು.

ಪುರುಷರ 65 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಬಜರಂಗ್, ಜಪಾನ್‌ನ ಕೈಕಿ ಯಮಗುಚಿ ಎದುರು ಪರಾಭವಗೊಂಡರು. ಯುವ ಕುಸ್ತಿಪಟು ಅಮನ್ ಸೆಹ್ರಾವತ್ (ಪುರುಷರ 57 ಕೆ.ಜಿ. ವಿಭಾಗ), ಸೋನಂ ಮಲಿಕ್ (ಮಹಿಳೆಯರ ಫ್ರೀಸ್ಟೈಲ್ 62 ಕೆ.ಜಿ) ಮತ್ತು ಕಿರಣ್ ಬಿಷ್ಣೋಯಿ (ಮಹಿಳೆಯರ ಫ್ರೀಸ್ಟೈಲ್ 76 ಕೆ.ಜಿ) ಅವರು ಕಂಚು ಗೆದ್ದರು.

ಏಷ್ಯನ್ ಗೇಮ್ಸ್‌ಗೆ ಕುಸ್ತಿ ತಂಡದ ಆಯ್ಕೆಗೆ ನಡೆಸಿದ ಟ್ರಯಲ್ಸ್‌ನಲ್ಲಿ ಪುರುಷರ 65 ಕೆ.ಜಿ. ವಿಭಾಗದಲ್ಲಿ ವಿಶಾಲ್ ಕಾಳಿರಾಮನ್ ಅವರು ಗೆದ್ದಿದ್ದರು. ಆದರೆ ಭಾರತ ಒಲಿಂಪಿಕ್ ಸಂಸ್ಥೆಯ ಅಡಹಾಕ್ ಸಮಿತಿಯು ಬಜರಂಗ್ ಅವರಿಗೆ ನೇರ ಪ್ರವೇಶ ನೀಡಿತ್ತು. ಟ್ರಯಲ್ಸ್‌ನಿಂದ ವಿನಾಯಿತಿ ನೀಡುವ ಅಡ್‌ಹಾಕ್ ಸಮಿತಿಯ ನಿರ್ಧಾರಕ್ಕೆ ಕುಸ್ತಿಪಟುಗಳ ವಲಯದಿಂದ ಆಕ್ರೋಶ ವ್ಯಕ್ತವಾಗಿತ್ತು.

ಮಹಿಳೆಯರ ವಿಭಾಗದಲ್ಲಿ ವಿನೇಶಾ ಫೋಗಟ್ ಅವರಿಗೂ ಟ್ರಯಲ್ಸ್‌ನಿಂದ ವಿನಾಯಿತಿ ನೀಡಿ, ನೇರ ಪ್ರವೇಶ ಕಲ್ಪಿಸಿತ್ತು. ಆದರೆ ಅವರು ಗಾಯದ ಕಾರಣ ಏಷ್ಯನ್ ಗೇಮ್ಸ್‌ನಿಂದ ಹಿಂದೆ ಸರಿದಿದ್ದರು. ಅವರ ಬದಲು ಅವಕಾಶ ಪಡೆದಿದ್ದ ಅಂತಿಮ್ ಪಂಘಲ್ ಗುರುವಾರ ಕಂಚು ಗೆದ್ದಿದ್ದರು.

ಬಜರಂಗ್ ಅವರು ಮೊದಲ ಎರಡು ಸುತ್ತುಗಳಲ್ಲಿ ಕ್ರಮವಾಗಿ ಫಿಲಿಪ್ಪೀನ್ಸ್‌ನ ರೊನಿಲ್ ತುಬೊಗ್ (8–1) ಮತ್ತು ಬಹರೇನ್‌ನ ಅಲಿಬೇಗ್ ಅಲಿಬೆಗೊವ್ ಅವರನ್ನು ಮಣಿಸಿದರು. ಆದರೆ ಸೆಮಿಫೈನಲ್‌ನಲ್ಲಿ ಲಯ ಕಳೆದುಕೊಂಡ ಅವರ ಇರಾನ್‌ನ ಅಮೌಜದ್ ಖಲೀಲಿ ಕೈಯಲ್ಲಿ 1–8 ರಿಂದ ಪರಾಭವಗೊಂಡರು.

2022ರ ವಿಶ್ವ ಚಾಂಪಿಯನ್ ಮತ್ತು ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ ಖಲೀಲಿ ಆರಂಭದಲ್ಲೇ ನಾಲ್ಕು ಪಾಯಿಂಟ್ಸ್ ಗಿಟ್ಟಿಸಿ ಭಾರತದ ಪೈಲ್ವಾನ್ ಮೇಲೆ ಒತ್ತಡ ಹೇರಿದರು. ಎರಡನೇ ಅವಧಿಯ ಆರಂಭದಲ್ಲಿ ಮತ್ತೆ ನಾಲ್ಕು ಪಾಯಿಂಟ್ಸ್ ಕಲೆಹಾಕಿದರು. ಮರುಹೋರಾಟ ನಡೆಸಿದ ಬಜರಂಗ್ ಒಂದು ಪಾಯಿಂಟ್ಸ್ ಗಳಿಸಲಷ್ಟೇ ಶಕ್ತರಾದರು.

ಕಂಚಿನ ಪದಕದ ‘ಪ್ಲೇ ಆಫ್’ನಲ್ಲೂ ಬಜರಂಗ್, ಪ್ರತಿರೋಧ ಒಡ್ಡದೆ ಎದುರಾಳಿಗೆ ಶರಣಾದರು. ಜಪಾನ್‌ನ ಯಮಗುಚಿ ತಾಂತ್ರಿಕ ಕೌಶಲ ಶ್ರೇಷ್ಠತೆಯ (10–0) ಆಧಾರದಲ್ಲಿ ಗೆದ್ದರು.

ಅಮನ್‌ಗೆ ಕಂಚು: ಅಮನ್ ಸೆಹ್ರಾವತ್ ಅವರು ‘ಪ್ಲೇ ಆಫ್’ನಲ್ಲಿ ತಾಂತ್ರಿಕ ಕೌಶಲ ಶ್ರೇಷ್ಠತೆಯ ಆಧಾರದಲ್ಲಿ ಚೀನಾದ ಮಿಂಗ್‌ಹು ಲಿಯು ಅವರನ್ನು ಪರಾಭಗೊಳಿಸಿದರು.

ಸೆಮಿಫೈನಲ್‌ನಲ್ಲಿ ಅವರು 10–12 ರಿಂದ ಜಪಾನ್‌ನ ತೊಷಿಹಿರೊ ಹಸೆಗವ ಎದುರು ಸೋತರು. ಇಬ್ಬರೂ ಪೈಲ್ವಾನರು ಆಕ್ರಮಣಕಾರಿ ಪ್ರದರ್ಶನ ನೀಡಿದ್ದರಿಂದ ಸಾಕಷ್ಟು ಪಾಯಿಂಟ್‌ಗಳು ಬಂದವು.

ಸೋನಂ ಅವರು ಕಂಚಿನ ಪದಕದ ಪ್ಲೇ ಆಫ್‌ನಲ್ಲಿ 7–5 ರಿಂದ ಚೀನಾದ ಜಿಯಾ ಲಾಂಗ್ ವಿರುದ್ಧ ಗೆದ್ದರೆ, ಕಿರಣ್ ಅವರು 6–3 ರಿಂದ ಮಂಗೋಲಿಯದ ಅಯುರ್ಜನ್ ಜರ್ಗಲ್ ಗನ್ಬತ್ ಅವರನ್ನು ಮಣಿಸಿದರು.

ಶುಕ್ರವಾರ ಸ್ಪರ್ಧಿಗಿಳಿದ ಭಾರತದ ಕುಸ್ತಿಪಟುಗಳಲ್ಲಿ ರಾಧಿಕಾ (ಮಹಿಳೆಯರ 68 ಕೆ.ಜಿ.) ಮಾತ್ರ ಪದಕ ಸುತ್ತು ತಲುಪಲು ವಿಫಲರಾದರು.

ಭಾರತದ ಕುಸ್ತಿಪಟುಗಳು ಈ ಕೂಟದಲ್ಲಿ ಇದುವರೆಗೆ ಐದು ಕಂಚು ಜಯಿಸಿದ್ದಾರೆ. ಶನಿವಾರ ನಾಲ್ವರು ಪೈಲ್ವಾನರು ಕಣಕ್ಕಿಳಿಯಲಿದ್ದಾರೆ.


ಅಮನ್ ಸೆಹ್ರಾವತ್ –ಎಎಫ್‌ಪಿ ಚಿತ್ರ

ಸೋನಂ ಮಲಿಕ್– ಎಎಫ್‌ಪಿ ಚಿತ್ರ

ಕಿರಣ್ ಮತ್ತು ಗನ್ಬತ್ (ಕೆಂಪು) ನಡುವಣ ಪೈಪೋಟಿ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಪುರುಷರ ಡಬಲ್ಸ್ ಫೈನಲ್‌ಗೆ ಸಾತ್ವಿಕ್–ಚಿರಾಗ್

ಸಿಂಗಲ್ಸ್‌ನಲ್ಲಿ ಪ್ರಣಯ್‌ಗೆ ಕಂಚಿನ ಪದಕ

ಹಾಂಗ್‌ಝೌ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್‌.ಎಸ್.ಪ್ರಣಯ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕದೊಂದಿಗೆ ತಮ್ಮ ಅಭಿಯಾನ ಕೊನೆಗೊಳಿಸಿದರು. ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತ, 41 ವರ್ಷಗಳ ಬಳಿಕ ಪದಕ ಗೆದ್ದ ಸಾಧನೆ ಮಾಡಿದೆ.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದ್ದು, ಬ್ಯಾಡ್ಮಿಂಟನ್‌ನಲ್ಲಿ ಮೊದಲ ಚಿನ್ನ ಗೆಲ್ಲುವ ಭರವಸೆ ಮೂಡಿಸಿದೆ.

ಡಬಲ್ಸ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತದ ಆಟಗಾರರು ಸೆಮಿಫೈನಲ್‌ನಲ್ಲಿ 21–17, 21–12 ರಿಂದ ಮಲೇಷ್ಯಾದ ಆ್ಯರನ್ ಚಿಯಾ–ಸೊ ವೂ ಯಿಕ್ ಅವರನ್ನು ಮಣಿಸಿದರು. ಇದಕ್ಕಾಗಿ ಅವರು 46 ನಿಮಿಷಗಳನ್ನು ತೆಗೆದುಕೊಂಡರು.

ಸಾತ್ವಿಕ್ ಮತ್ತು ಚಿರಾಗ್ ಈ ಮೂಲಕ ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಪುರುಷರ ಡಬಲ್ಸ್‌ನಲ್ಲಿ ಭಾರತಕ್ಕೆ ಮೊದಲ ಬೆಳ್ಳಿ ಪದಕ ಖಚಿತಪಡಿಸಿಕೊಂಡರು. ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ಕೊರಿಯಾದ ಚೊಯ್ ಸೊಲ್ ಗ್ಯು- ಕಿಮ್ ವೊನ್ ಹೊ ವಿರುದ್ಧ ಪೈಪೋಟಿ ನಡೆಸುವರು. ಭಾರತದ ಜೋಡಿ, ಕೊರಿಯಾದ ಆಟಗಾರರ ವಿರುದ್ಧ 2–0 ಗೆಲುವಿನ ದಾಖಲೆ ಹೊಂದಿದ್ದಾರೆ.

ಸೆಮಿಯಲ್ಲಿ ಎಡವಿದ ಪ್ರಣಯ್: ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಪ್ರಣಯ್ 16–21, 9–21 ರಿಂದ ಆಲ್ ಇಂಗ್ಲೆಂಡ್ ಚಾಂಪಿಯನ್ ಚೀನಾದ ಲಿ ಶಿ ಫೆಂಗ್ ಎದುರು ಮಣಿದರು. ಇದರಿಂದ ಕಂಚಿನ ಪದಕದೊಂದಿಗೆ ಅವರ ಹೋರಾಟಕ್ಕೆ ತೆರೆಬಿತ್ತು.

ಏಷ್ಯನ್ ಕ್ರೀಡಾಕೂಟದ ಪುರುಷರ ಸಿಂಗಲ್ಸ್‌ನಲ್ಲಿ ಭಾರತ ಗೆದ್ದ ಎರಡನೇ ಪದಕ ಇದು. 1982ರ ನವದೆಹಲಿ ಕೂಟದಲ್ಲಿ ಸೈಯದ್ ಮೋದಿ ಅವರು ಕಂಚು ಗೆದ್ದುಕೊಂಡಿದ್ದರು.

ಎಚ್‌.ಎಸ್‌.ಪ್ರಣಯ್ ಆಟದ ವೈಖರಿ –ಪಿಟಿಐ ಚಿತ್ರ

31 ವರ್ಷದ ಪ್ರಣಯ್ ಅವರಿಗೆ ಈ ಪಂದ್ಯದಲ್ಲೂ ಬೆನ್ನುನೋವು ಕಾಡಿತು. ಎಂದಿನ ಲಯದಲ್ಲಿ ಆಡಲು ವಿಫಲರಾದ ಅವರಿಂದ ಸಾಕಷ್ಟು ಸ್ವಯಂಕೃತ ತಪ್ಪುಗಳು ಉಂಟಾದವು.

ಭಾರತದ ಆಟಗಾರ ಮೊದಲ ಗೇಮ್‌ನ ಆರಂಭದಲ್ಲಿ 3–1 ರಿಂದ ಮೇಲುಗೈ ಪಡೆದಿದ್ದರು. ಆದರೆ ಪಂದ್ಯ ಮುಂದುವರಿದಂತೆ ಅವರಿಂದ ತಪ್ಪುಗಳು ಉಂಟಾದವು. ಇದರ ಲಾಭ ತನ್ನದಾಗಿಸಿಕೊಂಡ ಫೆಂಗ್, ಮರುಹೋರಾಟ ನಡೆಸಿ 10–10 ರಿಂದ ಸಮಬಲ ಸಾಧಿಸಿದರು.

ವೇಗದ ಸ್ಮ್ಯಾಷ್‌ಗಳು ಮತ್ತು ಚಾಣಾಕ್ಷ ಡ್ರಾಪ್ ಶಾಟ್‌ಗಳ ಮೂಲಕ ಪಾಯಿಂಟ್‌ಗಳನ್ನು ಹಿಗ್ಗಿಸಿಕೊಂಡರಲ್ಲದೆ, 17–14 ರಿಂದ ಮುನ್ನಡೆ ಪಡೆದರು. ಲೀಡ್ ಕಾಪಾಡಿಕೊಂಡು ಗೇಮ್ ಗೆದ್ದರು.

ಎರಡನೇ ಗೇಮ್‌ನ ಆರಂಭದಲ್ಲಿ ಜಿದ್ದಾಜಿದ್ದಿನ ಸೆಣಸಾಟ ನಡೆದು 4–4 ರಿಂದ ಸಮಬಲ ಕಂಡುಬಂತು. ಆ ಬಳಿಕ ಸತತ ನಾಲ್ಕು ಪಾಯಿಂಟ್ಸ್ ಗಳಿಸಿದ ಲಿ 8–4 ರಿಂದ ಮುನ್ನಡೆ ಪಡೆದರು. ಅನಂತರ ಪ್ರಣಯ್‌ಗೆ ಮರುಹೋರಾಟ ನಡೆಸಲು ಅವಕಾಶ ನೀಡದೆ ಫೈನಲ್‌ಗೆ ಲಗ್ಗೆಯಿಟ್ಟರು.

‘ಚೆನ್ನಾಗಿ ಆಡಿದ ಲಿಗೆ ಗೆಲುವಿನ ಶ್ರೇಯ ಸಲ್ಲಬೇಕು. ಅವರು ನನ್ನನ್ನು ಸೋಲಿಸಿದ್ದು ಇದೇ ಮೊದಲು. ನನ್ನ ಫಿಟ್‌ನೆಸ್ ಮಟ್ಟ ಕೂಡಾ ಆಟದ ಮೇಲೆ ಪರಿಣಾಮ ಬೀರಿತು’ ಎಂದು ಪ್ರಣಯ್ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.

ಧರ್ಮಶಾಲಾದಲ್ಲಿ ಅಫ್ಗನ್–ಬಾಂಗ್ಲಾ ಮುಖಾಮುಖಿ

ಧರ್ಮಶಾಲಾ: ಈ ಬಾರಿಯ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ತಂಡಗಳು 'ಕಪ್ಪು-ಕುದುರೆ'ಗಳಾಗಿ ಕಣಕ್ಕಿಳಿಯುತ್ತಿವೆ.

ಕಳೆದ ಒಂದು ದಶಕದಲ್ಲಿ ಗಮನಾರ್ಹ ಸಾಧನೆ ಮಾಡುತ್ತಿರುವ ಉಭಯ ತಂಡಗಳು ಟೂರ್ನಿಯ ಯಾವುದೇ ಹಂತದಲ್ಲಿಯೂ ಅಚ್ಚರಿಯ ಫಲಿತಾಂಶಗಳನ್ನು ನೀಡುವ ಸಾಮರ್ಥ್ಯ ಹೊಂದಿವೆ. ಈ ಎರಡೂ ತಂಡಗಳು ಶನಿವಾರ ಧರ್ಮಶಾಲಾದ ಹಿಮಾಚಲ-ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಈಚೆಗೆ ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾ ತಂಡವು ಅಫ್ಗಾನಿಸ್ತಾನದ ಎದುರು ಜಯಿಸಿತ್ತು. ಆದರೆ ವಿಶ್ವಕಪ್ ಟೂರ್ನಿಗೂ ಮುನ್ನ ತನ್ನದೇ ತವರಿನಲ್ಲಿ ನ್ಯೂಜಿಲೆಂಡ್ ವಿರುದ್ಧ ಸರಣಿ ಸೋಲು ಅನುಭವಿಸಿತ್ತು. ಆ ಸೋಲು ಮರೆತು ಜಯದೊಂದಿಗೆ ವಿಶ್ವಕಪ್ ಅಭಿಯಾನ ಆರಂಭಿಸುವ ಛಲದಲ್ಲಿ ತಂಡವಿದೆ.

ಐಸಿಸಿ ರ‍್ಯಾಂಕಿಂಗ್ ನ ಆಲ್‌ರೌಂಡ-ರ್‌ಗಳಲ್ಲಿ ಅಗ್ರಸ್ಥಾನದಲ್ಲಿರುವ ಶಕೀಬ್ ಅಲ್ ಹಸನ್ ತಂಡದ ಪ್ರಮುಖ ಆಟಗಾ-ರನಾಗಿದ್ದಾರೆ. ಅವರು ಇನ್ನೂ 41 ರನ್ ಗಳಿಸಿದರೆ ಕ್ರಿಸ್ ಗೇಲ್ (1186 ರನ್) ದಾಖಲೆಯನ್ನು ಮುರಿಯಲಿದ್ದಾರೆ. ವಿಶ್ವಕಪ್ ಟೂರ್ನಿಗಳಲ್ಲಿ ಶಕೀಬ್ ಒಟ್ಟು 1146 ರನ್ ಗಳಿಸಿದ್ದಾರೆ.

ಏಕದಿನ ಕ್ರಿಕೆಟ್ ಮಾದರಿಯಲ್ಲಿ ಅಫ್ಗಾನಿಸ್ತಾನ ತಂಡಕ್ಕೆ ಹೆಚ್ಚು ಅನುಭವ ಇಲ್ಲ. ಆದರೆ ಬಾಂಗ್ಲಾಗೆ ಉತ್ತಮ ಅನುಭವ ಇದೆ. ಇದು ಹಷ್ಮತ್‌ಉಲ್ಲಾ ಶಾಹಿದಿ ಬಳಗದ ಮುಂದಿರುವ ಪ್ರಮುಖ ಸವಾಲು.

ಸ್ಪಿನ್ ಆಲ್‌ರೌಂಡರ್ ರಶೀದ್ ಖಾನ್, ನವೀನ್ ಉಲ್ ಹಕ್, ರೆಹಮಾನುಲ್ಲಾ ಗುರ್ಬಾಜ್ ಮತ್ತು ಮೊಹಮ್ಮದ್ ನಬಿ ಅವರು ಅಫ್ಗನ್ ತಂಡದ ಪ್ರಮುಖ ಶಕ್ತಿಯಾಗಿದ್ದಾರೆ.

ಅನುಭವಿ ಪಾಕಿಸ್ತಾನಕ್ಕೆ ದಿಟ್ಟ ಪೈಪೋಟಿಯೊಡ್ಡಿದ ನೆದರ್ಲೆಂಡ್ಸ್; ಲೀಡ್ ಆಲ್‌ರೌಂಡ್ ಆಟ

ರಿಜ್ವಾನ್–ಶಕೀಲ್ ಆಟಕ್ಕೆ ಒಲಿದ ಜಯ

ಹೈದರಾಬಾದ್ (ಪಿಟಿಐ): ನೆದರ್ಲೆಂಡ್ಸ್ ತಂಡವು ಒಡ್ಡಿದ ಸವಾಲನ್ನು ಮೀರಿ ನಿಂತ ಪಾಕಿಸ್ತಾನ ತಂಡವು ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂ-ಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನವು 81 ರನ್‌ಗಳಿಂದ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿತು.

ಟಾಸ್ ಗೆದ್ದ ನೆದರ್ಲೆಂಡ್ಸ್ ತಂಡದ ನಾಯಕ ಸ್ಕಾಟ್ ಎಡ್ವರ್ಡ್ಸ್ ಫೀಲ್ಡಿಂಗ್ ಮಾಡಲ ನಿರ್ಧರಿಸಿದರು. ಪಾಕಿಸ್ತಾನದ ಆರಂಭಿಕ ಬ್ಯಾಟರ್‌ಗಳು ಕುಸಿದರು. ನಾಯಕ ಬಾಬರ್ ಆಜಂ ಕೂಡ (5 ರನ್) ವಿಫಲರಾದರು. ಆದರೆ ಮಧ್ಯಮಕ್ರಮಾಂಕದ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಮತ್ತು ಸಾದ್ ಶಕೀಲ್ ತಲಾ 68 ರನ್ ಗಳಿಸಿದರು. ಅಲ್ಲದೇ ಶತಕದ ಜೊತೆಯಾಟ ಕೂಡ ಆಡಿದರು. ಇದರಿಂದಾಗಿ ತಂಡವು 49 ಓವರ್‌ಗಳಲ್ಲಿ 286 ರನ್ ಗಳಿಸಿತು.

ಇದಕ್ಕುತ್ತರವಾಗಿ ನೆದರ್ಲೆಂಡ್ಸ್ ತಂಡವು 41 ಓವರ್‌ಗಳಲ್ಲಿ 205 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ತಂಡದ ಆರಂಭಿಕ ಬ್ಯಾಟರ್ ವಿಕ್ರಮಜೀತ್ ಸಿಂಗ್ (52; 67ಎ, 4X4, 6X1) ಮತ್ತು ಬಾಸ್ ಡಿ ಲೀಡ್ (67; 68ಎ, 4X6, 6X2) ಅರ್ಧಶತಕ ಗಳಿಸಿದರು. ಒಂದು ಹಂತದಲ್ಲಿ ಇವರ ಚೆಂದದ ಬ್ಯಾಟಿಂಗ್‌ನಿಂದಾಗಿ ನೆದರ್ಲೆಂಡ್ಸ್ ತಂಡವು ಗೆಲುವಿನ ಸವಿಯುಣ್ಣುವ ನಿರೀಕ್ಷೆ ಮೂಡಿತ್ತು.

ಪಾಕಿಸ್ತಾನ ತಂಡದ ಮೊಹಮ್ಮದ್ ರಿಜ್ವಾನ್ ಮತ್ತು ಸಾದ್ ಶಕೀಲ್ –ಪಿಟಿಐ ಚಿತ್ರ

ಆದರೆ, ಪಾಕ್ ತಂಡದ ವೇಗಿ ಹ್ಯಾರಿಸ್ ರವೂಫ್ (43ಕ್ಕೆ3) ಮತ್ತು ಹಸನ್ ಅಲಿ (33ಕ್ಕೆ2) ನೆದರ್ಲೆಂಡ್ಸ್‌ಗೆ ಕಡಿವಾಣ ಹಾಕಿದರು. ಶಾಹೀನ್ ಶಾ ಆಫ್ರಿದಿ, ಇಫ್ತಿಕಾರ್ ಅಹಮದ್, ಮೊಹಮ್ಮದ್ ನವಾಜ್ ಮತ್ತು ಶಾದಾಬ್ ಖಾನ್ ಅವರೂ ತಲಾ ಒಂದು ವಿಕೆಟ್ ಗಳಿಸಿದರು.

ರಿಜ್ವಾನ್-ಶಕೀಲ್ ಜೊತೆಯಾಟ: ನೆದರ್ಲೆಂಡ್ಸ್ ತಂಡದ ಬೌಲರ್‌ಗಳ ಉತ್ತಮ ದಾಳಿಯ ಮುಂದೆ ಪಾಕ್ ತಂಡವು 38 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ಹಂತದಲ್ಲಿ ರಿಜ್ವಾನ್ ಮತ್ತು ಶಕೀಲ್ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 120 ರನ್ ಗಳಿಸಿದರು. ಇದು ತಂಡಕ್ಕೆ ಆಸರೆಯಾಯಿತು.

ರಿಜ್ವಾನ್ 75 ಎಸೆತಗಳಲ್ಲಿ ಎಂಟು ಬೌಂಡರಿಗಳಿದ್ದ 68 ರನ್ ಹೊಡೆದರು. ಶಕೀಲ್ 52 ಎಸೆತಗಳಲ್ಲಿ ಒಂಬತ್ತು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಅವರೂ 68 ರನ್ ಗಳಿಸಿದರು.

ರಿಜ್ವಾನ್ ಮತ್ತು ಶಕೀಲ್ ಔಟಾದ ನಂತರ ಮೊಹಮ್ಮದ್ ನವಾಜ್ (39; 43ಎ) ಮತ್ತು ಶಾದಾಬ್ ಖಾನ್ (32; 34ಎ) ತಂಡದ ಮೊತ್ತ ಹೆಚ್ಚಲು ಕಾರಣರಾದರು. ನೆದರ್ಲೆಂಡ್ಸ್‌ನ ಬಲಗೈ ವೇಗಿ ಬಾಸ್ ಡಿ ಲೀಡ್ (62ಕ್ಕೆ4) ಅವರ ಚುರುಕಿನ ದಾಳಿಯಿಂದಾಗಿ ಪಾಕ್ ತಂಡವು 300 ರನ್‌ಗಳ ಗಡಿ ಮುಟ್ಟಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 49 ಓವರ್‌ಗಳಲ್ಲಿ 286 (ಮೊಹಮ್ಮದ್ ರಿಜ್ವಾನ್ 68, ಸಾದ್ ಶಕೀಲ್ 68, ಮೊಹಮ್ಮದ್ ನವಾಜ್ 39, ಶಾದಾಬ್ ಖಾನ್ 32, ಹ್ಯಾರಿಸ್ ರವೂಫ್ 16, ಕಾಲಿನ್ ಅಕೆರ್‌ಮನ್ 39ಕ್ಕೆ2, ಬಾಸ್ ಡಿ ಲೀಡ್ 62ಕ್ಕೆ4) ನೆದರ್ಲೆಂಡ್ಸ್: 41 ಓವರ್‌ಗಳಲ್ಲಿ 205 (ವಿಕ್ರಂ ಜೀತ್ ಸಿಂಗ್ 52, ಕಾಲಿನ್ ಅಕೆರ್ಮನ್ 17, ಬಾಸ್ ಡಿ ಲೀಡ್ 67, ಲೊಗನ್ ವ್ಯಾನ್ ಬೀಕ್ 28, ಹಸನ್ ಅಲಿ 33ಕ್ಕೆ2, ಹ್ಯಾರಿಸ್ ರವೂಫ್ 43ಕ್ಕೆ3) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 81 ರನ್‌ಗಳ ಜಯ.



ಅಮುಲ್ ಶ್ರೀಲಂಕಾ ಕ್ರಿಕೆಟ್ ತಂಡದ ಪ್ರಾಯೋಜಕತ್ವ ವಹಿಸಿದೆ!

ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ (ಎಡ) ಮತ್ತು ನಾಯಕ ರೋಹಿತ್ ಶರ್ಮಾ ಅವರು ಶುಕ್ರವಾರ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು –ಪಿಟಿಐ ಚಿತ್ರ

ಶ್ರೀಲಂಕಾ–ದಕ್ಷಿಣ ಆಫ್ರಿಕಾ ಪಂದ್ಯ ಇಂದು; ಶುಭಾರಂಭದ ನಿರೀಕ್ಷೆ

ದಸುನ್ ಶನಕಾ ಬಳಗಕ್ಕೆ ತೆಂಬಾ ಪಡೆ ಸವಾಲು

ನವದೆಹಲಿ (ಪಿಟಿಐ): ಶ್ರೀಲಂಕಾದ ದಸುನ್ ಶನಕಾ ಮತ್ತು ದಕ್ಷಿಣ ಆಫ್ರಿಕಾದ ತೆಂಬಾ ಬವುಮಾ ಅವರಿಗೆ ಈ ಬಾರಿಯ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯು ವಿಶೇಷವಾಗಿದೆ.

ವಿಶ್ವಕಪ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ತಮ್ಮ ತಂಡಗಳನ್ನು ಮುನ್ನಡೆಸುವ ಹೊಣೆ ನಿಭಾಯಿಸು-ತ್ತಿದ್ದಾರೆ. ಶನಿವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಶನಕಾ ನಾಯಕತ್ವದ ಶ್ರೀಲಂಕಾ ಮತ್ತು ಬವುಮಾ ಮುನ್ನಡೆ-ಸುತ್ತಿರುವ ದಕ್ಷಿಣ ಆಫ್ರಿಕಾ ಸೆಣಸಲಿವೆ.

1996ರಲ್ಲಿ ವಿಶ್ವಕಪ್ ಜಯಿಸಿದ್ದ ಶ್ರೀಲಂಕಾ 2011ರಲ್ಲಿ ಫೈನಲ್ ಪ್ರವೇಶಿ ಸಿತ್ತು. ಆದರೆ, ಕಳೆದ ಹತ್ತು ವರ್ಷಗಳಲ್ಲಿ ಈ ತಂಡ ಬಹಳಷ್ಟು ಏಳು ಬೀಳುಗಳನ್ನು ಕಂಡಿದೆ. ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಮತ್ತೆ ಚಿಗುರುವ ಭರವಸೆ ಮೂಡಿಸಿದೆ. ಪಥುಮ್ ನಿಸಾಂಕ, ಧನಂಜಯ ಡಿಸಿಲ್ವಾ, ಮಹೀಷ ತೀಕ್ಷಣ, ಕುಶಾಲ ಮೆಂಡಿಸ್ ಮತ್ತು ದುನಿತ್ ವೆಲಾಳಗೆ ಅವರಂತಹ ಪ್ರತಿಭಾವಂತರು ತಂಡದಲ್ಲಿ ವಿಶ್ವಾಸ ಮೂಡುವಂತೆ ಮಾಡಿದ್ದಾರೆ. ಇದೀಗ ಅವರಿಗೆ ಉತ್ತಮ ಸಾಧನೆ ಮಾಡಿ ಕ್ರಿಕೆಟ್ ಲೋಕದ ತಾರೆಗಳಾಗಲು ಲಭಿಸಿರುವ ಸುವರ್ಣಾವಕಾಶ ಇದಾಗಿದೆ. ತೀಕ್ಷಣ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ತೆಂಬಾ ಬವುಮಾ

ದಸುನ್ ಶನಕಾ

ಮೊದಲಿನಿಂದಲೂ ಉತ್ತಮ ಆಟಗಾರರು ಇರುವ ದಕ್ಷಿಣ ಆಫ್ರಿಕಾ ತಂಡವು ಇದುವರೆಗೆ ಒಂದು ಬಾರಿಯೂ ಏಕದಿನ ವಿಶ್ವಕಪ್ ಗೆದ್ದಿಲ್ಲ. ನಿರ್ಣಾಯಕ ಹಂತದಲ್ಲಿ ಸೋಲುವ 'ಚೋಕರ್' ಪಟ್ಟವೂ ಈ ತಂಡಕ್ಕಿದೆ. ಈ ತಂಡವು ಪ್ರಶಸ್ತಿ ಸನಿಹ ಬಂದು ಎಡವಿದ್ದೇ ಹೆಚ್ಚು. ಈ ಹಣೆಪಟ್ಟಿಯ-ನ್ನು ಕಿತ್ತುಹಾಕುವ ಅವಕಾಶ ತೆಂಬಾ ಬಳಗದ ಮುಂದೆ ಇದೆ.

ಇಂದಿನ ಪಂದ್ಯಗಳು
ಅಫ್ಗಾನಿಸ್ತಾನ-ಬಾಂಗ್ಲಾದೇಶ
ಆರಂಭ: ಬೆಳಿಗ್ಗೆ 10.30
ದ.ಆಫ್ರಿಕಾ-ಶ್ರೀಲಂಕಾ
ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಸ್ಪೋರ್ಟ್ಸ್

ಶುಭಮನ್ ಗಿಲ್

ಗಿಲ್‌ಗೆ ಜ್ವರ, ಡೆಂಗಿ ಶಂಕೆ

ಚೆನ್ನೈ (ಪಿಟಿಐ): ಉತ್ತಮ ಫಾರ್ಮ್‌ನಲ್ಲಿರುವ ಆರಂಭ ಆಟಗಾರ ಶುಭಮನ್ ಗಿಲ್ ಅವರು ಶಂಕಿತ ಡೆಂಗಿ ಜ್ವರದಿಂದ ಬಳಲುತ್ತಿದ್ದು ಭಾನುವಾರ (ಅ.8) ಆಸ್ಟ್ರೇಲಿಯಾ ವಿರುದ್ಧ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ಇದು ತಂಡದ ಚಿಂತೆಗೆ ಕಾರಣವಾಗಿದೆ.

ಗಿಲ್ ಅವರ ಜ್ವರದ ಸ್ವರೂಪದ ಬಗ್ಗೆ ಬಿಸಿಸಿಐ ಇದುವರೆಗೆ ಖಚಿತಪಡಿ-ಸಿಲ್ಲ. ಗಿಲ್ ಆಡದಿದ್ದಲ್ಲಿ ಇಶಾನ್ ಕಿಶನ್ ಅವರು ನಾಯಕ ರೋಹಿತ್ ಶರ್ಮಾ ಜೊತೆ ಇನಿಂಗ್ಸ್ ಆರಂಭಿಸಬಹುದು.

ಮೊದಲ ಪಂದ್ಯ ಆಡಲು 36 ಗಂಟೆಗಳು ಉಳಿದಿರುವಂತೆ ಕೋಚ್ ರಾಹುಲ್ ದ್ರಾವಿಡ್ ಅವರೂ ಖಚಿತ ಉತ್ತರ ನೀಡಲಿಲ್ಲ. 'ಅವರು ಚೇತರಿ-ಸಿಕೊಳ್ಳುತ್ತಿದ್ದಾರೆ. ವೈದ್ಯಕೀಯ ತಂಡ ನಿಗಾ ವಹಿಸಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಳಿದ ಪ್ರಶ್ನೆಗಳನ್ನು ಅವರು ತಮ್ಮ ಬ್ಯಾಟಿಂಗ್‌ನ ರೀತಿಯಲ್ಲೇ ಎಚ್ಚರಿಕೆಯಿಂದ ನಿಭಾಯಿಸಿದರು. 'ತಾಂತ್ರಿಕವಾಗಿ ಮೊದಲ ಪಂದ್ಯಕ್ಕೆ ಅವರು (ಗಿಲ್) ಅಲಭ್ಯರೇನೂ ಆಗಿಲ್ಲ. ವೈದ್ಯಕೀಯ ತಂಡ ಅವರನ್ನು ನೋಡಿಕೊಳ್ಳುತ್ತಿದೆ. (ನಾವು) ನಾಳೆ ನಿರ್ಧಾರ ಕೈಗೊಳ್ಳುತ್ತೇವೆ.

'ವೈದ್ಯರ ತಂಡದಿಂದ ಹೆಚ್ಚಿನ ವಿವರಕ್ಕೆ ಕಾಯುತ್ತಿದ್ದೇವೆ' ಎಂದು ಇದಕ್ಕೆ ಮೊದಲು ಬಿಸಿಸಿಐ ಪ್ರಕಟಣೆ ತಿಳಿಸಿತ್ತು.

